ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಜಾವಾಣಿ ಸಂದರ್ಶನ
'ಮೂಲಸ್ವರೂಪ ಸಿದ್ಧಾಂತದಿಂದ ಸಂವಿಧಾನಕ್ಕೆ ಸ್ಥಿರತೆ'
ಪಿಎಫ್ಐ ಪ್ರಕರಣ: ವಕೀಲ ಬಂಧನ 10
ಕ್ರೀಡಾಲೋಕದ ಧ್ರುವತಾರೆ ಪೆಲೆ 11
ಇಂದು ಭೂಮಿಕಾ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,841 ▼	18,105 ▼	₹56,480 (ಬೆಂಗಳೂರು) ▲	₹70,300 (ಬೆಂಗಳೂರು) ▲	82.61 ▲

ಪ್ರಧಾನಿ ಮೋದಿಗೆ ಮಾತೃವಿಯೋಗ

ಅಹಮದಾಬಾದ್: ಪ್ರಧಾನಿ ನರೇಂದ್ರ ಮೋದಿ ಅವರ ತಾಯಿ, ಶತಾಯುಷಿ ಹೀರಾಬೆನ್ (100) ಅವರು ಅನಾರೋಗ್ಯದಿಂದ ಶುಕ್ರವಾರ ನಸುಕಿನ 3.39ಕ್ಕೆ ನಿಧನರಾದರು.

ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ ಅವರನ್ನು ಅಹಮದಾಬಾದ್‌ನ ಯು.ಎನ್. ಮೆಹ್ತಾ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿ ಆ್ಯಂಡ್ ರೀಸರ್ಚ್ ಸೆಂಟರ್ ಆಸ್ಪತ್ರೆಗೆ ಬುಧವಾರ ದಾಖಲಿಸಲಾಗಿತ್ತು.

ಮೋದಿ ಅವರು ತಾಯಿ ಆರೋಗ್ಯ ವಿಚಾರಿಸಲು ಆಸ್ಪತ್ರೆಗೆ ಭೇಟಿ ನೀಡಿದ್ದರು. ವೈದ್ಯರು ಆರೋಗ್ಯಸ್ಥಿತಿ ಸುಧಾರಿಸುತ್ತಿರುವುದಾಗಿ ಮಾಹಿತಿ ನೀಡಿದ ನಂತರ ಮೋದಿ ತೆರಳಿದ್ದರು. ಗುರುವಾರವೂ ವೈದ್ಯಕೀಯ ಬುಲೆಟಿನ್‌ನಲ್ಲಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದೇ ಹೇಳಲಾಗಿತ್ತು.

ಹೀರಾಬೆನ್ ಅವರಿಗೆ ಐವರು ಪುತ್ರರಾದ ನರೇಂದ್ರ ಮೋದಿ, ಸೋಮಭಾಯಿ, ಅಮೃತ್‌ಭಾಯಿ, ಪ್ರಹ್ಲಾದ್ ಭಾಯಿ, ಪಂಕಜ್‌ಭಾಯಿ ಹಾಗೂ ಪುತ್ರಿ ವಾಸಂತಿಬೆನ್ ಇದ್ದಾರೆ.

10ನೇ ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ



ನಾಳೆಯಿಂದಲೇ ಅನ್ವಯ • ಪಿಪಿಎಫ್, ಸುಕನ್ಯಾ ಸಮೃದ್ಧಿ ಬಡ್ಡಿ ಬದಲಿಲ್ಲ

ಸಣ್ಣ ಉಳಿತಾಯ: ಬಡ್ಡಿ ಹೆಚ್ಚಳ

ನವದೆಹಲಿ (ಪಿಟಿಐ): ಅಂಚೆ ಕಚೇರಿ ಮೂಲಕ ನೀಡಲಾಗುವ ಕೆಲವು ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಕೇಂದ್ರ ಸರ್ಕಾರವು ಶುಕ್ರವಾರ ಹೆಚ್ಚಿಸಿದೆ. ಆದರೆ, ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಹಾಗೂ ಸುಕನ್ಯಾ ಸಮೃದ್ಧಿ ಯೋಜನೆಗಳ ಮೇಲಿನ ಬಡ್ಡಿ ಜಾಸ್ತಿ ಮಾಡಿಲ್ಲ.

ರಾಷ್ಟ್ರೀಯ ಉಳಿತಾಯ ಯೋಜನೆ (ಎನ್‌ಎಸ್‌ಸಿ), ಹಿರಿಯ ನಾಗರಿಕರ ಉಳಿತಾಯ ಯೋಜನೆ, ಕಿಸಾನ್ ವಿಕಾಸ ಪತ್ರ ಯೋಜನೆಗಳ ಮೇಲಿನ ಬಡ್ಡಿ ದರವನ್ನು ಹೆಚ್ಚು ಮಾಡಲಾಗಿದೆ. ಈ ಯೋಜನೆಗಳ ಅಡಿಯಲ್ಲಿ ಸಿಗುವ ಬಡ್ಡಿಗೆ ತೆರಿಗೆ ಇದೆ.

ಶುಕ್ರವಾರ ಮಾಡಿರುವ ಹೆಚ್ಚಳವನ್ನು ಪರಿಗಣಿಸಿದರೆ, ಕೆಲವು ಸಣ್ಣ ಉಳಿತಾಯ ಯೋಜನೆಗಳ ಬಡ್ಡಿಯನ್ನು ಸತತ ಎರಡನೆಯ ತ್ರೈಮಾಸಿಕದಲ್ಲಿಯೂ ಹೆಚ್ಚಿಸಿದಂತಾಗಿದೆ. ಅಕ್ಟೋಬರ್‌ಗೂ ಮೊದಲು ಸತತ ಒಂಬತ್ತು ತ್ರೈಮಾಸಿಕಗಳ ಕಾಲ, ಅಂದರೆ 27 ತಿಂಗಳುಗಳ ಕಾಲ, ಬಡ್ಡಿ ದರದಲ್ಲಿ ಬದಲಾವಣೆ ಮಾಡಿರಲಿಲ್ಲ. ಈಗಿನ ಹೆಚ್ಚಳವು ಜನವರಿ-ಮಾರ್ಚ್ ತ್ರೈಮಾಸಿಕಕ್ಕೆ ಅನ್ವಯವಾಗಲಿದೆ.

ಹೆಣ್ಣು ಮಕ್ಕಳ ಹೆಸರಿನಲ್ಲಿ ಉಳಿತಾಯ ಮಾಡುವುದನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ರೂಪಿಸಿದ ಸುಕನ್ಯಾ ಸಮೃದ್ಧಿ ಯೋಜನೆಯ ಬಡ್ಡಿ ದರವನ್ನು ಶೇ 7.6ರಲ್ಲಿ ಕಾಯ್ದುಕೊಳ್ಳಲಾಗಿದೆ. ಪಿಪಿಎಫ್‌ಗೆ ಸಿಗುವ ಬಡ್ಡಿ ಶೇ 7.1ರಷ್ಟೇ ಇರಲಿದೆ.

ಸಣ್ಣ ಉಳಿತಾಯ: ಹೆಚ್ಚಿದ ಬಡ್ಡಿ ದರ (%)

ಯೋಜನೆ	ಈಗಿರುವ ಬಡ್ಡಿ	ಹೊಸ ಬಡ್ಡಿ ದರ
1 ವರ್ಷದ ಅವಧಿ ಠೇವಣಿ	5.5	6.6
2 ವರ್ಷದ ಅವಧಿ ಠೇವಣಿ	5.7	6.8
3 ವರ್ಷ ಅವಧಿ ಠೇವಣಿ	5.8	6.9
5 ವರ್ಷ ಅವಧಿ ಠೇವಣಿ	6.7	7.0
ಹಿರಿಯ ನಾಗರಿಕರ ಉಳಿತಾಯ ಯೋಜನೆ	7.6	8
ಮಾಸಿಕ ಆದಾಯ ಯೋಜನೆ	6.7	7.1
ಎನ್‌ಎಸ್‌ಸಿ	6.8	7.0
ಕಿಸಾನ್ ವಿಕಾಸ ಪತ್ರ	7.0 (123 ತಿಂಗಳ ಅವಧಿ)	7.2 (120 ತಿಂಗಳ ಅವಧಿ)

11ನೇ ಪುಟ ನೋಡಿ

ಚಿನ್ನದ ಬೆಲೆ ₹60 ಸಾವಿರಕ್ಕೆ?

ಮುಂಬೈ: ಜಾಗತಿಕ ರಾಜಕೀಯ ಬಿಕ್ಕಟ್ಟಿನಿಂದಾಗಿ 2023ರಲ್ಲಿ ಹೂಡಿಕೆದಾರರು ಹಣವನ್ನು ಹೆಚ್ಚು ಸುರಕ್ಷಿತವಾದ ಕಡೆಗಳಲ್ಲಿ ತೊಡಗಿಸಲು ಮುಂದಾಗಲಿದ್ದಾರೆ. ಇದರಿಂದಾಗಿ ಚಿನ್ನದ ಧಾರಣೆ 2023ರಲ್ಲಿ 10 ಗ್ರಾಂಗೆ ₹ 60 ಸಾವಿರವನ್ನು ತಲುಪುವ ಸಾಧ್ಯತೆ ಇದೆ. 11

'ಬೇರೆಯದಕ್ಕೆ ಹೋಲಿಸಿದರೆ ಗೌಣ'

ಬೆಂಗಳೂರು: 'ಸಣ್ಣ ಉಳಿತಾಯ ಯೋಜನೆಗಳ ಪೈಕಿ ಕೆಲವು ಯೋಜನೆಗಳ ಬಡ್ಡಿ ದರವನ್ನು ಹೆಚ್ಚಿಸಿರುವುದು ನಿಶ್ಚಿತ ಆದಾಯ ಬಯಸುವವರಿಗೆ ಸಂತಸ ತರಬಹುದು. ಆದರೆ, ಹೆಚ್ಚಳವಾದ ನಂತರದ ಬಡ್ಡಿ ದರವೂ, ಇತರ ಹೂಡಿಕೆ ಉತ್ಪನ್ನಗಳಾಗಿರುವ ಮ್ಯೂಚುವಲ್ ಫಂಡ್, ಷೇರುಗಳು, ಇಟಿಎಫ್‌ಗಳು ನೀಡಬಹುದಾದ ಲಾಭದ ಪ್ರಮಾಣಕ್ಕೆ ಹೋಲಿಸಿದರೆ ಗೌಣ' ಎಂದು ಆದಾಯ ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ ಪ್ರಮೋದ ಶ್ರೀಕಾಂತ ದೈತೋಟ ಹೇಳಿದರು.

11ನೇ ಪುಟ ನೋಡಿ

ಹಳೇ ಮೈಸೂರಿನಲ್ಲಿ ಶಾ ರಣಕಹಳೆ

ಮಂಡ್ಯ, ಮೈಸೂರು ಕಡೆಗಣಿಸಿದ ಕಾಂಗ್ರೆಸ್ ಜೆಡಿಎಸ್: ಟೀಕೆ

• ಕೆ.ನರಸಿಂಹಮೂರ್ತಿ

ಮಂಡ್ಯ: 'ಭ್ರಷ್ಟಾಚಾರ, ಕುಟುಂಬ ರಾಜಕಾರಣ, ಕೋಮುವಾದಕ್ಕೆ ಆದ್ಯತೆ ನೀಡಿರುವುದನ್ನು ಬಿಟ್ಟರೆ, ಮಂಡ್ಯ, ಮೈಸೂರು ಭಾಗದ ಅಭಿವೃದ್ಧಿಗೆ ಕಾಂಗ್ರೆಸ್, ಜೆಡಿಎಸ್ ಏನೇನೂ ಮಾಡಿಲ್ಲ. ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಬಹುಮತದ ಅಧಿಕಾರ ನೀಡಿ ಮತ್ತೆ ಡಬಲ್ ಎಂಜಿನ್ ಸರ್ಕಾರ ನಡೆಸಲು ಅವಕಾಶ ಮಾಡಿಕೊಡಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮನವಿ ಮಾಡಿದರು. ಆ ಮೂಲಕ ಎರಡೂ ಪಕ್ಷಗಳ ವಿರುದ್ಧ ಶುಕ್ರವಾರ ಚುನಾವಣೆಯ ರಣಕಹಳೆ ಮೊಳಗಿಸಿದರು.

ಇಲ್ಲಿನ ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಬಿಜೆಪಿ ಜನಸಂಕಲ್ಪ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರದ ಬಿಜೆಪಿ ಶಾಸಕರು, ಮುಖಂಡರು, ಈ ಜಿಲ್ಲೆಗಳ ಸಾವಿರಾರು ಕಾರ್ಯಕರ್ತರು 'ಯುದ್ಧೋನ್ಮಾದ'ದ ಕ್ಷಣಗಳಿಗೆ ಸಾಕ್ಷಿಯಾದರು.

ಮಂದಿರ ನಿರ್ಮಾಣ: ಬಿಜೆಪಿಯು ಬರಲಿರುವ ಚುನಾವಣೆಯನ್ನು ಕೋಮುಗಳ ನೆಲೆಯಲ್ಲಿ ನಡೆಸಲಿದೆ' ಎಂಬ ಸ್ಪಷ್ಟ ಸೂಚನೆಯೂ ಇದೇ ಸಂದರ್ಭದಲ್ಲಿ ಹೊರಬಿತ್ತು.

'ರಾಮ ಮಂದಿರ ನಿಮಗೆ ಬೇಕೋ ಬೇಡವೋ? ಬಾಬರ್ ಕಾಲದಿಂದಲೂ ರಾಮಮಂದಿರ ನಿರ್ಮಾಣ ನನೆಗುದಿಗೆ ಬಿದ್ದಿತ್ತು. ಈಗ ನಾವು ನಿರ್ಮಿಸುತ್ತಿದ್ದೇವೆ. 2024ರ ಜನವರಿ 1ರಂದು ಮಂದಿರ ಉದ್ಘಾಟನೆಯಾಗಲಿದೆ. ಬರಲಿರುವವರು ಈಗಲೇ ಪ್ರಯಾಣದ ಟಿಕೆಟ್ ಅನ್ನು ಕಾಯ್ದಿರಿಸಿಕೊಳ್ಳಿ' ಎಂದು ಅಚ್ಚರಿ ಮೂಡಿಸಿದರು. 'ಕೇದಾರನಾಥ, ಬದರಿನಾಥ ಮತ್ತು ಕಾಶಿ ಕ್ಷೇತ್ರದ ಅಭಿವೃದ್ಧಿಗೂ ಮೋದಿ ಆದ್ಯತೆ ನೀಡಿದ್ದಾರೆ. ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಲ್ಲಿ ರಾಜ್ಯದ 50 ಲಕ್ಷ ರೈತರ ಬ್ಯಾಂಕ್ ಖಾತೆಗೆ ತಲಾ ₹ 10 ಸಾವಿರ ಸಂದಾಯ ಮಾಡಲಾಗಿದೆ' ಎಂದರು.

ಬಿಜೆಪಿ ಜನಸಂಕಲ್ಪ ಯಾತ್ರೆಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರ್ಯಕರ್ತರತ್ತ ಕೈಬೀಸಿದರು —ಪ್ರಜಾವಾಣಿ ಚಿತ್ರ

10ನೇ ಪುಟ ನೋಡಿ

ದಿನಕ್ಕೆ ₹50 ಕೋಟಿ– ₹60 ಕೋಟಿ ನಷ್ಟ: 12 ರಿಂದ 14 ಗಂಟೆ ಬೆಳಗುವ ದೀಪ

ಹಗಲಿನಲ್ಲಿ ಉರಿಯುವ ಬೀದಿ ದೀಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿನಿತ್ಯ 12 ರಿಂದ 14 ಗಂಟೆಗಳಷ್ಟು ವಿದ್ಯುತ್ ನಷ್ಟವಾಗುತ್ತಿದ್ದು, ವಿದ್ಯುತ್ ಕಳವಿಗಿಂತ ಇಲಾಖೆಯ ನಿರ್ಲಕ್ಷ್ಯದಿಂದ ಹೆಚ್ಚಿನ ಪ್ರಮಾಣದಲ್ಲಿ ಪೋಲಾಗುತ್ತಿದೆ. ಇದನ್ನು ತಡೆಯಲು ಒಂದೋ ಟೈಮರ್ ಅಳವಡಿಸಬೇಕು ಅಥವಾ ಹೊಸ ವ್ಯವಸ್ಥೆ ಅಳವಡಿಸಿಕೊಳ್ಳಬೇಕು ಎಂದು ಕರ್ನಾಟಕ ವಿಧಾನಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ ವರದಿ ಶಿಫಾರಸು ಮಾಡಿದೆ.

ಅಲ್ಲದೆ, ಗ್ರಾಮೀಣ ಪ್ರದೇಶದಲ್ಲಿ ಹಗಲು ಹೊತ್ತಿನಲ್ಲಿ ಬೀದಿ ದೀಪಗಳು ಉರಿಯುವುದರಿಂದ ದಿನಕ್ಕೆ ₹50 ಕೋಟಿಯಿಂದ ₹60 ಕೋಟಿಯಷ್ಟು ನಷ್ಟವಾಗುತ್ತಿದೆ ಎಂದು ಹೇಳಿದೆ.

ಇಂಧನ ಇಲಾಖೆಯು ಹೊಸ ಹೊಸ ತಂತ್ರಜ್ಞಾನವನ್ನು ಬಳಕೆ ಮಾಡುತ್ತಿದ್ದರೂ ವಿದ್ಯುತ್ ನಷ್ಟ ಆಗುತ್ತಿದೆ ಎಂದು ಗ್ರಾಮ ಪಂಚಾಯಿತಿಗಳ ಮೇಲೆ ಹೊರೆ ಹಾಕಲಾಗುತ್ತಿರುವುದು ಸರಿಯಲ್ಲ. ಗ್ರಾಮ ಪಂಚಾಯಿತಿಗಳಲ್ಲಿ ಸಂಬಳ ಕೊಡುವುದಕ್ಕೂ ಹಣವಿರುವುದಿಲ್ಲ, ಅವರು ಎಲ್ಲಿಂದ ತಂದು ಹಣ ಕಟ್ಟಬೇಕು?. 'ನಿರಂತರ ಜ್ಯೋತಿ' ವಿಚಾರದಲ್ಲಿ ಹೆಚ್ಚು ಕಡಿಮೆಯಾದರೆ, ಲೈನ್ ಕಟ್ ಮಾಡುತ್ತಾರೆ. ಇದರಿಂದ ಇಡೀ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದ ಜನರಿಗೆ ತೊಂದರೆ ಆಗಿದೆ ಎಂದೂ ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ.

10ನೇ ಪುಟ ನೋಡಿ

ಗ್ರಾಮೀಣ ಪ್ರದೇಶದಲ್ಲಿ ಲೈನ್‌ಮನ್‌ಗೆ ಆದ್ಯತೆ

ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿ ಲೈನ್‌ಮನ್‌ಗಳ ಕೊರತೆ ಇದೆ. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಲೈನ್‌ಮನ್‌ಗಳ ನೇಮಕಕ್ಕೆ ಆದ್ಯತೆ ನೀಡಬೇಕು ಎಂದು ಸಮಿತಿ ಸೂಚಿಸಿದೆ.

ಇಂಧನ ಇಲಾಖೆಯು ಉತ್ತಮ ಸೇವೆ ಸಲ್ಲಿಸಲು ಶೇ 80 ರಷ್ಟು ಸಿಬ್ಬಂದಿ ಕಾಯಂ ಆಗಿ ಇರುವಂತೆ ಕ್ರಮ ತೆಗೆದುಕೊಳ್ಳಬೇಕು. ಅವಶ್ಯ ಇರುವ ಎಂಜಿನಿಯರ್ ಹುದ್ದೆಗಳಿಗೆ ಸ್ಥಳೀಯವಾಗಿ ಲಭ್ಯವಾಗುವ ಅಭ್ಯರ್ಥಿಗಳನ್ನು ಮೆರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕು. ಹೊರಗುತ್ತಿಗೆ ಸಿಬ್ಬಂದಿಗೆ ವೇತನವನ್ನು ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪಾವತಿ ಮಾಡಿದರೆ ಏಜೆನ್ಸಿಗಳ ಕಿರುಕುಳ ತಪ್ಪುತ್ತದೆ ಎಂದೂ ಸಲಹೆ ನೀಡಿದೆ.

ಕಾರು ಅಪಘಾತ: ಪಂತ್‌ಗೆ ಗಾಯ

ನವದೆಹಲಿ/ ಡೆಹ್ರಾಡೂನ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರು ದೆಹಲಿ–ಡೆಹ್ರಾಡೂನ್ ಹೆದ್ದಾರಿಯಲ್ಲಿ ಶುಕ್ರವಾರ ಬೆಳಿಗ್ಗೆ ಸಂಭವಿಸಿದ ಕಾರು ಅಪಘಾತದಲ್ಲಿ ಗಾಯಗೊಂಡಿದ್ದು, ಪವಾಡಸದೃಶ ರೀತಿಯಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

25 ವರ್ಷದ ಪಂತ್ ಚಾಲನೆ ಮಾಡುತ್ತಿದ್ದ ಮರ್ಸಿಡಿಸ್ ಬೆಂಜ್ ಕಾರು ಹೆದ್ದಾರಿಯ ವಿಭಜಕಕ್ಕೆ ಡಿಕ್ಕಿಯಾಗಿ ಬೆಂಕಿ ಹೊತ್ತಿಕೊಂಡು ಉರಿದಿದೆ. ಬೆಂಕಿ ಆವರಿಸುವ ಮುನ್ನವೇ ಕಾರಿನಿಂದ ಹೊರಬರುವಲ್ಲಿ ಪಂತ್ ಯಶಸ್ವಿಯಾಗಿದ್ದಾರೆ.

'ಉತ್ತರಾಖಂಡದ ಹರಿದ್ವಾರ ಜಿಲ್ಲೆಯ ಮಂಗ್ಲೋರ್ ಬಳಿ ಬೆಳಿಗ್ಗೆ 5.30ಕ್ಕೆ ದುರ್ಘಟನೆ ನಡೆದಿದೆ. ಹರಿಯಾಣ ಸಾರಿಗೆ ಸಂಸ್ಥೆಗೆ ಸೇರಿದ ಬಸ್ ಚಾಲಕ ಹಾಗೂ ಪ್ರಯಾಣಿಕರು ಪಂತ್ ಅವರನ್ನು ಕಾರಿನಿಂದ ಹೊರತರುವಲ್ಲಿ ನೆರವಾಗಿದ್ದಾರೆ' ಎಂದು ಹರಿದ್ವಾರ ಎಸ್‌ಪಿ ಅಜಯ್ ಸಿಂಗ್ ಹೇಳಿದ್ದಾರೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪಂತ್ —ಪಿಟಿಐ ಚಿತ್ರ

ಪಂತ್ ಅವರ ತಲೆ, ಕಾಲು, ಬಲಗೈ ಹಾಗೂ ಬೆನ್ನಿಗೆ ಗಾಯಗಳಾಗಿವೆ. ಅವರು ಉತ್ತರಾಖಂಡದ ರೂರ್ಕಿಯಲ್ಲಿರುವ ತಮ್ಮ ಮನೆಗೆ ಪ್ರಯಾಣಿಸುತ್ತಿದ್ದರು.

ವಿವರ 14

14ನೇ ವಾರ್ಷಿಕ ಚಿರಸ್ಮರಣೆ

ಶ್ರೀ ಕೆ ಬಿ ಜಯರಾಮ ರೆಡ್ಡಿ

(ಸ್ಥಾಪಕರು: ಜೆ.ಆರ್ ಗ್ರೂಪ್ ಆಫ್ ಕಂಪನೀಸ್)

23-03-1943 - 31-12-2008

ನೀವು ನಮ್ಮನ್ನಗಲಿ ಇಂದಿಗೆ 14ವರ್ಷವಾಯಿತು, ನಿಮ್ಮ ನೆನಪು ನಮ್ಮಲ್ಲಿ ಶಾಶ್ವತವಾಗಿದೆ, ನಿಮ್ಮ ಆಶೀರ್ವಾದವು ನಮ್ಮ ಜೀವನದ ದಾರಿದೀಪವಾಗಿದೆ. ದೇವರು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತಾ ಸದಾ ಸ್ಮರಿಸುವ

ಧರ್ಮಪತ್ನಿ: ಶ್ರೀಮತಿ ರತ್ನಮ್ಮ,
ಡಾ॥ ಕೆ ಜೆ ಪುರುಷೋತ್ತಮ ಮತ್ತು ಕುಟುಂಬದವರು,
ಡಾ॥ ಕೆ ಜೆ ಚಂದ್ರಶೇಖರ್ ಮತ್ತು ಕುಟುಂಬದವರು,
ದಿ. ಡಾ॥ ಎಸ್ ಆರ್ ನಾಗರಾಜ್ ಕುಟುಂಬದವರು,
ಬಂಧುಗಳು ಮತ್ತು ಸ್ನೇಹಿತರು

ಪುರಸಭೆ, ಬಾಗೇಪಲ್ಲಿ

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(Standard Bidding Document KW-2)

ಟೆಂಡರ್ ಅಧಿಸೂಚನೆ ಸಂ: ಬಾಪುಸ/ತಾಶಾ/ಸಿಆರ್/22/2019-20 ದಿ: 26.12.2022

3ನೇ ಕರೆ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಮುಖ್ಯಾಧಿಕಾರಿಗಳು ಪುರಸಭೆ ಬಾಗೇಪಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2018-19ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದ ಯೋಜನೆಯಡಿಯಲ್ಲಿ ಚಿತ್ರಾವತಿ ನದಿಯ ಮುಂಭಾಗ ಎರಡು ಕಡೆ ಅಭಿವೃದ್ಧಿಗಾಗಿ ಹಾಗೂ ನಗರದಲ್ಲಿ ಹಸಿರೀಕರಣ ಕಾಮಗಾರಿಯನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ **KW-2,** ನಮೂನೆಯಲ್ಲಿ ಮರು ಟೆಂಡರ್ ಅಹ್ವಾನಿಸಲಾಗಿದೆ. ಕಾಮಗಾರಿ ಹೆಸರು: **DMA/2022-23/OW/WORK_INDEN131850/call-3** ಅಂದಾಜು ಮೊತ್ತ: **ರೂ.50.00 ಲಕ್ಷಗಳು.** ಇಎಂಡಿ ಮೊತ್ತ: **ರೂ.75,000/-.** ಟೆಂಡರ್ ಕಾಲಾವಧಿ: **6 ತಿಂಗಳು.** ಗುತ್ತಿಗೆದಾರರ ದರ್ಜೆ: ಅರ್ಹ 1ನೇ ದರ್ಜೆ ಮೇಲ್ಪಟ್ಟು **PWD** ಗುತ್ತಿಗೆದಾರರು. **ಸೂಚನೆ:** ಟೆಂಡರ್ ನಮೂನೆ ಶುಲ್ಕ: ಇ-ಪ್ರೊಕ್ಯೂರ್‌ಮೆಂಟ್‌ನಂತೆ. **(1)** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **13.01.2023 ಸಂಜೆ 5.00 ಗಂಟೆವರೆಗೆ. (2)** ಬಿಡ್ ತೆರೆಯುವ ದಿನಾಂಕ: **16.01.2023 ಸಂಜೆ 5.00 ಗಂಟೆ ನಂತರ. ಷರತ್ತುಗಳು: (1)** ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-	ಸಹಿ/-	ಸಹಿ/-	ಸಹಿ/-
ಅಧ್ಯಕ್ಷರು	ಉಪಾಧ್ಯಕ್ಷರು	ಸ್ಥಾಯಿ ಸಮಿತಿ ಅಧ್ಯಕ್ಷರು	ಮುಖ್ಯಾಧಿಕಾರಿ
ಪುರಸಭೆ, ಬಾಗೇಪಲ್ಲಿ	ಪುರಸಭೆ, ಬಾಗೇಪಲ್ಲಿ	ಪುರಸಭೆ, ಬಾಗೇಪಲ್ಲಿ	ಪುರಸಭೆ, ಬಾಗೇಪಲ್ಲಿ

ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/ಆರ್.ಓ.ಸಂ.421/ಎಂಸಿಎ/2022-23

ಕೋವಿಡ್-19 - ಗಾಬರಿಪಡದೆ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-262/2562/2022-23 ದಿನಾಂಕ: 30.12.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ಕೈಗಾರಿಕೆ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಸಲಹೆ / ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಕೆ.ಸಿ.ಸುಬ್ರಮಣ್ಯ, ಕೆ.ಸಿ.ವೇಣುಗೋಪಾಲ್	ಬೆಂಗಳೂರು ದಕ್ಷಿಣ	ಕೆಂಗೇರಿ	ತಗಚ ಗುಪ್ಪೆ	41/1	2-21	ವ್ಯವಸಾಯ ವಲಯ	ಕೈಗಾರಿಕೆ
2	ಕೆ.ಸಿ.ಸುಬ್ರಮಣ್ಯ, ಕೆ.ಸಿ.ವೇಣುಗೋಪಾಲ್				41/2	1-30		
3	ಶ್ರೀಮತಿ ರೋಹಿಣಿ ತ್ಯಾಜರಾಜ್, ಕೆ.ಸಿ.ರವಿಶಂಕರ್				41/3	1-24		
4	ಶ್ರೀಮತಿ ರೋಹಿಣಿ ತ್ಯಾಜರಾಜ್, ಕೆ.ಸಿ.ರವಿಶಂಕರ್				41/4	1-24		
5	ಶ್ರೀಮತಿ ರೋಹಿಣಿ ತ್ಯಾಜರಾಜ್, ಕೆ.ಸಿ.ರವಿಶಂಕರ್				41/5	0-09		
6	ಶ್ರೀಮತಿ ರೋಹಿಣಿ ತ್ಯಾಜರಾಜ್, ಕೆ.ಸಿ.ರವಿಶಂಕರ್				41/6	0-08		
7	ಶ್ರೀಮತಿ ರೋಹಿಣಿ ತ್ಯಾಜರಾಜ್, ಕೆ.ಸಿ.ರವಿಶಂಕರ್				41/7	1-16		

ಷರಾ: ಈ ಜಮೀನಿನಲ್ಲಿ ಕೈಗಾರಿಕೆ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕ ಯೋಗ್ಯ ಬೆಲೆಯಲ್ಲಿ ಕೈಗಾರಿಕೆ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ಕೈಗಾರಿಕೆ ಉಪಯೋಗಕ್ಕೆ' ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

BDA/PRO/CLU/243/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/ಸಿಎಲ್‌ಯು-138/20-21/2549/2022-23 ದಿ: 30.12.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ.ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಗ್ಲೋಬಲ್ ಟೆಕ್ ಪಾರ್ಕ್ # 11, ನೆಲಮಹಡಿ, "ಗ್ಲೋಬಲ್ ಟೆಕ್ ಪಾರ್ಕ್ 0" ಶ್ಯಾಗ್‌ನೆಸ್ಸಿ ರಸ್ತೆ, ಲ್ಯಾಂಗ್ ಫೋರ್ಡ್‌ಟೌನ್ ಬೆಂಗಳೂರು-560 025	ಯಲಹಂಕ	ಜಾಲ	ಬೆಟ್ಟ ಹಲ ಸೂರು	315/ 1,3, 4	ಒಟ್ಟು 01 ಎಕರೆ 27 ಗುಂಟೆ	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿ ಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ದೊರೆಯುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಯೋಜನಾ ಬದ್ಧವಾದ ವಿನ್ಯಾಸ ನಿರ್ಮಾಣದಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ'** ವಲಯದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

BDA/PRO/CLU/234/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಹೊಸಕೋಟೆ ಯೋಜನಾ ಪ್ರಾಧಿಕಾರ
ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412
E-mail: hosakote.pa@gmail.com URL: www.hoskote-tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/45/2022-23 ದಿನಾಂಕ: 28-12-2022

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ಹಾಗೂ ಜಮೀನಿನ ಮಾಲೀಕರಾದ **ಶ್ರೀ ಪಿ. ಶ್ರೀನಿವಾಸರೆಡ್ಡಿ ಬಿನ್ ಲೇಟ್ ಪಾಪಯ್ಯ** ಇವರು ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮದ ಸ.ನಂ. 131/3 ರ ಪೈಕಿ 39 ಗುಂಟೆ ವಿಸ್ತೀರ್ಣದ ಜಮೀನನ್ನು **"ಕೃಷಿ ಉದ್ದೇಶದಿಂದ ವಸತಿ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30.01.2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ ಪ್ರಸ್ತಾಪಿತ ಜಮೀನುಗಳನ್ನು **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿದ್ದು,** ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಪ್ರಸ್ತಾಪಿತ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/3801/ಅಡ್ವರ್ಟೋರ್/2022-23

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/ಸಿಎಲ್‌ಯು-275/2511/2022-23 ದಿ: 30.12.2022

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ-2015 ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 540 ಬೆಂಆಸೇ 2004, ದಿನಾಂಕ: 22.06.2007ರಲ್ಲಿ ಅನುಮೋದನೆಯಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರ ಅಡಿಯಲ್ಲಿ ಪ್ರಶ್ನಿತ ಜಮೀನುಗಳ ಸಾರಿಗೆ ಮತ್ತು ಸಂಪರ್ಕ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 69(4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ/ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ.ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ವಸಂತಿ. ಕೆ	ಪೂರ್ವ	ಬಿದರಹಳ್ಳಿ	ದೊಡ್ಡಬನಹಳ್ಳಿ	93/2	0-39	ಸಾರಿಗೆ ಮತ್ತು ಸಂಪರ್ಕ	ವಸತಿ

BDA/PRO/CLU/230/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

'ನಂದಿ' ಪ್ರವೇಶಕ್ಕೆ ಇಂದು ನಿರ್ಬಂಧ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ 2023ರ ಹೊಸ ವರ್ಷ ಆಚರಣೆ ವೇಳೆ ಅಹಿತಕರ ಘಟನೆಗಳು ನಡೆಯದಂತೆ ಜಿಲ್ಲಾಡಳಿತ ಮತ್ತು ಪೊಲೀಸರು ಮುನ್ನೆಚ್ಚರಿಕೆ ವಹಿಸಿದ್ದಾರೆ. ಜಿಲ್ಲೆಯ ಪ್ರಮುಖ ಸ್ಥಳಗಳು, ನಗರ ಪ್ರದೇಶಗಳು ಪೊಲೀಸರ ಕಣ್ಗಾವಲಿನಲ್ಲಿ ಇರಲಿವೆ.

ನಂದಿ ಗಿರಿಧಾಮಕ್ಕೆ ಡಿ. 31ರ ಸಂಜೆ 6ರಿಂದ ಜ. 1ರ ಬೆಳಿಗ್ಗೆ 6ರ ವರೆಗೆ ಸಾರ್ವಜನಿಕರು ಮತ್ತು ಪ್ರವಾಸಿಗರಿಗೆ ಪ್ರವೇಶವನ್ನು ಜಿಲ್ಲಾಡಳಿತ ನಿಷೇಧಿಸಿದೆ.

ಸಿಆರ್‌ಪಿಎಫ್‌ಗೆ ಶೀಘ್ರ ಮಹಿಳಾ ಪಡೆ

ಶ್ರೀನಗರ: ಕಾಶ್ಮೀರದಲ್ಲಿ ಭಯೋತ್ಪಾದಕರ ವಿರುದ್ಧದ ಕಾರ್ಯಾಚರಣೆಗೆ ಮಾರ್ಚ್‌ನಿಂದ ಕೇಂದ್ರ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಮಹಿಳಾ ಪಡೆ ಕೂಡಾ ಸೇರ್ಪಡೆಯಾಗಲಿದೆ. ಮಹಿಳಾ ಪಡೆಗೆ ಪುರುಷರ ಪಡೆಗೆ ಸಮಾನವಾಗಿ ತರಬೇತಿ ನೀಡಲಾಗುತ್ತದೆ ಎಂದು ಸಿಆರ್‌ಪಿಎಫ್‌ನ ಹಿರಿಯ ಅಧಿಕಾರಿ ಚಾರು ಸಿನ್ಹಾ ಅವರು ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಬಿಇ-29-2022-23-ಓಟಿ-29,30

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಗಳಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಓಟಿ ಸಂ.	ಕೆಲಸದ ಹೆಸರು	ಅಂದಾಜು ಮೌಲ್ಯ
29	ಹೆಜ್ಜಾಲದಲ್ಲಿನ ಐಆರ್‌ಐಡಿಎಂ ಸೇವಾ ಕಟ್ಟಡಗಳ ಮೇಲೆ ಸೋಲಾರ್ ರೂಫ್ ಟಾಪ್ ಫೋಟೋ ವೋಲ್ಟಾಯಿಕ್ ಪವರ್ ಜನರೇಟಿಂಗ್ ವ್ಯವಸ್ಥೆಯನ್ನು ಒದಗಿಸುವುದು.	ರೂ. 1,30,45,200/-
30	ಸೋಲಾರ್ ಮಿಷನ್ ಅಡಿಯಲ್ಲಿ ನಿಲ್ದಾಣ ಕಟ್ಟಡಗಳ ಮೇಲೆ ಸೋಲಾರ್ ರೂಫ್ ಟಾಪ್ ಫೋಟೋ ವೋಲ್ಟಾಯಿಕ್ ಪವರ್ ಜನರೇಟಿಂಗ್ ವ್ಯವಸ್ಥೆಯನ್ನು ಒದಗಿಸುವುದು (10 ನಿಲ್ದಾಣಗಳು)	ರೂ. 1,37,97,420/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **16-01-2023ರಂದು 11:30 ಗಂಟೆವರೆಗೆ**

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ. ಯಾವುದೇ ತಿದ್ದುಪಡಿಗಾಗಿ ಮುಕ್ತಾಯದ ದಿನಾಂಕದವರೆಗೆ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್, ಬೆಂಗಳೂರು

ಪಿಯುಬಿ/577/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23

S.W.Railways SWRRLY SWRRLY

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Arkavathi Layout

5000 SQFT Property For Sale at Arkavathi Layout, Srirampura (Revenue Title). Contact: 7676900174 8660220048

Airport Road

BSNL LAYOUT Premium Residential / Commercial Plots Near B'lore Intl Airport Next to Mini Vidhana Soudha on 6 lane NH 207 @ 1100/Sft OPEN FOR GENERAL PUBLIC Call: 9071534000

Chickpet

SITE 10,000 Sqft in City Market Area, Bangalore. Available for SALE/ LEASE. Clear Title. 8105926354.

Hennur

2400 SQFT, WF Unity Enclave, Geddalahalli, BBMP BKatha, DC Converted, 7000/- PSFT Negotiable: 9497813773/ 9845206422

HSR Layout

HSR LAYOUT 6th Sector 50x80 Property For Sale 50 feet Road Good Location Contact: 8147734144

J P Nagar

JPNAGAR 9TH Phase,3rd Block, 30X40, South Facing BDA Site for Sale Rs. 8500/ Sqft :9880676792

Kengeri

40X60 SITE for Sale, East Facing, Basaveshwaranagara Layout, Kommaghatta Village, Kengeri Hobli 4200/-psft. 9449673151

Kempegowda Layout

NADAPRABHU KEMPEGOWDA and VISHWESHWARAIAH LAYOUT Sites for Sale 20x30, 30x40, 40x60, 50x80. Manjunatha S. 9742568746, 9663346666.

Nagarabhavi

40X60 NORTH Facing 50ft Road 12500/- Near Deepak Complex ITI Layout 100% White Money: 9916826976

Vishweshwariah Layout

"30X40 SOUTH facing, Betterment 'A' Katha Site, Mariyappanapalya & 30x40 East facing Vishveshwaraiah 7th Block. 9379776189"

AVAILABLE 50X80 BDA Site Commercial 80ft Road North Facing Vishweshwaraiah Layout Contact Genuine Buyers 9481703468

BDA SITE SALE VISHWESHWARAIAH LAYOUT 6TH BLOCK EAST AND NORTH FACE 40FT ROAD 9500 NEGOTIABLE CONTACT: 8892901567/ 9341733480

VISHWESHWARAIAH LAYOUT BDA 8th Block NF, Upkar Layout 30X40 North West Corner Owner Meeting: 9980860138

BHARATHNAGAR ATTACH 40x40 BBMP A Katha SE Corner, SMV BDA Site 1st Block 40x60 East: 9964971895

AVAILABLE 30X40 BDA Site North Facing Vishweshwaraiah Layout Rs. 7000/- Per Sqft Contact: 9844603127

House

Banashankari

BANASHANKARI 2ND Near BDA complex 50x75 East facing Residential or Semi-Commercial 5 BHK Duplex house- 7,87,00,000/- 9740292904

Flat

Sahakarnagar

LAST 2 units of 2BHK FLATS available for sale in Telecom Colony Saharaknagar Bangalore @ affordable rates starting from Rs.45 Lakhs. Calm & Serene locality close to Shriram Shreyas Apartments. Get yours today! Contact:7022106263

Yelahanka

SALE 1075SQFT Flat In Provident Welworth City Doddaballapura Main Road 3BHK With Cover Car-Parking 'E' Khata Call:6361613734

Agricultural Land Converted

Mysore Road

AGRICULTURAL LANDS Available on Mysore Road In and Around Bidadi, Ramanagar 1-to-50 Acres Clear Titles- 9900115519

Commercial Building

Tumkur Road

SALE COMMERCIAL BUILDING 10,000 Sqft. 40x60 Site B khatha. Beside Nagasandra Metro IKEA. 5.5cr Negotiable. 9448311478/ 9845219605.

Farm House/ Land/ Resorts

Kanakapura Road

KANAKAPURA TOWN 1 Acre and 2 Acre with Water & Electricity Suitable for any Purpose Call Ravikumar: 9945928994.

Mysore

12 ACRES Farm with Arecanut, Coconut for SALE in Periyapatana, Mysore District. Contact: 8971585440

REAL ESTATE BUYING

Joint Development

Multiple Locations

5- 9 Acres Land Required near Devanahalli, Sarjapura & Hoskote for Joint Development. Contact: 8951770606

Sites

Banashankari

BDA-SITES WANTED @ Banashankari 6th Stage, Vishweshwariah Lyt 30X40, 40X60, 50X80 Immediate Settlement Call:8660220048 8431032948

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout, Any BDA Sites Wanted. Contact: SAPTHAGIRI. 9900268073, 9448068073.

Vishweshwariah Layout

:-BUYING/ SELLING:- 20x30, 30x40,40x60, 50x80 BDA sites Vishweshwaraiah Layout and BSK 6th stage. Contact:9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

"WE FIX" LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

RENTAL PROPERTIES

Accommodation Available

Commercial

AVAILABLE COMMERCIAL Building 10000 sqft for Rent at Banashankari 2nd Stage, K.R.Road. Contact: 9341234288/ 9663224353.

KORAMANGALA COMMERCIAL Space 2300 sqft ideal for quick office cabin/ co-work for Rent. Contact: 8951770606

Flats

RENT 2BHK Flat-In Prestige Falcon-City on 15th Floor 1204sqft Semi-furnished Kanakapura Road Near Metro Cash & Carry Call:6361613734

Industrial And Factory

RENT 19103 sqft, 40 feet road Industrial Land, Gankallu village Tavarekere hobli, Bangalore south. 9845974129.

JOB OPPORTUNITIES

Accounts & Finance

WANTED AN ACCOUNTANT with 3- 5yrs Experience in handling Contract Account Related to GST, PT, ESI, EPF, Online Banking Etc, for a Contracting Firm in South Bangalore Apply: rubydyne@gmail.com

Multiple Vacancy

REQUIRED, TEAMLEADER, Telecaller & Field_Executive For Bank Loan collection. Direct recruitment to company. 9620206756, 9620200756.

Receptionist/ Secretary

OFFICE ASSISTANT Experienced with Computer Knowledge. Candidates near Chamrajpet apply careers@eyesense.in

BUSINESS

Business to Business

Financial Services

LOANS- BANK/PRIVATE Finance All Type of Loans Any Property (Any Where) Low Interest Rs.20L-To 20CR Contact: 8904047577

PERSONAL

Change of Name

SMT G ASHA JYOTHI, Wife/o 6494841X NK/ASH, GANTA KANAKA RAJU, Vill- Sriramanagaram, Gudivada Bhogapuram, Vizianagaram, Andhra Pradesh changed name SMT G ASHA JYOTHI to GANTA JYOTHI, 30/12/2022, Notary K.V. Mani, Bangalore

APPA RAO, Father/o 6494841X, NK/ASH, GANTA KANAKA RAJU, Vill- Sriramanagaram, Gudivada Bhogapuram, Vizianagaram, Andhra Pradesh changed name APPA RAO to GANTA APPARAO, 30/12/2022, Notary K.V. Mani, Bangalore

I, RAJESH Shankar (father) residing at Block- 1, Flat No- 301, ARK Serene County, Channasandra, Kadugodi post, Bangalore have changed my minor daughter's name from R Ananya to ANANYA RAJESH vide affidavit dated 30.12.2022 before notary Veena J. Bengaluru-67

CHANGE OF NAME
I, **TARUN SHAH FV,** Residing at No. 619, 2nd C Cross, 6th Main, 2nd Block, HRBR Layout, Kalyan Nagar, Bangalore- 560043, have changed my name to **TARUN SHAH,** vide affidavit dated 30.12.2022 before Notary S.I. Balaguru, Bangalore. Henceforth I shall be known as **TARUN SHAH** only.

CHANGE OF NAME
I, **URITI SATYA NARAYANA SIVAPRASADA RAO** S/o U. Sivaprasada Rao, Residing at No. 636, 26th Cross Road, 9th Main, Sector-7, HSR Layout, Bangalore- 560102 Have Changed My Name to **URITI SATYA NARAYANA** vide Affidavit Dated 17-11-2022. Affidavit Certificate No. **IN-KA87298255977175U** Sworn Before Notary K.V. Mani, Bangalore.

SMT AKKAMMA, Mother/o 6494841X, NK/ASH, GANTA KANAKA RAJU, Vill- Sriramanagaram, Gudivada Bhogapuram, Vizianagaram, Andhra Pradesh changed name SMT AKKAMMA to GANTA AKKAMMA, 30/12/2022, Notary K.V. Mani, Bangalore

I, SYED BAKHER RAZA S/O SYED SHAHABUL HASSAN residing at 90B Alipur Gowribidanur Taluk Chikkaballapur District, have changed my name SYED BAKHAR RAZA vide affidavit dated 29.12.2022 before notary H.M ADI NARAYANA GOWDA, Gowribidanur

6494841X, NK/ASH, GANTA KANAKA RAJU, Vill- Sriramanagaram, Gudivada, Bhogapuram, Vizianagaram, Andhra Pradesh changed Son's name GANTA YOGESH to GANTA YUGESH, 30/12/2022, Notary K.V. Mani, Bangalore

Lost

LOST
I'm S.Padma lost my original Allotment letter bearing Site no. 2105 4th block bsk 6th stage measuring 6×9 which has Alloted on date 01/10/2002.The document was lost/ misplaced and complaint has been lodged. if found please return the document contact: 8310106644

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

HEALTH SPECIAL

NO MORE DIABETIC GANGRENE - AMPUTATIONS
Dr. Lonappan J Edakattu
(Alternative Medical Practitioner) Reg No. IBAM/RMP/A10070
Treatment without surgery

Speciality Treatment for AIDS, Artery blockage, Cancer, Bone Degeneration, Spondylosis, Diabetes Disc Bulge, Vertebra, Sinus, Psoriasis Warts, Corns, Fever, Gangrene, Kidney Stones & Piles.

INDIA #38, V Cross, Ganesha Block, Dinnur Main Road, R.T. Nagar, Bangalore-560 032.
Ph 080-42131226 | +91 9900272321
email : dr.lonappan@gmail.com | www.drlonappan.com
USA : 3096, School House, Troy-Mi 48083 Tel : 1-248-740-7760

DH ಪ್ರಜಾವಾಣಿ

BOOK YOUR REAL ESTATE

AD IN DECCAN HERALD ALL KARNATAKA
PRAJAVANI ALL KARNATAKA
@750/-* Per Sqcm
Single Column
conditions apply*

For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

ಹೆಚ್ಚಿನ ಪಿಂಚಣಿ: ಇಪಿಎಫ್‌ಒ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕರರ ಭವಿಷ್ಯನಿಧಿ ಯೋಜನೆಯ ಅಡಿಯಲ್ಲಿ ಹೆಚ್ಚುವರಿ ಪಿಂಚಣಿಗಾಗಿ ವಂತಿಗೆ ನೀಡಿದ್ದ ನೌಕರರಿಗೆ, ಹೆಚ್ಚುವರಿ ಪಿಂಚಣಿಗೆ ತಮ್ಮ ಆಯ್ಕೆಯನ್ನು ಇಪಿಎಫ್‌ಒ ವೆಬ್‌ಸೈಟ್ ಮೂಲಕ ಖಚಿತ ಪಡಿಸಲು ಅವಕಾಶ ಕಲ್ಪಿಸಬೇಕು ಎಂದು ಇಪಿಎಫ್‌ಒ ಸುತ್ತೋಲೆ ಹೊರಡಿಸಿದೆ.

ಪಿ.ಎಫ್. ಸಂಘಟನೆಯ ಎಲ್ಲ ವಲಯ ಕಚೇರಿಗಳಿಗೆ ಹಾಗೂ ಪ್ರಾದೇಶಿಕ ಕಚೇರಿಗಳಿಗೆ ಈ ಸುತ್ತೋಲೆ ಹೊರಡಿಸಲಾಗಿದೆ.

ಪಿ.ಎಫ್. ಪ್ರಾದೇಶಿಕ ಆಯುಕ್ತರು ಅಂತಿಮಗೊಳಿಸುವ ಅರ್ಜಿಯಲ್ಲಿ ಹೆಚ್ಚಿನ ಪಿಂಚಣಿಗೆ ಆಯ್ಕೆಯನ್ನು ಖಚಿತಪಡಿಸಬೇಕು ಎಂದು ಸುತ್ತೋಲೆಯಲ್ಲಿ ಹೇಳಲಾಗಿದೆ.

ಉದ್ಯೋಗಿಗಳು ಪಿಂಚಣಿ ನಿಧಿಗೆ ತಮ್ಮ ಪೂರ್ಣ ವೇತನದ ಶೇಕಡ 8.33ರಷ್ಟನ್ನು ವಂತಿಗೆಯಾಗಿ ಪಾವತಿಸಲು ಅವಕಾಶ ನೀಡಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪು ಹೇಳುತ್ತದೆ.

ಉದ್ಯೋಗಿಗಳ ಪಿಂಚಣಿ ಯೋಜನೆ (ಇಪಿಎಸ್) ಆಯ್ಕೆ ಮಾಡಿಕೊಂಡಿರುವ ಉದ್ಯೋಗಿಗಳಿಗೆ ತಮ್ಮ ಪಿಂಚಣಿ ವಂತಿಗೆ ಹೆಚ್ಚಿಸುವ ಅವಕಾಶವನ್ನು ನೀಡಲಾಗಿದೆ.

2014ರ ಸೆಪ್ಟೆಂಬರ್ 1 ಅಥವಾ ಅದಕ್ಕೂ ಮೊದಲಿನಿಂದಲೇ ಇಪಿಎಸ್‌ನ ಸದಸ್ಯರಾಗಿರುವವರು ತಮ್ಮ ಪೂರ್ಣ ವೇತನದ ಶೇಕಡ 8.33ರಷ್ಟನ್ನು ವಂತಿಗೆಯಾಗಿ ಪಾವತಿಸಬಹುದು ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

‘ಅಗ್ನಿವೀರವಾಯು ಹುದ್ದೆ: ಜುಲೈನಿಂದ ಮಹಿಳೆಯರ ಸೇರ್ಪಡೆ’

ಬೆಳಗಾವಿ: ‘ಅಗ್ನಿವೀರವಾಯು’ ಹುದ್ದೆಗೆ 2023ರ ಜುಲೈನಿಂದ ಮಹಿಳೆಯರ ನೇಮಕಾತಿಗೆ ರ‍್ಯಾಲಿಗಳು ನಡೆಯಲಿವೆ’ ಎಂದು ಏರ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್, ಏರ್ ಮಾರ್ಷಲ್ ಮಾನವೇಂದ್ರ ಸಿಂಗ್ ಶುಕ್ರವಾರ ಹೇಳಿದರು.

ಇಲ್ಲಿನ ಸಾಂಬ್ರಾದ ಏರ್‌ಮೆನ್ ತರಬೇತಿ ಶಾಲೆಯಲ್ಲಿ ‘ಅಗ್ನಿಪಥ’ ಯೋಜನೆಯಡಿ ವಾಯುಪಡೆಗೆ ‘ಅಗ್ನಿವೀರವಾಯು’ ಹುದ್ದೆಗೆ ಆಯ್ಕೆಯಾದ ಮೊದಲ ಬ್ಯಾಚ್‌ನವರಿಗೆ ತರಬೇತಿ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ರಾಷ್ಟ್ರೀಯ ನೀತಿ ಮತ್ತು ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಮಹಿಳೆಯರ ನೇಮಕಾತಿ ನಡೆಯುತ್ತಿದೆ. ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿದ್ದು, ಅರ್ಜಿ ಸ್ವೀಕಾರ ಪ್ರಕ್ರಿಯೆ ಪ್ರಗತಿಯಲ್ಲಿದೆ. ನೇಮಿಸಿಕೊಳ್ಳುವ ಮಹಿಳೆಯರ ಶೇಕಡಾವಾರು ಪ್ರಮಾಣವನ್ನು ನಂತರ ನಿರ್ಧರಿಸಲಾಗುತ್ತದೆ’ ಎಂದರು.

ಫುಟ್‌ಬಾಲ್‌ನ ಅತ್ಯುತ್ತಮ ಕ್ರೀಡಾಪಟುಗಳಲ್ಲಿ ಒಬ್ಬರಾದ ಇವರಿಗೆ ಶ್ರದ್ಧಾಂಜಲಿ

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಇಂದಿರಾ ನಗರ, ವೈಟ್‌ಫೀಲ್ಡ್‌ನಲ್ಲಿ ವರ್ಷಾಚರಣೆ ಸಿದ್ಧತೆ ಜೋರು

ಹೊಸ ವರ್ಷ ಸ್ವಾಗತಕ್ಕೆ ವಿದ್ಯುದ್ದೀಪಾಲಂಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022ನೇ ವರ್ಷಕ್ಕೆ ವಿದಾಯ ಹೇಳಿ, 2023 ಹೊಸ ವರ್ಷವನ್ನು ಬರಮಾಡಿಕೊಳ್ಳಲು ನಗರ ಸಜ್ಜಾಗಿದೆ. ಪ್ರಮುಖ ರಸ್ತೆಗಳು, ಸಾರ್ವಜನಿಕ ಸ್ಥಳಗಳು, ಕ್ಲಬ್, ಹೋಟೆಲ್, ಪಬ್‌ಗಳು ವಿದ್ಯುತ್ ಅಲಂಕೃತಗೊಂಡು ಕಂಗೊಳಿಸುತ್ತಿವೆ.

ಕೋವಿಡ್ ಕಾರಣದಿಂದ ಎರಡು ವರ್ಷ ಹೊಸ ವರ್ಷಾಚರಣೆಗೆ ನಿರ್ಬಂಧ ವಿಧಿಸಲಾಗಿತ್ತು. ಈ ವರ್ಷ ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷಾಚರಣೆಗೆ ಅವಕಾಶ ನೀಡಲಾಗಿದ್ದು, ತಮ್ಮಿಷ್ಟದ ರೀತಿಯಲ್ಲಿ ಹೊಸ ವರ್ಷವನ್ನು ಸ್ವಾಗತಿಸಲು ಜನರು ಸಿದ್ಧರಾಗಿದ್ದಾರೆ.

ಹೆಚ್ಚು ಜನರು ಸೇರುವ ಬ್ರಿಗೇಡ್ ರಸ್ತೆ, ಎಂ.ಜಿ.ರಸ್ತೆ, ಚರ್ಚ್ ಸ್ಟ್ರೀಟ್, ಕೋರಮಂಗಲ, ಇಂದಿರಾನಗರ, ವೈಟ್‌ಫೀಲ್ಡ್ ಪ್ರದೇಶಗಳಲ್ಲಿ ಸಿದ್ಧತೆ ಜೋರಾಗಿದೆ. ವ್ಯಾಪಾರ ಮಳಿಗೆಗಳು, ಹೋಟೆಲ್, ಪಬ್‌ಗಳಿಗೆ ವಿಶೇಷ ವಿದ್ಯುತ್ ಅಲಂಕಾರ ಮಾಡಲಾಗಿದೆ. ಗ್ರಾಹಕರನ್ನು ಸೆಳೆಯಲು ವಿಶೇಷ ರಿಯಾಯಿತಿ ಜೊತೆಯಲ್ಲಿ ಸಂಗೀತ, ನೃತ್ಯ ಹಾಗೂ ಇತರೆ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಮುಂಗಡ ಟಿಕೆಟ್ ಮಾರಾಟ ನಡೆಯುತ್ತಿದೆ.

ಹೊಸ ವರ್ಷಾಚರಣೆ ಮುನ್ನಾ ದಿನ ಶುಕ್ರವಾರ ರಾತ್ರಿಯೂ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆಗಳಲ್ಲಿ ಹೆಚ್ಚು ಜನಸಂದಣಿ ಕಂಡುಬಂತು.

ಭದ್ರತೆ ಪರಿಶೀಲನೆ: ಸಾರ್ವಜನಿಕರು ಹೆಚ್ಚು ಸೇರುವ ಸ್ಥಳಗಳಲ್ಲಿ ಪೊಲೀಸರು ಬಿಗಿಭದ್ರತೆ ಕೈಗೊಂಡಿದ್ದು, ಅಲ್ಲಲ್ಲ ನಿರಂತರವಾಗಿ ಗಸ್ತು ತಿರುಗುತ್ತಿದ್ದಾರೆ.

ಶುಕ್ರವಾರ ಬೆಳಿಗ್ಗೆಯಿಂದ ರಾತ್ರಿಯವರೆಗೂ ಶ್ವಾನದಳ ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪರಿಶೀಲನೆ ನಡೆಸಿದರು. ನಗರದೆಲ್ಲೆಡೆ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಅವುಗಳ ನಿರ್ವಹಣೆ ಪರೀಕ್ಷಿಸಿದರು.

ಸಿಬ್ಬಂದಿ ಕಾವಲು: ‘ಹೊಸ ವರ್ಷಾಚರಣೆ ವೇಳೆ ಅಪಘಾತಗಳನ್ನು ತಡೆಯುವ ಉದ್ದೇಶದಿಂದ ನಗರದ ಎಲ್ಲ ಮೇಲ್ಸೇತುವೆಗಳಲ್ಲಿ ಡಿ. 31 ರಂದು ರಾತ್ರಿ 9 ಗಂಟೆಯಿಂದ ಜ. 1ರ ಬೆಳಿಗ್ಗೆ 6 ಗಂಟೆಯವರೆಗೆ ಎಲ್ಲ ಬಗೆಯ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಪ್ರತಿಯೊಂದು ಸೇತುವೆ ಬಳಿಯೂ ಬ್ಯಾರಿಕೇಡ್‌ಗಳನ್ನು ನಿಲ್ಲಿಸಿ ಸಿಬ್ಬಂದಿ ಕಾವಲು ಕಾಯಲಿದ್ದಾರೆ’ ಎಂದು ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ಹೇಳಿದರು.

ಹೊಸ ವರ್ಷಾಚರಣೆ ಪ್ರಯುಕ್ತ ನಗರದ ಬ್ರಿಗೇಡ್ ರಸ್ತೆಯಲ್ಲಿ ವಿಶೇಷ ವಿದ್ಯುತ್ ಅಲಂಕಾರ ಮಾಡಲಾಗಿದೆ – ಪ್ರಜಾವಾಣಿ ಚಿತ್ರ

₹6.31 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಹೊಸ ವರ್ಷಾಚರಣೆಗೆ ಪೂರೈಸಲು ಸಂಗ್ರಹಿಸಿದ್ದ ₹ 6.31 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿರುವ ಪೊಲೀಸರು, ಎಂಟು ಆರೋಪಿಗಳನ್ನು ಬಂಧಿಸಿದ್ದಾರೆ.

‘ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ಮೇಲೆ ನಿಗಾ ವಹಿಸಲಾಗಿದೆ. ಗೋವಾ, ದೆಹಲಿ, ಆಂಧ್ರಪ್ರದೇಶ, ಹೈದರಾಬಾದ್‌ನಿಂದ ನಗರಕ್ಕೆ ಡ್ರಗ್ಸ್ ತಂದು ಸಂಗ್ರಹಿಸಿದ್ದ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು. ಇಬ್ಬರು ವಿದೇಶಿಗರು ಹಾಗೂ ಆರು ಸ್ಥಳೀಯರನ್ನು ಬಂಧಿಸಲಾಗಿದೆ’ ಎಂದು ಕಮಿಷನರ್ ಪ್ರತಾಪ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಬಾಣಸವಾಡಿ, ಎಲೆಕ್ಟ್ರಾನಿಕ್ ಸಿಟಿ ಠಾಣೆಗಳಲ್ಲಿ ಪ್ರಕರಣ ದಾಖಲಿಸಲಾಗಿದೆ. ಎಂಡಿಎಂಎ, ಎಕ್ಸ್‌ಟೆಸಿ, ಹಶೀಸ್ ಎಣ್ಣೆ, ಚರಸ್ ಹಾಗೂ ಗಾಂಜಾ ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

ಕೋವಿಡ್ ದೃಢ ಪ್ರಮಾಣ ಇಳಿಕೆ

ಬೆಂಗಳೂರು: ನಗರದಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ವಾರದಿಂದ ಕೋವಿಡ್ ದೈನಂದಿನ ಪರೀಕ್ಷೆಗಳ ಸಂಖ್ಯೆಯನ್ನು ಏರಿಕೆ ಮಾಡಲಾಗಿದೆ. ಈ ಅವಧಿಯಲ್ಲಿ ಸೋಂಕು ದೃಢ ಪ್ರಮಾಣ ಇಳಿಕೆ ಕಂಡಿದ್ದು, ಸದ್ಯ ಶೇ 1ಕ್ಕಿಂತ ಕಡಿಮೆಯಿದೆ.

ಚೀನಾ ಸೇರಿ ಕೆಲ ದೇಶಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳ ಹಾಗೂ ರೂಪಾಂತರಿ ವೈರಾಣುವಿನ ಆತಂಕದಿಂದ ನಗರದಲ್ಲಿ ಮುಖಗವಸು ಧರಿಸುವಿಕೆ ಸೇರಿ ಕೆಲ ನಿರ್ಬಂಧ ವಿಧಿಸಲಾಗಿದೆ.

ಕಳೆದ ಏಳು ದಿನಗಳಲ್ಲಿ 22,869 ಪರೀಕ್ಷೆಗಳನ್ನು ನಡೆಸಲಾಗಿದ್ದು, 196 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈ ಅವಧಿಯಲ್ಲಿ 142 ಮಂದಿ ಚೇತರಿಸಿಕೊಂಡಿದ್ದಾರೆ. ನಗರದಲ್ಲಿ 1,249 ಸಕ್ರಿಯ ಪ್ರಕರಣಗಳಿವೆ. ನಗರದ ಆಸ್ಪತ್ರೆಗಳು ಕೋವಿಡ್ ಮುಕ್ತವಾಗಿದ್ದು, ಸೋಂಕಿತರೆಲ್ಲರೂ ಮನೆ ಆರೈಕೆಗೆ ಒಳಗಾಗಿದ್ದಾರೆ.

‘ಕೊರೊನಾ ಸೋಂಕಿನ ತೀವ್ರತೆ ಕಡಿಮೆ ಇರುವುದರಿಂದ ಕೋವಿಡ್ ಪೀಡಿತರು ವಿಶೇಷ ಚಿಕಿತ್ಸೆ ಇಲ್ಲದೆಯೇ ಚೇತರಿಸಿಕೊಳ್ಳುತ್ತಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಹೆಚ್ಚಿನ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಐಎಲ್‌ಐ, ಸಾರಿ ಪ್ರಕರಣಗಳ ಮೇಲೆ ನಿಗಾ ಇರಿಸಿ, ತಪಾಸಣೆ ಮಾಡಲಾಗುತ್ತಿದೆ’ ಎಂದು ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆಯ ನಿರ್ದೇಶಕ ಡಾ.ಸಿ. ನಾಗರಾಜ್ ತಿಳಿಸಿದರು.

ಬೆಸ್ಕಾಂ, ಮೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ದರ ಕಡಿತ

ಬೆಂಗಳೂರು: ಬೆಸ್ಕಾಂ ಹಾಗೂ ಮೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ಹೊಂದಾಣಿಕೆ ವೆಚ್ಚ ಕಡಿತ ಮಾಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ ಪ್ರತಿ ಯುನಿಟ್‌ಗೆ 37 ಪೈಸೆ ಹಾಗೂ ಮೆಸ್ಕಾಂ ವ್ಯಾಪ್ತಿಯಲ್ಲಿ ಪ್ರತಿ ಯುನಿಟ್‌ಗೆ 39 ಪೈಸೆ ಕಡಿತ ಮಾಡಲಾಗಿದೆ ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ಟ್ವೀಟ್ ಮಾಡಿದ್ದಾರೆ.

ಹೊಂದಾಣಿಕೆ ವೆಚ್ಚ ಕಡಿತಗೊಳಿಸುವ ಪ್ರಯೋಜನ ನೇರವಾಗಿ ಗ್ರಾಹಕರಿಗೆ ಲಭಿಸಲಿದೆ ಎಂದು ಅವರು ತಿಳಿಸಿದ್ದಾರೆ.



ಸ್ಪಷ್ಟ ನಿರ್ಧಾರ ತೆಗೆದುಕೊಳ್ಳದ ಜಿಲ್ಲಾಡಳಿತ, ಕಂದಾಯ ಇಲಾಖೆಗೆ ಪತ್ರ

ಖಾತೆಯಾಗದ ಚಿಕ್ಕಪೇಟೆ ಶಾಲೆ ಸ್ವತ್ತು

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭವಾಗಿದ್ದ ಚಿಕ್ಕಪೇಟೆ ಸರ್ಕಾರಿ ಪ್ರೌಢಶಾಲೆಯ ಬಹುಕೋಟಿ ಮೌಲ್ಯದ ನಿವೇಶನ ಹಾಗೂ ಕಟ್ಟಡವನ್ನು ಶಾಲೆ ಹೆಸರಿಗೆ ಖಾತೆ ಮಾಡಿಕೊಡಲು ಕಂದಾಯ ಇಲಾಖೆ ಮೀನಮೇಷ ಎಣಿಸುತ್ತಿದೆ.

‘ಸರ್ಕಾರಿ ಶಾಲೆ ಮಾರಾಟಕ್ಕಿದೆ’ ಎಂಬ ಶೀರ್ಷಿಕೆಯಡಿ ಇದೇ ವರ್ಷದ ಆಗಸ್ಟ್‌ನಲ್ಲಿ ‘ಪ್ರಜಾವಾಣಿ’ ವಿಶೇಷ ವರದಿ ಪ್ರಕಟಿಸಿತ್ತು. ಆ ಬಳಿಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ಅವರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರಿಗಳ ಸಭೆ ನಡೆದು, ಶಾಲೆ ಹೆಸರಿಗೆ ನಿವೇಶನ ಹಾಗೂ ಕಟ್ಟಡವನ್ನು ನೋಂದಣಿ ಮಾಡಿಕೊಡಲು, ಆರ್‌ಟಿಸಿಯಲ್ಲೂ ಪ್ರೌಢಶಾಲೆ ಸ್ವತ್ತು ಎಂದು ನಮೂದಿಸಲು ಕಂದಾಯ ಇಲಾಖೆಯನ್ನು ಕೋರಲಾಗಿತ್ತು. ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಕಂದಾಯ ಇಲಾಖೆ ಬೆಂಗಳೂರು ನಗರ ಜಿಲ್ಲಾಡಳಿತಕ್ಕೆ ನೀಡಿತ್ತು.

ಬಿಬಿಎಂಪಿ ಹಾಗೂ ಸರ್ವೆ ಇಲಾಖೆ ಸಹಯೋಗದಲ್ಲಿ ದಾಖಲೆಗಳ ಪರಿಶೀಲನೆ ನಡೆಸಿದ್ದ ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್, ಮುಂದಿನ ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ವರದಿ ಕೊಟ್ಟಿದ್ದರು. ಈ ವರದಿ ಆಧಾರದಲ್ಲಿ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳದ ಜಿಲ್ಲಾಧಿಕಾರಿ, ಕಟ್ಟಡವನ್ನು ಕಂದಾಯ ಇಲಾಖೆ ಅಧೀನದಲ್ಲೇ ಉಳಿಸಿಕೊಳ್ಳಲು, ಶಿಕ್ಷಣ ಇಲಾಖೆಗೆ ನೀಡಲು ಅಥವಾ ರಜತ ಕಾಂಪ್ಲೆಕ್ಸ್ ಬಾಡಿಗೆದಾರರ ಕ್ಷೇಮಾಭಿವೃದ್ಧಿ ಸಂಘಕ್ಕೆ 30 ವರ್ಷಗಳಿಗೆ ಮರಳಿ ಗುತ್ತಿಗೆ ನೀಡಬಹುದೇ ಎಂದು ಕೋರಿ ಕಂದಾಯ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಅಗತ್ಯ ದಾಖಲೆಗಳಿದ್ದರೂ ಶಾಲೆಯ ಹೆಸರಿಗೆ ಸ್ವತ್ತು ವರ್ಗಾಯಿಸಲು ಕ್ರಮಕೈಗೊಂಡಿಲ್ಲ.

ಚಿಕ್ಕಪೇಟೆ ಒಟಿಸಿ ರಸ್ತೆಯಲ್ಲಿರುವ (ಮೆಜೆಸ್ಟಿಕ್ ಸಮೀಪ) ಸರ್ಕಾರಿ ಪ್ರೌಢಶಾಲೆ 77 ವರ್ಷಗಳಷ್ಟು ಹಳೆಯದು. 13,735 ಅಡಿಗಳ ನಿವೇಶನದಲ್ಲಿ 1945ರಲ್ಲೇ ಪ್ರಾಥಮಿಕ, ಮಾಧ್ಯಮಿಕ ಶಾಲೆ ಆರಂಭವಾಗಿದ್ದವು. ಸ್ವಾತಂತ್ರ್ಯಾ ನಂತರ ಅದೇ ಜಾಗದಲ್ಲಿ ಪ್ರೌಢಶಾಲೆಯನ್ನೂ ತೆರೆಯಲಾಗಿತ್ತು.

ಶಿಥಿಲಾವಸ್ಥೆಯಲ್ಲಿದ್ದ ಶಾಲಾ ಕೊಠಡಿಗಳನ್ನು ಕೆಡವಿ, ಹೊಸ ಕಟ್ಟಡ ನಿರ್ಮಿಸಿಕೊಡಲು ಅವಕಾಶ ಕೋರಿ 1979ರಲ್ಲಿ ರಜತಾ ಎಂಟರ್ ಪ್ರೈಸಸ್ ಎಂಬ ಖಾಸಗಿ ಸಂಸ್ಥೆಯೊಂದು ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಸಂಸ್ಥೆಯ ಮನವಿ ಪುರಸ್ಕರಿಸಿದ ಸರ್ಕಾರ, ಬಹು ಅಂತಸ್ತಿನ ಕಟ್ಟಡ ನಿರ್ಮಿಸಲು, ಎರಡನೇ ಮಹಡಿಯಲ್ಲಿ ಶಾಲೆಗಳಿಗೆ ಕೊಠಡಿ ಕಟ್ಟಿಕೊಡಲು ಒಪ್ಪಂದ ಮಾಡಿಕೊಂಡು 26 ವರ್ಷಗಳಿಗೆ ಶಾಲಾ ಜಾಗವನ್ನು ಗುತ್ತಿಗೆ ನೀಡಿತ್ತು. ಗುತ್ತಿಗೆ ಒಪ್ಪಂದದಲ್ಲೇ ‘ಶಾಲೆಯ ಜಾಗ’ ಎಂದು ಸ್ಪಷ್ಟವಾಗಿ ನಮೂದಾಗಿದ್ದರೂ, ಅವಧಿ ಮುಗಿದ ನಂತರ ಶಾಲೆಯ ಹೆಸರಿಗೆ ಸರ್ಕಾರ ಖಾತೆ ಮಾಡಿಕೊಟ್ಟಿರಲಿಲ್ಲ. ನಂತರ ಬಾಡಿಗೆದಾರರ ಸಂಘಕ್ಕೆ 10 ವರ್ಷಗಳು ಗುತ್ತಿಗೆ ನೀಡಲಾಗಿತ್ತು. ಈ ಅವಧಿಯೂ 2021 ಜೂನ್‌ಗೆ ಮುಕ್ತಾಯವಾಗಿದೆ.

> **ಶಾಲೆಯ ಸ್ವತ್ತು ಎನ್ನುವುದಕ್ಕೆ ಪುರಾವೆಗಳಿವೆ. ಚಿಕ್ಕಪೇಟೆ ಶಾಲೆಯ ಹೆಸರಿಗೆ ನೋಂದಣಿ, ಖಾತೆ ಮಾಡಿಕೊಡಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಮತ್ತೊಮ್ಮ ಸೂಚಿಸುವೆ.**
>
> **ಬಿ.ಸಿ.ನಾಗೇಶ್,** ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.

ಅವಧಿ ಬಳಿಕ ಗುತ್ತಿಗೆದಾರರಿಗೆ ಖಾತೆ!

ರಜತಾ ಎಂಟರ್‌ಪ್ರೈಸಸ್‌ಗೆ ನೀಡಿದ್ದ ಗುತ್ತಿಗೆ ಅವಧಿ 2005ಕ್ಕೆ ಮುಕ್ತಾಯವಾಗಿತ್ತು. ಗುತ್ತಿಗೆ ಮುಂದುರಿಸಲು ಕೋರಿ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾ ಮಾಡಿದ ನಂತರ ರಜತಾ ಕಾಂಪ್ಲೆಕ್ಸ್ ಬಾಡಿಗೆದಾರರ ಕ್ಷೇಮಾಭಿವೃದ್ಧಿ ಸಂಘಕ್ಕೆ 2011ರಲ್ಲಿ ಗುತ್ತಿಗೆ ನೀಡಲಾಗಿತ್ತು. ಈ ಅವಧಿಯಲ್ಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಿಂದೆ ಗುತ್ತಿಗೆ ಪಡೆದಿದ್ದ ರಜತಾ ಎಂಟರ್‌ಪ್ರೈಸಸ್ ಮಾಲೀಕರ ಹೆಸರಿಗೆ ಸ್ವತ್ತಿನ ಖಾತೆ ಮಾಡಿಕೊಟ್ಟಿರುವುದು ಅನುಮಾನಕ್ಕೆ ಕಾರಣವಾಗಿದೆ. ಶಿಕ್ಷಣ ಇಲಾಖೆಯ ಮನವಿಯಂತೆ ದಾಖಲೆಗಳ ಪರಿಶೀಲನೆ ನಡೆಸಿದಾಗ ಇಂತಹ ಅಘಾತಕಾರಿ ಸಂಗತಿ ಬೆಳಕಿಗೆ ಬಂದಿದೆ.

‘ಚಿಕ್ಕಪೇಟೆ ಸರ್ವೆ ನಂಬರ್ 812/2ರಲ್ಲಿರುವ ಶಾಲೆಯ ಕಟ್ಟಡದ ಖಾತೆ 2011ರಿಂದ ರಜತಾ ಎಂಟರ್‌ಪ್ರೈಸಸ್ ಹೆಸರಿಗೆ ದಾಖಲಾಗಿದೆ. ಹೇಗೆ ಖಾತೆ ಮಾಡಲಾಗಿದೆ ಎಂಬ ದಾಖಲೆಗಳು ಲಭ್ಯವಾಗಿಲ್ಲ. ಖಾತೆ ವರ್ಗಾವಣೆಯ ಬಗ್ಗೆ ಜಿಲ್ಲಾಡಳಿತ ನಿರಾಕ್ಷೇಪಣಾ ಪತ್ರ ನೀಡಿದರೆ ಮನವಿ ಪರಿಗಣಿಸಲಾಗುವುದು’ ಎಂದು ಬಿಬಿಎಂಪಿ ಸಹಾಯಕ ಕಂದಾಯಾಧಿಕಾರಿ ಶಿಕ್ಷಣ ಇಲಾಖೆಗೆ ಬರೆದ ಪತ್ರದಲ್ಲಿ ವಿವರಿಸಿದ್ದಾರೆ.

ನಗರದಲ್ಲಿ ಇಂದು

ಸ್ನೇಹ-ಸಮ್ಮಿಲನ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಎನ್.ಆರ್. ಪಂಡಿತಾರಾಧ್ಯ, ಉಪಸ್ಥಿತಿ: ಟಿ.ಎಸ್. ಹೆಂಜಾರಪ್ಪ, ಡಬ್ಲ್ಯು.ಎಚ್. ಅನಿಲ್ ಕುಮಾರ್, ವೂಡೇ ಪಿ. ಕೃಷ್ಣ, ಬಿ.ಎಂ. ಪಾರ್ಥಸಾರಥಿ, ಎಸ್. ಶೇಷನಾರಾಯಣ್, ಎಂ.ಎಸ್. ನಟರಾಜ್, ಆಯೋಜನೆ: ಶೇಷಾದ್ರಿಪುರಂ ವಿದ್ಯಾಸಂಸ್ಥೆಗಳು, ಸ್ಥಳ: ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಳಿಗ್ಗೆ 8

ಚಿಣ್ಣರ ನೃತ್ಯ ಸಂಹಿತಾ: ಅತಿಥಿಗಳು: ಆರ್. ಚಂದ್ರ ಶೇಖರ್, ಸ್ನೇಹಾ ಕಪ್ಪಣ್ಣ, ಪದ್ಮಿನಿ ಅಚ್ಚಿ, ಆಯೋಜನೆ: ಪ್ರಣವಾಂಜಲಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 9

ವರ್ಷಾರಂಭ ಹಾಗೂ ಕವಿಕಾವ್ಯಗಳ ಗಾನಾಮೃತ: ಅಧ್ಯಕ್ಷತೆ: ಯೂಸಫ್ ಎಚ್. ಬಿ., ಅತಿಥಿಗಳು: ಸೀತಾರಾಮ್, ಪ್ರಕಾಶ್, ಉಪಸ್ಥಿತಿ: ಎಂ.ಶಿವಸ್ವಾಮಿ, ಆಯೋಜನೆ: ವಿಶ್ವ ಚೇತನ ಬಳಗ, ಸ್ಥಳ: ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರಬಾ ರಸ್ತೆ, ಬೆಳಿಗ್ಗೆ 9.30

‘ಸ್ಪಿರಿಟ್ ಆಫ್ ಇಂಡಿಯಾ’ ಸಂವಾದ ಸರಣಿ: ಉದ್ಘಾಟನೆ: ಬಿ.ಎಲ್. ಸಂತೋಷ್, ಅಧ್ಯಕ್ಷತೆ: ಎನ್. ಆರ್. ರಮೇಶ್, ಅತಿಥಿಗಳು: ಅನಿಲ್ ಸಹಸ್ರಬುದ್ಧೆ, ಸುಚೇಂದ್ರ ಪ್ರಸಾದ್, ಜಿ.ಎಂ. ಲಿಂಗರಾಜು, ರಘುನಾಥ್ ಎಸ್., ಸಂವಾದ: ‘ಮಸುಕಾದ ಇತಿಹಾಸದ ಪುಟಗಳು, ಮರೆಯಾದ ವಿಜಯ ಗಾಥೆಗಳು’, ಭಾಗವಹಿಸುವವರು: ವಿಕ್ರಮ್ ಸಂಪತ್, ಪ್ರಕಾಶ್ ಬೆಳವಾಡಿ, ಆಯೋಜನೆ: ಮೈಂಡ್ ಪುಲ್ ಮೀಡಿಯಾ, ಸ್ಥಳ: ಆರ್. ವಿ. ದಂತ ಕಾಲೇಜು ಸಭಾಂಗಣ, ಜೆ.ಪಿ. ನಗರ, ಬೆಳಿಗ್ಗೆ 10.30



ದೊಡ್ಡರಂಗೇಗೌಡ

ವಿವಿಧ ಲೇಖಕರ 11 ಕೃತಿಗಳ ಲೋಕಾರ್ಪಣೆ: ದೊಡ್ಡರಂಗೇಗೌಡ, ಅಧ್ಯಕ್ಷತೆ: ನಿಡಸಾಲೆ ಪುಟ್ಟಸ್ವಾಮಯ್ಯ, 2023ರ ಕ್ಯಾಲೆಂಡರ್ ಅನಾವರಣ: ಎಚ್.ಎಲ್. ಪುಷ್ಪಾ, ಅತಿಥಿ: ಬೈರಮಂಗಲ ರಾಮೇಗೌಡ, ಕೃತಿಗಳ ಕುರಿತು ಮಾತು: ಶರಣು ಹುಲ್ಲೂರು, ಆಯೋಜನೆ: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ: ಬಿ.ಎಂ. ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11.30

ಮ. ರಾಮಮೂರ್ತಿ, ಜಿ.ಪಿ. ರಾಜರತ್ನಂ ಸ್ಮರಣಾರ್ಥ ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ: ಅಧ್ಯಕ್ಷತೆ: ‘ಮುಖ್ಯಮಂತ್ರಿ’ ಚಂದ್ರು, ಉಪಸ್ಥಿತಿ: ಪ್ರೊ. ಚಂದ್ರಶೇಖರ್ ನಾದೂರು, ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಸ್ಥಳ: ಬಿ.ಎಂ.ಶ್ರೀ. ಪ್ರತಿಮೆ ಎದುರು, ನ್ಯಾಷನಲ್ ಹೈಸ್ಕೂಲ್ ವೃತ್ತ, ಬಸವನಗುಡಿ, ಬೆಳಿಗ್ಗೆ 11

ಪ್ರಶಸ್ತಿ ಪ್ರದಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ : ಉದ್ಘಾಟನೆ: ಬಸವರಾಜ ಬೊಮ್ಮಾಯಿ, ‘ವರ್ಷದ ವ್ಯಕ್ತಿ’ ಪ್ರಶಸ್ತಿ: ಮಲ್ಲಿಕಾರ್ಜುನ ಖರ್ಗೆ, ಪ್ರಶಸ್ತಿ ಪ್ರದಾನ: ನ್ಯಾ.ವಿ. ಗೋಪಾಲಗೌಡ, ವಿಶೇಷ ಪ್ರಶಸ್ತಿ ಪುರಸ್ಕೃತರು: ಮುರುಗೇಶ ನಿರಾಣಿ, ಎಸ್.ಟಿ. ಸೋಮಶೇಖರ್, ಅತಿಥಿಗಳು: ವಿ. ಸೋಮಣ್ಣ, ರಂಜನಿ ರಾಘವನ್, ಆಯೋಜನೆ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಸ್ಥಳ: ಪ್ರೆಸ್‌ಕ್ಲಬ್ ಆವರಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ವೈಕುಂಠ ಏಕಾದಶಿ ಹಾಗೂ ವೆಂಕಟೇಶ್ವರ ದೇವರಿಗೆ ವಿಶೇಷ ಅಲಂಕಾರ: ಸ್ಥಳ: ಟಿ.ಟಿ.ಡಿ. ದೇವಸ್ಥಾನ, ವೈಯಾಲಿಕಾವಲ್, ಮಲ್ಲೇಶ್ವರ, ಮಧ್ಯಾಹ್ನ 3

ರಾಜಾರಾಮ ಮೋಹನರಾಯರ ಇಂಗ್ಲಿಷ್ ಆವೃತ್ತಿ ಪುಸ್ತಕ ಲೋಕಾರ್ಪಣೆ: ಮೂಲ ಲೇಖಕರು: ವಿ. ರಾಣಿ ಗೋವಿಂದರಾಜು, ಅನುವಾದಕರು: ಎ. ಶ್ರೀಲತಾ, ಉದ್ಘಾಟನೆ: ಎಂ. ತಿಮ್ಮಯ್ಯ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಪುಸ್ತಕ ಲೋಕಾರ್ಪಣೆ: ಅಶೋಕ ಗುರುದಾಸ್, ಅತಿಥಿ: ರಾಂ.ಕೆ. ಹನುಮಂತಯ್ಯ, ಉಪಸ್ಥಿತಿ: ಎ. ಶ್ರೀಲತಾ, ಮಾಲಿ ಮುದ್ದಣ್ಣ, ಎಂ. ಲಕ್ಷ್ಮಣ, ಬಿ. ಶೃಂಗೇಶ್ವರ್, ಆಯೋಜನೆ: ಚಂದನ ಪುಸ್ತಕ ಮಾಲೆ ಪ್ರಕಾಶನ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4

‘ಪದ ಕಟ್ಟೋಣ ಬನ್ನಿ’ ಕವಿಗೋಷ್ಠಿ ಹಾಗೂ ಗೀತಗಾಯನ: ಉದ್ಘಾಟನೆ: ಎಲ್. ಹನುಮಂತಯ್ಯ, ಅಧ್ಯಕ್ಷತೆ: ಎನ್. ದೇವರಾಜ್, ಅತಿಥಿಗಳು: ಕೆ. ಮುರಳೀಧರ, ಅಬ್ದುಲ್ ಖಾದರ್, ಅಶೋಕ ಎನ್. ಛಲವಾದಿ, ಚಂದ್ರಶೇಖರ್ ಆರ್., ಆಯೋಜನೆ: ಪದ, ಸ್ಥಳ: ಶಿವಗಂಗಾ ರಂಗಮಂದಿರ, ಕೆಂಗೇರಿ ಉಪನಗರ, ಸಂಜೆ 4

ಸಾಂಸ್ಕೃತಿಕ ಸಂಜೆ: ಹಾಡು, ಕವನ, ಮಾತು, ವಿಷಯ: ಸಮಕಾಲೀನ ಸವಾಲುಗಳಿಗೆದುರಾಗಿ ಸಂಘರ್ಷ, ಸಮಾನತೆಯತ್ತ ನಡಿಗೆ: ಆಯೋಜನೆ: ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ ಮಹಿಳಾ ವಿಶ್ರಾಂತಿ ಕೊಠಡಿ, ಜೆ.ಸಿ. ರಸ್ತೆ, ಸಂಜೆ 4

ಐದು ಕೃತಿಗಳ ಲೋಕಾರ್ಪಣೆ: ವಿಜಯಾ, ಅಧ್ಯಕ್ಷತೆ: ಡಾ.ವಸುಂಧರಾ ಭೂಪತಿ, ಕೃತಿ ಪರಿಚಯ: ಎಂ.ಎಸ್. ಆಶಾದೇವಿ, ಅಬ್ದುಲ್ ರೆಹಮಾನ್ ಪಾಷ, ಸುಗ್ಗನಹಳ್ಳಿ ಷಡಕ್ಷರಿ, ವಿ.ಎಸ್. ಶ್ರೀಧರ್, ಆಯೋಜನೆ: ಎಂ.ಎಸ್. ಕೃಷ್ಣನ್ ಸ್ಮರಣ ಸಂಸ್ಥೆ, ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆ, ನವಕರ್ನಾಟಕ ಪಬ್ಲಿಕೇಷನ್ಸ್, ಸ್ಥಳ: ನಯನ ಸಭಾಂಗಣ, ಜೆ.ಸಿ ರಸ್ತೆ, ಸಂಜೆ 4.30

‘ಐತಿಹಾಸಿಕ ಭೀಮಾ ಕೋರೆಗಾಂವ್ ವಿಜಯೋತ್ಸವ ಸಂಭ್ರಮ’ ಸಾಂಸ್ಕೃತಿಕ ಕಾರ್ಯಕ್ರಮ: ಉದ್ಘಾಟನೆ: ಡಾ. ಜಯಕರ್ ಎಸ್.ಎಮ್., ಅಧ್ಯಕ್ಷತೆ: ಎನ್. ಮಹೇಶ್ ಬಾಬು, ಸ್ಥಳ: ಬಾಬಾಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಆವರಣ, ಜ್ಞಾನಭಾರತಿ, ಸಂಜೆ 4.30

ಅಕ್ಷಯ ರಂಗ ಟ್ರಸ್ಟ್ ಉದ್ಘಾಟನಾ ಸಮಾರಂಭ: ಸಾನ್ನಿಧ್ಯ: ಆನಂದ ಗುರೂಜಿ, ಶ್ರೀನಿವಾಸ ಶರ್ಮಾ, ಉದ್ಘಾಟನೆ: ಮಹೇಂದ್ರ ಮುನ್ನೂತ್, ಅತಿಥಿಗಳು: ಬಿ.ಎನ್. ಬಚ್ಚೇಗೌಡ, ಆರ್. ಮಮತಾ ದೇವರಾಜ್, ಗುರುರಾಜ್ ಹೊಸಕೋಟೆ, ಗಣೇಶ್ ರಾವ್, ಸ್ಥಳ: ಸಂಸ ಬಯಲು ರಂಗ ಮಂದಿರ, ರವೀಂದ್ರ ಕಲಾಕ್ಷೇತ್ರ ಹಿಂಭಾಗ, ಜೆ.ಸಿ. ರಸ್ತೆ, ಸಂಜೆ 5

ಕಾಂಚನಾ

ಭರತನಾಟ್ಯ ರಂಗಪ್ರವೇಶ: ಕಾಂಚನಾ ಆರ್. ನಾಡಗೌಡರ್, ಅತಿಥಿಗಳು: ರತ್ನಾ ಸುಪ್ರೀಯಾ ಶ್ರೀಧರನ್, ಮಂಜುಳಾ ಪರಮೇಶ್, ವೈ.ಕೆ. ಸಂಧ್ಯಾ ಶರ್ಮಾ, ನವೀನ್ ಕೃಷ್ಣ, ಆಯೋಜನೆ: ಶಿವಪ್ರಿಯಾ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ವೈಯಾಲಿಕಾವಲ್, ಸಂಜೆ 5.30

ಲಿಂಗಾಯತ ಧರ್ಮಜಾಗೃತಿ ಸಮಾವೇಶ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ನಜುಂಡ ಸ್ವಾಮೀಜಿ, ಪ್ರಭು ಕಿರೀಟ ಸ್ವಾಮೀಜಿ, ಉದ್ಘಾಟನೆ: ಗೊ.ರು. ಚೆನ್ನಬಸಪ್ಪ, ಅಧ್ಯಕ್ಷತೆ: ವೀರಭದ್ರಯ್ಯ, ಅತಿಥಿ: ಯು.ಬಿ. ವೆಂಕಟೇಶ್, ಆಯೋಜನೆ: ಜಾಗತಿಕ ಲಿಂಗಾಯತ ಮಹಾಸಭಾ, ಸ್ಥಳ: ಘನಲಿಂಗ ಶಿವಯೋಗಿ ಸಭಾಭವನ, ಜೆ.ಎಸ್.ಎಸ್. ಪಬ್ಲಿಕ್ ಸ್ಕೂಲ್, ಬನಶಂಕರಿ 2ನೇ ಹಂತ, ಸಂಜೆ 5

ಸಂಗೀತ ಕಾರ್ಯಕ್ರಮ: ಗಾಯನ: ಗುರುರಾಜ ಮತ್ತು ತಂಡ, ಕಥಾಕೀರ್ತನ: ಶಾರ್ವರಿ ಸೋಮಯಾಜಿ, ಪ್ರಸಂಗ: ಪ್ರಹ್ಲಾದ ಚರಿತ್ರೆ, ಆಯೋಜನೆ: ಭಾರತೀಯ ವಿದ್ಯಾಭವನ, ಇನ್ಫೋಸಿಸ್ ಪ್ರತಿಷ್ಠಾನ, ಸ್ಥಳ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಗಾಯತ್ರಿ ಭವನ, ಬನಶಂಕರಿ 2ನೇ ಹಂತ, ಸಂಜೆ 5.30

‘ಪಾಪಣ್ಣ ವಿಜಯ ಗುಣಸುಂದರಿ’ ಯಕ್ಷಗಾನ ಪ್ರದರ್ಶನ: ಭಾಗವತರು: ಸುರೇಶ್ ಶೆಟ್ಟಿ ಶಂಕರನಾರಾಯಣ, ಮದ್ದಳೆ: ರಾಜೇಶ್ ಆಚಾರ್ಯ, ಚಂಡೆ: ಆದಿತ್ಯ ಕಾಶ್ಯನ್, ಆಯೋಜನೆ: ಸುವರ್ಣ ಪ್ರಸಾಧನ ಯಕ್ಷರಂಗ, ಸುರಭಾರತಿ ಸಂಸ್ಕೃತ ಸಂಸ್ಕೃತಿ ಪ್ರತಿಷ್ಠಾನಮ್, ಸ್ಥಳ: ಸುರಭಾರತಿ, ವಾಟರ್ ಟ್ಯಾಂಕ್ ಹತ್ತಿರ, ಎಚ್.ಆರ್.ಬಿ.ಆರ್. ಬಡಾವಣೆ, ಸಂಜೆ 5.30

ನೃತ್ಯ ಸಿರಿ: ಭರತನಾಟ್ಯ: ಬಿ. ತನುಜಾ ರಾಜ್, ಅತುಲಾ ಚಂದ್ರಶೇಖರ್, ಸೀತಾ ಗುರುಪ್ರಸಾದ್ ಶಿಷ್ಯರು, ಅತಿಥಿಗಳು: ಆರ್. ಚಂದ್ರಶೇಖರ್, ಕೇಶವಗೋಪಾಲ್ ಅಯ್ಯಂಗಾರ್, ಆಯೋಜನೆ: ಸುಧೀಂದ್ರ ನೃತ್ಯ ಕಲಾನಿಕೇತನ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.45

‘ಮಕ್ಕಳ ರಂಗಾಯಾನ’ ಸಮಾರೋಪ ಸಮಾರಂಭ: ಉಪಸ್ಥಿತಿ: ರಾಜೇಂದ್ರಸಿಂಗ್, ಬನಶಂಕರಿ ವಿ. ಅಂಗಡಿ, ವೈ.ವಿ. ಗುಂಡೂರಾವ್, ದಾಕ್ಷಾಯಿಣಿ ಭಟ್ ಎ., ಕಿರಣಕುಮಾರ್ ಬಿ.ಎಸ್., ನಾಟಕ ಪ್ರದರ್ಶನ: ಅಜ್ಜಿಯ ನೀತಿ ಕಥೆ, ಆಯೋಜನೆ: ಬೆನಕ ಮಕ್ಕಳ ನಾಟಕ ಕೇಂದ್ರ, ಸ್ಥಳ: ಉದಯಭಾನು ಸಾಂಸ್ಕೃತಿಕ ಕಲಾಸಂಘ, ಗವಿಪುರ ಗುಟ್ಟಹಳ್ಳಿ, ಸಂಜೆ 6

ಹೊಸ ವರ್ಷದ ಪ್ರಯುಕ್ತ ಕನ್ನಡ ಸಾಹಿತ್ಯ ಕಾರ್ಯಕ್ರಮ: ಕೊಡಗು ಗಣೇಶ ಅವರ ಎರಡು ಕಥಾಸಂಕಲನ ಲೋಕಾರ್ಪಣೆ: ಹಂ.ಪ. ನಾಗರಾಜಯ್ಯ, ಪುಸ್ತಕ ವಿತರಣೆ: ವಸುಂಧರಾ ಭೂಪತಿ, ಪ್ರೇಮಾಭಟ್, ಆಯೋಜನೆ: ಕನ್ನಡ ಅಭಿವೃದ್ಧಿ ಬಳಗ, ಸ್ಥಳ: ಸಂಕಷ್ಟಹರ ಗಣಪತಿ ದೇವಸ್ಥಾನದ ಹೊರಭಾಗ, ಬೈಟು ಕಾಫಿ ಎದುರು, ಹಂಪಿನಗರ, ರಾತ್ರಿ 12.01

‘ಸ್ವಾಭಿಮಾನಿ ಸಾಂಸ್ಕೃತಿಕ ಸಮಾವೇಶ’ ನಾಳೆ

ಬೆಂಗಳೂರು: ಭೀಮಾ ಕೋರೆಗಾಂವ್ ವಿಜಯೋತ್ಸವದ ಸ್ಮರಣಾರ್ಥ ಸಮತಾ ಸೈನಿಕ ದಳವು ಇದೇ ಭಾನುವಾರ ಪುರಭವನದಲ್ಲಿ ‘ಸ್ವಾಭಿಮಾನಿ ಸಾಂಸ್ಕೃತಿಕ ಸಮಾವೇಶ’ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮತಾ ಸೈನಿಕ ದಳದ ಸಂಯೋಜಕ ಅಶ್ವಥ್ ಅಂತೇಜ್ಯ, ‘ಇತಿಹಾಸದಲ್ಲಿ ಮರೆಮಾಚಿದ್ದ ದಲಿತ ಜನಾಂಗವೊಂದರ ವಿರೋಚಿತ ಯುದ್ಧವೇ ಭೀಮಾ ಕೋರೆಗಾಂವ್ ವಿಜಯೋತ್ಸವ. ಆ ದಿನದಂದು ಸ್ವಾಭಿಮಾನಿ ಸಾಂಸ್ಕೃತಿಕ ಸಮಾವೇಶ ಆಚರಿಸುವ ಮೂಲಕ ಯುದ್ಧದಲ್ಲಿ ಹುತಾತ್ಮರಾದ ಸೈನಿಕರನ್ನು ಸ್ಮರಿಸಲಾಗುತ್ತದೆ. ಬೆಳಿಗ್ಗೆ 9 ಗಂಟೆಗೆ ವಿಧಾನಸೌಧದ ಮುಂಭಾಗದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಭೀಮಾ ಕೋರೆಗಾಂವ್ ವಿಜಯಸ್ತಂಭ ರಥದ ಮೆರವಣಿಗೆಯನ್ನು ವಿಧಾನಸೌಧದಿಂದ ಪುರಭವನದವರೆಗೆ ನಡೆಸಲಾಗುವುದು’ ಎಂದು ತಿಳಿಸಿದರು.

ಐವರಿಗೆ ಪ್ರಶಸ್ತಿ: ‘ಭೀಮಾ ಕೋರೆಗಾಂವ್ ವಿಜಯೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 5 ಜನರಿಗೆ ‘ಭೀಮ ಸೇನಾನಿ’ ಪ್ರಶಸ್ತಿ ನೀಡಲಾಗುವುದು. ಸಾಹಿತ್ಯ ಕ್ಷೇತ್ರದಲ್ಲಿ ಸಿ.ಬಿ. ಹೊನ್ನುಸಿದ್ದಾರ್ಥ, ವಿದ್ಯಾರ್ಥಿ ಸೇವಾ ಕ್ಷೇತ್ರದಲ್ಲಿ ವಿಜಯಕುಮಾರ್, ವೈದ್ಯಕೀಯ ಕ್ಷೇತ್ರದಲ್ಲಿ ಡಾ. ನಟೇಶ್, ಮುಂಬಡ್ತಿ ಹೋರಾಟಕ್ಕೆ ದಾಸ್ ಪ್ರಕಾಶ್ ಹಾಗೂ ಕಾರ್ಮಿಕ ಹೋರಾಟಕ್ಕೆ ಎಸ್.ಎಂ. ಸೋಲಂಕಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಈ ಪ್ರಶಸ್ತಿಯು ₹ 5 ಸಾವಿರ ನಗದು ಒಳಗೊಂಡಿದೆ’ ಎಂದು ಹೇಳಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU-300/2552/2022–23 ದಿನಾಂಕ:30.12.2022

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ–2015 ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 540 ಬೆಂಆಸೇ 2004, ದಿನಾಂಕ:22.06.2007 ರಲ್ಲಿ ಅನುಮೋದನೆಯಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(2)ರ ಅಡಿಯಲ್ಲಿ ಪ್ರಶ್ನಿತ ಜಮೀನುಗಳ ಸಾರಿಗೆ ಮತ್ತು ಸಂಪರ್ಕ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 69(4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಪಿ.ಗೀತ್ ಪ್ರಜ್ವಲ್‌ರೆಡ್ಡಿ ಪಿ.ಶ್ಯಾಮಲಾ ರೆಡ್ಡಿ	ಪೂರ್ವ	ಬಿದರಹಳ್ಳಿ	ದೊಡ್ಡಬನಹಳ್ಳಿ	65/2	2–00	ಸಾರಿಗೆ ಮತ್ತು ಸಂಪರ್ಕ	ವಸತಿ

BDA/PRO/CLU/238/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
#16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ,
ವಸಂತನಗರ, ಬೆಂಗಳೂರು–560052 ಇವರ ಮುಂದೆ

ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003 ರ ಪ್ರಕರಣ 62 ಮತ್ತು 64ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ನಿಯಮಾವಳಿ 2000ರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006 ಮತ್ತು ತಿದ್ದುಪಡಿಗಳ ಪ್ರಕಾರ ಆರ್ಥಿಕ ವರ್ಷ 2021–22ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಯ(ಎ.ಪಿ.ಆರ್) ಅನುಮೋದನೆಗಾಗಿ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿರುವ ಅರ್ಜಿ ಬಗ್ಗೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು–560009. .... **ಅರ್ಜಿದಾರರು**

ಅಧಿಸೂಚನೆ

ಕವಿಪ್ರನಿನಿಯ ಆರ್ಥಿಕ ವರ್ಷ 2021–22ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ(ಎ.ಪಿ.ಆರ್) ಬಗ್ಗೆ.

1.0 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006ರ ಪ್ರಕಾರ ಆರ್ಥಿಕ ವರ್ಷ 2021–22ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಹಾಗೂ ತತ್ಸಂಬಂಧಿ ವಿದ್ಯುತ್ ಪ್ರಸರಣ ದರದ ಪರಿಷ್ಕರಣೆಯ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಗೌರವಾನ್ವಿತ ಆಯೋಗವು ಇವುಗಳ ಪರಿಷ್ಕರಣೆಯ ಬಗ್ಗೆ ಪರಿಶೀಲಿಸುತ್ತಿದೆ.

2.0 ಆರ್ಥಿಕ ವರ್ಷ 2021–22ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಯಲ್ಲಿ ವಾರ್ಷಿಕ ಆದಾಯದ ಅಗತ್ಯತೆಯು (ವೆಚ್ಚ) **₹4171.01** ಕೋಟಿಯಾಗಿರುತ್ತದೆ. ಹಾಗೂ ಒಟ್ಟು **₹2803.46** ಕೋಟಿ ಕಂದಾಯ ಕೊರತೆ ಬಂದಿರುತ್ತದೆ. ಸದರಿ ಕೊರತೆಯನ್ನು ಆರ್ಥಿಕ ವರ್ಷ 2023–24 ರಲ್ಲಿ ವಸೂಲಿ ಮಾಡಲು ಅನುಮೋದನೆ ನೀಡಬೇಕಾಗಿ ಕೋರಲಾಗಿದೆ.

3.0 ವಿದ್ಯುಚ್ಛಕ್ತಿ ಅಧಿನಿಯಮ 2003ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ನಿಯಮಾವಳಿ 2000ರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006 ಮತ್ತು ತಿದ್ದುಪಡಿಗಳ ಪ್ರಕಾರ ಮೇಲಿನ ಪ್ರಸ್ತಾವನೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವವರು ತಮ್ಮ ಆಕ್ಷೇಪಣೆಗಳನ್ನು ತಾವು ಆಧರಿಸುವ ದಾಖಲೆಗಳ ಆರು ಸೆಟ್‌ಗಳೊಂದಿಗೆ ಪ್ರಮಾಣ ಪತ್ರದ (ಅಫಿಡವಿಟ್) ಜೊತೆಗೆ ಈ ಪ್ರಕಟಣೆ ಪ್ರಥಮವಾಗಿ ಪ್ರಕಟವಾದ ದಿನಾಂಕದಿಂದ **ಮೂವತ್ತು ದಿನಗಳ ಒಳಗಾಗಿ ಸ್ವೀಕರಣಾಧಿಕಾರಿ, ಕಾರ್ಯದರ್ಶಿಗಳ ಕಛೇರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052** ಅವರಿಗೆ ಸಲ್ಲಿಸಬಹುದು.

4.0 ಆಸಕ್ತಿ ಇರುವವರು ಪರಾಮರ್ಶೆಗಾಗಿ ಅಥವಾ ಕೊಳ್ಳಲು ಇಚ್ಛಿಸಿದಲ್ಲಿ ಎಪಿಆರ್ ಪ್ರಸ್ತಾವನೆಯ ಪ್ರತಿಗಳು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮತ್ತು ವಿಸಕಂಗಳ ಈ ಕೆಳಕಂಡ ಕಚೇರಿಗಳಲ್ಲಿ ಲಭ್ಯವಿರುತ್ತದೆ.

1. **ಎಲ್ಲಾ ಮುಖ್ಯ ಇಂಜಿನಿಯರ್ (ವಿದ್ಯುಚ್ಛಕ್ತಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಕಲಬುರಗಿ.**
2. **ಲೆಕ್ಕಾಧಿಕಾರಿ (ಸಾರ್ವಜನಿಕ ಸಂಪರ್ಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ನೆಲಮಹಡಿ, ಕಾವೇರಿ ಭವನ, ಬೆಂಗಳೂರು.**
3. **ವಿದ್ಯುತ್ ಸರಬರಾಜು ಕಂಪನಿಗಳ ಕಂಪನಿ ಕಾರ್ಯಾಲಯ ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿ.**

5.0 ಎಪಿಆರ್ ಪ್ರತಿಗಳನ್ನು ಕೊಳ್ಳಲು ಇಚ್ಛಿಸುವವರು ಎಪಿಆರ್ ನ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ ₹ 125/– ರಂತೆ ನಗದು / ಡಿಡಿ ಮೂಲಕ ಪಾವತಿಸಿ ಪೂರ್ಣ ಪ್ರತಿಯನ್ನು ಅಥವಾ ಪ್ರತಿ ಪುಟಕ್ಕೆ **₹1/–** ರಂತೆ ಜೆರಾಕ್ಸ್ ವೆಚ್ಚಗಳನ್ನು ಪಾವತಿ ಮಾಡಿ ಪುಸ್ತಕಗಳ ಅಪೇಕ್ಷಿತ ಭಾಗಗಳ ಪ್ರತಿಗಳನ್ನು ಪ್ರಥಮ ಪ್ರಕಟಣೆಯ ದಿನಾಂಕದ **ಹತ್ತು ಕೆಲಸದ ದಿನಗಳೊಳಗಾಗಿ** ಪಡೆಯಲು ಅವಕಾಶವಿರುತ್ತದೆ. ಈ ದಾಖಲೆಗಳು ಕವಿಪ್ರನಿನಿ ವೆಬ್‌ಸೈಟ್: **https://kptcl.karnataka.gov.in** ನಲ್ಲಿ ಸಹ ಲಭ್ಯವಿರುತ್ತದೆ.

6.0 ಆಕ್ಷೇಪಣೆಗಳನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಮಾತ್ರ ಸಲ್ಲಿಸಬೇಕು. ಆದರೆ ಕವಿನಿ ಆಯೋಗದ ನಿರ್ದೇಶನದಂತೆ, ಆಕ್ಷೇಪಣೆ ಸಲ್ಲಿಕೆ ಮತ್ತು ಅದಕ್ಕೆ ಪ್ರತ್ಯುತ್ತರ ಸಲ್ಲಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲು, ಆಕ್ಷೇಪಣೆದಾರರು ಏಕಕಾಲದಲ್ಲಿ ತಮ್ಮ ಆಕ್ಷೇಪಣೆಯ ಪ್ರತಿಯನ್ನು ನೇರವಾಗಿ **ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560009** ಇವರಿಗೂ ಕಳುಹಿಸಲು ಕೋರಲಾಗಿದೆ. ಸಾರ್ವಜನಿಕ ಆಕ್ಷೇಪಣೆಗಳನ್ನು ಮೊದಲ ಪ್ರಕಟಣೆಯನ್ನು ಹೊರಡಿಸಿದ ದಿನಾಂಕದಿಂದ **30 ದಿನಗಳೊಳಗೆ** ಸ್ವೀಕರಿಸಲಾಗುವುದು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪರವಾಗಿ
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009.

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ಅಧಿಸೂಚನೆ ಸಂಖ್ಯೆ: ಕ–ರೇರಾ/ಆಡಳಿತ/ಸಿಆರ್–61/2022–23, ದಿನಾಂಕ: 30/12/2022

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇಲ್ಲಿ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಭರ್ತಿ ಮಾಡಲು ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ 19ನೇ ಜನವರಿ 2023.

ವಿವರವಾದ ಅಧಿಸೂಚನೆಯು ವೆಬ್‌ಸೈಟ್ www.rera@karnataka.gov.inನಲ್ಲಿ ಲಭ್ಯವಿದೆ.

ಕಾರ್ಯದರ್ಶಿ
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

(ಕರ್ನಾಟಕ ಸರ್ಕಾರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ಕಾರ್ಯಪಾಲಕ ಅಭಿಯಂತರವರ ಕಚೇರಿ, ಹಾಸನ ವಿಭಾಗ, ಹಾಸನ,
Ph:08172-261640 Email ID:eerdwsd.hsn@gmail.com
ನಂ.ಕಾಇಂ/ಗ್ರಾಕುನೀ&ನೈಇ/ಹಾವಿ/AE–1/2022–23/ ದಿನಾಂಕ: 30.12.2022

ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ:17/ 2022–23 ದಿನಾಂಕ:20.12.2022

ಕೊರಿಜೆಂಡಮ್–I ,ಟೆಂಡರ್ ನಂ:RWSSD/2022-23/ARK-PMC dated: 20th Dec 2022 ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನರವರಿಂದ 2022–23ನೇ ಸಾಲಿನಲ್ಲಿ MVS ಯೋಜನೆಯಡಿ ಅನುಮೋದನೆಯಾಗಿರುವ ಅರಕಲಗೂಡು ತಾಲ್ಲೂಕಿನ ಕಾಮಗಾರಿಗೆ ಈ ಕೆಳಕಂಡಂತೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಕಾಮಗಾರಿಯ ಹೆಸರು; ಹಾಸನ ಜಿಲ್ಲೆಯ ಅರಕಲಗೂಡು ಮತ್ತು ಹೊಳೆನರಸೀಪುರ ತಾಲೂಕುಗಳ ಆನಂದೂರು ಮತ್ತು ಇತರ 84 ಜನವಸತಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ, ಬಾನಗುಂದಿ ಮತ್ತು ಇತರೆ 260 ಜನವಸತಿಗಳಿಗೆ ನೀರು ಸರಬರಾಜು ಯೋಜನೆ. ಬೋಳೆಕ್ಯಾತನಹಳ್ಳಿ ಹಾಗೂ ಅರಕಲಗೂಡು ಮತ್ತು ಹೆಚ್.ಎನ್.ಪುರ ತಾಲೂಕುಗಳ ಇತರ 138 ಜನವಸತಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ, ಪ್ರಾಜೆಕ್ಟ್ ಮ್ಯಾನೇಜ್ಮೆಂಟ್ ಕನ್ಸಲ್ಟೆನ್ಸಿ ಸೇವೆಗಳನ್ನು ಒದಗಿಸುವುದು. ಮೇಲಿನ ಟೆಂಡರ್ ಸೂಚನೆಗೆ ತಿದ್ದುಪಡಿ: ಪೂರ್ವ ಬಿಡ್ ಸಭೆ –03.01.2023 ರಂದು – 11.30 AM - ಮುಖ್ಯ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು–560009. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 1ನೇ ಜನವರಿ 2023 ರಿಂದ 17.00 ಗಂಟೆಗಳವರೆಗೆ. ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 13ನೇ ಜನವರಿ 2023 11.00 ಗಂಟೆಗಳ ನಂತರ. ಟೆಂಡರ್‌ನ ಹಣಕಾಸು ಬಿಡ್‌ತೆರೆಯುವ ದಿನಾಂಕ ಮತ್ತು ಸಮಯ: 16ನೇ ಜನವರಿ 2023 11.00 ಗಂಟೆಗಳ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ,ಹಾಸನ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/910/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in

ಅಲ್ಪಾವಧಿ ಟೆಂಡರ್ ಪ್ರಕಟಣೆ

ಉಲ್ಲೇಖ:– **EE/ KNNL/ BCD-5/DVG/PB-5/4701 SCP-TSP(J)/2022-23 2656/10 Dated: 28.12.2022**

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆರವರು, ಉಲ್ಲೇಖಿತ ಪತ್ರ ದಲ್ಲಿ ಲೆಕ್ಕ ಶೀರ್ಷಿಕೆ 4701 ಎಸ್.ಸಿ.ಪಿ ಅಡಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಡಿ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್‌ನ ವೆಬ್‌ಸೈಟ್ (http://eproc.karnataka.gov.in) ಮುಖಾಂತರವೇ **ದಿನಾಂಕ: 29.12.2022** ರಿಂದ **06.01.2023** ಸಂಜೆ 5.00 ಗಂಟೆಯ ವರೆಗೆ ಡೌನಲೋಡ್ ಮಾಡಿಕೊಂಡು ಟೆಂಡರ್‌ನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ (Pre-Bid Meeting) **ದಿನಾಂಕ: 31.12.2022** ರಂದು ಪೂರ್ವಾಹ್ನ 12.00 ಘಂಟೆಯವರೆಗೆ. ಆರ್ಥಿಕ ಮತ್ತು ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 07.01.2023** ರಂದು ಸಂಜೆ 5.05 ಘಂಟೆ. ಒಟ್ಟು ಕಾಮಗಾರಿ ಸಂಖ್ಯೆ 05. **ಕಾಮಗಾರಿಯ ಹೆಸರು:– Single Tender document:-** (1) Construction of CC Road in Ramaghatta Dodda Thanda, Diddagi Thanda, and Kodadagudda villages in Jagaluru Constutiency under 4701 SCP for the 2022-23. KNNL/2022-23/ RD/WORK_INDENT35099. ಟೆಂಡರ್ ಮೊತ್ತ:- 39.62 ಲಕ್ಷ **Two Tender document:-** (2) Construction of CC Road in Madaki Nichhapura, Chennapur Thanda, Kadekal Thanda, Punabghatta Thanda, Thoudur Thanda, Guledatti Thanda, Bevinalli and Karadidurga villages in Harappanahalli Taluk coming under Jagaluru Constutiency under 4701 SCP for the 2022-23. KNNL/2022-23/ RD/WORK_INDENT35096 ಟೆಂಡರ್ ಮೊತ್ತ:- 98.48ಲಕ್ಷ (3) Construction of CC Road in Halavadande, Koratikere Lambhani Hatti, Sakalakatte, Gokulahatti, Jagaluru Gollaratti, Kasavanalli, Uddaghatta and Gode villages in Jagaluru Constutiency under 4701 SCP for the 2022-23. KNNL/2022-23/RD/WORK_INDENT 35097 ಟೆಂಡರ್ ಮೊತ್ತ:- 98.11ಲಕ್ಷ (4) Construction of Pipe culvert to Asagodu Halla near Jangamathumbigere village under Jagalur Constituency under 4701 SCP for the 2022-23. KNNL/ 2022-23/ OW/WORK_INDENT35102 ಟೆಂಡರ್ ಮೊತ್ತ:- 59.64ಲಕ್ಷ (5) Construction of CC Road in Kuremeganalli, Bullenalli, Basavapura, Vyasagondanalli, Uralakatte, Malemachikere, Bairanayakanalli, Lingannalli and Jammapura Myasaratti villages in Jagaluru Constutiency under 4701 TSP for the 2022-23. KNNL/2022-23/RD/WORK_INDENT35105 ಟೆಂಡರ್ ಮೊತ್ತ:- :-99.29ಲಕ್ಷ ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗಿಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/762/ ಎಂಸಿಎ/2022–23 **ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.**

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮಂಡ್ಯ ವಿಭಾಗ, ಮಂಡ್ಯ
ಸಂಖ್ಯೆ:ಬಿಯುಡಿ/ಇ.ಕಾ/ಸಿಆರ್–46/2022–23 ದಿ:27–12–2022

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ದ್ವಿಲಕೋಟೆ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಅನುಸೂಚಿಯಲ್ಲಿ ನಮೂದಿಸಿರುವ ಮಂಡ್ಯ ವಿಭಾಗದ ವ್ಯಾಪ್ತಿಯ ನಾಗಮಂಗಲ & ಕೆ ಆರ್ ಪೇಟೆ ವಲಯಗಳಲ್ಲಿ 2022–23 ನೇ ಸಾಲಿನಲ್ಲಿ 14*20 ಅಳತೆಯ ಸಸಿಗಳನ್ನು ಬೆಳೆಸುವ ಜೊತೆಗೆ ರಸ್ತೆಬದಿ ಮುಂಗಡ ಕಾಮಗಾರಿಯನ್ನು ಕೈಗೊಳ್ಳುವುದು ಈ ವಿಭಾಗದಲ್ಲಿ ನೋಂದಾಯಿಸಿಕೊಂಡಿರುವ ಅರಣ್ಯ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಮೇಲ್ಕಂಡ ಕಾಮಗಾರಿಗಳನ್ನು **31.03.2023**ರ ಒಳಗಾಗಿ ಮುಕ್ತಾಯಗೊಳಿಸಬೇಕಾಗಿರುತ್ತದೆ. ಟೆಂಡರ್‌ಗಿಟ್ಟ **6** ಕಾಮಗಾರಿಗಳ ಪೈಕಿ ಗರಿಷ್ಠ ಟೆಂಡರ್ ಮೊತ್ತವು **ರೂ.14.80 ಲಕ್ಷ** ಹಾಗೂ ಕನಿಷ್ಠ ಮೊತ್ತವು **ರೂ.2.114 ಲಕ್ಷ** ಆಗಿರುತ್ತದೆ. ಟೆಂಡರ್‌ಗಳನ್ನು ಕೆಳಕಂಡ ನಿಗಧಿತ ದಿನಾಂಕ ಹಾಗೂ ಸಮಯದಂದು ಈ ಕೆಳಗೆ ಸಹಿ ಮಾಡಿರುವ ಅಥವಾ ಅವರಿಂದ ಪ್ರಾಧೀಕೃತಗೊಂಡ ಅಧಿಕಾರಿಗಳಿಂದ ತೆರೆದು ಓದಲಾಗುವುದು. ಟೆಂಡರ್ ದಿನಾಂಕವು ಸಾರ್ವತ್ರಿಕ ರಜೆ ಎಂದು ಘೋಷಿತವಾದಲ್ಲಿ ಮರುದಿನ ಟೆಂಡರನ್ನು ಸ್ವೀಕರಿಸಿ ಅದೇ ಸಮಯಕ್ಕೆ ತೆರೆಯಲಾಗುವುದು. ಕೆಲಸದ ವಿವರ, ಪರಿಮಾಣ, ಇಎಂಡಿ ಇತರೇ ಮಾಹಿತಿ ಬೇಕಾದಲ್ಲಿ ಮೇಲ್ಕಂಡ ಕಛೇರಿಯಿಂದ ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://www.eproc.karnataka.gov.in ರಲ್ಲಿ ಪಡೆಯಬಹುದು. ಟೆಂಡರ್‌ನ್ನು ಸ್ವೀಕರಿಸುವ ಕೊನೆ ದಿನಾಂಕ ಮತ್ತು ಸಮಯ : **07.01.2023 ಸಂಜೆ 4.00**. ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **09.01.2023 ಸಂಜೆ 4.01**. ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **10.01.2023 ಸಂಜೆ 5.00**. Auto Extention ಮುಖಾಂತರ ಸ್ವೀಕರಿಸುವ ಕೊನೆ ದಿನಾಂಕ ಮತ್ತು ಸಮಯ : **17.01.2023 ಸಂಜೆ 4.00**. Auto Extention ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **19.01.2023 ಸಂಜೆ 4.01**. Auto Extention ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **20.01.2023 ಸಂಜೆ 5.00.**

ಸಹಿ/–ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಂಡ್ಯ ವಿಭಾಗ, ಮಂಡ್ಯ

ವಾಸಾಸಂಇ/ಸನಿ–ಮಂ/ಎಂಸಿ&ಎ/566/2022–23

ಕರ್ನಾಟಕ ಸರ್ಕಾರ
ಕಾವೇರಿ ನೀರಾವರಿ ನಿಗಮ ನಿಯಮಿತ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ನಂ.1, ಕಾ.ನೀ.ನಿ.ನಿ ವಿಭಾಗ, ನಾಗವಲ್ಲಿ, ದೂರವಾಣಿ: 0816–2248681

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ–03/2022–23 ದಿ : 27.12.2022

ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಐಟಂವಾರು ಪದ್ಧತಿಯಲ್ಲಿ KW-1, KW-2, ಮತ್ತು KW-3 ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯದೆ 1999 ನಿಯಮಗಳು 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಕೆ.ಪಿ.ಡ.ಬ್ಲ್ಯೂ.ಡಿ ಗುತ್ತಿಗೆದಾರರು ದರ್ಜೆ–3 ಮತ್ತು 4 ಮೇಲ್ಪಟ್ಟಂತೆ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕು ಮತ್ತು ಶಿರಾ ತಾಲ್ಲೂಕುಗಳಲ್ಲಿ ಡಾಂಬರು ರಸ್ತೆ, ಸಿ.ಸಿ ರಸ್ತೆ ,ಸಿ.ಸಿ ಚರಂಡಿ ನಿರ್ಮಾಣ ಕಾಮಗಾರಿಗಳ ರೂ.12.58 ಲಕ್ಷಗಳಿಂದ ರೂ.82.85 ಲಕ್ಷಗಳವರೆಗಿನ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರ್‌ಗಳಂತೆ ಒಟ್ಟು 17 ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

Indent Numbers: 1) KW-1 :Class IV above :-(a) Reserved Works:- (a) Schedule Caste Bidders (1) 39771,(2)39770,(3)39769 (b)Schedule Tribe Bidders,(1) 39766,(2) 39768, 2)KW-2: Class III above:- (a) Unreserved Works: 39757, (b) Reserved Works)- Schedule Caste Bidders : (1)39767,(2)39765 3) KW-3 : Unreserved Works: (1) 39762, (2) 39758 , (3) 39755 , (4) 39763, (5) 39761, (6) 39756, (7) 39759 ,(8) 39760, (9) 39764

ಇ–ಪೋರ್ಟಾಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **30.12.2022** ರ ನಂತರ **06.01.2023** ಸಂಜೆ 04.00 ಗಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 7.01.2023 ಸಂಜೆ 4.30 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ (KW–3): ತಾಂತ್ರಿಕ ಬಿಡ್ ಅನುಮೋದನೆ ನಂತರ. ಟೆಂಡರ್ ಮೊತ್ತ, ಇ.ಎಂ.ಡಿ. ಮೊತ್ತ, ಭಾಗವಹಿಸಬೇಕಾದ ಗುತ್ತಿಗೆದಾರರ ವಿವರ, ಕಾಮಗಾರಿ ವಿವರಗಳು, ಷರತ್ತುಗಳು, ಕಾಲಾವಧಿ ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಾಲ್ ಸಿಸ್ಟಮ್ http://eproc.karnataka.gov.in ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.1, ಕಾ.ನೀ.ನಿ.ನಿ ವಿಭಾಗ, ನಾಗವಲ್ಲಿ

DIPR/TUM/822/MCA/2022-23

ಹಗರಣಗಳ ನೋಟ, ದುರವಸ್ಥೆಯ ಮೇಲಾಟ

ಬೆಂಗಳೂರು: ಕೋವಿಡ್ ಆತಂಕದ ಛಾಯೆಯಲ್ಲಿಯೇ ಆರಂಭವಾದ 2022, ಮತ್ತೆ ಸಾಂಕ್ರಾಮಿಕ ರೋಗ ಹರಡುವ ಭೀತಿಯನ್ನು ರಾಜಧಾನಿಯಲ್ಲಿ ಹರಡಿ ವರ್ಷ ಮುಕ್ತಾಯಗೊಳ್ಳುತ್ತಿದೆ. ವರ್ಷದ ಆರಂಭದಿಂದ ಅಂತ್ಯದವರೆಗೂ ಮಳೆಗಾಲವೇ ಆಗಿದ್ದು ಈ ಬಾರಿಯ ವಿಶೇಷ. ಈ ಜಲಕಂಟಕ ನಗರದ ಹಲವು ಹುಳುಕುಗಳನ್ನು ಎತ್ತಿತೋರಿಸಿ, 'ಪೂರ್ವ' ಭಾಗವೇ ಮುಳುಗಿಹೋಯಿತು. ಕೋವಿಡ್ ನಂತರ ಹೆಚ್ಚು ಚಟುವಟಿಕೆ ಕಂಡ ವರ್ಷದಲ್ಲಿ ನಗರದ ರಸ್ತೆ, ಸಂಚಾರ ದಟ್ಟಣೆಯ ಸಮಸ್ಯೆಗಳು ಹೆಚ್ಚು ಕಾಡಿದವು. ರಸ್ತೆಯಲ್ಲಿ ಉಂಟಾದ ಗುಂಡಿಗಳಿಂದ ಸಂಭವಿಸಿದ ಅಪಘಾತದಿಂದ ಐವರು ಪ್ರಾಣ ಕಳೆದುಕೊಂಡರು. ಹೊಸದಾಗಿ ನಿವೇಶನಗಳನ್ನು ವಿತರಿಸದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬದಲಿ ನಿವೇಶನ ನೀಡುವ ಅಕ್ರಮದಿಂದ ಆಯುಕ್ತರು ಸೇರಿದಂತೆ ಹಲವು ಅಧಿಕಾರಿಗಳ ವರ್ಗಾವಣೆ ಕಂಡಿತು. ಒಳಚರಂಡಿ ನೀರನ್ನು ನಿರ್ವಹಣೆ ಮಾಡುವಲ್ಲಿ ಸಾಧನೆಯೇನೂ ಮಾಡದ ಬಿಡಬ್ಲ್ಯುಎಸ್ಎಸ್‌ಬಿ, ಗ್ರಾಹಕರ ಪಾವತಿಸಿದ ಹಣದ ಜಲಮಂಡಳಿ ಖಾತೆಗೆ ಹೋಗದೆ ಗುತ್ತಿಗೆ ನೌಕರರು ಮಾಡಿಕೊಂಡ ಹಣ ದುರ್ಬಳಕೆಯ ಪ್ರಕರಣ ಹೆಚ್ಚು ಗಮನಸೆಳೆಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ವರ್ಷದ ಆರಂಭದಿಂದಲೂ ಚುನಾವಣೆ ಈಗ ನಡೆಯುಬಹುದು ಆಗ ನಡೆಯಬಹುದು ಎಂಬ ಭಾವನೆ ಅಂತ್ಯದವರೆಗೂ ಇತ್ತು. ಆದರೂ ಅದು ಈಡೇರಲಿಲ್ಲ. 243 ವಾರ್ಡ್ ನಿಗದಿ ಆಯಿತು. ಅದರಾ ಸುಪ್ರೀಂ ಕೋರ್ಟ್, ಹೈಕೋರ್ಟ್ ಮೆಟ್ಟಿಲೇರಿದ ವಾರ್ಡ್ ಮೀಸಲಾತಿ ವಿಷಯವು ವರ್ಷಾಂತ್ಯಕ್ಕೂ ಬಗೆಹರಿಯಲಿಲ್ಲ.

ರಸ್ತೆ, ಚರಂಡಿಯಂತಹ ಮೂಲಸೌಕರ್ಯಗಳನ್ನು ನಿಭಾಯಿಸಲಾಗದ ಬಿಬಿಎಂಪಿ, ವರ್ಷದ ಎಲ್ಲ ತಿಂಗಳೂ ಸುರಿದ ಮಳೆಯ ನೆಪವೊಡ್ಡಿ ರಸ್ತೆಯ ಗುಂಡಿಗಳನ್ನೇ ಮುಚ್ಚಲಿಲ್ಲ. ನಗರದಲ್ಲಿ 30 ಸಾವಿರ ಗುಂಡಿಗಳಿವೆ ಎಂದು ಅಧಿಕೃತವಾಗಿ ಬಿಬಿಎಂಪಿ ಒಪ್ಪಿಕೊಂಡಿತು. ಡಿಸೆಂಬರ್‌ನಲ್ಲಿ ಮಾತ್ರ ರಸ್ತೆ ಗುಂಡಿಗಳು ಮುಚ್ಚಿದಂತಾದವು. ಕೆಲವು ರಸ್ತೆಗಳು ಡಾಂಬರೂ ಕಂಡವು. ಇದರಿಂದ ಸಮಸ್ಯೆ ತೀವ್ರತೆ ಕಡಿಮೆಯಾಯಿತೆ ಹೊರತು, ನಿವಾರಣೆಯಾಗಲಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿ ಜೂನ್ ಹಾಗೂ ನವೆಂಬರ್‌ನಲ್ಲಿ ನಗರಕ್ಕೆ ಬಂದಾಗ ರಸ್ತೆಗಳು ರಾತ್ರೋರಾತ್ರಿ ಡಾಂಬರು ಕಂಡಿದ್ದವು. ಕೊಮ್ಮಘಟ್ಟ ರಸ್ತೆ 24 ಗಂಟೆಯಲ್ಲೇ ಕುಸಿದು, ಪ್ರಧಾನಿ ಕಚೇರಿಯೂ ಇದರ ಬಗ್ಗೆ ವರದಿ ಕೇಳಿತ್ತು.

ಜುಲೈನಲ್ಲಿ ಸುರಿದ ದಾಖಲೆಯ ಮಳೆ ಬೆಂಗಳೂರು ಪೂರ್ವ ಭಾಗವನ್ನು ಮುಳುಗಿಸಿತು. ಐಟಿ-ಬಿಟಿ ಕಂಪನಿಗಳು ಸೇರಿದಂತೆ ಪ್ರತಿಷ್ಠಿತ ಬಡಾವಣೆಗಳು ರಾಜಕಾಲುವೆಗಳನ್ನು ಒತ್ತುವರಿ ಮಾಡಿದ್ದೇ ಈ ಮುಳುಗಡೆಗೆ ಕಾರಣ ಎಂಬುದು ಸಾಬೀತಾದರೂ ಅನ್ನು ನಿವಾರಿಸುವಲ್ಲಿ ಬಿಬಿಎಂಪಿ ಹಿನ್ನಡೆಯೇ ಕಂಡಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಸಚಿವರು, ವಿರೋಧ ಪಕ್ಷ ನಾಯಕರು ರಸ್ತೆಗಳಲ್ಲೇ ಬೋಟ್‌ನಲ್ಲಿ ಸಂಚರಿಸಿ ಸಮಸ್ಯೆಯ ತೀವ್ರತೆ ಅರಿತುಕೊಂಡರು. ಎಲ್ಲರೂ ರಾಜಕಾಲುವೆ ಒತ್ತುವರಿ ತೆರವು ಮಾಡಬೇಕೆಂದು ಒತ್ತಾಯಿಸಿದರು. ಡಿಸೆಂಬರ್ ಅಂತ್ಯದಲ್ಲಿ ಒಂದೆರಡು ದಿನ ತೆರವು ಕಾರ್ಯಾಚರಣೆ ನಡೆಯಿತೇ ಹೊರತು, ಸಮಸ್ಯೆ ಈಗಲೂ ಹಾಗೆಯೇ ಉಳಿದುಕೊಂಡಿದೆ.

ಅಮೃತ ನಗರೋತ್ಥಾನ ಯೋಜನೆಯಡಿ ಬಿಬಿಎಂಪಿ ಬಂದ ₹6 ಸಾವಿರ ಕೋಟಿ ಮೌಲ್ಯದ ಯೋಜನೆಗಳು ಒಂದು ತಿಂಗಳಲ್ಲಿ ಕಾರ್ಯಾಗತವಾಗಬೇಕಿದ್ದರೂ, ಆರು ತಿಂಗಳು ಕಳೆದರೂ ಟೆಂಡರ್ ಹಂತಕ್ಕೂ ಕೆಲವು ಯೋಜನೆ ಹೋಗಿಲ್ಲ. ಸುಮಾರು ₹2 ಸಾವಿರ ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಹಲವು ಯೋಜನೆಗಳ ಕಾರ್ಯಾದೇಶವಾಗಿದ್ದರೂ ಕಾಮಗಾರಿ ಆರಂಭವಾಗಿಲ್ಲ. ಬಹುತೇಕ ಯೋಜನೆಗಳು ಟೆಂಡರ್ ಹಂತದಲ್ಲೇ ಉಳಿದುಕೊಂಡಿವೆ. ರ್‍ಯಾಪಿಡ್ ರಸ್ತೆ ಎಂಬ ವೇಗದ ರಸ್ತೆ ನಿರ್ಮಾಣ ಪ್ರಾಯೋಗಿಕವಾಗಿ ಜಾರಿಯಾದರೂ, ಅತಿಹೆಚ್ಚು ವೆಚ್ಚದಿಂದ ಅದಕ್ಕೆ ತಡೆಯಾಯಿತು. ಶಿವಾನಂದ ವೃತ್ತದ ಮೇಲ್ಸೇತುವೆ ನಾಲ್ಕು ವರ್ಷಗಳ ನಂತರ ಕಾಮಗಾರಿ ಮುಗಿದು ಸಂಚಾರಕ್ಕೆ ಮುಕ್ತವಾಯಿತು. ವೆಸ್ಟ್ ಆಫ್ ಕಾರ್ಡ್ ರಸ್ತೆ ಮೇಲ್ಸೇತುವೆ ಕಾಮಗಾರಿ ಈ ವರ್ಷವೂ ಮುಗಿಯಲಿಲ್ಲ. ಜೆ.ಸಿ. ರಸ್ತೆ ಮೇಲ್ಸೇತುವೆ ವಿಷಯ ಮತ್ತೆ ಮುನ್ನೆಲೆಗೆ ಬಂದು ತಾಂತ್ರಿಕ ಸಲಹಾ ಸಮಿತಿಯ ಸಮ್ಮತಿ ಪಡೆದದ್ದೇ ಸಾಧನೆಯಾಯಿತು.

ಜಲಮಂಡಳಿ: ಹಣ ದುರ್ಬಳಕೆ...

ಬಿಬಿಎಂಪಿ ವ್ಯಾಪ್ತಿಗೆ ಸೇರಿದ 110 ಹಳ್ಳಿಗಳು ಸೇರಿದಂತೆ ಹೊರವಲಯದ ಬಡಾವಣೆಗಳಿಗೆ ಒಳಚರಂಡಿ ವ್ಯವಸ್ಥೆ ಹಾಗೂ ನೀರಿನ ಸೌಲಭ್ಯ ಒದಗಿಸುವುದು ಸೇರಿದಂತೆ ಕೆರೆಗಳಿಗೆ ಒಳಚರಂಡಿ ನೀರನ್ನು ತಡೆಯುವ ಯೋಜನೆಗಳು ಬಿಡಬ್ಲ್ಯುಎಸ್ಎಸ್‌ಬಿಯಿಂದ ಈ ವರ್ಷ ಅನುಷ್ಠಾನವಾಗಲಿಲ್ಲ. ಆದರೆ, ಗ್ರಾಹಕರು ಪಾವತಿಸಿ ಕೊಟ್ಟಂತ ರೂಪಾಯಿಗಳನ್ನು ಗುತ್ತಿಗೆ ನೌಕರರು ಮಂಡಳಿಗೆ ಕಟ್ಟದೆ ದುರುಪಯೋಗಪಡಿಸಿಕೊಂಡರು. ಇದನ್ನು ಕಂಡುಹಿಡಿಯಲು ವರ್ಷಗಟ್ಟಲೆ ತೆಗೆದುಕೊಂಡ ಮಂಡಳಿ, ಕೊನೆಗೆ ಅದನ್ನು ಪರಿಶೀಲಿಸಿ, ಪೊಲೀಸ್ ಠಾಣೆಗೆ ದೂರು ನೀಡಿತ್ತು. ಈ ಸಂಬಂಧ 9 ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಬಿಡಿಎ ಬದಲಿ ನಿವೇಶನ...

ಹೊಸ ಬಡಾವಣೆಗಳನ್ನು ನಿರ್ಮಿಸಿ, ಹೊಸ ನಿವೇಶನಗಳನ್ನು ಹಂಚುವ ಪ್ರಕ್ರಿಯೆಯಿಂದ ಹಿಂದುಳಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬದಲಿ ನಿವೇಶನ ನೀಡಲು ಪ್ರಾಮುಖ್ಯ ನೀಡಿತು. ಗೃಹ ಸಚಿವ ಅರಗ ಜ್ಞಾನೇಂದ್ರ ಅವರಿಗೆ ನೀಡಿದ್ದ ಬದಲಿ ನಿವೇಶನದ ಬಗ್ಗೆ ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು. ಇದರಿಂದಾಗಿಯೇ ಬಿಡಿಎ ಆಯುಕ್ತ ರಾಜೇಶ್ ಗೌಡ ಸೇರಿದಂತೆ ಹಲವು ಅಧಿಕಾರಿಗಳು ವರ್ಗಾವಣೆಯೂ ಆದರು. ಅತಿಹೆಚ್ಚು ವಾಹನ ದಟ್ಟಣೆಯ ಜಂಕ್ಷನ್‌ನಲ್ಲಿ ಒಂದಾದ ಹೆಬ್ಬಾಳ ಮೇಲ್ಸೇತುವೆಯ ವಿಸ್ತರಣೆ ಬಿಡಿಎಯ ಪ್ರಮುಖ ಯೋಜನೆಯಾದರೂ ಅದನ್ನು ಕಾರ್ಯಗತಗೊಳಿಸಲಾಗಲಿಲ್ಲ. 2,560 ಎಕರೆ ಭೂಮಿಯನ್ನು ಸ್ವಾಧೀನಕ್ಕೊಳಪಡಿಸಿ 73 ಕಿ.ಮೀ ಉದ್ದದ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಾಣ ಮತ್ತೆ ಮುನ್ನೆಲೆಗೆ ಬಂತಾದರೂ, ಪರಿಸರ ಇಲಾಖೆಯ ಸಮ್ಮತಿ ಸೇರಿದಂತೆ 36 ಸಾವಿರ ಮರಗಳ ನಾಶ ಹಾಗೂ ರೈತರಿಗೆ ಪರಿಹಾರದ ಗೊಂದಲಗಳು ಯೋಜನೆಯನ್ನು ಸ್ಥಗಿತಗೊಳಿಸಿದವು. ಸುಪ್ರೀಂ ಕೋರ್ಟ್ ಆದೇಶದಂತೆ ಕೊನೆಗೂ ಶಿವರಾಮ ಕಾರಂತ ಬಡಾವಣೆ ನಿರ್ಮಾಣ ವರ್ಷದ ಅಂತ್ಯದಲ್ಲಿ ಆರಂಭವಾಯಿತು.

ಬಿಎಂಟಿಸಿಗೆ 300 ಎಲೆಕ್ಟ್ರಿಕ್ ಬಸ್

- ಎಲೆಕ್ಟ್ರಿಕ್ ಬಸ್‌ಗಳ ಸಂಚಾರ ಹೆಚ್ಚಾಗಿ 300 ಎಲೆಕ್ಟ್ರಿಕ್ ಬಸ್‌ಗಳು ಬಿಎಂಟಿಸಿಗೆ ಸೇರ್ಪಡೆಗೊಂಡಿದ್ದು, ನಗರದಲ್ಲಿ ಸಂಚರಿಸುತ್ತಿವೆ. ಪ್ರಯಾಣಿಕರು ಎಲ್ಲಾ ರೀತಿಯ ಪಾಸ್‌ಗಳನ್ನು ಆ್ಯಪ್‌ನಲ್ಲಿ ಪಡೆದುಕೊಳ್ಳಲು ಬಿಎಂಟಿಸಿ ಟುಮ್ಯಾಕ್ ಆ್ಯಪ್ ಬಿಡುಗಡೆ ಮಾಡಿತು. ಪ್ರಯಾಣಿಕರನ್ನು ಸೆಳೆಯಲು ಒಟ್ಟೂ ಬಸ್‌ಗಳ ಪ್ರಯಾಣ ದರವನ್ನು ಕಡಿಮೆ ಮಾಡಿದ್ದು, ಪ್ರಯಾಣಿಕರ ಸಂಖ್ಯೆ ಈಗ ಹೆಚ್ಚಾಗಿದೆ.

- 2022ರಲ್ಲಿ ಹೊಸ ಮೆಟ್ರೊ ರೈಲು ಮಾರ್ಗಗಳು ಸಾರ್ವಜನಿಕರಿಗೆ ಸಮರ್ಪಣೆಯಾಗದಿದ್ದರೂ, ಕಾಮಗಾರಿಗಳು ಅಂತಿಮ ಹಂತಕ್ಕೆ ಬಂದಿದ್ದು, ಮೂರು ಹೊಸ ಮಾರ್ಗಗಳು ಕಾರ್ಯಾರಂಭಕ್ಕೆ ಸಜ್ಜಾಗಿವೆ.
- ಕೆಎಸ್‌ಆರ್‌ಟಿಸಿ ಕೂಡ ಎಲೆಕ್ಟ್ರಿಕ್ ಬಸ್ ಸೇವೆ ಆರಂಭಿಸಲು ಅಂತಿಮ ಸಿದ್ಧತೆ ಮಾಡಿಕೊಂಡಿದೆ. ಉದ್ಯೋಗಿಗಳಿಗೆ ₹1 ಕೋಟಿ ಮೊತ್ತದ ಅಪಘಾತ ಪರಿಹಾರ ವಿಮೆ ಜಾರಿಗೆ ತರಲಾಯಿತು. ಪ್ರತಿ ತಿಂಗಳು ಒಂದನೇ ತಾರೀಕಿನಂದೇ ಸಂಬಳ ನೀಡುವ ವ್ಯವಸ್ಥೆ ಜಾರಿಗೆ ಬಂತು.
- ಓಲಾ ಮತ್ತು ಉಬರ್ ರೀತಿಯ ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆಗೆ ದರ ನಿಗದಿ ಸಾರಿಗೆ ಇಲಾಖೆ ಪ್ರಯತ್ನಿಸಿದ್ದು, ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ.
- ಉಪನಗರ ರೈಲು ಯೋಜನೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಶಂಕುಸ್ಥಾಪನೆ ನೆರವೇರಿಸಿದರು. ಆದರೆ, ಕಾಮಗಾರಿ ಆರಂಭವಾಗುವ ನಿರೀಕ್ಷೆ ಹುಸಿಯಾಗಿದೆ.
- ಯಶವಂತಪುರ ಮತ್ತು ಕಂಟೋನ್ಮೆಂಟ್ ರೈಲು ನಿಲ್ದಾಣಗಳಿಗೆ ವಿಮಾನ ನಿಲ್ದಾಣ ಮಾದರಿಯಲ್ಲಿ ಮೂಲ ಸೌಕರ್ಯ ಒದಗಿಸಿ ಪುನರ್ ಅಭಿವೃದ್ಧಿಪಡಿಸುವ ಯೋಜನೆ ಆರಂಭವಾಗಿದೆ. ವಿಮಾನ ನಿಲ್ದಾಣದ ಹಾಲ್ಟ್ ಸ್ಟೇಷನ್ ಮೂಲಕ ದೇವನಹಳ್ಳಿಗೆ 8 ರೈಲುಗಳ ಸಂಚಾರ ಆರಂಭಿಸಲಾಗಿದೆ.

ದಾಖಲೆ ನೀರು...

ಬೆಂಗಳೂರಿಗೆ ಮೊದಲು ಕುಡಿಯುವ ನೀರು ನೀಡಿದ ಹೆಸರಘಟ್ಟ ಹಾಗೂ ಸಂಸ್ಥೆಯ ನೀರನ್ನು ಪ್ರಧಾನವಾಗಿ ನೀಡಿದ ತಿಪ್ಪಗೊಂಡನಹಳ್ಳಿ ಜಲಾಶಯಗಳು ದಶಕಗಳ ನಂತರ ತುಂಬಿತುಳುಕಿದವು. ಮತ್ತೊಂದು ಕಡೆ, ಹೆಸರಘಟ್ಟ ತನ್ನ ಹುಲ್ಲುಗಾವಲು ಉಳಿಸಿಕೊಳ್ಳಲು ಮೀಸಲು ಸಂರಕ್ಷಿತ ಪ್ರದೇಶ ಎಂದು ವನ್ಯಜೀವಿ ಮಂಡಳಿ ಸಭೆ ನಿರ್ಣಯಿಸಿದರೂ ಪ್ರಕಟಿಸಿಲ್ಲ ಇಲಾಖೆ. ಮುಖ್ಯಮಂತ್ರಿಯವರ ಮಧ್ಯಪ್ರವೇಶದಿಂದ ಮತ್ತೊಮ್ಮೆ ಸಮಾಲೋಚನೆಗೆ ಸೂಚಿಸಲಾಗಿದ್ದು, ವಿಷಯ ಜಟಿಲವಾಗಿದೆ.

ಕೆಂಪೇಗೌಡ ಪ್ರತಿಮೆ

- ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ನವೆಂಬರ್ 11ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. ಪರಿಸರ, ಸುಸ್ಥಿರ, ತಂತ್ರಜ್ಞಾನ, ಕಲೆ- ಸಂಸ್ಕೃತಿ ಎಂಬ ನಾಲ್ಕು ಆಯಾಮಗಳನ್ನು ಹೊಸದು ನಿರ್ಮಿಸಿರುವ ಈ ಟರ್ಮಿನಲ್ ಪ್ರವಾಸಿ ತಾಣದಂತೆ ಭಾಸವಾಗುತ್ತಿದೆ. ಸದ್ಯದಲ್ಲೇ ಕಾರ್ಯಾರಂಭಕ್ಕೆ ಸಿದ್ಧತೆಯೂ ನಡೆದಿದೆ. ವಿಮಾನ ನಿಲ್ದಾಣದ ಬಳಿಯೇ ನಾಡಪ್ರಭು ಕೆಂಪೇಗೌಡರ 108 ಅಡಿಯ ಪ್ರತಿಮೆ ನಿರ್ಮಿಸಲಾಗಿದ್ದು, ಅದನ್ನೂ ನರೇಂದ್ರ ಮೋದಿ ಅವರು ಉದ್ಘಾಟಿಸಿದರು. ಬೆಂಗಳೂರಿಗೆ ಬಂದಿಳಿಯುವಾಗ ವಿಮಾನದಿಂದಲೇ ಕೆಂಪೇಗೌಡ ದೊಡ್ಡ ಪ್ರತಿಮೆ ಪ್ರಯಾಣಿಕರಿಗೆ ಕಾಣಿಸುವಂತೆ ನಿರ್ಮಿಸಲಾಗಿದೆ. ಇವೆರಡೂ ಬೆಂಗಳೂರಿನ ಹೆಮ್ಮೆಯಾಗಿ ಸೇರ್ಪಡೆಗೊಂಡಿವೆ.

ವರ್ಷಾರಂಭದಲ್ಲಿ ಕಾಡಿದ್ದ ಕೋವಿಡ್



- ಕೊರೊನಾ ರೂಪಾಂತರಿ ಒಮೈಕ್ರಾನ್ ಪತ್ತೆಯಿಂದ ಕೋವಿಡ್ ಮೂರನೇ ಅಲೆ ಕಾಣಿಸಿಕೊಂಡಿತು. ಜನವರಿಯಲ್ಲಿ ದಿನವೊಂದಕ್ಕೆ 30 ಸಾವಿರಕ್ಕೂ ಅಧಿಕ ಪ್ರಕರಣಗಳು ಪತ್ತೆಯಾಗಿ, ಸಕ್ರಿಯ ಪ್ರಕರಣಗಳು 2 ಲಕ್ಷದ ಗಡಿ ದಾಟಿತ್ತು.
- ಕೋವಿಡ್ ಮೂರನೇ ಅಲೆಯ ಬಳಿಕ (ಮಾರ್ಚ್ ನಂತರ), ಕೋವಿಡೇತರ ಚಿಕಿತ್ಸೆಗೆ ಆದ್ಯತೆ ನೀಡಲಾಯಿತು. ಇದರಿಂದಾಗಿ ವೈದ್ಯಕೀಯ ಪ್ರವಾಸೋದ್ಯಮ ಚೇತರಿಸಿಕೊಂಡಿತು.
- ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಅಸ್ಥಿಮಜ್ಜೆ (ಬೋನ್ ಮ್ಯಾರೊ) ಕಸಿ ಚಿಕಿತ್ಸೆಗೆ ಫೆ.15ರಂದು ಚಾಲನೆ ನೀಡಲಾಯಿತು.
- ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ 50 ಹಾಸಿಗೆಗಳ ಉಪಕೇಂದ್ರ ಹಾಗೂ ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ಘಟಕವನ್ನು ಅ.6ರಂದು ಪ್ರಾರಂಭಿಸಲಾಯಿತು.
- ರಾಷ್ಟ್ರೋತ್ಥಾನ ಪರಿಷತ್ ರಾಜರಾಜೇಶ್ವರಿ ನಗರದಲ್ಲಿ ನಿರ್ಮಿಸಿರುವ ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕ್ಕೆ ಡಿ.5ರಂದು ಚಾಲನೆ ನೀಡಲಾಯಿತು.
- ವರ್ಷಾಂತ್ಯದಲ್ಲಿ ಕೊರೊನಾ ವೈರಾಣುವಿನ ರೂಪಾಂತರಿ 'ಬಿಎಫ್.7' ಆತಂಕದ ಕಾರಣ ಕೆಲ ನಿರ್ಬಂಧಗಳನ್ನು ಸರ್ಕಾರ ವಿಧಿಸಿತು.

ಕೃಷಿ ಮೇಳದ ಸಂಭ್ರಮ

ಕೃಷಿ ವಿಶ್ವವಿದ್ಯಾಲಯದಿಂದ ನ.3ರಿಂದ 6ರ ವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ಕೃಷಿಯಲ್ಲಿ ನವೋದ್ಯಮ' ಘೋಷವಾಕ್ಯದ ಅಡಿ ಕೃಷಿ ಮೇಳ ಆಯೋಜಿಸಲಾಗಿತ್ತು. ಮೀನುಗಾರಿಕೆ ಕ್ಷೇತ್ರದ ಅಭಿವೃದ್ಧಿ ಹಾಗೂ ಮೀನು ಸಾಕಾಣಿಕೆ ಬಗ್ಗೆ ತಿಳಿಸಲು ಅರಮನೆ ಮೈದಾನದಲ್ಲಿ ಅಕ್ಟೋಬರ್ 16ರಂದು 'ಒಳನಾಡು ಮೀನು ಉತ್ಪಾದಕರ ಸಮಾವೇಶ–2022' ಹಮ್ಮಿಕೊಳ್ಳಲಾಗಿತ್ತು.

ಕಳೆಗಟ್ಟಿದ ಸಾಂಸ್ಕೃತಿಕ ಚಟುವಟಿಕೆ

- ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷನ್ಮಂದಿರವನ್ನು ನವೀಕರಣ ಮಾಡಲಾಯಿತು. ₹ 1.95 ಕೋಟಿ ವೆಚ್ಚದಲ್ಲಿ ನೆಲಹಾಸು, ಧ್ವನಿ-ಬೆಳಕಿನ ವ್ಯವಸ್ಥೆ, ಆಸನಗಳು, ಹವಾನಿಯಂತ್ರಿತ ವ್ಯವಸ್ಥೆ ಅಳವಡಿಸಲಾಯಿತು.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅ.28ರಂದು ಕಂಠೀರವ ಕ್ರೀಡಾಂಗಣದಲ್ಲಿ ಕೋಟಿ ಕಂಠ ಗಾಯನ ಕಾರ್ಯಕ್ರಮ ನಡೆಸಲಾಯಿತು.
- ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಆರು ಕಾಲು ಅಡಿ ಎತ್ತರದ ಭುವನೇಶ್ವರಿ ಪ್ರತಿಮೆ ಸ್ಥಾಪಿಸಲಾಯಿತು.
- ಬೆಂಗಳೂರು ಸಾಹಿತ್ಯ ಉತ್ಸವದ 11ನೇ ಆವೃತ್ತಿಯನ್ನು ಡಿ.3 ಮತ್ತು ಡಿ.4ಕ್ಕೆ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ನಡೆಸಲಾಯಿತು.

ಅಪರಾಧ ಹೆಜ್ಜೆಗಳು...

ಜನವರಿ

13: ಕೋಣನಕುಂಟೆ ವಾಜರಹಳ್ಳಿ ಮುಖ್ಯರಸ್ತೆಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ 'ಕಲರ್ಸ್ ಕನ್ನಡ ವಾಹಿನಿಯ 'ನನ್ನಮ್ಮ ಸೂಪರ್ ಸ್ಟಾರ್' ರಿಯಾಲಿಟಿ ಶೋ ಸ್ಪರ್ಧಿ ಸಮನ್ವಿ (6) ಮೃತಪಟ್ಟಿದ್ದರು.

18: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರ್‌.ಟಿ.ನಗರದ ಖಾಸಗಿ ಮನೆಯ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಕೋರಮಂಗಲ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ಸಂತೋಷ್, ಕಾನ್‌ಸ್ಟೆಬಲ್ ಶಿವಕುಮಾರ್ ಅವರನ್ನು ಡ್ರಗ್ಸ್ ಪ್ರಕರಣದಲ್ಲಿ ಬಂಧಿಸಲಾಗಿತ್ತು.

28: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮೊಮ್ಮಗಳು ಸೌಂದರ್ಯ (30) ಆತ್ಮಹತ್ಯೆ ಮಾಡಿಕೊಂಡಿದ್ದರು.

ಫೆಬ್ರುವರಿ

22: 'ಪ್ರಚೋದನಕಾರಿ ಬರಹ ಪ್ರಕಟಿಸಿದ್ದಾರೆ' ಎಂಬ ಆರೋಪದಡಿ ನಟ ಎ. ಚೇತನ್ ಕುಮಾರ್ ಅವರನ್ನು ಶೇಷಾದ್ರಿಪುರ ಪೊಲೀಸರು ಬಂಧಿಸಿದ್ದರು.

ಮಾರ್ಚ್

21: ಹಿಜಾಬ್ ವಿಚಾರವಾಗಿ ತೀರ್ಪು ನೀಡಿದ್ದ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ತಮಿಳುನಾಡಿನ ತೌಹೀದ್ ಜಮಾತ್ (ಟಿ.ಎಂ.ಟಿ.ಜೆ)' ಸಂಘಟನೆಯ ಮುಖಂಡ ಆರ್. ರಹಮತ್–ಉಲ್ಲಾ ಹಾಗೂ ಎಸ್. ಜಮಾಲ್ ಮುಹಮ್ಮದ್ ಉಸ್ಮಾನಿ (44) ಅವರನ್ನು ಬಂಧಿಸಲಾಗಿತ್ತು.

ಏಪ್ರಿಲ್

4: ಜಗಜೀವನ್‌ರಾಮ್ ನಗರ ಠಾಣೆ ವ್ಯಾಪ್ತಿಯ ಹಳೇ ಗುಡ್ಡದಹಳ್ಳಿ ಬಳಿ ಉರ್ದುವಿನಲ್ಲಿ ಮಾತನಾಡಲಿಲ್ಲವೆಂಬ ಕಾರಣಕ್ಕೆ ಚಂದ್ರಶೇಖರ್ (22) ಎಂಬುವರನ್ನು ಕೊಲೆ ಮಾಡಲಾಗಿತ್ತು.

28: ತನ್ನನ್ನು ಮದುವೆಯಾಗಲು ಒಪ್ಪಲಿಲ್ಲವೆಂಬ ಕಾರಣಕ್ಕೆ ಕಾಮಾಕ್ಷಿಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಯುವರಿಯೊಬ್ಬರ ಮೇಲೆ ಆ್ಯಸಿಡ್ ಎರಚಲಾಗಿತ್ತು. ಈ ಸಂಬಂಧ ಆರೋಪಿ ನಾಗೇಶ್ ಬಾಬುನನ್ನು ತಮಿಳುನಾಡಿನ ತಿರುವಣ್ಣಾಮಲೈನ ಶಿವ ದೇವಸ್ಥಾನದ ಆಶ್ರಮದಲ್ಲಿ ಪೊಲೀಸರು ಬಂಧಿಸಿದ್ದರು.

ಮೇ

- ಬಾಂಗ್ಲಾದೇಶದ 23 ವರ್ಷದ ಯುವತಿಯ ಗುಪ್ತಾಂಗದೊಳಗೆ ಮದ್ಯದ ಬಾಟಲಿ ಹಾಗೂ ಕಾಲ್ಬೆರಳು ತುರುಕಿ ಮೃಗೀಯವಾಗಿ ವರ್ತಿಸಿ ಸಾಮೂಹಿಕ ಅತ್ಯಾಚಾರ ಎಸಗಿರುವ ಹೀನ ಕೃತ್ಯ ನಡೆಯಿತು. ಪರಿಚಯಸ್ಥ ಮಹಿಳೆಯರು ಸೇರಿದಂತೆ 10 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು.

30: ಕೋಡಿಹಳ್ಳಿ ಚಂದ್ರಶೇಖರ್ ವಿರುದ್ಧ ಕೇಳಿಬಂದಿದ್ದ ಭ್ರಷ್ಟಾಚಾರ ಆರೋಪ ಚರ್ಚಿಸಲೆಂದು 'ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ' ನೇತೃತ್ವದಲ್ಲಿ ರೈತ ಮುಖಂಡರು ಗಾಂಧಿಭವನದಲ್ಲಿ 'ಆತ್ಮಾವಲೋಕನ ಹಾಗೂ ಸ್ಪಷ್ಟೀಕರಣ ಸಭೆ' ಹಮ್ಮಿಕೊಂಡಿದ್ದರು. ಭಾರತೀಯ ಕಿಸಾನ್ ಒಕ್ಕೂಟದ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್ (55) ಮೇಲೆ ಹಲ್ಲೆ ಮಾಡಿ, ಮುಖಕ್ಕೆ ಮಸಿ ಎರಚಲಾಗಿತ್ತು. ಭಾರತೀಯ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಭರತ್ ಶೆಟ್ಟಿ ಸೇರಿ ಹಲವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದರು.

ಜೂನ್

12: ಟ್ರಿನಿಟಿ ವೃತ್ತ ಬಳಿಯ 'ದಿ ಪಾರ್ಕ್' ಪಂಚತಾರಾ ಹೋಟೆಲ್‌ನಲ್ಲಿ ನಡೆಯುತ್ತಿದ್ದ ಡ್ರಗ್ಸ್ ಪಾರ್ಟಿ ಮೇಲೆ ದಾಳಿ ಮಾಡಿದ್ದ ಪೊಲೀಸರು, ಬಾಲಿವುಡ್ ನಟ ಶಕ್ತಿ ಕಪೂರ್ ಅವರ ಮಗ ಸಿದ್ಧಾಂತ್ (38) ಸೇರಿ ಐವರನ್ನು ಬಂಧಿಸಿದ್ದರು.

8: ನಗರದ ಶ್ರೀರಾಮಪುರ ಠಾಣೆ ವ್ಯಾಪ್ತಿಯಲ್ಲಿ ಅಡಗಿದ್ದ ಹಿಜ್ಬುಲ್–ಮುಜಾಹಿದ್ದೀನ್ (ಎಚ್‌ಎಂ) ಉಗ್ರ ಸಂಘಟನೆಯ ಕಮಾಂಡರ್ ತಾಲಿಬ್ ಹುಸೇನ್ ಅಲಿಯಾಸ್ ತಾರಿಕ್‌ನನ್ನು (36) ಬಂಧಿಸಲಾಗಿತ್ತು

ಜುಲೈ

27: ಡ್ರಗ್ಸ್ ಮಾರಾಟ ಆರೋಪಿಗಳನ್ನು ಬಂಧಿಸಲೆಂದು ಆಂಧ್ರಪ್ರದೇಶದ ಚಿತ್ತೂರಿಗೆ ಹೊರಟಿದ್ದ ವೇಳೆ ಅಪಘಾತ ಸಂಭವಿಸಿ ಶಿವಾಜಿನಗರ ಠಾಣೆಯ ಪಿಎಸ್‌ಐ ಕೆ. ಅವಿನಾಶ್ (29), ಕಾನ್‌ಸ್ಟೆಬಲ್ ಅನಿಲ್ ಮುಳಿಕ್ (26) ಹಾಗೂ ಚಾಲಕ ಮ್ಯಾಕ್ಸ್‌ವೆಲ್ (28) ಮೃತಪಟ್ಟಿದ್ದರು.

ಪಕ್ಷ ಬಲವರ್ಧನೆಗೆ ತಿಂಗಳ ಗಡುವು: ಶಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳ ಪ್ರಾಬಲ್ಯವಿರುವ ಹಳೆ ಮೈಸೂರು ಭಾಗದಲ್ಲಿ ಪಕ್ಷ ಸಂಘಟನೆಯನ್ನು ಚುರುಕುಗೊಳಿಸಿ, ಮುನ್ನಡೆ ಸಾಧಿಸಲು ರಾಜ್ಯ ಸರ್ಕಾರ ಮತ್ತು ಬಿಜೆಪಿ ರಾಜ್ಯ ಘಟಕದ ಪ್ರಮುಖರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಂಗಳ ಗಡುವು ನೀಡಿದ್ದಾರೆ.

ಹಳೆ ಮೈಸೂರು ಭಾಗದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಪ್ರಾಬಲ್ಯ ಹೆಚ್ಚಿಸುವ ಕುರಿತು ಅವರು ಸಚಿವರು, ಶಾಸಕರು ಮತ್ತು ಬಿಜೆಪಿ ಮುಖಂಡರ ಜತೆ ಶುಕ್ರವಾರ ರಾತ್ರಿ ಎರಡು ಗಂಟೆಗಳ ಕಾಲ ಸಭೆ ನಡೆಸಿದರು. ಚುನಾವಣಾ ತಂತ್ರಗಾರಿಕೆ ಕುರಿತು ಹಲವು ಸೂಚನೆಗಳನ್ನು ನೀಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯ ಉಸ್ತುವಾರಿಯಾಗಿರುವ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸಭೆಯಲ್ಲಿ ಅಮಿತ್ ಶಾ ಅವರೊಂದಿಗೆ ವೇದಿಕೆಯಲ್ಲಿದ್ದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಸಚಿವರಾದ ಆರ್. ಅಶೋಕ, ವಿ. ಸೋಮಣ್ಣ, ಕೆ. ಗೋಪಾಲಯ್ಯ, ಕೆ.ಸಿ. ನಾರಾಯಣ ಗೌಡ, ಎಂ.ಟಿ.ಬಿ. ನಾಗರಾಜು, ಮುನಿರತ್ನ, ಎಸ್.ಟಿ. ಸೋಮಶೇಖರ್, ಹಳೆ ಮೈಸೂರು ವಿಭಾಗದ ಪಕ್ಷದ ಸಹ ಪ್ರಭಾರಿ ಡಿ.ಕೆ. ಅರುಣಾ, ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾದ ರಾಜ್ಯ ಘಟಕದ ಅಧ್ಯಕ್ಷ ಛಲವಾದಿ ನಾರಾಯಣ ಸ್ವಾಮಿ, ಹಳೆ ಮೈಸೂರು ಭಾಗದ ಬಿಜೆಪಿ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಶಾಸಕರು, ಮಾಜಿ ಸಂಸದರು, ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರು ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ಹಾಸನ ಸೇರಿದಂತೆ ಹಳೆ ಮೈಸೂರು ಭಾಗದ ಜಿಲ್ಲೆಗಳಲ್ಲಿ ಬಿಜೆಪಿಯ ಬಲಾಬಲ, ಚುನಾವಣೆಯಲ್ಲಿ ಗೆಲುವಿನ ಸಾಧ್ಯತೆಗಳು, ಕಾಂಗ್ರೆಸ್ ಮತ್ತು ಜೆಡಿಎಸ್ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಗೆಲುವಿಗಾಗಿ ನಡೆಸಬೇಕಾದ ಸಿದ್ಧತೆ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ. ಪ್ರತಿ ಜಿಲ್ಲೆಯಲ್ಲೂ ಚುನಾವಣಾ ಕಾರ್ಯತಂತ್ರದ ಭಾಗವಾಗಿ ಆಯ್ಕೆ ಮಾಡಿಕೊಳ್ಳಬೇಕಾದ ವಿಷಯಗಳ ಕುರಿತು ಸಮಾಲೋಚನೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

'ಪಕ್ಷ ಸಂಘಟನೆ ಮತ್ತು ಸರ್ಕಾರದ ಯೋಜನೆಗಳ ಅನುಷ್ಠಾನ ಎರಡರಲ್ಲೂ ತಿಂಗಳೊಳಗೆ ಗುರುತಿಸುವಷ್ಟು ಪ್ರಗತಿ ಸಾಧಿಸಲೇಬೇಕು ಎಂದು ಅಮಿತ್ ಶಾ ತಾಕೀತು ಮಾಡಿದ್ದಾರೆ' ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದರು.

ಪಕ್ಷ ಸಂಘಟನೆಯಲ್ಲಿ ಮಹತ್ವದ ಬದಲಾವಣೆಗಳನ್ನು ತರಬೇಕು. ಸಂಘಟನೆಯಲ್ಲಿ ದುರ್ಬಲವಾಗಿರುವ ಪ್ರದೇಶಗಳನ್ನು ಗುರುತಿಸಿ, ಹೆಚ್ಚಿನ ಆದ್ಯತೆ ನೀಡಬೇಕು ಎಂಬ ಸೂಚನೆ ನೀಡಿದ್ದಾರೆ ಎಂದು ಗೊತ್ತಾಗಿದೆ.

'ಜೆಡಿಎಸ್ ಪಕ್ಷವೇ ಎದುರಾಳಿ'

'ನಮಗೆ ಜೆಡಿಎಸ್ ಪಕ್ಷವೇ ಮೊದಲ ಎದುರಾಳಿ, ಈ ಬಗ್ಗೆ ಗೊಂದಲ ಬೇಡ, ಅವರನ್ನು ಎದುರಿಸುವುದಕ್ಕೆ ಏನು ಬೇಕೋ ಅದನ್ನು ಮಾಡಿ ಎಂದು ಅಮಿತ್ ಶಾ ಅವರು ಸೂಚನೆ ನೀಡಿದ್ದಾರೆ' ಎಂದು ಆರ್.ಅಶೋಕ ತಿಳಿಸಿದರು.

'ಹಳೆ ಮೈಸೂರು ಭಾಗದಲ್ಲಿ ಕನಿಷ್ಠ 35 ಸ್ಥಾನಗಳಲ್ಲಿ ಗೆಲುವಿಗೆ ಕಾರ್ಯತಂತ್ರ ರೂಪಿಸಿ, ಶೀಘ್ರ ಮತ್ತೆ ಇಲ್ಲಿಗೆ ಬಂದು ಸಭೆ ನಡೆಸುತ್ತೇವೆ ಎಂದು ಶಾ ತಿಳಿಸಿದ್ದಾರೆ' ಎಂದು ಸಿ.ಟಿ.ರವಿ ಮಾಹಿತಿ ನೀಡಿದರು.

'ನ್ಯಾಯಾಂಗದ ಮೇಲೆ ಕೇಂದ್ರದ ದಾಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಹಿಂದುತ್ವದ ಕಾರ್ಯಸೂಚಿಗಳನ್ನು ಜಾರಿಗೊಳಿಸಲು ನ್ಯಾಯಾಂಗವು ಅಡ್ಡಿಯಾಗುತ್ತಿದೆ ಎಂಬ ಕಾರಣಕ್ಕಾಗಿ ಕೇಂದ್ರ ಸರ್ಕಾರವು ವ್ಯವಸ್ಥಿತವಾಗಿ ನ್ಯಾಯಾಂಗದ ಮೇಲೆ ದಾಳಿ ನಡೆಸುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ಆರೋಪಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇತ್ತೀಚೆಗೆ ನ್ಯಾಯಾಂಗದ ಮೇಲೆ ವಾಗ್ದಾಳಿ ನಡೆಸಿದ್ದ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಸುಪ್ರೀಂ ಕೋರ್ಟ್ ಹೇಗೆ ಕೆಲಸ ಮಾಡಬೇಕು ಎಂದು ಬುದ್ಧಿವಾದ ಹೇಳಿದ್ದರು. ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ತಮ್ಮ ಮೊದಲ ಭಾಷಣದಲ್ಲೇ 'ನಮ್ಮ ಕಾರ್ಯಸೂಚಿಯ ಜಾರಿಗೆ ನ್ಯಾಯಾಂಗ ಅಡ್ಡಿಯಾಗಿದೆ' ಎಂದಿದ್ದರು. ಇವೆಲ್ಲವೂ ಕೇಂದ್ರ ಸರ್ಕಾರವು ನ್ಯಾಯಾಂಗದ ಮೇಲೆ ನಡೆಸುತ್ತಿರುವ ದಾಳಿಯ ಹಿಂದಿನ ಉದ್ದೇಶವನ್ನು ಬಹಿರಂಗಗೊಳಿಸಿವೆ' ಎಂದರು.

ಚಂದ್ರಶೇಖರ್

ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಿಸಲು 106 ಜನರ ಹೆಸರುಗಳನ್ನು ಸುಪ್ರೀಂ ಕೋರ್ಟ್ ಕಳೆದ ವರ್ಷ ಶಿಫಾರಸು ಮಾಡಿತ್ತು. ಆದರೆ, ಕೇಂದ್ರ ಸರ್ಕಾರ ಏಳು ಮಂದಿಯ ನೇಮಕಾತಿಗೆ ಮಾತ್ರ ಒಪ್ಪಿಗೆ ಸೂಚಿಸಿತ್ತು. ಸುಪ್ರೀಂ ಕೋರ್ಟ್‌ನಲ್ಲೂ ಆರು ನ್ಯಾಯಮೂರ್ತಿಗಳ ಹುದ್ದೆಗಳು ಖಾಲಿ ಇವೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ನ್ಯಾಯಾಲಯಗಳಲ್ಲೂ ಬೃಹತ್ ಪ್ರಮಾಣದ ಹುದ್ದೆಗಳು ಖಾಲಿ ಇವೆ. ಅವುಗಳ ಭರ್ತಿಗೆ ಕ್ರಮ ಕೈಗೊಳ್ಳದ ಕೇಂದ್ರ ಸರ್ಕಾರ, ಬಾಕಿ ಪ್ರಕರಣಗಳ ವಿಚಾರದಲ್ಲಿ ನ್ಯಾಯಾಂಗವನ್ನು ದೂರುತ್ತಿದೆ ಎಂದು ಟೀಕಿಸಿದರು.

ಉಪ ರಾಷ್ಟ್ರಪತಿಯವರು ಸಂಸತ್ತಿನ ಸರ್ವಾಧಿಕಾರದ ಬಗ್ಗೆ ಮಾತನಾಡಿದ್ದಾರೆ. ಸುಪ್ರೀಂ ಕೋರ್ಟ್ ಸೇರಿದಂತೆ ಎಲ್ಲ ಅಂಗಗಳ ಅಧಿಕಾರವನ್ನು ಕೇಂದ್ರೀಕರಿಸಲು ಬಿಜೆಪಿ ನಡೆಸುತ್ತಿರುವ ಪ್ರಯತ್ನದ ಭಾಗವಿದು. ಅವರ ಮಾತಿನಂತೆ ಒಂದೇ ಕಡೆ ಅಧಿಕಾರದ ಕೇಂದ್ರೀಕರಣವಾದರೆ ಸರ್ವಾಧಿಕಾರಿ ವ್ಯವಸ್ಥೆ ಜನ್ಮ ತಳೆಯುವ ಅಪಾಯವಿದೆ ಎಂದರು.

ಕೃಷ್ಣಾ ಯೋಜನೆ ಪೂರ್ಣ ಅನುಷ್ಠಾನ: ಕಾಂಗ್ರೆಸ್ ವಾಗ್ದಾನ

ವಿಜಯಪುರ: 'ಕಾಂಗ್ರೆಸ್ ಆರಂಭಿಸಿದ್ದ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಕಾಂಗ್ರೆಸ್ ಪಕ್ಷವೇ ಪ್ರಥಮ ಆದ್ಯತೆ ಮೇಲೆ, ಸಮರೋಪಾದಿಯಲ್ಲಿ ಪೂರ್ಣಗೊಳಿಸಲಿದೆ' ಎಂದು ಕಾಂಗ್ರೆಸ್ ಮುಖಂಡರು ಒಕ್ಕೊರಲಿನಿಂದ ಕೃಷ್ಣಾ ತೀರದ ಮತದಾರರಿಗೆ ವಾಗ್ದಾನ ಮಾಡಿದರು.

ನಗರದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಶುಕ್ರವಾರ ಆಯೋಜಿಸಿದ್ದ ಕೃಷ್ಣಾ ಜನಾಂದೋಲನಾ ಸಮಾವೇಶದಲ್ಲಿ ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಮುಖಂಡರಾದ ಎಸ್.ಆರ್.ಪಾಟೀಲ, ಎಚ್.ಕೆ.ಪಾಟೀಲ ಸೇರಿದಂತೆ ಎಲ್ಲರೂ ತಮ್ಮ ಭಾಷಣದಲ್ಲಿ ಯುಕೆಪಿ 1 ಮತ್ತು 2ನೇ ಹಂತ ಪೂರ್ಣಗೊಳಿಸಿರುವುದು ಕಾಂಗ್ರೆಸ್ ಪಕ್ಷವೇ ಹೊರತು ಬಿಜೆಪಿ ಅಲ್ಲ. ಇನ್ನುಳಿದ ಯುಕೆಪಿ 3ನೇ ಹಂತವನ್ನು ಮುಂದಿನ ಐದು ವರ್ಷಗಳಲ್ಲಿ ನಾವೇ ಪೂರ್ಣಗೊಳಿಸುತ್ತೇವೆ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆ, ಎತ್ತಿನ ಹೊಳೆ, ಮೇಕೆದಾಟು, ಭದ್ರಾ ಮೇಲ್ದಂಡೆ ಯೋಜನೆ ಸೇರಿದಂತೆ ರಾಜ್ಯದ ಎಲ್ಲ ನೀರಾವರಿ ಯೋಜನೆಗಳಿಗೆ ಪ್ರತಿ ವರ್ಷ ₹ 40 ಸಾವಿರ ಕೋಟಿಯಂತೆ ಐದು ವರ್ಷದಲ್ಲಿ ₹ 2 ಲಕ್ಷ ಕೋಟಿ ಅನುದಾನವನ್ನು ನೀರಾವರಿ ಯೋಜನೆಗಳಿಗೆ ಮೀಸಲಿಡಲಿದೆ ಎಂದರು.

ಜ್ಞಾನಭಾರತಿಯಲ್ಲಿ ಕಾರು, ಪಿಸ್ತೂಲ್ ಜಪ್ತಿ

ಬೆಂಗಳೂರು: ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಆರೋಪಿ ಸಮೀರ್ ಉಲ್ಲಾ ಖಾನ್ ಎಂಬುವವರನ್ನು ಕೇಂದ್ರ ವಿಭಾಗದ ಪೊಲೀಸರು ದೆಹಲಿಯಲ್ಲಿ ಬಂಧಿಸಿ ನಗರಕ್ಕೆ ಕರೆತಂದಿದ್ದಾರೆ. ಆಂಧ್ರಪ್ರದೇಶದ ಸಮೀರ್ ವಿರುದ್ಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ 2016ರಲ್ಲಿ ಪ್ರಕರಣ ದಾಖಲಾಗಿತ್ತು. ಜಾಮೀನು ಪಡೆದಿದ್ದ ಆರೋಪಿ, ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಎಂದು ಕಮಿಷನರ್ ಪ್ರತಾಪ್ ರೆಡ್ಡಿ ತಿಳಿಸಿದರು.

'ತನಿಖೆಗೆ ರಚಿಸಲಾಗಿದ್ದ ವಿಶೇಷ ತಂಡ, ದೆಹಲಿಯಲ್ಲಿ ಆರೋಪಿಯನ್ನು ಬಂಧಿಸಿದ್ದು, ಆತನೊಂದಿಗೆ ಜ್ಞಾನಭಾರತಿಯ ಬೆಂಗಳೂರು ವಿಶ್ವವಿದ್ಯಾಲಯದ ಆವರಣಕ್ಕೆ ತೆರಳಿ ಅಲ್ಲಿದ್ದ ಕಾರು ಹಾಗೂ ಪಿಸ್ತೂಲ್ ಜಪ್ತಿ ಮಾಡಲಾಗಿದೆ. ಕೊಲೆ, ಕೊಲೆ ಯತ್ನ, ಹಲ್ಲೆ, ಸುಲಿಗೆ, ಡ್ರಗ್ಸ್ ಮಾರಾಟ, ಅಕ್ರಮ ಶಸ್ತ್ರಾಸ್ತ್ರ ಸಂಬಂಧ ಸಮೀರ್ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಗಳಿಗೆ ಸಮೀರ್ ಶಸ್ತ್ರಾಸ್ತ್ರ ಪೂರೈಸುತ್ತಿದ್ದ ಮಾಹಿತಿ ಇದೆ' ಎಂದು ತಿಳಿಸಿದರು.

ಆಸ್ತಿ ತೆರಿಗೆ ಬಾಕಿ: ನೋಟಿಸ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹ ಹೆಚ್ಚಿಸಲು ಬಾಕಿ ಉಳಿಸಿಕೊಂಡ ಎಲ್ಲರಿಗೂ ನೋಟಿಸ್ ಜಾರಿ ಮಾಡಿ, ವಸೂಲಿ ಮಾಡಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಆಸ್ತಿ ತೆರಿಗೆ ಸಂಗ್ರಹದ ಬಗ್ಗೆ ಶುಕ್ರವಾರ ನಡೆದ ವರ್ಚ್ಯುಯಲ್ ಸಭೆಯಲ್ಲಿ ವಲಯವಾರು ಮಾಹಿತಿ ಪಡೆದರು.

ಕಂದಾಯ ಅಧಿಕಾರಿಗಳು, ಸಹಾಯಕ ಕಂದಾಯ ಅಧಿಕಾರಿಗಳು ಆಸ್ತಿ ತೆರಿಗೆ ಸಂಗ್ರಹಿಸಲು ಗಮನಹರಿಸಬೇಕು. ವಾರ್ಡ್ ವ್ಯಾಪ್ತಿಯಲ್ಲಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರಿಗೆ ನೋಟಿಸ್ ನೀಡಬೇಕು ಎಂದರು.

ಶಿಕ್ಷಣ ಸಂಸ್ಥೆಗಳು, ಕ್ಲಬ್‌ಗಳು, ಮಾಲ್‌ಗಳಿಂದ ಆಸ್ತಿ ತೆರಿಗೆ ಸಂಗ್ರಹಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಲು ಕಂದಾಯ ಅಧಿಕಾರಿಗಳು ಪ್ರಯತ್ನಿಸಬೇಕು ಎಂದರು.

ಬೆಸ್ಕಾಂ ದತ್ತಾಂಶದ ಆಧಾರ ಸ್ವತ್ತುಗಳನ್ನು ಪರಿಶೀಲಿಸಲಾಗುತ್ತಿದ್ದು, ಆಸ್ತಿತೆರಿಗೆಯಲ್ಲಿ ವ್ಯತ್ಯಾಸ ಕಂಡುಬಂದಂತಹ ಸ್ವತ್ತುಗಳಿಗೆ ನೋಟಿಸ್ ಜಾರಿಗೊಳಿಸಿ ವ್ಯತ್ಯಾಸದ ತೆರಿಗೆಯನ್ನು ದಂಡ ಹಾಗೂ ಬಡ್ಡಿಯೊಂದಿಗೆ ಸಂಗ್ರಹಿಸಬೇಕು. ಆಸ್ತಿ ತೆರಿಗೆ ವ್ಯಾಪ್ತಿಗೆ ಸೇರ್ಪಡೆಯಾಗದ ಸ್ವಾಧೀನಾನುಭವ ಪತ್ರ ಪಡೆದಿರುವ ಆಸ್ತಿಗಳನ್ನು ಗುರುತಿಸಿ ತೆರಿಗೆ ಸಂಗ್ರಹಿಸಬೇಕು ಎಂದರು.

ಎಲ್ಲ 8 ವಲಯಗಳ ಕಂದಾಯ ಅಧಿಕಾರಿ ಹಾಗೂ ಸಹಾಯ ಕಂದಾಯ ಅಧಿಕಾರಿಗಳಿಗೆ ವಾರದ ಗುರಿ ನೀಡಲಾಗಿದೆ. ಪ್ರತಿ ವಾರವೂ ಆಸ್ತಿ ತೆರಿಗೆ ಸಂಗ್ರಹಿಸಿರುವ ಬಗ್ಗೆ ಪರಿಶೀಲನಾ ಸಭೆ ನಡೆಸಬೇಕೆಂದು ಕಂದಾಯ ವಿಭಾಗದ ವಿಶೇಷ ಆಯುಕ್ತರಿಗೆ ಸೂಚನೆ ನೀಡಿದರು.

₹2,718 ಕೋಟಿ ಸಂಗ್ರಹ: 2022–23ನೇ ಸಾಲಿನಲ್ಲಿ ₹ 4,189.78 ಕೋಟಿ ಆಸ್ತಿತೆರಿಗೆ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಡಿ.28ರವರೆಗೆ ₹2,718.22 ಕೋಟಿ ಕೋಟಿ ಸಂಗ್ರಹವಾಗಿದೆ. ಇನ್ನೂ ₹1,471.56 ಕೋಟಿ ಸಂಗ್ರಹಿಸಬೇಕಿದೆ ಎಂದರು.

ಆಸ್ತಿ ತೆರಿಗೆ ಸಂಗ್ರಹ ವಿವರ

ವಲಯ	ಬಜೆಟ್ ಅಂದಾಜು	ಸಂಗ್ರಹ
	(₹ ಕೋಟಿಗಳಲ್ಲಿ)	
ಬೊಮ್ಮನಹಳ್ಳಿ	479.85	291.86
ದಾಸರಹಳ್ಳಿ	158.22	81.05
ಪೂರ್ವ	696.36	500.15
ಮಹದೇವಪುರ	1,032.96	693.18
ರಾಜರಾಜೇಶ್ವರಿನಗರ	331.78	186.44
ದಕ್ಷಿಣ	603.24	422.84
ಪಶ್ಚಿಮ	474.54	298.68
ಯಲಹಂಕ	412.83	244.01
ಒಟ್ಟು	4,189.78	2,718.22

ಲೆಕ್ಕ ಪರಿಶೋಧಕರ ಸಿಲುಕಿಸಲು ಪಿಸ್ತೂಲ್ ಮಾರಾಟ ಕಥೆ

ಬೆಂಗಳೂರು: ನಾಡ ಪಿಸ್ತೂಲ್ ಹಾಗೂ ಜೀವಂತ ಗುಂಡುಗಳ ಮಾರಾಟ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮುಂಬೈನ ರಾಹುಲ್ ಹರಿಶಂಕರ್ ಭೌತಿಕ್, ಇರ್ಫಾನ್ ಹಾಗೂ ಚಿಂತನ್ ಬಂಧಿತರು. ಇವರಿಂದ ಪಿಸ್ತೂಲ್ ಹಾಗೂ ಜೀವಂತ ಗುಂಡುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಇರ್ಫಾನ್, ಮುಂಬೈನ ಲೆಕ್ಕ ಪರಿಶೋಧಕರೊಬ್ಬರ (ಸಿ.ಎ) ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ. ಸಿ.ಎ ಹೆಸರು ಬಳಸಿ ನಂಬಿಕೆ ದ್ರೋಹವೆಸಗಿದ್ದ ಆರೋಪದಡಿ ಇರ್ಫಾನ್ ಜೈಲಿಗೆ ಹೋಗಿದ್ದ. ಇದರಿಂದಾಗಿ ಸಿ.ಎ ವಿರುದ್ಧ ಹರಿಹಾಯುತ್ತಿದ್ದ ಇರ್ಫಾನ್, ಸೇಡು ತೀರಿಸಿಕೊಳ್ಳಲು ಅಕ್ರಮ ಶಸ್ತ್ರಾಸ್ತ್ರ ಪ್ರಕರಣದಲ್ಲಿ ಸಿ.ಎ ಅವರನ್ನು ಸಿಲುಕಿಸಿ ಜೈಲಿಗೆ ಕಳುಹಿಸಲು ಸಂಚು ರೂಪಿಸಿ ರಾಹುಲ್, ಪಿಸ್ತೂಲ್ ಹಾಗೂ ಗುಂಡು ತೆಗೆದುಕೊಂಡು ಡಿ. 7ರಂದು ಕಬ್ಬನ್ ಪಾರ್ಕ್ ಉದ್ಯಾನಕ್ಕೆ ಬಂದಿದ್ದ. ಪಿಸ್ತೂಲ್ ಇರುವ ಬಗ್ಗೆ ಆರೋಪಿಗಳೇ ಠಾಣೆಗೆ ಮಾಹಿತಿ ನೀಡಿದ್ದರು. ದಾಳಿ ನಡೆಸಿದ್ದ ಸಿಬ್ಬಂದಿ, ಆರೋಪಿ ಸಮೇತ ಪಿಸ್ತೂಲ್ ಜಪ್ತಿ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶೀಘ್ರ ಅತಿಥಿ ಉಪನ್ಯಾಸಕರ ಮರುನೇಮಕ'

ಬೆಂಗಳೂರು: 'ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರನ್ನು ನಿಯಮದಂತೆ ಡಿ.31ರಂದು ಬಿಡುಗಡೆ ಮಾಡುತ್ತಿದ್ದು, ನಿಯಮಾವಳಿಗಳಿಗೆ ಸಣ್ಣಪುಟ್ಟ ತಿದ್ದುಪಡಿ ತಂದು ಮರುನೇಮಕ ಮಾಡಿಕೊಳ್ಳುವುದಾಗಿ ಸರ್ಕಾರ ಭರವಸೆ ನೀಡಿದೆ' ಎಂದು ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ಅಧ್ಯಕ್ಷ ಡಾ.ಹನುಮಂತಗೌಡ ಆರ್.ಕಲ್ಮನಿ ಹೇಳಿದ್ದಾರೆ.

'ಕೋವಿಡ್ ಕಾರಣದಿಂದ ಶೈಕ್ಷಣಿಕ ವರ್ಷ ಏರುಪೇರಾದ ಕಾರಣ ಡಿಸೆಂಬರ್‌ನಲ್ಲಿ ಕರ್ತವ್ಯದಿಂದ ಬಿಡುಗಡೆ ಮಾಡಲಾಗುತ್ತಿದೆ. ಮತ್ತೆ ಮರುನೇಮಕ ಮಾಡಿಕೊಳ್ಳಲು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಸಂಘದ ಪದಾಧಿಕಾರಿಗಳ ನಿಯೋಗಕ್ಕೆ ಭರವಸೆ ನೀಡಿದ್ದಾರೆ. ಯಾರೂ ಆತಂಕ ಪಡುವ ಅಗತ್ಯವಿಲ್ಲ' ಎಂದಿದ್ದಾರೆ.

'ಶೀಘ್ರ ಸಿಹಿ ಸುದ್ದಿ ನೀಡುವ ಭರವಸೆಯನ್ನು ಸಿ.ಎಂ ಬೊಮ್ಮಾಯಿ, ಬಸವರಾಜ ಹೊರಟ್ಟಿ ಸಹಿತ ಹಲವರು ಭರವಸೆ ನೀಡಿದ್ದಾರೆ' ಎಂದಿದ್ದಾರೆ.

ಚಿತ್ರಾವಳಿ

'ದಿ ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್' ವತಿಯಿಂದ ಬಿಸಿಐ ಫೋಟೊ ಗ್ಯಾಲರಿಯಲ್ಲಿ ಶುಕ್ರವಾರ ಆಯೋಜಿಸಿದ್ದ 'ನಾಸ್ಟಾಲ್ಜಿಯಾ ಬೆಂಗಳೂರು–1' ವಿಷಯ ಆಧರಿಸಿ ಆಯೋಜಿಸಿದ್ದ ಛಾಯಾಚಿತ್ರ ಪ್ರದರ್ಶನವನ್ನು ಉದ್ಘಾಟಿಸಿದ ವನ್ಯಜೀವಿ ಛಾಯಾಗ್ರಾಹಕ ಎಸ್.ತಿಪ್ಪೇಸ್ವಾಮಿ ಅವರು ವೀಕ್ಷಿಸಿದರು. ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷ ಕೆ.ಸುಕುಮಾರ್ ಮತ್ತಿತರರು ಹಾಜರಿದ್ದರು. – ಪ್ರಜಾವಾಣಿ ಚಿತ್ರ



ಪೂರ್ಣಪ್ರಜ್ಞಾ ಲೇಔಟ್‌ನ ಡಾ.ವಿಷ್ಣುಕಟ್ಟೆ ಗೆಳೆಯರ ಬಳಗದ ವತಿಯಿಂದ ನಟ ವಿಷ್ಣುವರ್ಧನ್ ಅವರ 13ನೇ ಪುಣ್ಯಸ್ಮರಣೆ ಅಂಗವಾಗಿ ರಕ್ತದಾನ ಶಿಬಿರ, ಕೋವ್ಯಾಕ್ಸಿನ್ ಬೂಸ್ಟರ್ ಲಸಿಕೆ ನೀಡುವುದು ಹಾಗೂ ಅನ್ನಸಂತರ್ಪಣೆ ನಡೆಯಿತು.

ಎರಡು ಹಂತದ ಕಾಮಗಾರಿ • ಪಿಲ್ಲರ್‌ಗಳ ನಿರ್ಮಾಣ ಕಾಮಗಾರಿ ಚುರುಕು • 2025ರಲ್ಲಿ ಪೂರ್ಣ

ವಿಮಾನ ನಿಲ್ದಾಣ ಮೆಟ್ರೊಗೆ ಬೇಕು 3 ವರ್ಷ

• ವಿಜಯಕುಮಾರ್ ಎಸ್.ಕೆ.

19.75 ಕಿ.ಮೀ.	38.44 ಕಿ.ಮೀ	30	₹14,788 ಕೋಟಿ	21.50%
2ಎ ಮಾರ್ಗದ ಉದ್ದ	2ಬಿ ಮಾರ್ಗದ ಉದ್ದ	ಒಟ್ಟು ನಿಲ್ದಾಣಗಳ ಸಂಖ್ಯೆ	ಒಟ್ಟು ವೆಚ್ಚ	ಕಾಮಗಾರಿ ಪೂರ್ಣಗೊಂಡಿರುವ ಪ್ರಮಾಣ

ವಿಮಾನ ನಿಲ್ದಾಣ ಮಾರ್ಗದಲ್ಲಿ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಭರದಿಂದ ಸಾಗಿರುವುದು –ಪ್ರಜಾವಾಣಿ ಚಿತ್ರಗಳು/ರಂಜು ಪಿ.

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೆಟ್ರೊ ರೈಲು ಪ್ರಯಾಣದ(ನೀಲಿ ಮಾರ್ಗ) ಕನಸು ನನಸಾಗಲು ಇನ್ನೂ ಕನಿಷ್ಠ ಮೂರು ವರ್ಷ ಬೇಕಿದೆ. ಕಾಮಗಾರಿ ವೇಗವಾಗಿ ನಡೆಯುತ್ತಿದ್ದರೂ, ಒಂದೇ ವರ್ಷದಲ್ಲಿ ಪೂರ್ಣಗೊಳ್ಳುವ ಲಕ್ಷಣಗಳಿಲ್ಲ.

ಅತಿ ಹೆಚ್ಚು ಪ್ರಯಾಣಿಕರ ಒತ್ತಡ ಇರುವ ದೇಶದ ಮೂರನೇ ವಿಮಾನ ನಿಲ್ದಾಣ ಇದಾಗಿದೆ. 2021–22ರ ಅಂಕಿ–ಅಂಶಗಳ ಪ್ರಕಾರ, 1 ಕೋಟಿ 62 ಲಕ್ಷದ 87 ಸಾವಿರ ಪ್ರಯಾಣಿಕರು ಇಲ್ಲಿಂದ ಪ್ರಯಾಣಿಸಿದ್ದಾರೆ. ಬೆಂಗಳೂರಿನ ಕೇಂದ್ರ ಭಾಗದಿಂದ 35 ಕಿಲೋ ಮೀಟರ್ ದೂರದಲ್ಲಿರುವ ಈ ವಿಮಾನ ನಿಲ್ದಾಣಕ್ಕೆ ಪ್ರಯಾಣ ಮಾಡುವುದೇ ಸವಾಲಿನ ಕೆಲಸ. ದಟ್ಟಣೆ ಸಮಸ್ಯೆಗೆ ಪರಿಹಾರ ದೊರಕಲು ಕನಿಷ್ಠ 2025ರ ತನಕ ಕಾಯಬೇಕಾಗುತ್ತದೆ.

ಸಿಲ್ಕ್‌ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್.ಪುರ, ಹೆಬ್ಬಾಳ ಮಾರ್ಗವಾಗಿ ವಿಮಾನ ನಿಲ್ದಾಣಕ್ಕೆ ಮೆಟ್ರೊ ರೈಲು ಮಾರ್ಗ ನಿರ್ಮಾಣವಾಗುತ್ತಿದೆ. ಎರಡು ಹಂತದಲ್ಲಿ ಕಾಮಗಾರಿ ನಡೆಯುತ್ತಿದ್ದು, ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್.ಪುರ ತನಕ(ಹಂತ –2ಎ) ಮತ್ತು ಕೆ.ಆರ್.ಪುರದಿಂದ ವಿಮಾನ ನಿಲ್ದಾಣದ ತನಕ(ಹಂತ–2ಬಿ) ಮತ್ತೊಂದು ಹಂತದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಹಂತ–2ಎ ಕಾಮಗಾರಿ 2021ರ ಆಗಸ್ಟ್‌ನಲ್ಲಿ ಆರಂಭವಾಗಿದ್ದು, ಹಂತ–2ಬಿ ಕಾಮಗಾರಿ ಅದಕ್ಕಿಂತ ಆರು ತಿಂಗಳು ವಿಳಂಬವಾಗಿ ಆರಂಭವಾಗಿದೆ. ಆದ್ದರಿಂದ ಸಿಲ್ಕ್‌ಬೋರ್ಡ್‌ನಿಂದ ಕೆ.ಆರ್.ಪುರ ತನಕದ ಹೊರ ವರ್ತುಲ ರಸ್ತೆಯಲ್ಲಿ ಕಾಮಗಾರಿ ಹೆಚ್ಚು ಪ್ರಗತಿಯಾಗಿದೆ. ಕಾರ್ಯಾರಂಭವೂ ಆರು ತಿಂಗಳು ಬೇಗ ಆಗಲಿವೆ ಎಂಬುದು ಬಿಎಂಆರ್‌ಸಿಎಲ್ ಅಧಿಕಾರಿಗಳ ಲೆಕ್ಕಾಚಾರ.

ಸಂಪೂರ್ಣ ಎಲಿವೇಟೆಡ್(ಎತ್ತರಿಸಿದ) ಮಾರ್ಗ ಇದಾಗಿದ್ದು, ಸಿಲ್ಕ್‌ಬೋರ್ಡ್‌ನಿಂದ ಹೊರ ವರ್ತುಲ ರಸ್ತೆಯಲ್ಲೇ ರಸ್ತೆ ಮಧ್ಯದ ವಿಭಜಕದಲ್ಲಿ ಸಾಗಲಿದೆ. ಹೆಬ್ಬಾಳದಲ್ಲಿ ರಾಷ್ಟ್ರೀಯ ಹೆದ್ದಾರಿಯ ಒಂದು ಬದಿಯಲ್ಲಿ ನಿರ್ಮಾಣವಾಗುತ್ತಿದೆ. ಯಲಹಂಕ ವಾಯು ನೆಲೆ ಬಳಿ ಮೇಲ್ಸೇತುವೆ ನಿರ್ಮಾಣಕ್ಕೆ ವಾಯು ಸೇನೆ ಅನುಮತಿ ನೀಡಿಲ್ಲ. ಆದ್ದರಿಂದ ಸ್ವಲ್ಪ ದೂರ ಮಾತ್ರ ಸುರಂಗ ಮಾರ್ಗದಲ್ಲಿ ಮೆಟ್ರೊ ರೈಲು ಮಾರ್ಗ ನಿರ್ಮಾಣವಾಗಲಿದೆ.

ಪಿಲ್ಲರ್‌ಗಳ ನಿರ್ಮಾಣ ಕಾಮಗಾರಿ ಬಹುತೇಕ ಮುಕ್ತಾಯ ಹಂತಕ್ಕೆ ಬಂದಿದೆ. ಪಿಲ್ಲರ್‌ಗಳ ಮೇಲೆ ಕೆಲವೆಡೆ ಕ್ಯಾಪ್‌ಗಳನ್ನು ಅಳವಡಿಸಲಾಗಿದ್ದು, ಕೆಲವೆಡೆ ಈ ಕಾಮಗಾರಿ ಪ್ರಗತಿಯಲ್ಲಿದೆ. ಇದಾದ ಬಳಿಕ ಸೆಗ್ಮೆಂಟ್‌ಗಳನ್ನು ಜೋಡಿಸಿ, ಅವುಗಳ ಮೇಲೆ ಹಳಿ ಜೋಡಣೆ, ಸಿಸ್ಟಮ್, ಸಿಗ್ನಲಿಂಗ್ ವ್ಯವಸ್ಥೆ ಆಗಬೇಕಿದೆ. ಪಿಲ್ಲರ್‌ಗಳ ಹಂತದಲ್ಲೇ ಕಾಮಗಾರಿ ಇರುವುದರಿಂದ ನಿಲ್ದಾಣಗಳ ನಿರ್ಮಾಣ ಕಾಮಗಾರಿ ಇನ್ನೂ ಆರಂಭವಾಗಿಲ್ಲ. ಈ ನಡುವೆ 2023ರ ಕೊನೆಯ ವೇಳೆಗೆ ವಿಮಾನ ನಿಲ್ದಾಣಕ್ಕೆ ಮೆಟ್ರೊ ರೈಲು ಸಂಚಾರ ಆರಂಭವಾಗಲಿದೆ ಎಂದು ವಿಧಾನ ಪರಿಷತ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರಷ್ಟೇ ಹೇಳಿದ್ದಾರೆ. ಸದ್ಯದ ಸ್ಥಿತಿ ಗಮನಿಸಿದರೆ 2023ರ ಕೊನೆಯ ವೇಳೆಗಲ್ಲ, 2024ರ ಕೊನೆಯ ವೇಳೆಗೂ ಕಾಮಗಾರಿ ಈ ಮಾರ್ಗ ಪ್ರಯಾಣಿಕರ ಸಂಚಾರಕ್ಕೆ ಲಭ್ಯವಾಗುವ ಲಕ್ಷಣಗಳಿಲ್ಲ.

ಸಿಲ್ಕ್‌ಬೋರ್ಡ್–ಕೆ.ಆರ್.ಪುರ ಮಾರ್ಗ 2024ರ ಕೊನೆಯಲ್ಲಿ ಪೂರ್ಣಗೊಳ್ಳಲಿದ್ದು, ಕೆ.ಆರ್.ಪುರ–ವಿಮಾನ ನಿಲ್ದಾಣ ಮಾರ್ಗದ ಕಾಮಗಾರಿ 2025ರಲ್ಲಿ ಪೂರ್ಣಗೊಳ್ಳಲಿದೆ ಎಂಬುದು ಬಿಎಂಆರ್‌ಸಿಎಲ್ ಅಧಿಕಾರಿಗಳ ನಿರೀಕ್ಷೆ.

ಸಿಲ್ಕ್‌ಬೋರ್ಡ್–ಕೆ.ಆರ್.ಪುರ ಮಾರ್ಗದ ಕಾಮಗಾರಿ 2024ರ ಕೊನೆಯಲ್ಲಿ ಪೂರ್ಣಗೊಳ್ಳಲಿದ್ದು, ಕೆ.ಆರ್.ಪುರ–ವಿಮಾನ ನಿಲ್ದಾಣ ಮಾರ್ಗದ ಕಾಮಗಾರಿ 2025ರಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಅಂಜುಂ ಪರ್ವೇಜ್, ಬಿಎಂಆರ್‌ಸಿಎಲ್ ಎಂ.ಡಿ

ಭೂಸ್ವಾಧೀನ ಬಹುತೇಕ ಪೂರ್ಣ

ಈ ಮಾರ್ಗದ ಕಾಮಗಾರಿಗೆ ಭೂಸ್ವಾಧೀನ ಪ್ರಕ್ರಿಯೆ ಕೂಡ ಬಹುತೇಕ ಪೂರ್ಣಗೊಂಡಿದೆ. ರಸ್ತೆ ವಿಭಜಕ ಮತ್ತು ರಸ್ತೆ ಬದಿಯಲ್ಲಿ ನಿರ್ಮಾಣವಾಗುತ್ತಿದ್ದು, ನಿಲ್ದಾಣಗಳ ಬಳಿ ಮಾತ್ರ ಖಾಸಗಿ ಭೂಮಿ ಸ್ವಾಧೀನ ಆಗಬೇಕಿತ್ತು. ಅದು ಬಹುತೇಕ ಪೂರ್ಣಗೊಂಡಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಶೆಟ್ಟಿಗೆರೆ ಡಿಪೊ ನಿರ್ಮಾಣಕ್ಕೆ ಅಗತ್ಯ ಇದ್ದ ಭೂಮಿಯಲ್ಲಿ 3 ಎಕರೆ ಇನ್ನೂ ಸ್ವಾಧೀನ ಅಂತಿಮವಾಗಬೇಕಿದೆ. ವ್ಯಾಜ್ಯ ಇದ್ದಿದ್ದರಿಂದ ವಿಳಂಬವಾಗಿದ್ದು, ಈಗ ಎರಡು ಎಕರೆಗೆ ಪರಿಹಾರ ವಿತರಣೆಯಾಗುತ್ತಿದೆ. ಬಾಕಿ 1 ಎಕರೆಗೆ ಪರಿಹಾರ ವಿತರಣೆಗೂ ಕ್ರಮ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ನೀಲಿ ಮಾರ್ಗದ ನಿಲ್ದಾಣಗಳು

- ಸಿಲ್ಕ್‌ಬೋರ್ಡ್
- ಎಚ್‌ಎಸ್‌ಆರ್ ಬಡಾವಣೆ (ವೆಂಕಟಾಪುರ)
- ಅಗರ
- ಇಬ್ಬಲೂರು
- ಬೆಳ್ಳಂದೂರು
- ಕಾಡುಬೀಸನಹಳ್ಳಿ
- ಕೋಡುಬೀಸನಹಳ್ಳಿ (ದೇವರಬೀಸನಹಳ್ಳಿ)
- ಮಾರತ್ತಹಳ್ಳಿ
- ಇಸ್ರೊ
- ದೊಡ್ಡನೆಕ್ಕುಂದಿ
- ಡಿಆರ್‌ಡಿಒ ಸಂಕೀರ್ಣ
- ಸೀತಾರಾಮ ಪಾಳ್ಯ (ಸರಸ್ವತಿ ನಗರ)
- ಕೆ.ಆರ್. ಪುರ
- ಕಸ್ತೂರಿ ನಗರ
- ಹೊರಮಾವು
- ಎಚ್‌ಆರ್‌ಬಿಆರ್ ಬಡಾವಣೆ
- ಕಲ್ಯಾಣ ನಗರ
- ಎಚ್‌ಬಿಆರ್ ಬಡಾವಣೆ
- ನಾಗವಾರ
- ವೀರಣ್ಣ ಪಾಳ್ಯ
- ಕೆಂಪಾಪುರ
- ಹೆಬ್ಬಾಳ
- ಕೊಡಿಗೆಹಳ್ಳಿ
- ಜಕ್ಕೂರು ಅಡ್ಡರಸ್ತೆ
- ಯಲಹಂಕ
- ಬಾಗಲೂರು ಅಡ್ಡರಸ್ತೆ
- ಬೆಟ್ಟಹಲಸೂರು
- ದೊಡ್ಡಜಾಲ
- ವಿಮಾನ ನಿಲ್ದಾಣ ನಗರ
- ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

ಮೆಟ್ರೊ ಗುಂಪು ಪ್ರಯಾಣಕ್ಕೆ ಶೇ 20ರಷ್ಟು ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ಸಾವಿರಕ್ಕಿಂತ ಹೆಚ್ಚು ಪ್ರಯಾಣಿಕರು ಒಟ್ಟಿಗೆ ಗುಂಪು ಪ್ರಯಾಣ ಮಾಡಿದರೆ ಶೇ 20ರವರೆಗೆ ರಿಯಾಯಿತಿ ನೀಡುವ ಕೊಡುಗೆಯನ್ನು ಬೆಂಗಳೂರು ಮೆಟ್ರೊ ರೈಲು ನಿಗಮ(ಬಿಎಂಆರ್‌ಸಿಎಲ್) ಪ್ರಕಟಿಸಿದೆ.

ಜನವರಿ 1ರಿಂದ ಮಧ್ಯಮ ಮತ್ತು ದೊಡ್ಡ ಗುಂಪುಗಳಿಗೆ ವಿವಿಧ ರಿಯಾಯಿತಿ ನೀಡಲು ಮುಂದಾಗಿದೆ. ಮಧ್ಯಮ ಗುಂಪು(100ರಿಂದ 1 ಸಾವಿರ ಜನ) ಒಟ್ಟಾಗಿ ಪ್ರಯಾಣಿಸಿದರೆ ಟೋಕನ್ ದರದಲ್ಲಿ ಶೇ 15ರಷ್ಟು ರಿಯಾಯಿತಿ ದೊರೆಯಲಿದೆ. ಪ್ರಯಾಣಿಕರು ಒಂದೇ ನಿಲ್ದಾಣದಲ್ಲಿ ಪ್ರವೇಶಿಸಿ, ಎಲ್ಲರೂ ಒಂದೇ ನಿಲ್ದಾಣದಲ್ಲಿ ಇಳಿಯಬೇಕು.

ಒಂದೇ ನಿಲ್ದಾಣದಲ್ಲಿ ಪ್ರವೇಶಿಸಿ ವಿವಿಧ ನಿಲ್ದಾಣಗಳಲ್ಲಿ ನಿರ್ಗಮಿಸಿದರೆ ಅಥವಾ ವಿವಿಧ ನಿಲ್ದಾಣಗಳಲ್ಲಿ ಪ್ರವೇಶಿಸಿ ಒಂದೇ ನಿಲ್ದಾಣದಲ್ಲಿ ನಿರ್ಗಮಿಸಿದರೆ ಫ್ಲಾಟ್ ದರ ₹35 ದೊರೆಯಲಿದೆ.

ದೊಡ್ಡ ಗುಂಪು(1 ಸಾವಿರ ಕ್ಕಿಂತ ಹೆಚ್ಚು ಜನ) ಒಂದೇ ನಿಲ್ದಾಣದಿಂದ ಪ್ರವೇಶಿಸಿ ಒಂದೇ ನಿಲ್ದಾಣದಲ್ಲಿ ನಿರ್ಗಮಿಸಿದರೆ ಟೋಕನ್ ದರದಲ್ಲಿ ಶೇ 20ರಷ್ಟು ರಿಯಾಯಿತಿ ದೊರೆಯಲಿದೆ. ಈ ಗುಂಪು ಒಂದೇ ನಿಲ್ದಾಣದಲ್ಲಿ ಪ್ರವೇಶಿಸಿ ವಿವಿಧ ನಿಲ್ದಾಣಗಳಲ್ಲಿ ನಿರ್ಗಮಿಸಿದರೆ ಅಥವಾ ವಿವಿಧ ನಿಲ್ದಾಣಗಳಲ್ಲಿ ಪ್ರವೇಶಿಸಿ ಒಂದೇ ನಿಲ್ದಾಣದಲ್ಲಿ ನಿರ್ಗಮಿಸಿದರೆ ಫ್ಲಾಟ್ ದರ ₹30 ದೊರೆಯಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಗುಂಪು ಪ್ರಯಾಣಿಕರು ಪ್ರಯಾಣದ ದಿನಾಂಕ, ಸಮಯ, ಪ್ರಯಾಣಿಕರ ಸಂಖ್ಯೆ, ಪ್ರವೇಶ ಮತ್ತು ನಿರ್ಗಮನ ನಿಲ್ದಾಣ, ಪ್ರಯಾ ಣದ ಉದ್ದೇಶ ತಿಳಿಸಿ ಕನಿಷ್ಠ 7 ದಿನ ಮುಂಚಿತವಾಗಿ ಗುಂಪು ಟಿಕೆಟ್ ಪಡೆಯಬಹುದು ಎಂದು ವಿವರಿಸಿದೆ.

ದಶಪಥದಲ್ಲೇ ಹೆಲಿಕಾಪ್ಟರ್‌ನಲ್ಲಿ ಇಳಿಯಲಿದ್ದಾರೆ ನಿತಿನ್ ಗಡ್ಕರಿ

ಪ್ರಜಾವಾಣಿ ವಾರ್ತೆ

ರಾಮನಗರ: ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಜ. 5ರಂದು ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಕಾಮಗಾರಿ ಪರಿಶೀಲನೆ ನಡೆಸಲಿದ್ದು, ಹೊಸ ಹೆದ್ದಾರಿಯಲ್ಲಿಯೇ ಹೆಲಿಕಾಪ್ಟರ್ ಇಳಿಸಲು ಚಿಂತನೆ ನಡೆದಿದೆ.

ರಾಮನಗರ–ಚನ್ನಪಟ್ಟಣ ನಡುವೆ ನಿರ್ಮಾಣ ಆಗಿರುವ ದಶಪಥಗಳ ಬೈಪಾಸ್ ರಸ್ತೆಯಲ್ಲಿ ಗಡ್ಕರಿ ಹೆಲಿಕಾಪ್ಟರ್‌ನಲ್ಲಿ ಬಂದಿಳಿಯಲಿದ್ದಾರೆ. ಸಚಿವರ ಭೇಟಿ ಹಿನ್ನೆಲೆಯಲ್ಲಿ ಶುಕ್ರವಾರ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದು ಹೆಲಿಕಾಪ್ಟರ್ ಇಳಿಸಲು ಎರಡು ಸ್ಥಳ ಗುರುತಿಸಿದ್ದಾರೆ.

ಈ ಹಿಂದೆ ಗಡ್ಕರಿ ಹೊಸತಾಗಿ ನಿರ್ಮಾಣಗೊಂಡ ಎಕ್ಸ್‌ಪ್ರೆಸ್ ವೇನಲ್ಲಿ 180 ಕಿ.ಮೀ. ವೇಗದಲ್ಲಿ ಕಾರು ಚಲಾಯಿಸಿ ಗಮನ ಸೆಳೆದಿದ್ದರು. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿಯೂ ಗಡ್ಕರಿ ಕಾರು ಚಲಾಯಿಸಲಿದ್ದಾರೆ. ವೈಮಾನಿಕ ಸಮೀಕ್ಷೆ ಬಳಿಕ ಹೆಲಿಕಾಪ್ಟರ್ ರಾಮನಗರದಲ್ಲಿ ಇಳಿಯಲಿದ್ದು, ಅಲ್ಲಿಂದ ಸುಮಾರು 20 ಕಿ.ಮೀ. ದೂರ ಸಚಿವರೇ ಕಾರು ಚಲಾಯಿಸಿ ರಸ್ತೆಯ ಗುಣಮಟ್ಟ ವೀಕ್ಷಿಸಲಿದ್ದಾರೆ ಎಂದು ಹೆದ್ದಾರಿ ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಬೆಂಗಳೂರು–ಮೈಸೂರು ಹತ್ತು ಪಥಗಳ ಹೆದ್ದಾರಿಯನ್ನು ಫೆಬ್ರುವರಿ ಅಂತ್ಯ ಇಲ್ಲವೇ ಮಾರ್ಚ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸುವ ನಿರೀಕ್ಷೆ ಇದೆ.

ಕೆಲಸಗಾರನ ಕೊಲೆ: ಗೆಳತಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಪಿ. ಅಗ್ರಹಾರದಲ್ಲಿ ನಡೆದಿದ್ದ ಮಂಜುನಾಥ್ ಬಾಳಪ್ಪ ಜಮಖಂಡಿ (21) ಎಂಬುವವರ ಕೊಲೆ ಪ್ರಕರಣದ ಪ್ರಮುಖ ಆರೋಪಿ ಸರೋಜಾ ದೇಸಾಯಿ ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಬಾಗಲಕೋಟೆ ಜಿಲ್ಲೆಯ ಮಂಜುನಾಥ್, ಖಾನಾವಳಿಯಲ್ಲಿ ಕೆಲಸ ಮಾಡುತ್ತಿದ್ದರು. ಇವರನ್ನು ಡಿ. 4ರಂದು ರಾತ್ರಿ ಕಲ್ಲಿನಿಂದ 20 ಬಾರಿ ಹೊಡೆದು ಕೊಲೆ ಮಾಡಲಾಗಿತ್ತು. ಈ ಸಂಬಂಧ ಪ್ರೇಮವ್ವ, ಇವರ ಅಕ್ಕ ಮಹಾದೇವಿ, ಮಂಜು, ಕಿರಣ್, ಚನ್ನಪ್ಪ ಹಾಗೂ ಕಾಶಿನಾಥ್ ಎಂಬುವವರನ್ನು ಬಂಧಿಸಲಾಗಿತ್ತು. ತಲೆಮರೆಸಿಕೊಂಡಿದ್ದ ಸರೋಜಾ ಅವರನ್ನು ಇದೀಗ ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿ ಸರೋಜಾ, ಬಾಗಲಕೋಟೆ ಜಿಲ್ಲೆಯ ಬಾದಾಮಿ ನಿವಾಸಿ. ಪ್ರೀತಿಸಿ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಕೌಟುಂಬಿಕ ಕಲಹದಿಂದಾಗಿ ಸರೋಜಾ ಅವರನ್ನು ಪತಿ ಬಿಟ್ಟು ಹೋಗಿದ್ದಾರೆ. ಜೀವನ ನಿರ್ವಹಣೆಗಾಗಿ ಸರೋಜಾ, ಬಟ್ಟೆ ವ್ಯಾಪಾರ ಮಾಡುತ್ತಿದ್ದರು. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಓಡಾಡುತ್ತಿದ್ದರು. ಅವರ ಪೋಷಕರು, ಕೆಲಸ ಅರಸಿ ಬೆಂಗಳೂರಿಗೆ ಬಂದು ನೆಲೆಸಿದ್ದರು.’

‘ಬಾಗಲಕೋಟೆಯಲ್ಲಿ ಸರೋಜಾ ಅವರಿಗೆ ಮಂಜುನಾಥ್ ಪರಿಚಯವಾಗಿತ್ತು. ನಂತರ, ಇಬ್ಬರ ನಡುವೆ ಸಲುಗೆ ಬೆಳೆದಿತ್ತು. ಇಬ್ಬರೂ ಹಲವೆಡೆ ಸುತ್ತಾಡಿದ್ದರು. ಈ ವಿಷಯ ಮನೆಯಲ್ಲಿ ಗೊತ್ತಾಗಿ ಗಲಾಟೆ ಆಗಿತ್ತು. ಸರೋಜಾ ಪೋಷಕರು, ಮಂಜುನಾಥ್ ವಿರುದ್ಧ ಬಾಗಲಕೋಟೆ ಹಾಗೂ ದಾವಣಗೆರೆ ಠಾಣೆಗೆ ದೂರು ಸಹ ನೀಡಿದ್ದರು’ ಎಂದು ಪೊಲೀಸರು ತಿಳಿಸಿದರು.

ಮಾತುಕತೆಗೆ ಕರೆದು ಕೊಲೆ: ‘ಸರೋಜಾ ಹಾಗೂ ಪೋಷಕರು ಮಾತುಕತೆ ನಡೆಸಲೆಂದು ಮಂಜುನಾಥ್ ಅವರನ್ನು ಬೆಂಗಳೂರಿಗೆ ಕರೆಸಿದ್ದರು. ಕೆ.ಪಿ. ಅಗ್ರಹಾರದಲ್ಲಿ ಅವರ ಜೊತೆ ಜಗಳ ತೆಗೆದು ಕೊಲೆ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ಕೊಲೆ ಬಳಿಕ ತಲೆಮರೆಸಿಕೊಂಡಿದ್ದ ಸರೋಜಾ, ರಾಜ್ಯದ ಹಲವೆಡೆ ಸುತ್ತಾಡಿದ್ದರು. ಇತ್ತೀಚೆಗೆ ಬೆಂಗಳೂರು ರೈಲು ನಿಲ್ದಾಣಕ್ಕೆ ಬಂದಿದ್ದರು. ಇದೇ ಸಂದರ್ಭದಲ್ಲೇ ಅವರನ್ನು ವಶಕ್ಕೆ ಪಡೆಯಲಾಯಿತು’ ಎಂದು ಪೊಲೀಸರು ತಿಳಿಸಿದರು.

ಮನೆಗೆ ನುಗ್ಗಿ ದರೋಡೆ: ರೌಡಿ ಬಂಧನ

ಬೆಂಗಳೂರು: ವಿದ್ಯಾರಣ್ಯಪುರ ಬಳಿಯ ಸಾಯಿನಗರದ ಮನೆಯೊಂದಕ್ಕೆ ನುಗ್ಗಿ ದರೋಡೆ ಮಾಡಿದ್ದ ಆರೋಪಿ ಎಲ್. ಬಾಲಕೃಷ್ಣ ಅಲಿಯಾಸ್ ಬಾಲನನ್ನು (24) ಪೊಲೀಸರು ಬಂಧಿಸಿದ್ದಾರೆ.

‘ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಿವಾಸಿ ಬಾಲಕೃಷ್ಣ, ಅಪರಾಧ ಹಿನ್ನೆಲೆಯುಳ್ಳವ. ಪೀಣ್ಯ ಹಾಗೂ ಬಾಗಲಗುಂಟೆ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿತ್ತು. ಸದ್ಯ ಈತನಿಂದ ₹ 3.50 ಲಕ್ಷ ಮೌಲ್ಯದ 70 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನ. 25ರಂದು ಮಹಿಳೆಯೊಬ್ಬರೇ ಮನೆಯಲ್ಲಿದ್ದರು. ಮನೆಗೆ ನುಗ್ಗಿದ್ದ ಬಾಲಕೃಷ್ಣ, ಮಹಿಳೆ ಮೇಲೆ ಹಲ್ಲೆ ಮಾಡಿದ್ದ. ನಂತರ, ಚಿನ್ನಾಭರಣ ದೋಚಿಕೊಂಡು ಪರಾರಿಯಾಗಿದ್ದ. ಕೃತ್ಯದ ಸಂಬಂಧ ಮಹಿಳೆ ದೂರು ನೀಡಿದ್ದರು. ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

ನೋಟು ಬದಲಾವಣೆ: ₹ 88 ಲಕ್ಷ ಮೊತ್ತದ ಹಳೇ ನೋಟು ಜಪ್ತಿ

ಬೆಂಗಳೂರು: ಹಳೇ ನಿಷೇಧಿತ ನೋಟು ಬದಲಾವಣೆ ಸೋಗಿನಲ್ಲಿ ಜನರನ್ನು ವಂಚಿಸುತ್ತಿದ್ದ ಮೂವರು ಆರೋಪಿಗಳನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪದ್ಮನಾಭನಗರದ ಯೋಗಾನಂದ ಅಲಿಯಾಸ್ ಯೋಗೇಶ್ (39), ಆಂಧ್ರಪ್ರದೇಶದ ಪುಟ್ಟಪರ್ತಿ ಜಿಲ್ಲೆಯ ವೆಂಕಟ ನಾರಾಯಣ ಅಲಿಯಾಸ್ ರಾಜಣ್ಣ (60) ಹಾಗೂ ಹರಿಪ್ರಸಾದ್ (53) ಬಂಧಿತರು. ಇವರಿಂದ ₹ 88 ಲಕ್ಷ ಮೊತ್ತದ 500 ಮುಖಬೆಲೆಯ ಹಳೇ ನೋಟುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

ಮೆಜೆಸ್ಟಿಕ್ ‘ಅಕ್ರಮ’ ವ್ಯಾಪಾರ: ಪ್ರಶ್ನಿಸಿದರೆ ಇರಿತ

ಚಾಕು– ಚೂರಿ ತೋರಿಸಿ ಕೊಲೆ ಬೆದರಿಕೆ: ಹೆಚ್ಚುತ್ತಿರುವ ದೂರು • ಪಾಲನೆಯಾಗದ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಮೆಜೆಸ್ಟಿಕ್ ಸುರಂಗ ಮಾರ್ಗದಲ್ಲಿ ಅಕ್ರಮವಾಗಿ ಮಳಿಗೆ ತೆರೆದಿರುವ ವ್ಯಾಪಾರಿಗಳು – ಪ್ರಜಾವಾಣಿ ಚಿತ್ರ

ಬೆಂಗಳೂರು: ಮೆಜೆಸ್ಟಿಕ್ ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣಕ್ಕೆ ಹೊಂದಿಕೊಂಡಿರುವ ಸುರಂಗ ಮಾರ್ಗದಲ್ಲಿ ‘ಅಕ್ರಮ’ ವ್ಯಾಪಾರ ಜೋರಾಗಿದ್ದು, ಇದನ್ನು ಪ್ರಶ್ನಿಸುವ ಜನರ ಮೇಲೆ ವ್ಯಾಪಾರಿಗಳು ಹಲ್ಲೆ ಮಾಡುತ್ತಿದ್ದಾರೆ. ತಮ್ಮದೇ ಗುಂಪು ಕಟ್ಟಿಕೊಂಡು ಚಾಕು– ಚೂರಿ ತೋರಿಸಿ ಕೊಲೆ ಬೆದರಿಕೆಯೊಡ್ಡುತ್ತಿರುವ ದೂರುಗಳು ಹೆಚ್ಚಾಗಿವೆ.

ನಿಲ್ದಾಣಕ್ಕೆ ಬಂದು ಹೋಗುವ ಜನರ ಸಂಚಾರಕ್ಕೆ ಅನುಕೂಲವಾಗಲೆಂದು ಸುರಂಗ ಮಾರ್ಗ ನಿರ್ಮಿಸಲಾಗಿದ್ದು, ‘ಕಡ್ಡಾಯವಾಗಿ ಸುರಂಗ ಮಾರ್ಗ ಬಳಸಿ’ ಎಂಬ ನಾಮಫಲಕಗಳನ್ನು ನೇತುಹಾಕಲಾಗಿದೆ. ಆದರೆ, ಜನರು ಓಡಾಡುವ ಸ್ಥಳವನ್ನೇ ಅತಿಕ್ರಮಿಸಿಕೊಂಡು ವ್ಯಾಪಾರಿಗಳು ವಹಿವಾಟು ನಡೆಸುತ್ತಿರುವ ಆರೋಪಗಳು ಕೇಳಿಬರುತ್ತಿವೆ.

ಹಲವು ವರ್ಷಗಳಿಂದ ನಡೆಯುತ್ತಿದ್ದ ಅಕ್ರಮ ವ್ಯಾಪಾರ ಪ್ರಶ್ನಿಸಿ ರವಿಕುಮಾರ್ ಕಂಚನಹಳ್ಳಿ ಎಂಬುವವರು ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್, ‘ಮೆಜೆಸ್ಟಿಕ್‌ನ ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮ ವ್ಯಾಪಾರಕ್ಕೆ ಅವಕಾಶ ನೀಡಬಾರದು’ ಎಂದು ಬಿಬಿಎಂಪಿಗೆ ಸೂಚಿಸಿ 2019ರ ಆಗಸ್ಟ್ 27ರಂದು ಆದೇಶ ಹೊರಡಿಸಿತ್ತು. ಎಚ್ಚೆತ್ತ ಬಿಬಿಬಿಎಂಪಿ ಅಧಿಕಾರಿಗಳು, ಅನಧಿಕೃತ ಅಂಗಡಿಗಳನ್ನು ತೆರವು ಮಾಡಿದ್ದರು.

ಕೆಲ ದಿನ ಸುಮ್ಮನಾಗಿದ್ದ ವ್ಯಾಪಾರಿಗಳು, ಕೋವಿಡ್ ಲಾಕ್‌ಡೌನ್ ನಂತರ ಪುನಃ ಸುರಂಗ ಮಾರ್ಗದಲ್ಲಿ ಅಕ್ರಮ ವ್ಯಾಪಾರ ಶುರು ಮಾಡಿದ್ದಾರೆ.

ಜನಸಂದಣಿ ಪ್ರದೇಶ: ‘ಬೆಂಗಳೂರಿಗೆ ಬರುವ ಬಹುತೇಕರು ಮೆಜೆಸ್ಟಿಕ್‌ಗೆ ಬಂದು ಹೋಗುತ್ತಾರೆ. ಈ ಪ್ರದೇಶದಲ್ಲಿ ಜನಸಂದಣಿ ಹೆಚ್ಚಿರುತ್ತದೆ. ಸುರಂಗ ಮಾರ್ಗ ಹಾಗೂ ಸುತ್ತಮುತ್ತ 400ಕ್ಕೂ ಹೆಚ್ಚು ವ್ಯಾಪಾರಿಗಳು ಅಕ್ರಮವಾಗಿ ಮಳಿಗೆಗಳನ್ನು ತೆರೆದಿದ್ದಾರೆ’ ಎಂದು ಬಸ್ ಪ್ರಯಾಣಿಕ ರಮೇಶ್ ಹೇಳಿದರು.

‘ಹೂವು, ಹಣ್ಣು, ಆಟಿಕೆ, ಬಟ್ಟೆ, ಮೊಬೈಲ್ ಬಿಡಿ ಭಾಗ... ಹೀಗೆ ಹಲವು ವಸ್ತುಗಳನ್ನು ವ್ಯಾಪಾರಿಗಳು ಮಾರುತ್ತಿದ್ದಾರೆ. ದುಬಾರಿ ಬೆಲೆ ನಿಗದಿಪಡಿಸುವ ವ್ಯಾಪಾರಿಗಳು, ಅವುಗಳ ಮಾರಾಟಕ್ಕಾಗಿ ಗ್ರಾಹಕರ ಜೊತೆ ಜಗಳಕ್ಕೂ ಇಳಿಯುತ್ತಿದ್ದಾರೆ. ಅಕ್ರಮ ವ್ಯಾಪಾರ ಪ್ರಶ್ನಿಸುವ ಸಾರ್ವಜನಿಕರ ಮೇಲೆ ಹಲ್ಲೆ ಹಾಗೂ ದೌರ್ಜನ್ಯ ಘಟನೆಗಳು ನಡೆಯುತ್ತಿವೆ’ ಎಂದು ಅವರು ಆರೋಪಿಸಿದರು.

ಕಣ್ಮುಚ್ಚಿ ಕುಳಿತ ಹಿರಿಯ ಅಧಿಕಾರಿಗಳು: ‘ಉಪ್ಪಾರಪೇಟೆ ಠಾಣೆ ವ್ಯಾಪ್ತಿಯಲ್ಲಿರುವ ಸುರಂಗ ಮಾರ್ಗದಲ್ಲಿ ಅಕ್ರಮ ವ್ಯಾಪಾರ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ ಹಾಗೂ ಬಿಬಿಎಂಪಿ ಹಿರಿಯ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ’ ಎಂದು ಬಸ್ ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದರು.

‘ಜನಸಾಮಾನ್ಯರು ನಿತ್ಯವೂ ಸುರಂಗ ಮಾರ್ಗ ಬಳಸುತ್ತಿದ್ದು, ಭಯದಲ್ಲೇ ಸಂಚರಿಸುವಂತಾಗಿದೆ. ಹವಾನಿಯಂತ್ರಿತ ಕಚೇರಿಯಲ್ಲಿ ಕುಳಿತುಕೊಳ್ಳುವ ಅಧಿಕಾರಿಗಳು, ಒಂದು ದಿನ ಸುರಂಗ ಮಾರ್ಗದಲ್ಲಿ ಸಂಚರಿಸಿದರೆ ಜನಸಾಮಾನ್ಯರ ಕಷ್ಟ ಅರ್ಥವಾಗುತ್ತದೆ’ ಎಂದು ಕಿಡಿಕಾಡಿದರು.

‘ಅಧಿಕಾರಿಗಳು, ಪೊಲೀಸರ ಕುಮ್ಮಕ್ಕು’

ಸುರಂಗ ಮಾರ್ಗದಲ್ಲಿ ಅಕ್ರಮ ವ್ಯಾಪಾರ ತಡೆಯುವ ಜವಾಬ್ದಾರಿಯನ್ನು ಬಿಬಿಎಂಪಿ ಅಧಿಕಾರಿಗಳು ಹಾಗೂ ಪೊಲೀಸರಿಗೆ ವಹಿಸಲಾಗಿದೆ. ಆದರೆ, ಕೆಲ ಅಧಿಕಾರಿಗಳು ಹಾಗೂ ಕೆಲ ಪೊಲೀಸರ ಕುಮ್ಮಕ್ಕಿನಿಂದ ಅಕ್ರಮ ವ್ಯಾಪಾರ ನಡೆಯುತ್ತಿರುವ ದೂರುಗಳಿವೆ.

‘ದಿನಕ್ಕೆ ₹ 100ರಿಂದ ₹ 500 ಮಾಮೂಲಿ ನಿಗದಿಪಡಿಸಲಾಗಿದೆ. ನಿತ್ಯವೂ ಕೆಲ ಅಧಿಕಾರಿಗಳು ಹಾಗೂ ಕೆಲ ಪೊಲೀಸರು, ಮಾಮೂಲಿ ಪಡೆದುಕೊಂಡು ಹೋಗುತ್ತಿದ್ದಾರೆ. ಇವರ ಲಂಚಗುಳಿತನದಿಂದ ವ್ಯಾಪಾರಿಗಳು ದರ್ಪ ಮೆರೆಯುತ್ತಿದ್ದಾರೆ’ ಎಂಬುದು ಸಾರ್ವಜನಿರ ಆರೋಪ.

‘ಬಿಬಿಎಂಪಿ ವ್ಯಾಪಾರಿಗಳು ಹಾಗೂ ಪೊಲೀಸರಿಗೆ ನಿತ್ಯವೂ ಮಾಮೂಲಿ ನೀಡುತ್ತೇವೆ. ಅವರೇ ನಮಗೆ ಕಾವಲು. ನಾವು ಯಾರಿಗೂ ಹೆದರುವುದಿಲ್ಲ’ ಎಂದು ವ್ಯಾಪಾರಿಗಳು ರಾಜಾರೋಷವಾಗಿ ಹೇಳುತ್ತಾರೆ. ವ್ಯಾಪಾರಿಗಳ ವರ್ತನೆ ಬಗ್ಗೆ ಕೆಲ ಸಾರ್ವಜನಿಕರು ಠಾಣೆಗೆ ಮಾಹಿತಿ ನೀಡುತ್ತಿದ್ದಾರೆ. ಆದರೆ, ಪೊಲೀಸರು ಕೈ ಬಿಸಿ ಮಾಡಿಕೊಂಡು ವ್ಯಾಪಾರಿಗಳ ಪರ ನಿಲ್ಲುತ್ತಿದ್ದಾರೆ’ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

‘ಕೊಳೆತ ಹಣ್ಣು: ವಕೀಲರ ಮೇಲೆ ಹಲ್ಲೆ’

ಸುರಂಗ ಮಾರ್ಗದಲ್ಲಿ ಕೊಳೆತ ಹಣ್ಣು ಮಾರಿದ್ದ ವ್ಯಾಪಾರಿಗಳು, ಅದನ್ನು ಪ್ರಶ್ನಿಸಿದ್ದಕ್ಕೆ ವಕೀಲರ ಮೇಲೆ ಹಲ್ಲೆ ಮಾಡಿದ್ದಾರೆ. ಚಾಕು ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘35 ವರ್ಷದ ವಕೀಲರೊಬ್ಬರು ದೂರು ನೀಡಿದ್ದಾರೆ. ಹಲ್ಲೆ, ಕೊಲೆ ಬೆದರಿಕೆ ಆರೋಪದಡಿ ಮೂವರು ವ್ಯಾಪಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಡಿ. 23ರಂದು ಊರಿಗೆ ಹೋಗಲು ಸುರಂಗ ಮಾರ್ಗದ ಮೂಲಕ ಬಸ್ ನಿಲ್ದಾಣದತ್ತ ಹೊರಟಿದ್ದೆ. ₹ 100 ಕೊಟ್ಟು ಹಣ್ಣು ಖರೀದಿಸಲು ಮುಂದಾಗಿದ್ದೆ. ಹಣ್ಣುಗಳನ್ನು ಕೈಯಲ್ಲಿ ಹಿಡಿದು ನೋಡಿದಾಗ ಕೊಳೆತಿದ್ದವು. ಹೀಗಾಗಿ, ಹಣ್ಣು ಬೇಡವೆಂದು ಹೇಳಿದ್ದೆ. ಅಷ್ಟಕ್ಕೆ ಗುಂಪು ಕಟ್ಟಿಕೊಂಡು ಬಂದ ವ್ಯಾಪಾರಿಗಳು, ನನ್ನ ಮೇಲೆ ಹಲ್ಲೆ ಮಾಡಿದರು. ಚಾಕು ತೋರಿಸಿ ಕೊಲೆ ಬೆದರಿಕೆಯೊಡ್ಡಿದರು’ ಎಂದೂ ದೂರಿನಲ್ಲಿ ಹೇಳಿದ್ದಾರೆ.

‘ಅಡ್ಡಗಟ್ಟಿ ಸುಲಿಗೆ’

‘ಸುರಂಗ ಮಾರ್ಗದಲ್ಲಿ ಸಂಚರಿಸುವ ಜನರನ್ನು ಅಡ್ಡಗಟ್ಟಿ ಸುಲಿಗೆ ಮಾಡುವವರೂ ಹೆಚ್ಚಾಗಿದ್ದಾರೆ. ದೂರದ ಊರುಗಳಿಂದ ಬರುವ ಜನರನ್ನೇ ಗುರಿಯಾಗಿಸಿಕೊಂಡು ಕೃತ್ಯ ಎಸಗುತ್ತಿದ್ದಾರೆ. ಇಂಥ ಸುಲಿಗೆ ಕೃತ್ಯಗಳಿಗೂ ಕಡಿವಾಣ ಬಿದ್ದಿಲ್ಲ’ ಎಂದು ಸಾರ್ವಜನಿಕರು ದೂರಿದರು.

‘2024ರ ಲೋಕಸಭಾ ಚುನಾವಣೆ: ರಾಹುಲ್ ಗಾಂಧಿ ಪ್ರಧಾನಿ ಅಭ್ಯರ್ಥಿ’

ನವದೆಹಲಿ (ಪಿಟಿಐ): ‘2024ರ ಲೋಕಸಭಾ ಚುನಾವಣೆಯಲ್ಲಿ ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಪ್ರಧಾನಿ ಅಭ್ಯರ್ಥಿಯಾಗಲಿದ್ದಾರೆ’ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಹಾಗೂ ಮಧ್ಯಪ್ರದೇಶದ ಮಾಜಿ ಮುಖ್ಯ ಮಂತ್ರಿ ಕಮಲ್‌ನಾಥ್ ಅವರು ಹೇಳಿದರು.

ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ಈ ವಿಷಯ ತಿಳಿಸಿದ್ದು, ‘ರಾಹುಲ್ ಅವರು ಅಧಿಕಾರಕ್ಕಾಗಿ ರಾಜಕಾರಣ ಮಾಡುತ್ತಿಲ್ಲ. ಈ ದೇಶದ ಸಾಮಾನ್ಯ ಜನರಿಗಾಗಿ ಅವರು ರಾಜಕಾರಣದಲ್ಲಿದ್ದಾರೆ’ ಎಂದು ಹೇಳಿದರು.

ನಿಧನ ವಾರ್ತೆ

ಸಿಐಡಿ ಡಿಐಜಿಪಿ ಆರ್. ದಿಲೀಪ್

ಬೆಂಗಳೂರು: ಸಿಐಡಿ ಡಿಐಜಿಪಿ ಆರ್. ದಿಲೀಪ್ (53) ಅವರು ಅನಾರೋಗ್ಯದಿಂದಾಗಿ ನಗರದಲ್ಲಿ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ದಿಲೀಪ್ ಅವರನ್ನು ವಾರದ ಹಿಂದೆಯಷ್ಟೇ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ನೀಡಲಾಗುತ್ತಿತ್ತು.

ಬಿ.ಇ ಪದವೀಧರರಾಗಿದ್ದ ದಿಲೀಪ್, 2005ರಲ್ಲಿ ಡಿವೈಎಸ್ಪಿ ಆಗಿ ಪೊಲೀಸ್ ಸೇವೆಗೆ ಸೇರಿದ್ದರು. ಧಾರವಾಡ, ಮೈಸೂರು, ಉತ್ತರ ಕನ್ನಡ ಜಿಲ್ಲೆಗಳ ಎಸ್ಪಿ ಹಾಗೂ ಹುಬ್ಬಳ್ಳಿ–ಧಾರವಾಡ ಕಮಿಷನರ್ ಆಗಿ ಕೆಲಸ ಮಾಡಿದ್ದರು.

‘ಬೆಂಗಳೂರು ಉತ್ತರಹಳ್ಳಿಯಲ್ಲಿರುವ ನಿವಾಸದಲ್ಲಿ ದಿಲೀಪ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಶನಿವಾರ ಮಧ್ಯಾಹ್ನ ಬನಶಂಕರಿ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು’ ಎಂದು ಕುಟುಂಬದವರು ತಿಳಿಸಿದ್ದಾರೆ.

ಬೆಂಗಳೂರು ರೇಸ್

ಫಾರೆಸ್ಟ್ ಫ್ಲೇಮ್ ಗೆಲ್ಲುವ ನಿರೀಕ್ಷೆ

ನ್ಯೂ ಇಯರ್ ಈವ್ ಕಪ್ (ಗ್ರೇಡ್-3) ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫಾರೆಸ್ಟ್ ಫ್ಲೇಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸೂಫಿಯಾ 9, ಮೇಬ್ಯಾಚ್ 1, ಲಿಮಿಟೆಡ್ ಎಡಿಷನ್ 5
2ನೇ ರೇಸ್: ಏರ್ ಬ್ಲಾಸ್ಟ್ 1, ದಿ ಒಮೆಗಾ ಮ್ಯಾನ್ 2, ಕ್ಯಾಪ್ರಿ ಗರ್ಲ್ 3
3ನೇ ರೇಸ್: ನಾಟಿ ಚಾರ್ಮರ್ 1, ಅವಾಂಡೇಲ್ 8, ರೋಮನ್ ಸ್ಪಿರಿಟ್ 4
4ನೇ ರೇಸ್: ಮೈ ಸಾಲಿಟೇರ್ 6, ಮಾಂಟೆಲೆನಾ 1, ಬ್ರೀಜ್ ಬ್ಲಸ್ಟರ್ 5
5ನೇ ರೇಸ್: ಅಲಾಸ್ಕನ್ ಜ್ಯುವೆಲ್ 5, ಇಂಗ್ಲಿಷ್ ಬೇ 2, ಶೀರ್ ಬ್ಲಿಸ್ 6
6ನೇ ರೇಸ್: ಫಾರೆಸ್ಟ್ ಫ್ಲೇಮ್ 1, 2, ಸೀಝ್ ಪೆರಿಲಸ್ ಪ್ರೈಸ್‌ಲೆಸ್ ಗೋಲ್ಡ್ 4,
7ನೇ ರೇಸ್: ಟ್ರ್ಯಾಂಕ್ವಿಲೊ 1, ಸ್ಪ್ಲಂಡಿಡೊ 2, ಡಿಸ್‌ರಪ್ಟರ್ 5
8ನೇ ರೇಸ್: ಸೂಪರ್ ಕೈಂಡ್ 2, ಜೊಕ್ಷಾನ್ 7, ಡೊಮಿನ 4

ಉತ್ತಮ ಬೆಟ್: ನಾಟಿ ಚಾರ್ಮರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ವಸೂಲಿ: ‘ವರದಿ ಆಧರಿಸಿ ಕ್ರಮ’

ಬೆಂಗಳೂರು: ‘ವಿ.ವಿ. ಪುರ ಠಾಣೆಯ ಪಿಎಸ್‌ಐ ಸೇರಿ ಮೂವರ ವಿರುದ್ಧ ದೆಹಲಿಯಲ್ಲಿ ದಾಖಲಾಗಿರುವ ಪ್ರಕರಣದ ಬಗ್ಗೆ ವರದಿ ಪಡೆದು ಮುಂದಿನ ಕ್ರಮ ಜರುಗಿಸಲಾಗುವುದು’ ಎಂದು ದಕ್ಷಿಣ ವಿಭಾಗದ ಡಿಸಿಪಿ ಪಿ. ಕೃಷ್ಣಕಾಂತ್ ತಿಳಿಸಿದರು.

‘ಸಿ.ಸಿ.ಟಿ.ವಿ ಕ್ಯಾಮೆರಾ ವ್ಯಾಪಾರಿ ಪಂಕಜ್ ಜೈನ್ ಅವರನ್ನು ಬೆದರಿಸಿದ್ದ ಮೂವರು, ₹25 ಲಕ್ಷ ವಸೂಲಿ ಮಾಡಿದ್ದಾರೆ’ ಎಂಬ ಆರೋಪದಡಿ ದೆಹಲಿ ಸೀಮಾಪುರಿ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಸಂಬಂಧಪಟ್ಟ ಠಾಣೆ ಪೊಲೀಸರು ತನಿಖೆ ಮಾಡುತ್ತಾರೆ. ಸದ್ಯಕ್ಕೆ ಹೆಚ್ಚು ಮಾಹಿತಿ ಲಭ್ಯವಿಲ್ಲ’ ಎಂದರು.

ಮಲಬಾರ್ ಗೋಲ್ಡ್ ಮಳಿಗೆ ಉದ್ಘಾಟನೆ

ಬೆಂಗಳೂರು: ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯು ಬೆಂಗಳೂರಿನ ಕನಕಪುರ ರಸ್ತೆಯ ಫೋರಂ ಮಾಲ್‌ನಲ್ಲಿ ಹೊಸ ಮಳಿಗೆಯನ್ನು ಆರಂಭಿಸಿದೆ. ಇದು ಕಂಪನಿಯು ಬೆಂಗಳೂರಿನಲ್ಲಿ ಆರಂಭಿ ಸಿರುವ 14ನೆಯ ಮತ್ತು ರಾಜ್ಯದಲ್ಲಿ 30ನೇ ಮಳಿಗೆ ಇದಾಗಿದೆ.

ಐಜಿಪಿ ಡಿ. ರೂಪಾ ಅವರು ಮಳಿಗೆಯನ್ನು ಉದ್ಘಾಟಿಸಿದರು. ಕಂಪನಿಯ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು ಈ ಸಂದರ್ಭದಲ್ಲಿ ಹಾಜರಿದ್ದರು ಎಂದು ಪ್ರಕಟಣೆ ತಿಳಿಸಿದೆ. ‘ಗ್ರಾಹಕರು ನೀಡುತ್ತಿರುವ ಬೆಂಬಲದಿಂದಾಗಿ ವಹಿವಾಟು ವಿಸ್ತರಿಸಲು, ಸೇವೆಗಳನ್ನು ಸುಧಾರಿಸಿಕೊಳ್ಳಲು ನಮಗೆ ಸಾಧ್ಯವಾಗಿದೆ. ಪ್ರತಿಯೊಂದು ಸಂದರ್ಭಕ್ಕೂ ಒಪ್ಪು ವಂತಹ ಆಭರಣಗಳ ಸಂಗ್ರಹವು ನಮ್ಮ ಗ್ರಾಹಕರಿಗೆ ಇಷ್ಟವಾಗುವ ವಿಶ್ವಾಸ ಇದೆ’ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹಮದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮೆರಿಕ, ಸಿಂಗಪುರದ 2 ಬಯೊಮೆಡಿಕಲ್ ಕಂಪನಿಗಳಿಂದ ಬೃಹತ್ ಹಗರಣ • ತನಿಖೆಗೆ ವಿಜ್ಞಾನಿಗಳ ಒತ್ತಾಯ

15 ಸಾವಿರ ಭಾರತೀಯರ ವಂಶವಾಹಿ ದತ್ತಾಂಶ ವಿಶ್ಲೇಷಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೆರಿಕ ಮತ್ತು ಸಿಂಗಪುರ ಮೂಲದ ಎರಡು ಬಯೊಮೆಡಿಕಲ್ ಕಂಪನಿಗಳು ಕೇಂದ್ರ ಸರ್ಕಾರದ ಪರಿಶೀಲನಾ ಸಮಿತಿಯ ಕಡ್ಡಾಯ ಅನುಮತಿ ಪಡೆಯದೇ 15 ಸಾವಿರಕ್ಕೂ ಹೆಚ್ಚು ಭಾರತೀಯರ ವಂಶವಾಹಿ ವಿಶ್ಲೇಷಣೆಯ ದತ್ತಾಂಶಗಳ ಅಧ್ಯಯನ (ಜೆನೆಟಿಕ್ ಡೇಟಾ ಜಿನೊಮಿಕ್ ಸ್ಟಡಿ) ಅನಧಿಕೃತವಾಗಿ ನಡೆಸಿವೆ. ಇದೊಂದು ಬಹುದೊಡ್ಡ ಹಗರಣವೆಂದು ಭಾರತೀಯ ವಿಜ್ಞಾನಿಗಳ ಗುಂಪೊಂದು ಗಂಭೀರ ಆರೋಪ ಮಾಡಿದ್ದು, ಈ ಹಗರಣದ ತನಿಖೆಗೆ ಒತ್ತಾಯಿಸಿದೆ.

ನ್ಯೂಯಾರ್ಕ್ ಮೂಲದ ರೆಜೆನೆರಾನ್ ಮತ್ತು ಸಿಂಗಪುರದ ಗ್ಲೋಬಲ್ ಜೀನ್ ಕಾರ್ಪೊರೇಷನ್ (ಅನುವಾ) ಕಂಪನಿಗಳು, ಇದುವರೆಗೆ ಸಂಶೋಧನೆ ಮಾಡದೇ ಇದ್ದ ಭಾರತದ ಕೆಲ ಜನ ಸಮುದಾಯಗಳ ವಂಶವಾಹಿ ದತ್ತಾಂಶಗಳ ಆಳ ಅಧ್ಯಯನ ನಡೆಸಿರುವ ಸಂಶೋಧನಾ ವರದಿಯನ್ನುಅಕ್ಟೋಬರ್ ಅಂತ್ಯದಲ್ಲಿ ಲಾಸ್ ಏಂಜಲೀಸ್‌ನಲ್ಲಿ ನಡೆದ ವೈಜ್ಞಾನಿಕ ಸಮ್ಮೇಳನದಲ್ಲಿ ಮಂಡಿಸಲಾಗಿದೆ.

ರಾಜಸ್ಥಾನ, ಮಹಾರಾಷ್ಟ್ರ, ಉತ್ತರ ಪ್ರದೇಶ, ಗುಜರಾತ್ ಮತ್ತು ಕರ್ನಾಟಕದ ಜನಸಮುದಾಯಗಳಿಂದ ಸಂಗ್ರಹಿಸಿರುವ ಭಾರತೀಯರ ಅತಿದೊಡ್ಡ ಆನುವಂಶಿಕ ಅಧ್ಯಯನವೆಂದು ಇದನ್ನು ಸಂಶೋಧಕರು ಹೇಳಿಕೊಂಡಿದ್ದಾರೆ.

ಮಾಹಿತಿ ಹಕ್ಕಿನಡಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಕೇಂದ್ರ ಸರ್ಕಾರ, ಸಂಶೋಧನೆಗಾಗಿ ಭಾರತೀಯರ ವಂಶವಾಹಿ ದತ್ತಾಂಶ ಸಂಗ್ರಹಿಸಲು ಎರಡು ಕಂಪನಿಗಳಿಗೆ ಅನುಮತಿ ನೀಡಿರುವುದನ್ನು ಸ್ಪಷ್ಟವಾಗಿ ನಿರಾಕರಿಸಿದೆ.

ಭಾರತೀಯ ಮಾನವ ಜೈವಿಕ ವಸ್ತುಗಳನ್ನು ಒಳಗೊಂಡ ಪ್ರತಿ ವಿದೇಶಿ ಯೋಜನೆಗೆ ಭಾರತೀಯ ಸಂಶೋಧನಾ ಸಂಸ್ಥೆಗಳ ಪಾಲ್ಗೊಳ್ಳುವಿಕೆ ಇರಬೇಕು. ಅಲ್ಲದೆ, ನಿಯಂತ್ರಕ ಸಮಿತಿಯಾದ ಆರೋಗ್ಯ ಸಚಿವಾಲಯದ ಪರಿಶೀಲನಾ ಸಮಿತಿಯ (ಎಚ್‌ಎಂಎಸ್‌ಸಿ) ಅನುಮತಿ ಪಡೆಯುವುದು ಕಡ್ಡಾಯ. ಈ ಸಮಿತಿಯು ಜೀನೋಮಿಕ್ಸ್ ದತ್ತಾಂಶ ಸೇರಿ ಭಾರತೀಯ ಜೈವಿಕ ಮಾದರಿಗಳ ದುರುಪಯೋಗ ತಡೆಯುತ್ತದೆ.

‘ಅವರು ಮಾದರಿಗಳನ್ನು ಹೇಗೆ ಸಂಗ್ರಹಿಸಿದರು, ಯಾರಿಂದ ಅನುಮತಿ ಪಡೆದರು ಎಂಬುದು ತಿಳಿದಿಲ್ಲ. ಅಂತಹ ಸಂಶೋಧನೆಗಳ ವಾಣಿಜ್ಯ ಉದ್ದೇಶದ ಮಾನವ ಮಾದರಿಗಳನ್ನು ಒಳಗೊಂಡ ಎಲ್ಲ ಭಾರತೀಯ ಆನುವಂಶಿಕ ಸಂಶೋಧನೆಗೆ ಮೇಲ್ವಿಚಾರಣೆಯ ಅಗತ್ಯವಿದೆ’ ಎಂದು ದೆಹಲಿಯ ಜೀನೋಮಿಕ್ಸ್ ಮತ್ತು ಇಂಟಿಗ್ರೇಟಿವ್ ಬಯಾಲಜಿಯ ಹಿರಿಯ ವಿಜ್ಞಾನಿ ವಿನೋದ್ ಸ್ಕೇರಿಯಾ ‘ಪ್ರಜಾವಾಣಿ’ಗೆ ತಿಳಿಸಿದರು.

ಹೃದಯ ಸಂಬಂಧಿ, ವರ್ಟಿಗೊದಂತಹ ಕಾಯಿಲೆಗಳಿಗೆ ನಿಖರ ಕಾರಣಗಳನ್ನು ತಿಳಿಯಲು ಅಧ್ಯಯನ ನೆರವಾಗಲಿದೆ ಎಂದು ಅಧ್ಯಯನ ತಂಡದಲ್ಲಿದ್ದ ವೀರ ಎಂ.ರಾಜಗೋಪಾಲ್ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

‘ಯಾವುದೇ ಮಾಹಿತಿಯಿಲ್ಲ’

‘ರೆಜೆನೆರಾನ್ ಜೆನೆಟಿಕ್ಸ್ ಅಥವಾ ಗ್ಲೋಬಲ್ ಜೀನ್ ಕಾರ್ಪ್ ಪ್ರೈವೆಟ್ ಲಿಮಿಟೆಡ್‌ನಿಂದ ಯಾವುದೇ ಪ್ರಸ್ತಾವ ಎಚ್‌ಎಂಎಸ್‌ಸಿಗೆ ಬಂದಿಲ್ಲ. ಎಚ್‌ಎಂಎಸ್‌ಸಿ ಅಥವಾ ಐಸಿಎಂಆರ್‌ಗೆ ಈ ಅಧ್ಯಯನದ ಬಗ್ಗೆ ಯಾವುದೇ ಮಾಹಿತಿಯೂ ಇಲ್ಲ’ ಎಂದು ಎಚ್‌ಎಂಎಸ್‌ಸಿಯ ತಾಂತ್ರಿಕ ಭಾಗವಾದ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯು ಆರ್‌ಟಿಐ ಅಡಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದೆ.

ಹರಿಹರದಲ್ಲಿ 14, 15ರಂದು ಆಯೋಜನೆ • ಮೀಸಲಾತಿ ಸಾಧಕ–ಬಾಧಕ ಬಗ್ಗೆ ಅಂದೇ ತೀರ್ಮಾನ– ವಚನಾನಂದ ಸ್ವಾಮೀಜಿ

ಮೀಸಲಾತಿ ಜಾಗೃತಿ ಸಮಾವೇಶವಾಗಿ ಹರಜಾತ್ರೆ

ಪ್ರಜಾವಾಣಿ ವಾರ್ತೆ

ಹರಿಹರ: 'ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಜನವರಿ 14, 15ರಂದು ಹರಜಾತ್ರೆ ನಡೆಯಲಿದ್ದು, ಈ ಬಾರಿ 'ಬೃಹತ್ ಮೀಸಲಾತಿ ಜನಜಾಗೃತಿ ಸಮಾವೇಶ'ವಾಗಿ ಆಯೋಜಿಸಲಾಗುವುದು' ಎಂದು ಪಂಚಮಸಾಲಿ ಪೀಠಾಧ್ಯಕ್ಷರಾದ ವಚನಾನಂದ ಸ್ವಾಮೀಜಿ ಹೇಳಿದರು.

'ಲಿಂಗಾಯತ ಪಂಚಮಸಾಲಿ ಸಮುದಾಯದವರಿಗೆ ರಾಜ್ಯದಲ್ಲಿ 2ಎ ಹಾಗೂ ಕೇಂದ್ರದಲ್ಲಿ ಇತರೆ ಹಿಂದುಳಿದ ವರ್ಗದ ಮೀಸಲಾತಿ ದೊರಕಿಸಲು ಪೀಠದಿಂದ ಹೋರಾಟ ನಡೆಸುತ್ತಿರುವುದರ ಭಾಗವಾಗಿ ಸಮಾವೇಶ ನಡೆಯಲಿದೆ' ಎಂದು ತಿಳಿಸಿದರು.

'ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಪಂಚಮಸಾಲಿ ಸಮುದಾಯ ಸೇರಬೇಕೆ ನಮಗೆ ಮುಖ್ಯ. ಈ ಬಗ್ಗೆ ಈಗಾಗಲೇ ಒತ್ತಾಯಿಸಿದ್ದೇವೆ' ಎಂದು ಹೇಳಿದರು.

ಸಮುದಾಯವನ್ನು ಮೀಸಲಾತಿ ಪ್ರವರ್ಗ 3ಬಿಯಿಂದ 2ಡಿಗೆ ಸೇರಿಸುವ ಸರ್ಕಾರದ ನಿರ್ಧಾರವನ್ನು ಸದ್ಯ ಸ್ವಾಗತಿಸುವುದೂ ಇಲ್ಲ, ಅದಕ್ಕೆ ವಿರೋಧ ವ್ಯಕ್ತಪಡಿಸುವುದಿಲ್ಲ. ಕಾನೂನು ಸಲಹೆಗಾರರು, ಸಮುದಾಯದ ಮುಖಂಡರೊಂದಿಗೆ ಸಾಧಕ-ಬಾಧಕ ಚರ್ಚಿಸಿ ಹರಜಾತ್ರೆಯಲ್ಲಿ ಈ ಬಗ್ಗೆ ತೀರ್ಮಾನವನ್ನು ಹೇಳುತ್ತೇವೆ' ಎಂದು ತಿಳಿಸಿದರು.

'ಹರಜಾತ್ರೆಯಲ್ಲಿ ರೈತರ ಯುವಜನ ಸಮಾವೇಶ ಹಾಗೂ 5ನೇ ಪೀಠಾರೋಹಣ ಕಾರ್ಯಕ್ರಮ ನಡೆಯಲಿದೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಮೀಸಲಾತಿ ತಂತ್ರ' (ಹರಿಹರ ವರದಿ): 'ರಾಜಕಾರಣಿಗಳು ಜನರನ್ನು ಸೆಳೆಯಲು ಮೀಸಲಾತಿ ತಂತ್ರ ಅನುಸರಿಸುತ್ತಿದ್ದು, ಇದು ಎಷ್ಟು ಸರಿ' ಎಂದು ರಂಭಾಪುರಿ ಗುರುಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಒಕ್ಕಲಿಗರಿಗೆ ಅನ್ಯಾಯವಾಗದಂತೆ ಮೀಸಲಾತಿ ಸಿಗಬೇಕು. ಎಲ್ಲ ಧರ್ಮ, ಜಾತಿಯಲ್ಲೂ ಬಡವರಿದ್ದಾರೆ. ಅವರನ್ನು ಪರಿಗಣಿಸಿ ಮೀಸಲಾತಿ ನೀಡಬೇಕು' ಎಂದರು.

ರಂಗನ ಮಂಗ ಮಾಡಿದ್ದಾರೆ: ಎಚ್‌ಡಿಕೆ ವ್ಯಂಗ್ಯ

ತುಮಕೂರು: ಒಕ್ಕಲಿಗ, ಲಿಂಗಾಯತ ಸಮುದಾಯದ ಮೀಸಲಾತಿ ಸಂಬಂಧ ಪ್ರವರ್ಗ ಬದಲಾವಣೆ ಮೂಲಕ 'ರಂಗನ ಮಂಗ ಮಾಡಲು' ಬಿಜೆಪಿಯವರು ಹೊರಟಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಶುಕ್ರವಾರ ವ್ಯಂಗ್ಯವಾಡಿದರು.

ಸುದ್ದಿಗೋಷ್ಠಿಯಲ್ಲಿ ಅವರು, 'ಪ್ರವರ್ಗ ಬದಲಾವಣೆಯಿಂದ ಎರಡೂ ಸಮುದಾಯಗಳಿಗೆ ಪ್ರಯೋಜನವಿಲ್ಲ. ಮೀಸಲಾತಿ ಪ್ರಮಾಣದಲ್ಲಿ ಹೆಚ್ಚಳ ಆಗುವುದಿಲ್ಲ. ಪ್ರವರ್ಗ ಬದಲಾವಣೆಯೇ ಸಾಧನೆ. ಈವರೆಗೆ ಮೂಗಿಗೆ ತುಪ್ಪ ಹಚ್ಚುತ್ತಿದ್ದವರು, ಈಗ ಹಣೆಗೆ ಹಚ್ಚಿದ್ದಾರೆ. ಇದನ್ನು ಪ್ರಚಾರಕ್ಕಾಗಿ ಮಾಡಿದ್ದಾರೆ' ಎಂದು ಆರೋಪಿಸಿದರು.

'ನಾವು ಮೀಸಲಾತಿ ಕೊಟ್ಟಿದ್ದೇವೆ; ಪ್ರವರ್ಗ ಬದಲಾವಣೆ ಮಾಡಿದ್ದೇವೆ ಎಂಬ ಭಾವನೆ ಮೂಡಿಸಿ, ಚುನಾವಣೆ ಸಮಯದಲ್ಲಿ ಜನರನ್ನು ಮರುಳು ಮಾಡುವುದಾಗಿದೆ' ಎಂದು ಟೀಕಿಸಿದರು.

ಬಲಿಜ ಸಮುದಾಯಕ್ಕೆ ಹೊಸ ಪ್ರವರ್ಗ: ಆಕ್ರೋಶ

ಬೆಂಗಳೂರು: ಬಲಿಜ ಸಮುದಾಯಕ್ಕೆ ಪ್ರವರ್ಗ 2'ಎ' ಮೀಸಲಾತಿ ಕಲ್ಪಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದರೂ, ರಾಜ್ಯ ಸರ್ಕಾರವು ಸಮುದಾಯವನ್ನು ಹೊಸ ಪ್ರವರ್ಗಕ್ಕೆ ಸೇರಿಸಿ ಅನ್ಯಾಯ ಎಸಗಿದೆ ಎಂದು ರಾಜ್ಯ ಸಮಗ್ರ ಬಲಿಜ ವೇದಿಕೆ ಆರೋಪಿಸಿದೆ.

ಪ್ರವರ್ಗ 2'ಎ' ಅನ್ನು ಶಿಕ್ಷಣದಲ್ಲಿ ಉಳಿಸಿ, ಉದ್ಯೋಗ ಹಾಗೂ ರಾಜಕೀಯದಲ್ಲಿನ ಮೀಸಲಾತಿಯನ್ನು 3'ಎ'ಯಿಂದ ಹೊಸದಾಗಿ ಮಾಡಿರುವ ಪ್ರವರ್ಗ 2'ಸಿ' ಅಡಿಯಲ್ಲಿ ಸೇರಿಸಲಾಗಿದೆ. ಇದರಿಂದ ಸಮುದಾಯದಲ್ಲಿ ಯಾವ ಬದಲಾವಣೆ ಆಗುವುದಿಲ್ಲ ಎಂದು ವೇದಿಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ರಮೇಶ್ ದೂರಿದ್ದಾರೆ.

ಮೀಸಲಾತಿ ಹೆಚ್ಚಳ ಚುನಾವಣಾ ಗಿಮಿಕ್: ಸಿದ್ದರಾಮಯ್ಯ ಟೀಕೆ

ದಾವಣಗೆರೆ: 'ಲಿಂಗಾಯತ ಹಾಗೂ ಒಕ್ಕಲಿಗರಿಗೆ ಮೀಸಲಾತಿ ಸಂಬಂಧ ಸರ್ಕಾರದ ಮಟ್ಟದಲ್ಲೇ ಗೊಂದಲಗಳಿವೆ. ಇನ್ನೂ ವಿವರ ಸಿಕ್ಕಿಲ್ಲ. ಇದು ಬಿಜೆಪಿಯ ಚುನಾವಣಾ ಗಿಮಿಕ್' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶುಕ್ರವಾರ ದೂರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸರ್ಕಾರ ಈ ಸಮುದಾಯಗಳಿಗೆ ಅಧಿಕವಾಗಿ ಹಿಂದುಳಿದ (ಇಡಬ್ಲ್ಯುಎಸ್) ವಿಭಾಗದಲ್ಲಿ ಮೀಸಲಾತಿ ನೀಡಲಿದೆಯೋ ಅಥವಾ ಸಾಮಾನ್ಯ ವರ್ಗದಲ್ಲಿನ ಪಾಲನ್ನು ನೀಡಲಿದೆಯೋ ಎಂಬುದು ಇನ್ನೂ ಸ್ಪಷ್ಟವಾಗಿ ಉಳಿದಿದೆ' ಎಂದರು.

'ತಪ್ಪು ದಾರಿಗೆಳೆಯುತ್ತಿರುವ ಸರ್ಕಾರ'

'ಮೀಸಲಾತಿ ಕೇಳುತ್ತಿರುವ ಸಮುದಾಯದವರಿಗೆ ಬಿಜೆಪಿ ಸರ್ಕಾರ ಕಣ್ಣೊರೆಸುವ ತಂತ್ರದ ಮೂಲಕ, ತಪ್ಪು ದಾರಿಗೆ ಎಳೆಯುತ್ತಿದೆ. ಪರಿಶಿಷ್ಟ ವರ್ಗದವರ ಮೀಸಲಾತಿ ಹೆಚ್ಚಳದ ನಿರ್ಣಯವನ್ನು ಇದುವರೆಗೆ ಸಂವಿಧಾನದ ಶೆಡ್ಯೂಲ್‌ಗೆ ಸೇರಿಸಿಲ್ಲ. ಈ ಮೀಸಲಾತಿ ನಿರ್ಣಯದೊಂದಿಗೆ ರಾಜ್ಯವನ್ನು ವಿವಾದದಲ್ಲಿ ಕೂಡಿಸಿಕೊಳ್ಳುತ್ತಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದರು.

'ಮೀಸಲಾತಿ ಘೋಷಣೆ ವಿಷಯವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸುದ್ದಿಗೋಷ್ಠಿಯಲ್ಲಿ ಪ್ರಕಟಿಸಬೇಕಾಗಿತ್ತು. ಆದರೆ, ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಅವರಿಂದ ಸುದ್ದಿಗೋಷ್ಠಿ ಮಾಡಿಸಿದರು. ಇದು ಅವರಲ್ಲಿಯೇ ಒಮ್ಮತವಿಲ್ಲ ಎನ್ನುವುದನ್ನು ತೋರಿಸುತ್ತದೆ' ಎಂದು ವ್ಯಂಗ್ಯವಾಡಿದರು.

ಸುದ್ದಿ 2 ನಿಮಿಷ

₹ 1.25 ಕೋಟಿ ದುರ್ಬಳಕೆ: ಸಿಪೆಟ್ ತಂತ್ರಜ್ಞ, ಪತ್ನಿಗೆ ಜೈಲು

ಬೆಂಗಳೂರು: ಮೈಸೂರಿನ ಕೇಂದ್ರೀಯ ಪ್ಲಾಸ್ಟಿಕ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯ (ಸಿಪೆಟ್) ₹ 1.25 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡು, ದುರ್ಬಳಕೆ ಮಾಡಿದ ಪ್ರಕರಣದಲ್ಲಿ ಸಂಸ್ಥೆಯ ಹಿಂದಿನ ತಾಂತ್ರಿಕ ಸಿಬ್ಬಂದಿ ಎಚ್.ಎನ್. ಅರವಿಂದ್ ಮತ್ತು ಅವರ ಪತ್ನಿ ಬಿನು ಅರವಿಂದ್ ಅವರಿಗೆ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಪ್ರಕರಣಗಳ ವಿಶೇಷ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿದೆ.

ಮೈಸೂರಿನ ಸಿಪೆಟ್‌ನಲ್ಲಿ ಅರವಿಂದ್ ಗ್ರೇಡ್–2 ತಂತ್ರಜ್ಞರಾಗಿದ್ದರು. ಈ ಅವಧಿಯಲ್ಲಿ ಸಂಸ್ಥೆಯ ₹ 1.25 ಕೋಟಿಯನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡು ಅಕ್ರಮ ಎಸಗಿದ್ದರು. ಈ ಸಂಬಂಧ ಸಿಬಿಐನ ಬೆಂಗಳೂರು ಭ್ರಷ್ಟಾಚಾರ ನಿಗ್ರಹ ದಳವು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಿತ್ತು. ಸಿಬಿಐ, ಅರವಿಂದ್ ದಂಪತಿ ವಿರುದ್ಧ ನ್ಯಾಯಾಲಯಕ್ಕೆ ಆರೋಪಪಟ್ಟಿಯನ್ನೂ ಸಲ್ಲಿಸಿತ್ತು.

ಸಿಬಿಐ ಸಲ್ಲಿಸಿದ್ದ ಆರೋಪಪಟ್ಟಿ ಆಧಾರದಲ್ಲಿ ಜಾರಿ ನಿರ್ದೇಶನಾಲಯವು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ಪ್ರಕರಣ ದಾಖಲಿಸಿತ್ತು. ತನಿಖೆ ಬಳಿಕ ಅರವಿಂದ್ ಮತ್ತು ಬಿನು ವಿರುದ್ಧ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿಯನ್ನೂ ಸಲ್ಲಿಸಿತ್ತು. ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಆದೇಶ ಪ್ರಕಟಿಸಿರುವ ವಿಶೇಷ ನ್ಯಾಯಾಲಯ, ಅರವಿಂದ್ ಮತ್ತು ಬಿನು ಅಪರಾಧಿಗಳು ಎಂದು ಘೋಷಿಸಿದೆ.

ಅರವಿಂದ್‌ಗೆ ನಾಲ್ಕು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 1 ಲಕ್ಷ ದಂಡ ವಿಧಿಸಲಾಗಿದೆ. ಬಿನು ಅರವಿಂದ್‌ಗೆ ಮೂರು ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 50,000 ದಂಡ ವಿಧಿಸಲಾಗಿದೆ. ಅಪರಾಧಿಗಳಿಂದ ಈಗಾಗಲೇ ವಶಕ್ಕೆ ಪಡೆದಿದ್ದ ₹ 24 ಲಕ್ಷವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ನ್ಯಾಯಾಲಯ ಆದೇಶ ಹೊರಡಿಸಿದೆ.

2ರಿಂದ ಸಮಾಜ ಪರಿವರ್ತನಾ ಯಾತ್ರೆ

ಬೆಂಗಳೂರು: ಜನಾಂದೋಲನ ಮಹಾಮೈತ್ರಿ ಸಂಘಟನೆಯು ಸಿಟಿಜನ್ ಫಾರ್ ಡೆಮಾಕ್ರಸಿ, ಜನತಂತ್ರ ಪ್ರಯೋಗ ಶಾಲೆ ಸಹಯೋಗದಲ್ಲಿ ಜ. 2ರಿಂದ 11ರವರೆಗೆ ಕೂಡಲ ಸಂಗಮದಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದವರೆಗೆ ಸಮಾಜ ಪರಿವರ್ತನಾ ಸತ್ಯಾಗ್ರಹ ಯಾತ್ರೆ ಹಮ್ಮಿಕೊಂಡಿದೆ.

ಪ್ರಧಾನ ಜಾಥಾದ ಜತೆಗೆ, ಜ.6ರಂದು ಮಂಗಳೂರಿನಿಂದ ಭಾವೈಕ್ಯ ಜಾಥಾ, ಜ.7ರಂದು ಹಾವೇರಿ ಜಿಲ್ಲೆ ಕುಸನೂರಿನಿಂದ ಸಾಮೂಹಿಕ ಭೂಮಿ ಸಂರಕ್ಷಣಾ ಕೇಂದ್ರಿತ ಜಾಥಾ, ಜ. 10ರಂದು ಕೋಲಾರದಿಂದ ಸಂವಿಧಾನ ರಕ್ಷಣೆ ಕೇಂದ್ರಿತ ಜಾಥಾ ಹೊರಡಲಿವೆ. ಎಲ್ಲವೂ 11ರಂದು ಬೆಂಗಳೂರಿನಲ್ಲಿ ಸಮಾಗಮಗೊಳ್ಳಲಿವೆ ಎಂದು ಸಂಘಟನೆಯ ಮುಖಂಡರಾದ ಎಸ್. ಆರ್.ಹಿರೇಮಠ, ಬಡಗಲಪುರ ನಾಗೇಂದ್ರ, ಪಿ.ಆರ್.ಎಸ್.ಮಣಿ, ಎಚ್. ವಿ.ದಿವಾಕರ್ ಮಾಹಿತಿ ನೀಡಿದ್ದಾರೆ.

ಕೂಡಲ ಸಂಗಮದಿಂದ ಹೊರಡುವ ಪ್ರಧಾನ ಯಾತ್ರೆ ಬಾಗಲಕೋಟೆ, ನರಗುಂದ, ನವಲಗುಂದ, ಧಾರವಾಡ, ಗದಗ, ಹಾವೇರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು ಮಾರ್ಗದ ಮೂಲಕ ಸಾಗಲಿದೆ. ಮಂಗಳೂರಿನಿಂದ ಹೊರಡುವ ಜಾಥಾ ಮಡಿಕೇರಿ, ಮೈಸೂರು ಮೂಲಕ ಬೆಂಗಳೂರು ಸೇರಲಿದೆ. ಹಾವೇರಿ ಜಿಲ್ಲೆ ಕುಸನೂರಿನಿಂದ ಹೊರಡುವ ಜಾಥಾ ದಾವಣಗೆರೆ, ಚಿತ್ರದುರ್ಗ ಮೂಲಕ ಸಾಗಲಿದೆ. ಕೋಲಾರದಿಂದ ಹೊರಡುವ ಜಾಥಾ ನೇರವಾಗಿ ಬೆಂಗಳೂರು ತಲುಪಲಿದೆ.

ಯಾತ್ರೆಗಳು ಸಾಗುವ ಮಾರ್ಗದ ಮಧ್ಯೆ ಸಿಗುವ ಜಿಲ್ಲೆಗಳ ಜಿಲ್ಲಾಧಿಕಾರಿ ಕಚೇರಿ ಮುಂದೆ ಸತ್ಯಾಗ್ರಹ, ವಿಚಾರ ಸಂಕಿರಣ, ಪ್ರಭಾತ್‌ಫೇರಿ, ಬೀದಿ ಬದಿ ಸಭೆಗಳನ್ನು ನಡೆಸುತ್ತಾ ಸಾಗಲಿವೆ.

'2ಎ' ಬೇಡಿಕೆ: ಜನವರಿ ಮೊದಲ ವಾರಕ್ಕೆ ವಿಚಾರಣೆ ಮುಂದೂಡಿಕೆ

ಬೆಂಗಳೂರು: 'ಪಂಚಮಸಾಲಿ ಸಮುದಾಯಕ್ಕೆ 2-ಎ ಮೀಸಲಾತಿ ನೀಡಬಾರದು' ಎಂದು ಕೋರಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆಯನ್ನು ಹೈಕೋರ್ಟ್ ಜನವರಿ ಮೊದಲ ವಾರಕ್ಕೆ ಮುಂದೂಡಿತು. ಬೆಂಗಳೂರಿನ ಜ್ಞಾನಭಾರತಿಯ ಮೃತ್ಯುಂಜಯ ನಗರದ ನಿವಾಸಿ ಡಿ.ಜಿ ರಾಘವೇಂದ್ರ ಬಿನ್ ಸೂರ್ಯ ದೇವಾಡಿಗ ಎಂಬುವರು ಸಲ್ಲಿಸಿರುವ ಪಿಐಎಲ್‌ನ ವಿಚಾರಣೆಯನ್ನು ನ್ಯಾಯಮೂರ್ತಿ ಪಿ.ಎಂ. ನವಾಜ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ನಡೆಸಿತು.

'ಪಂಚಮಸಾಲಿ ಸಮುದಾಯಕ್ಕೆ 2-ಎ ಮೀಸಲಾತಿ ನೀಡಬೇಕು ಎಂಬ ಬೇಡಿಕೆಗೆ ಸಂಬಂಧಿಸಿದ ಮಧ್ಯಂತರ ವರದಿಯನ್ನು ಹಿಂದುಳಿದ ವರ್ಗಗಳ ಆಯೋಗವು ರಾಜ್ಯ ಸರ್ಕಾರಕ್ಕೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ್ದು, ಈ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ ಹಾಗೂ ಸರ್ಕಾರ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ. ಹೀಗಾಗಿ, ವರದಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಕಾಲಾವಕಾಶ ನೀಡಬೇಕು' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಮನವಿ ಮಾಡಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಜನವರಿ ಮೊದಲ ವಾರಕ್ಕೆ ಮುಂದೂಡಿದೆ.

ಪೆಂಡಾಲ್ ಹೇಳಿಕೆ ಆರೋಪ ಸಾಬೀತಿಗೆ ಬಿಳಿಮಲೆ ಆಗ್ರಹ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು 'ಪೆಂಡಾಲ್' ಬಗ್ಗೆ ಮಾಡಿರುವ ಆರೋಪ ಹಾಸ್ಯಾಸ್ಪದ. ಅವರು ತಮ್ಮ ಹೇಳಿಕೆ ಸಾಬೀತು ಪಡಿಸಬೇಕು. ಇಲ್ಲವಾದಲ್ಲಿ ಪರಿಷತ್ತಿನ ಅಧ್ಯಕ್ಷ ಪೀಠಕ್ಕೆ ಅವರು ಯೋಗ್ಯರಲ್ಲ ಎಂದೇ ಭಾವಿಸಬೇಕಾಗುತ್ತದೆ' ಎಂದು ಲೇಖಕ ಹಾಗೂ ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ.

'ಬಿಳಿಮಲೆ ಅವರು ಸಾಹಿತ್ಯ ಸಮ್ಮೇಳನದಲ್ಲಿ ಶಾಮಿಯಾನ ಪೆಂಡಾಲ್ ಹಾಕಲು ಪರಿಚಿತರಾದ ಮುಸ್ಲಿಂ ವ್ಯಾಪಾರಿಯೊಬ್ಬರಿಗೆ ಅವಕಾಶ ಕೊಡಿಸಿ ಎಂದು ಕೇಳಿದ್ದರು' ಎಂದು ಜೋಶಿ ಅವರು ಗುರುವಾರ ಆರೋಪಿಸಿದ್ದರು.

ಇದಕ್ಕೆ ಸ್ಪಷ್ಟನೆ ನೀಡಿರುವ ಬಿಳಿಮಲೆ, 'ಸಾರ್ವಜನಿಕ ಸಂಘ–ಸಂಸ್ಥೆಗಳ ಜವಾಬ್ದಾರಿ ಹೊತ್ತವರು ಲಜ್ಜೆಗೆಟ್ಟು, ಯಾವ ಮಟ್ಟಕ್ಕೆ ಇಳಿಯಬಹುದು ಎಂಬುದಕ್ಕೆ ಮಹೇಶ ಜೋಶಿ ಅವರ ಮಾತುಗಳೇ ಸಾಕ್ಷಿ. ಇಂಥದ್ದರ ವಿರುದ್ಧವಾಗಿ ಪ್ರತ್ಯೇಕ ಸಮ್ಮೇಳನಗಳನ್ನು ಸಂಘಟಿಸಿಕೊಳ್ಳಬೇಕಾದ್ದು ಇವತ್ತಿನ ತುರ್ತು ಅಗತ್ಯ' ಎಂದು ಹೇಳಿದ್ದಾರೆ.

> **13 ಮುಸ್ಲಿಮರಿಗೆ ಹಾವೇರಿಯ ಸಮ್ಮೇಳನದಲ್ಲಿ ಅವಕಾಶ ಕೊಟ್ಟಿದ್ದೇವೆ ಎನ್ನುವ ಕಸಾಪ ಅಧ್ಯಕ್ಷರ ಹೇಳಿಕೆ ಕನ್ನಡ ಸಾಹಿತ್ಯದ ಕುರಿತು ಅವರ ಅಪಕ್ವ ತಿಳಿವಳಿಕೆ ತೋರಿಸಿದೆ**
> **ಬಿ.ಎಂ. ಹನೀಫ್,** ಪತ್ರಕರ್ತ

> **ಜನ ಸಾಹಿತ್ಯ ಸಮ್ಮೇಳನಕ್ಕೂ ನನಗೂ ಸಂಬಂಧವಿಲ್ಲ. ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರ ಹೇಳಿಕೆ ಬೇಜವಾಬ್ದಾರಿಯಿಂದ ಕೂಡಿದೆ**
> **ಆರ್.ಜಿ.ಹಳ್ಳಿ ನಾಗರಾಜ್,** ಲೇಖಕ

'ನಾನು ಜೋಶಿ ಅವರ ಸಹಿತವಾಗಿ ಯಾರ ವೈಯಕ್ತಿಕ ವಿಚಾರಗಳ ಬಗ್ಗೆಯೂ ಬರೆದಿಲ್ಲ. ಅವರು ಸಾಹಿತ್ಯ ಸಮ್ಮೇಳನಕ್ಕೆ ನನ್ನನ್ನು ಕರೆದಿದ್ದರು. ನನ್ನದೇ ಕಾರಣಗಳಿಗಾಗಿ ಬರಲಾಗುವುದಿಲ್ಲ ಎಂದು ಹೇಳಿದ್ದೇನೆ. ಅದಕ್ಕೆ ಅವರು ಇಷ್ಟೊಂದು ಆರೋಪಗಳನ್ನು ಮಾಡುವ ಅಗತ್ಯ ಇರಲಿಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ
GTTC
ರಾಜಾಜಿನಗರ ಕೈಗಾರಿಕಾ ವಸಾಹತು, ಬೆಂಗಳೂರು–560 010.
ದೂ.ಸಂ.: 080–23384303, ಇ–ಮೇಲ್: gttcadmn2019@gmail.com
ಸಂಖ್ಯೆ: ಜಿಟಿಟಿಸಿ/ಅಡ್ಮಿನ್/ಗು/202201/2022–23 ದಿನಾಂಕ 31.12.2022

ಪ್ರಕಟಣೆ

ಕೌಶಲ್ಯ, ವಿನ್ಯಾಸ ಮತ್ತು ಕೈಗಾರಿಕೆಗಳಿಗೆ ಅತ್ಯಾಧುನಿಕ ಉತ್ಪನ್ನಗಳನ್ನು ತಯಾರಿಸುವುದರಲ್ಲಿ 50 ವರ್ಷಗಳ ಪರಂಪರೆಯನ್ನು ಹೊಂದಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಮಾಗಡಿ ಮತ್ತು ದೇವನಹಳ್ಳಿ ನೂತನ ಕೇಂದ್ರಗಳಿಗೆ ಉಪನ್ಯಾಸಕರು, ಬೋಧಕರು, ಟೆಕ್ನಿಷಿಯನ್ ಮತ್ತು ಲೈಬ್ರರಿಯನ್ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಕಾಂಕ್ಷಿತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರಕಟಿತ ಹುದ್ದೆಗಳ ಪದನಾಮ, ಸಂಖ್ಯೆ, ಅರ್ಹತೆ, ವಿದ್ಯಾರ್ಹತೆ, ಅರ್ಜಿ ನಮೂನೆ ಇತ್ಯಾದಿ ವಿವರಗಳನ್ನು ಜಿಟಿಟಿಸಿ ಜಾಲತಾಣ : **https://gttc.karnataka.gov.in** ನಲ್ಲಿ ಅಪ್‌ಲೋಡ್ ಮಾಡಲಾಗಿದೆ.

ದೇಶದ ಯುವಕರಿಗೆ ಕೌಶಲ್ಯಾಭಿವೃದ್ಧಿ ನೀಡುವುದರಲ್ಲಿ ಕೊಡುಗೆ ನೀಡಲು ಪ್ರೇರೇಪಣಾ ಮನೋಭಾವ ಹೊಂದಿರುವ ಆಕಾಂಕ್ಷಿತ ಅರ್ಹ ಅಭ್ಯರ್ಥಿಗಳು ವಿವರಗಳನ್ನು ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಂಡು ಸಂಬಂಧಿಸಿದ ದಾಖಲೆಗಳೊಂದಿಗೆ ಅರ್ಜಿಗಳನ್ನು, ವ್ಯವಸ್ಥಾಪಕ ನಿರ್ದೇಶಕರು, ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ರಾಜಾಜಿನಗರ, ಕೈಗಾರಿಕಾ ವಸಾಹತು, ಬೆಂಗಳೂರು-560010, ಇವರಿಗೆ ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಪದನಾಮವನ್ನು ಲಕೋಟೆಯ ಎಡ ಭಾಗದಲ್ಲಿ ನಮೂದಿಸಿ **ದಿನಾಂಕ: 10.01.2023 ರ ಸಂಜೆ 5.00 ಗಂಟೆಯೊಳಗೆ ಅಥವಾ ಮುಂಚಿತವಾಗಿ** ಸಲ್ಲಿಸುವುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/26/2022–23 ದಿನಾಂಕ: 29–12–2022

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

2022–23 ನೇ ಸಾಲಿನ JJM ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **10–01–2023 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/3796/ಅಡ್ವರ್ಟೋರ್/2022–23

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇ–ಮೇಲ್: rchobangalorerural@gmail.com
dpmbangalorerural2@gmail.com
ಸಂಖ್ಯೆ: DHS/NHM/RCH/BR/MP-OS/02/2022-23 ದಿನಾಂಕ: 29–12–2022

ಅಲ್ಪಾವಧಿ ಇ–ಟೆಂಡರ್ ಆಹ್ವಾನ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿ 2022–23 ಮತ್ತು 2023–24ನೇ ಸಾಲಿಗೆ ಮಾನವ ಸಂಪನ್ಮೂಲ ಏಜೆನ್ಸಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ದ್ವಿ-ಲಕೋಟೆ ಪದ್ದತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https:eproc.karnataka.gov.inನ ಮುಖಾಂತರ ಟೆಂಡರ್ ಕರೆಯಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ಈ ಕೆಳಕಂಡಂತಿದೆ.

(1) ಟೆಂಡರ್ ಸಂಖ್ಯೆ: **DHS/NHM/RCH/BR/MP-OS/02/2022-23** (2) ಇ–ಪೋರ್ಟಲ್ ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ: ದಿನಾಂಕ: **02.01.2023** (3) ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **16.01.2023, ಸಮಯ ಸಂಜೆ 5.00 ಗಂಟೆ.** (4) ಇ.ಎಂ.ಡಿ ಮೊತ್ತ ಅಂದಾಜು ರೂ. 1.88 ಲಕ್ಷ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು). (5) ಟೆಂಡರ್ ಮೊತ್ತ: ಅಂದಾಜು ರೂ. 94.00 ಲಕ್ಷ. (6) ಟೆಂಡರ್‌ನ ಮಾಹಿತಿಗಳು ಇ–ಪೋರ್ಟಲ್‌ನಲ್ಲಿ ಲಭ್ಯವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿ ಕಛೇರಿಯ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ವಾಸಾಸಂಇ/ವಾಪ್ರ/3791/ಎಎಎ/2022–23

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ರಾಯಚೂರು
ದೂರವಾಣಿ ಸಂಖ್ಯೆ : 08532–225778 & 234747

ಇ–ಪ್ರೊಕ್ಯುರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2, 3 & 4)

THESE WORKS ARE GENARAL, SC & ST CONTRACTORS

1)ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ ಲೋಇ/ರಾವಿ/ತಾಂಶಾ–4/ಟೆಂಪ್ರ/2022–23/5300 ದಿನಾಂಕ: 28–12–2022. 2) ಕಾಮಗಾರಿ ಹೆಸರು: ರಾಯಚೂರು ಜಿಲ್ಲೆಯ ಒಟ್ಟು 15 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ ಲಿಂಗಸುಗೂರು ಮತ್ತು ಸಿಂಧನೂರು ತಾಲೂಕು ವಿವಿದೆಡೆ ವಿವಿಧ ರಸ್ತೆ, ಕಟ್ಟಡ ಹಾಗೂ ಇನ್ನಿತರೆ ಕಾಮಗಾರಿಗಳ ನಿರ್ಮಾಣ. ಮತ್ತು ಅಭಿವೃದ್ಧಿ ಕಾಮಗಾರಿ. 3) ಕಾಮಗಾರಿಯ ಮೊತ್ತ ಕನಿಷ್ಠ ರೂ.671560.60 ಗರಿಷ್ಠ ರೂ. 39730159.42. 4) ಮುಂಗಡ ಠೇವಣಿ ಮೊತ್ತ ಕನಿಷ್ಠ ರೂ. 8100.00 ಗರಿಷ್ಠ ರೂ. 596000.00 5) ಕಾಲಾವಧಿ (ಮಳೆಗಾಲ ಸೇರಿ): ಕನಿಷ್ಠ 3 (ಮೂರು) ತಿಂಗಳು ಗರಿಷ್ಠ 9 (ಒಂಭತ್ತು) ತಿಂಗಳು 6) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 11–01–2023 ಸಂಜೆ 4.00 ಗಂಟೆಯವರೆಗೆ 7) ಟೆಂಡರ್ ತೆರೆಯುವ ದಿನಾಂಕ:12–01–2023 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳು ವೆಬ್‌ಸೈಟ್ https://www.eproc. karnataka. gov.in ಮುಖಾಂತರ ನೋಡಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ
ರಾಯಚೂರು.
ವಾ.ಸಾ.ಸಂ.ಇ/ರಾಯಚೂರು/515/ಕ.ರಾ.ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ
ನಂಜನಗೂಡು, ಮೈಸೂರು ಜಿಲ್ಲೆ
Telephone Nos : E.O. Office : 08221 : 226245, 226275
E-Mail ID : sstnanjangud@gmail.com
ಸಂ : ಎಸ್‌ಎಸ್‌ಟಿ/ಇ–ಟಿ–07/ಪೆ.ಜಾ/2022–23 ದಿನಾಂಕ : 29–12–2022

ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಈ ಕೆಳಕಂಡ ವಿವಿಧ ಸರಬರಾಜು ಟೆಂಡರ್‌ನ್ನು 2022–23ನೇ ಸಾಲಿಗೆ 6 ತಿಂಗಳ ಅವಧಿಗೆ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ–ಟೆಂಡರ್ ಶೆಡ್ಯೂಲ್ ಈ ಕೆಳಕಂಡಂತಿದೆ.

ಕ್ರ.ಸಂ.	ಟೆಂಡರ್‌ಗಳ ವಿವರ	ಎಲ್ಲಾ ಟೆಂಡರ್‌ಗಳು ಇ–ಪೋರ್ಟಲ್‌ನಲ್ಲಿ ಚಾಲ್ತಿಗೆ ಬರುವ ದಿನಾಂಕ	ಇ–ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಕಾಲ	ಇ–ಟೆಂಡರ್‌ನ್ನು ತೆರೆಯುವ ದಿನಾಂಕ ಮತ್ತು ಕಾಲ	ಎಲ್ಲಾ ಟೆಂಡರ್‌ಗಳಿಗೆ ನಿಗಧಿಪಡಿಸಿರುವ ಇ.ಎಂ.ಡಿ. ಮೊತ್ತ
1.	ಒಣದ್ರಾಕ್ಷಿ, ಗೊಂಡಂಬಿ ಮತ್ತು ಕೆಂಪು/ ಬಿಳಿ ಕಲ್ಲುಸಕ್ಕರೆ ದಿನಸಿ (6 ತಿಂಗಳ ಅವಧಿ ಮಾತ್ರ)	ದಿನಾಂಕ : 30–12–2022 ರ ನಂತರ	ದಿನಾಂಕ : 30–01–2023 ಸಂಜೆ 5.00 ಗಂಟೆಯವರೆಗೆ	ದಿನಾಂಕ : 01–02–2023 ಬೆಳಗ್ಗೆ 11.00 ರ ನಂತರ	ರೂ. 1,50,000/–
2.	ಸೋನಾ ಮಸೂರಿ ಅಕ್ಕಿ ಮತ್ತು ತೊಗರಿ ಬೇಳೆ (6 ತಿಂಗಳ ಅವಧಿ ಮಾತ್ರ)				ರೂ. 1,50,000/–
3.	ಬೆಣ್ಣೆ ಕಾಯಿಸಿದ ತುಪ್ಪ ರೀ–ಫೈಂಡ್ ಆಯಿಲ್ (6 ತಿಂಗಳ ಅವಧಿ ಮಾತ್ರ)				ರೂ. 1,50,000/–
4.	ಕಡ್ಲೆಹಿಟ್ಟು ಮತ್ತು ಸಕ್ಕರೆ (6 ತಿಂಗಳ ಅವಧಿ ಮಾತ್ರ)				ರೂ. 1,50,000/–
5.	ವಿವಿಧ ಅಗತ್ಯ ದಿನಸಿ ಪದಾರ್ಥಗಳು (6 ತಿಂಗಳ ಅವಧಿ ಮಾತ್ರ)				ರೂ. 1,50,000/–
6.	ನಿತ್ಯ ದಾಸೋಹದ ಉಪಯೋಗಕ್ಕೆ ವಿವಿಧ ತರಕಾರಿಗಳನ್ನು ಸರಬರಾಜು ಮಾಡುವ ಬಗ್ಗೆ (6 ತಿಂಗಳ ಅವಧಿ ಮಾತ್ರ)	ದಿನಾಂಕ : 30–12–2022 ರ ನಂತರ	ದಿನಾಂಕ : 13–01–2023 ಸಂಜೆ : 5.00 ಗಂಟೆಯವರೆಗೆ	ದಿನಾಂಕ : 16–01–2023 ಬೆಳಗ್ಗೆ 11.00 ರ ನಂತರ	ರೂ. 25,000/–

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬ್ಯಾಡಗಿ
ಕಚೇರಿ: (08375–228443) email : apmcbyadgi@gmail.com
ಸಂ:ಕೃಮಾಇ/ಕೃಉಮಾಸ/ಬ್ಯಾ/ಅಭಿವಿ/2022–23/1296–97 ದಿನಾಂಕ:27–12–2022

ಇ–ಟೆಂಡರ್ ಪ್ರಕಟಣೆ

ಕೃ.ಉ.ಮಾ.ಸ ಬ್ಯಾಡಗಿ ವತಿಯಿಂದ 2022–23 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

ಅ. ನಂ	ಕಾಮಗಾರಿಯ ಹೆಸರು	ಟೆಂಡರ್ ಇಂಡೆಂಟ್ ನಂಬರ್	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಮೀಸಲಾತಿ
	Two Cover Tender				
1	Construction Of Cc Road At Chikkabasur Submarket Yard Of Apmc Byadgi Under Action Plan 2022-23 Package-05	APMC/2022-23/RD/ WORK_INDENT5396	113.03	1,69,600/-	ಸಾಮಾನ್ಯ
	One Cover Tenders				
2	Improvements To Old Admin Office Building In Main Market Yard Of Apmc Byadgi Under Action Plan 2022-23 Package-02 (Sc)	APMC/2022-23/OW/ WORK_INDENT5397	29.71	29,800/-	ಎಸ್.ಸಿ
3	Shifting Of Electrical Lines In Main Market Yard Of Apmc Byadgi Under Auction Plan 2022-23 (Bescomsr2021-22) Package-04 (Call-02)	APMC/2022-23/EL/ WORK_INDENT5343/ CALL-2	6.54	16,362/-	ಸಾಮಾನ್ಯ
4	Providing 4 No's Of High Mast Lights And Suppyling, Errcetion And Commissioning Of 15 Kva Diesel Generator Set To Administrative Office Building And Amplifier At Main Main Yard Of Byadgi Apmc Package-07 (St) Call-02	APMC/2022-23/EL/ WORK_INDENT5159/ CALL-2	17.40	43,520/-	ಎಸ್.ಟಿ

ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳನ್ನು ರಜಾ ದಿನಗಳನ್ನು ಹೊರತುಪಡಿಸಿ ಕಛೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ **http://www.eproc.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಅ.ನಂ:01,02,03, & 04 ರ ಕಾಮಗಾರಿಗಳಿಗೆ ಬಿಡ್ ಪೂರ್ವಭಾವಿ ಸಭೆ & ಟೆಂಡರ್ ತಕರಾರು ಸಮಜಾಯಿಷಿ ನೀಡುವ **ದಿನಾಂಕ:10–01–2023 ರ ಬೆಳಗ್ಗೆ 11.00 ಗಂಟೆಗೆ,** ಟೆಂಡರ್ ಸಲ್ಲಿಸುವ ಅಂತಿಮ **ದಿನಾಂಕ:16–01–2023 ರ ಸಂಜೆ 05.00 ಗಂಟೆಯವರೆಗೆ** ಅ.ನಂ:02,03 & 04 ರ ಕಾಮಗಾರಿಗಳಿಗೆ ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ:17–01–2023 ರ ಸಂಜೆ: 05:00 ಘಂಟೆಗೆ** ತೆರೆಯಲಾಗುವುದು ಹಾಗೂ ಅ.ನಂ:01 ರ ಕಾಮಗಾರಿಗೆ ಮಾತ್ರ **ದಿನಾಂಕ: 17–01–2023** ರಂದು ತಾಂತ್ರಿಕ ಬಿಡ್ ತೆರೆದು, ಸಾಧ್ಯವಾದಲ್ಲಿ **ದಿನಾಂಕ: 20–01–2023 ರ ಸಂಜೆ 05.00 ಗಂಟೆಗೆ** ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಮೇಲ್ಕಂಡ ಕಾಮಗಾರಿಗಳಿಗೆ ನಿಯಮಾನುಸಾರವಾಗಿ ಜಿ.ಎಸ್.ಟಿ.ಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು ಟೆಂಡರ್‌ನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ.ಬ್ಯಾಡಗಿ
ಸಹಿ/– ಅಧ್ಯಕ್ಷರು/ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ.ಬ್ಯಾಡಗಿ

ಸಹಕಾರ ಫಲಾನುಭವಿಗಳ ಸಮ್ಮೇಳನದಲ್ಲಿ ಶಾ ಹೇಳಿಕೆ

'ದೇಶಕ್ಕೊಂದೇ ಸಹಕಾರಿ ನೀತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಉದ್ದಗಲದಲ್ಲಿ ಸಹಕಾರ ಕ್ಷೇತ್ರದ ಏಕರೂಪದ ಪ್ರಗತಿಗೆ ಉತ್ತೇಜನ ನೀಡುವ ಉದ್ದೇಶದಿಂದ ಇಡೀ ದೇಶಕ್ಕೆ ಅನ್ವಯವಾಗುವಂತೆ ಒಂದೇ ಸಹಕಾರಿ ನೀತಿ ಜಾರಿಗೊಳಿಸಲಾಗುವುದು ಎಂದು ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ಹೇಳಿದರು.

ರಾಜ್ಯದ ಸಹಕಾರ ಇಲಾಖೆ ವತಿಯಿಂದ ನಗರದ ಅರಮನೆ ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಸಹಕಾರ ಫಲಾನುಭವಿಗಳ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, 'ದೇಶದಲ್ಲಿ ಸಹಕಾರ ಕ್ಷೇತ್ರದ ಚಟುವಟಿಕೆಗಳು ಒಂದೇ ಸ್ವರೂಪದಲ್ಲಿ ಇಲ್ಲ. ಸಹಕಾರ ನೀತಿ ಜಾರಿಗೊಳಿಸುವ ಮೂಲಕ ಎಲ್ಲ ಸಹಕಾರ ಸಂಸ್ಥೆಗಳಲ್ಲೂ ಏಕರೂಪತೆ ತರಲಾಗುವುದು. ನೀತಿ ರೂಪಿಸುವುದಕ್ಕಾಗಿ ಕೇಂದ್ರದ ಮಾಜಿ ರೈಲ್ವೆ ಸಚಿವ ಸುರೇಶ್ ಪ್ರಭು ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ' ಎಂದರು.

ಒಂದೊಂದು ಚಟುವಟಿಕೆಗೂ ಪ್ರತ್ಯೇಕವಾದ ಸಹಕಾರ ಸಂಸ್ಥೆಗಳಿವೆ. ಕೃಷಿ ಉತ್ಪನ್ನಗಳ ಖರೀದಿ, ಮಾರಾಟ, ರಸಗೊಬ್ಬರ ಪೂರೈಕೆ, ಸಕ್ಕರೆ ಕಾರ್ಖಾನೆಗಳನ್ನು ನಡೆಸುವುದು ಸೇರಿದಂತೆ ಹಲವು ಬಗೆಯ ಸಹಕಾರಿ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಒಂದೇ ಸಹಕಾರಿ ಸಂಸ್ಥೆಯು ಬಹುವಿಧದ ಚಟುವಟಿಕೆಗಳನ್ನು ನಡೆಸುವ ವ್ಯವಸ್ಥೆ ಜಾರಿಗೆ ಬರಬೇಕು. ಆಗ ಸಹಕಾರಿ ಸಂಸ್ಥೆಗಳು ಹೆಚ್ಚು ಲಾಭ ಗಳಿಸಲು ಮತ್ತು ಸದೃಢವಾಗಿ ಬೆಳೆಯಲು ಅನುಕೂಲವಾಗುತ್ತದೆ. ಹೊಸ ಸಹಕಾರಿ ನೀತಿಯು ಅದಕ್ಕೆ ಪೂರಕವಾಗಿರಲಿದೆ ಎಂದು ತಿಳಿಸಿದರು.

ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಸಹಕಾರಿ ಚಟುವಟಿಕೆ ವೇಗ ಪಡೆಯಬೇಕು. ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ಬಹು ರಾಜ್ಯಗಳ ಸಹಕಾರ ಸಂಸ್ಥೆ ಆರಂಭಿಸುವ ಪ್ರಸ್ತಾವವಿದೆ. ಕೃಷಿ ಬೆಳೆಗಳ ಬೀಜ ಉತ್ಪಾದನೆ, ಸಂಗ್ರಹ, ಮಾರಾಟ, ಕೃಷಿ ಉತ್ಪನ್ನಗಳ ರಫ್ತು ಚಟುವಟಿಕೆಗಳನ್ನು ನಡೆಸುವುದಕ್ಕೂ ಅಂತಹ ಪ್ರತ್ಯೇಕ ಸಂಸ್ಥೆ ಸ್ಥಾಪಿಸುವ ಯೋಚನೆ ಇದೆ ಎಂದರು.

ಪಾರದರ್ಶಕ ಚುನಾವಣೆಗೆ ಕಾಯ್ದೆ: ಸಹಕಾರಿ ಸಂಸ್ಥೆಗಳ ಚುನಾವಣೆಯನ್ನು ಪಾರದರ್ಶಕವಾಗಿ ನಡೆಸುವುದಕ್ಕಾಗಿ ಪ್ರತ್ಯೇಕ ಕಾಯ್ದೆಯೊಂದನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಅದಕ್ಕಾಗಿ ಸಿದ್ಧಪಡಿಸಿರುವ ಮಸೂದೆಯು ಸಂಸತ್ತಿನ ಸ್ಥಾಯಿ ಸಮಿತಿ ಪರಿಶೀಲನೆಯಲ್ಲಿದೆ. ಶೀಘ್ರದಲ್ಲಿ ಮಸೂದೆಗೆ ಒಪ್ಪಿಗೆ ನೀಡುವ ಮೂಲಕ ಸಹಕಾರ ಸಂಸ್ಥೆಗಳ ಚುನಾವಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವತ್ತ ಹೆಜ್ಜೆ ಇಡಲಾಗುವುದು ಎಂದು ಅಮಿತ್ ಶಾ ತಿಳಿಸಿದರು.

ಕೆಲವು ರಾಜ್ಯಗಳಲ್ಲಿ ಸಹಕಾರಿ ಕ್ಷೇತ್ರ ಇನ್ನೂ ಸರಿಯಾಗಿ ಬೆಳವಣಿಗೆ ಹೊಂದಿಲ್ಲ. ಆದರೆ, ಕರ್ನಾಟಕದ ಸಹಕಾರಿ ರಂಗವು ದೇಶದಲ್ಲೇ ಮುಂಚೂಣಿಯಲ್ಲಿದೆ. ಇಲ್ಲಿನ ಸಹಕಾರಿ ಸಂಸ್ಥೆಗಳ ಪ್ರಗತಿಯು ದೇಶಕ್ಕೆ ದಿಕ್ಸೂಚಿಯಾಗಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, 'ಕರ್ನಾಟಕವು ಸಹಕಾರ ಕ್ಷೇತ್ರದಲ್ಲಿ ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ. 45,000 ಸಹಕಾರ ಸಂಸ್ಥೆಗಳಲ್ಲಿ 2.3 ಕೋಟಿ ಸದಸ್ಯರಿದ್ದಾರೆ. ಪ್ರಸಕ್ತ ಆರ್ಥಿಕ ವರ್ಷ 30 ಲಕ್ಷ ರೈತರಿಗೆ ₹ 24,000 ಕೋಟಿ ಸಾಲ ವಿತರಿಸುವ ಗುರಿ ಇದೆ. ಈವರೆಗೆ 18.11 ಲಕ್ಷ ರೈತರಿಗೆ ₹ 13,480 ಕೋಟಿ ಸಾಲ ವಿತರಿಸಲಾಗಿದೆ' ಎಂದು ತಿಳಿಸಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಆರ್. ಅಶೋಕ, ಆರಗ ಜ್ಞಾನೇಂದ್ರ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಎಂ.ಟಿ.ಬಿ. ನಾಗರಾಜು, ಸಂಸದರಾದ ಡಿ.ವಿ. ಸದಾನಂದ ಗೌಡ, ಪಿ.ಸಿ. ಮೋಹನ್ ಉಪಸ್ಥಿತರಿದ್ದರು.

'ಜನರ ನಂಬಿಕೆ ಕಳೆದುಕೊಳ್ಳಬಾರದು'

ಬೆಂಗಳೂರು: ಸಹಕಾರ ಸಂಸ್ಥೆಗಳಲ್ಲಿ ನಂಬಿಕೆ ಇರಿಸಿ ಜನರು ಠೇವಣಿ ಇರಿಸುತ್ತಾರೆ. ಜನರ ನಂಬಿಕೆ ಕಳೆದುಕೊಳ್ಳುವಂತಹ ಬೆಳವಣಿಗೆಗಳು ಸಹಕಾರ ಸಂಸ್ಥೆಗಳಲ್ಲಿ ನಡೆಯದಂತೆ ಕಟ್ಟೆಚ್ಚರ ವಹಿಸಬೇಕಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಇತ್ತೀಚಿನ ದಿನಗಳಲ್ಲಿ ಸಹಕಾರಿ ಸಂಸ್ಥೆಗಳಲ್ಲಿ ಹಗರಣಗಳು ನಡೆಯುವುದು ಹೆಚ್ಚುತ್ತಿದೆ. ಅಂತಹ ಪ್ರಕರಣಗಳಿಗೆ ಕಡಿವಾಣ ಹಾಕಬೇಕು. ದುಡಿಯುವ ವರ್ಗಗಳ ಜನರೇ ಈ ಸಂಸ್ಥೆಗಳಲ್ಲಿ ಠೇವಣಿ ಇರಿಸುತ್ತಾರೆ. ಅವರ ಹಣಕ್ಕೆ ರಕ್ಷಣೆ ನೀಡುವ ಕೆಲಸ ಆಗಬೇಕು' ಎಂದರು.

ಸಹಕಾರಿ ಸಂಸ್ಥೆಗಳ ಮೂಲಕ ಸಾಹುಕಾರರ ಬಂಡವಾಳಶಾಹಿ ಆರ್ಥಿಕತೆಯ ವಿಸ್ತರಣೆಯ ಪ್ರಯತ್ನಗಳು ದೀರ್ಘ ಕಾಲದಿಂದ ನಡೆಯುತ್ತಿವೆ. ಸಹಕಾರಿ ಸಂಸ್ಥೆಗಳನ್ನು ಸಾಹುಕಾರರ ಹಿಡಿತದಿಂದ ಹೊರತರುವ ಕೆಲಸ ಆಗಬೇಕು. ಸರ್ಕಾರ ಈಗ ಸಹಕಾರ ಕ್ಷೇತ್ರವನ್ನು ಆಳುತ್ತಿದೆ. ಸಹಕಾರಿ ಕ್ಷೇತ್ರವೇ ಸರ್ಕಾರವನ್ನು ಆಳುವ ಸನ್ನಿವೇಶ ನಿರ್ಮಾಣವಾಗಬೇಕು ಎಂದು ಹೇಳಿದರು.

ರೈತರ ಕುಟುಂಬಗಳಿಗೆ ಆರೋಗ್ಯ ಮತ್ತು ಶಿಕ್ಷಣಕ್ಕೆ ತಮ್ಮ ಸರ್ಕಾರ ಹೆಚ್ಚಿನ ನೆರವು ನೀಡುತ್ತಿದೆ. ಯಶಸ್ವಿನಿ ಯೋಜನೆಯನ್ನು ಪುನಃ ಜಾರಿಗೊಳಿಸಿ, ₹ 300 ಕೋಟಿ ಒದಗಿಸಲಾಗಿದೆ. 11 ಲಕ್ಷ ರೈತರ ಮಕ್ಕಳಿಗೆ ರೈತ ವಿದ್ಯಾನಿಧಿ ಯೋಜನೆಯಡಿ ವಿದ್ಯಾರ್ಥಿ ವೇತನ ನೀಡಲಾಗಿದೆ ಎಂದರು.

ಶರ್ಮಾಗೆ ಗಳಗನಾಥ, ಪೋತೆಗೆ ರಾಜಪುರೋಹಿತ ಪ್ರಶಸ್ತಿ

ಕಲಬುರಗಿ: ಹಾವೇರಿಯ ಗಳಗನಾಥ ಮತ್ತು ನಾ.ಶ್ರೀ.ರಾಜಪುರೋಹಿತ ಪ್ರತಿಷ್ಠಾನವು 2022ನೇ ಸಾಲಿನ ಗಳಗನಾಥ ಪ್ರಶಸ್ತಿಯನ್ನು ಸಾಹಿತಿ, ನಾಟಕಕಾರ ಗಜಾನನ ಶರ್ಮಾ ಹಾಗೂ ನಾ.ಶ್ರೀ. ರಾಜಪುರೋಹಿತ ಪ್ರಶಸ್ತಿಯನ್ನು ಸಾಹಿತಿ, ಗುಲಬರ್ಗಾ ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಎಚ್.ಟಿ ಪೋತೆ ಅವರಿಗೆ ಘೋಷಿಸಿದೆ.

'ಪ್ರಶಸ್ತಿಯು ತಲಾ ₹ 50 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ. ಡಿ.31ರ ಬೆಳಿಗ್ಗೆ ಗುಲಬರ್ಗಾ ವಿ.ವಿ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ದುಷ್ಯಂತ ನಾಡಗೌಡ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ಗಜಾನನ ಶರ್ಮಾ

ಎಚ್.ಟಿ.ಪೋತೆ

ಸೌಭಾಗ್ಯ ಬಸವರಾಜನ್‌ಗೆ ಜಾಮೀನು

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಲು ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಹಾಗೂ ಪಿತೂರಿ ನಡೆಸಿದ ಆರೋಪದಡಿ ಬಂಧನಕ್ಕೆ ಒಳಗಾಗಿದ್ದ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್‌ಗೆ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ಶುಕ್ರವಾರ ಜಾಮೀನು ಮಂಜೂರು ಮಾಡಿದೆ.

ಈ ಪ್ರಕರಣದಲ್ಲಿ ಸೌಭಾಗ್ಯ ಪತಿ, ಮಾಜಿ ಶಾಸಕ ಎಸ್.ಕೆ. ಬಸವರಾಜನ್ ಅವರಿಗೂ ಹೈಕೋರ್ಟ್ ಇದೇ 27ರಂದು ಜಾಮೀನು ಮಂಜೂರು ಮಾಡಿದೆ.

ಬಾಣಂತಿಯರಲ್ಲಿ ಖಿನ್ನತೆ: ಹೀಗಿರಲಿ ಆರೈಕೆ

ಡಾ. ವಸುಂಧರಾ ಭೂಪತಿ

ವರ್ಷದ ಹಿಂದೆ ಮಾಜಿ ಮುಖ್ಯಮಂತ್ರಿಯೊಬ್ಬರ ಮೊಮ್ಮಗಳು ಹೆರಿಗೆ ನಂತರ ಖಿನ್ನತೆಗೆ (Postpartum Depression) ಒಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದು ಸಾಕಷ್ಟು ಸುದ್ದಿಯಾಗಿತ್ತು. ಇದೇ ವೇಳೆ ಹೆರಿಗೆ ನಂತರ ಬಾಣಂತಿಯರಲ್ಲಿ ಕಂಡುಬರುವ ಖಿನ್ನತೆ ವಿಷಯ ಸಾಕಷ್ಟು ಚರ್ಚೆಗೂ ಒಳಗಾಗಿತ್ತು.

ಸಾಮಾನ್ಯವಾಗಿ ಹೆರಿಗೆ ಆದ ನಂತರ ಬಹುತೇಕ ತಾಯಂದಿರು ಕೆಲಬಗೆಯ ನೇತ್ಯಾತ್ಮಕ ಭಾವನೆಗಳನ್ನು ಅನುಭವಿಸುತ್ತಾರೆ. ಇದೇ ಹೆರಿಗೆ ನಂತರದ ಖಿನ್ನತೆ. ಅದರಲ್ಲೂ ಮೊದಲನೇ ಹೆರಿಗೆಯ ನಂತರ ಇಂತಹ ಖಿನ್ನತೆ ಕಾಡುತ್ತದೆ. ಕೆಲವರು ಅಸಂತೃಪ್ತಿ ಹಾಗೂ ಬೇಸರದ ಭಾವಗಳನ್ನು ತೋರ್ಪಡಿಸುತ್ತಾರೆ.

ಮಗುವಿಗೆ ಜನ್ಮ ನೀಡಿದ ಬಳಿಕ ತೀವ್ರ ಸ್ವರೂಪದ ಶಾರೀರಿಕ ಹಾಗೂ ಮಾನಸಿಕ ಬದಲಾವಣೆಗಳು ತಾಯಿಯಲ್ಲಿ ಕಾಣಿಸಿಕೊಳ್ಳುತ್ತವೆ. ಆಗ ಇಂತಹ ಬದಲಾವಣೆಗಳು, ಭಾವನೆಗಳು ಮತ್ತು ಸವಾಲುಗಳು ಸಹಜ. ನಿದ್ರಾಹೀನತೆ, ಕಾರಣವಿಲ್ಲದೇ ಆಗಾಗ್ಗೆ ಅಳುವುದು, ಖಿನ್ನ ಮನಸ್ಥಿತಿ, ನಿತ್ರಾಣ, ಉದ್ವೇಗ, ಆಹಾರ ಸೇವನಾ ಕ್ರಮದಲ್ಲಿ ಬದಲಾವಣೆ ಇವೇ ಮೊದಲಾದವು ಹೆರಿಗೆ ನಂತರದ ಖಿನ್ನತೆಯ ಕೆಲವು ಲಕ್ಷಣಗಳಾಗಿವೆ. ಇವು ಬಹುಕಾಲ ಇರುವುದಿಲ್ಲ. ಕೆಲವರು ಬೇಗನೇ ಇಂತಹ ಲಕ್ಷಣಗಳಿಂದ ಹೊರಬರುತ್ತಾರೆ. ಇನ್ನೂ ಕೆಲವರಿಗೆ ಇವುಗಳಿಂದ ಹೊರಬರಲು ಸ್ವಲ್ಪ ಸಮಯ ಹಿಡಿಯುತ್ತದೆ.

ಖಿನ್ನತೆ ಬಾಣಂತಿಯ ಭಾವನೆಗೆ, ಯೋಚನೆಗೆ ಹಾಗೂ ಕಾರ್ಯನಿರ್ವಹಣೆಗೆ ವಿರುದ್ಧವಾಗಿ ಪರಿಣಾಮ ಬೀರುವ ಕಾರ್ಯ ಮಾಡುತ್ತದೆ. ಮನಸ್ಸಿನ ಸ್ಥಿತಿಯನ್ನು ಸದಾ ದುಃಖ ಹಾಗೂ ಒಂಟಿತನದಿಂದ ಬಳಲುವಂತೆ ಮಾಡುತ್ತದೆ. ನಿಜವಾಗಿಯೂ ಯಾವುದೇ ಕೆಲಸದಲ್ಲಿ ಸಂತೋಷ ಅನುಭವಿಸುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಆಸಕ್ತಿಯನ್ನೇ ಕಳೆದುಕೊಳ್ಳುವಂತೆ ಮಾಡುತ್ತದೆ.

ಖಿನ್ನತೆಯ ಲಕ್ಷಣಗಳು

ಹೆರಿಗೆ ನಂತರ ಖಿನ್ನತೆಗೆ ಒಳಗಾಗುವವರು ಪದೇ ಪದೇ ಕಣ್ಣೀರು ಹಾಕುತ್ತಾರೆ ಅಥವಾ ದುಃಖಿಸುತ್ತಾರೆ; ಹೆಚ್ಚು ಕೋಪದಲ್ಲಿರುತ್ತಾರೆ; ಮನೆಯವರೊಂದಿಗೆ ಚಿಕ್ಕ- ಚಿಕ್ಕ ವಿಷಯಕ್ಕೆ ಕಿರಿ ಕಿರಿ ಮಾಡಿಕೊಳ್ಳುತ್ತಾರೆ; ಸದಾ ಅನಗತ್ಯವಾಗಿ ಒಂದಲ್ಲ ಒಂದು ಯೋಚನೆ ಮಾಡುತ್ತಿರುತ್ತಾರೆ; ಮೊದಲು ಊಟ ಬೇಕು ಎನ್ನುವುದು ಮತ್ತು ಊಟ ತಂದು ಕೊಟ್ಟರೆ ಈಗ ಬೇಡ ಆಗ ಬೇಡ ಎಂದು ತಿರಸ್ಕರಿಸುತ್ತಾರೆ; ಎಲ್ಲ ವಿಷಯಗಳಲ್ಲಿ ಆಸಕ್ತಿ ಕಳೆದುಕೊಳ್ಳುವುದು; ತಾವೊಬ್ಬರೇ ಏಕಾಂಗಿಯಾಗಿರಲು ಬಯಸುವುದು; ಏನೂ ಆಗದಿದ್ದರೂ ಏನೋ ಆಗುತ್ತದೆ ಭಯ ಪಡುವುದು ಮತ್ತು ಮಗುವಿಗೆ ಹಾಲು ಕೊಡಲು ನಿರಾಕರಿಸುತ್ತಾರೆ. ತಾಯಿಯಿಂದ ಅಗತ್ಯವಿರುವ ಕಾಳಜಿ ಮಗುವಿಗೆ ಸಿಗದೇ ಇದ್ದಾಗ ಅದು ಮಗುವಿನ ಮೇಲೆ ಪರಿಣಾಮ ಬೀರುತ್ತದೆ. ಊಟ ಮಾಡದೇ ತಾಯಿ ಎದೆ ಹಾಲು ಕಡಿಮೆ ಆದಾಗ ಮಗುವಿನ ಆರೋಗ್ಯದ ಮೇಲೆ ಅದು ಪರಿಣಾಮ ಬೀರಬಹುದು. ಏಕೆಂದರೆ ಹುಟ್ಟಿದ ಮೊದಲ ಕೆಲವು ತಿಂಗಳು ಮಗುವಿಗೆ ತಾಯಿಯ ಹಾಲೇ ಮುಖ್ಯ ಆಹಾರ.

ಹೀಗಿರಲಿ ಆರೈಕೆ

ಇಂತಹ ಸೂಕ್ಷ್ಮ ಸಮಯದಲ್ಲಿ ಬಾಣಂತಿ ಮತ್ತು ಮಗುವನ್ನು ಮನೆಯಲ್ಲಿ ನೋಡಿಕೊಳ್ಳುವವರ ಪಾತ್ರ ಬಹಳ ಪ್ರಮುಖವಾಗುತ್ತದೆ. ಬಾಣಂತಿಯ ತಾಯಿ, ಗಂಡ ಅಥವಾ ಹತ್ತಿರದಲ್ಲಿ ಯಾರು ಆಕೆಯ ಆರೈಕೆ ಮಾಡುತ್ತಾರೋ ಅವರು ಇಂತಹ ಲಕ್ಷಣಗಳು ಕಾಣಿಸಿಕೊಂಡಾಗ ಕಾಳಜಿವಹಿಸಬೇಕು.

ಆಕೆಯೊಡನೆ ಮುಕ್ತವಾಗಿ ಮಾತಾಡಿ ಧೈರ್ಯ ತುಂಬಬೇಕು. ಆಕೆ ಕೋಪ ಮಾಡಿಕೊಂಡರೆ ಸಹನಶೀಲರಾಗಿ ನಡೆದುಕೊಳ್ಳಬೇಕು. ಆಕೆಯ ಲಕ್ಷಣಗಳು ಗಂಭೀರವಾಗಿದ್ದರೆ ವೈದ್ಯರ/ಮನೋವೈದ್ಯರ ಬಳಿ ಕರೆದೊಯ್ಯಬೇಕು. ಚಿಕಿತ್ಸೆ/ಆಪ್ತ ಸಲಹೆ ಕೊಡಿಸಬೇಕು. ಬಾಣಂತಿಯ ಜೊತೆಗೆ ಸದಾ ಇರಬೇಕು. ಆಕೆಯನ್ನು ಒಂಟಿಯಾಗಿ ಇರಲು ಬಿಡಬಾರದು. ಖಿನ್ನತೆಗೆ ಶಮನಕಾರಿಗಳು ಹಾಗೂ ಇತರೆ ಔಷಧಿಗಳನ್ನು ಈ ಸಮಸ್ಯೆ ನಿವಾರಣೆಗೆಸೂಚಿಸ ಲಾಗುತ್ತದೆ.

ಆಯುರ್ವೇದದಲ್ಲೂ ಪರಿಹಾರ

ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಮಾನಸಿಕ ಸಮಸ್ಯೆಗಳಿಗೆ ಚಿಕಿತ್ಸೆ ಲಭ್ಯ ಇದೆ. ಬ್ರಾಹ್ಮಿ, ಜ್ಯೋತಿಷ್ಮತಿ, ಅಶ್ವಗಂಧ, ಶತಾವರಿ ಔಷಧಿಗಳ ಜೊತೆಗೆ ಆಹಾರದಲ್ಲಿ ಒಂದೆಲಗ, ನೀರು ಬ್ರಾಹ್ಮಿ, ಚಕ್ರಮುನಿ ಸೊಪ್ಪುಗಳಿಂದ ತಯಾರಿಸಿದ ಸಾರು, ತಂಬುಳಿ, ಪಲ್ಯಗಳ ಸೇವನೆಯಿಂದ ಹಿತವಾಗುತ್ತದೆ. ಪಂಚಕರ್ಮ ಚಿಕಿತ್ಸೆಯಲ್ಲಿ ಶಿರೋಧಾರಾ, ನಸ್ಯ ಚಿಕಿತ್ಸೆ, ಶಿರೋಪಿಚು ಮಾನಸಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸಿ ಮನಸ್ಸಿಗೆ ನೆಮ್ಮದಿ ಉಂಟುಮಾಡುತ್ತವೆ.

ಹೀಗೆ ಸೂಕ್ತ ಔಷಧೋಪಚಾರ, ಆಪ್ತ ಸಲಹೆ ಮತ್ತು ಮನೆಯವರ ಪ್ರೀತಿ ಮತ್ತು ಆರೈಕೆಗಳಿಂದ ಬಾಣಂತಿ ಹೆರಿಗೆ ನಂತರ ಉಂಟಾಗುವ ಖಿನ್ನತೆಯಿಂದ ಬಹುಬೇಗ ಹೊರಬರಬಹುದು. ಮಗುವಿನ ಲಾಲನೆಪಾಲನೆಯಲ್ಲಿ ದೃಷ್ಟಿ ಹರಿಸಬಹುದು.

(ಲೇಖಕರು ಆಯುರ್ವೇದ ವೈದ್ಯರು)

ಅನಿವಾರ್ಯ ಕಾರಣಗಳಿಂದಾಗಿ ಈ ಸಂಚಿಕೆಯಲ್ಲಿ 'ಏನಾದ್ರೂ ಕೇಳ್ಬೋದು' ಅಂಕಣ ಪ್ರಕಟವಾಗಿಲ್ಲ.

ಏನಾದ್ರೂ ಕೇಳ್ಬೋದು...

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಹಳತಿನ ಲೆಕ್ಕಾಚಾರ, ಹೊಸತಿನ ನಿರೀಕ್ಷೆ...

ಕ್ಯಾಲೆಂಡರ್ ಬದಲಾದರೂ ಚಿಗುರಿದ ಕನಸಿನ ಬಳ್ಳಿಗಳು ಹಾಗೇ ಹಬ್ಬಿಕೊಂಡಿರುತ್ತವೆ. ಆ ಬಳ್ಳಿಯಲ್ಲಿ ಹೂವು ಚಿಗುರುವವರೆಗೂ ಕಾಯಬೇಕು. ಕಾಯುವಿಕೆಗಿಂತ ಅನ್ಯ ತಪವೊಂದಿಲ್ಲ. ಹಾಗೆಯೇ ಕಳೆದು ಹೋದದ್ದರ ಬಗ್ಗೆ ಚಿಂತಿಸದೆ, ಹೊಸ ತಿರುವಿನ ನಿರೀಕ್ಷೆಯಲ್ಲಿ ಹೊಸ ವರುಷವನ್ನು ಎದುರುಗೊಳ್ಳೋಣ.

ರಶ್ಮಿ ಎಸ್.

ಲಹರಿ

ಈ ಡಿಸೆಂಬರ್ ಮಾಸದ ಚಳಿ ಮತ್ತು ಇಳಿಗತ್ತಲೆಯನ್ನು ಅನುಭವವೇ ಚಂದ. ಇದ್ದಕ್ಕಿದ್ದಂತೆ ಗಾಢ ಕಪ್ಪು ಬಣ್ಣದಲ್ಲಿ ವಜ್ರದಂತೆ ಹೊಳೆಯುವ ತಾರೆಗಳನ್ನು ನೋಡುವಾಗ, ಈ ವರ್ಷ ಕಳೆದದ್ದು ಹೇಗೆ ಎಂಬ ಯೋಚನೆ ಬಾರದೇ ಇರದು.

ಇದ್ದಕ್ಕಿದ್ದಂತೆ ಹಿಂದಿನ ವರ್ಷದ ಸಂಭ್ರಮಾಚರಣೆ ನೆನಪಾಗುತ್ತಲೇ ಕಣ್ಗಳು ತುಂಬಿ ಬರುತ್ತವೆ. ಆ ಸಂಭ್ರಮಾಚರಣೆಯ ಹಿಂದೆಯೇ ಈ ವರ್ಷದಲ್ಲಿ ಕಳೆದುಕೊಂಡವರ ನೆನಪಾಗುತ್ತದೆ. ಅವರು ಸಂಬಂಧಿಗಳೋ, ಸ್ನೇಹಿತರೋ... ಬದುಕಿಗೆ ವಿದಾಯ ಹೇಳಿದವರನ್ನು ನೆನೆದಾಗಲೆಲ್ಲ.. ಕರಾಳ ವರ್ಷ ಇದು ಎಂದೆನಿಸದೇ ಇರದು.

ಹೋದವರೆಲ್ಲ ಹೋದರು. ಇದ್ದವರಿಗೆ ಅದೆಷ್ಟು ಆಸೆ, ಈ ಜೀವ ಶಾಶ್ವತ ಎಂಬಂತೆ ಮನಸು ಲೆಕ್ಕದಲ್ಲಿ ತೊಡಗುತ್ತದೆ. ವರ್ಷದ ಗಳಿಕೆ ಅತಿ ಹೆಚ್ಚು ಇತ್ತು ಎಂದು ಹಿಗ್ಗುವುದರಲ್ಲಿಯೇ ಕಳೆದಿದ್ದು ಎಷ್ಟು? ಆಸ್ಪತ್ರೆಗೆ ಅದೆಷ್ಟು ಹಣ ಸುರಿದೆವು? ಎಷ್ಟು ಬಳಲಿದ್ವಿ, ಉಳಿದವರು ಹೇಗಿದ್ದಾರೆ? ಅವರಿಗಿಂತ ನಮ್ಮ ಬದುಕು ಪರವಾಗಿಲ್ಲ ಎಂಬ ಅಲ್ಪ ಸಮಾಧಾನದಲ್ಲಿದ್ದಾಗಲೇ, ಉಳಿಕೆಯ ಗಂಟು ಅದೆಲ್ಲಿ ಕರಗಿತು? ಆ ಗಂಟಿಗೆ ಅದೆಷ್ಟು ಪುಡಿಗಾಸು ಸೇರಿಸಲು ಸಾಧ್ಯವಾಯ್ತು...? ಈ ಪ್ರಶ್ನೆಗಳ ಬೆನ್ನಟ್ಟಿ ಹೋಗುವಾಗಲೇ ಹಿಂದಿನ ವರ್ಷ ಯಾವ ಸಮಾರಂಭಗಳಿಗೆ ಎಲ್ಲೆಲ್ಲಿ ಹೋಗಿ ಬಂದೆವು? ರಜಾ ಪ್ರವಾಸಗಳು ಹೇಗಿದ್ದವು? ಸಮಾರಂಭಗಳಲ್ಲಿ ಯಾರ ಒಡವೆ, ಯಾವ ಸೀರೆ ನಮ್ಮ ಬಯಕೆಯ ಪಟ್ಟಿಗೆ ಬಂದಿತು? ಬಯಕೆಯ ಪಟ್ಟಿಯಿಂದ ಬೇಡಿಕೆಯ ಪಟ್ಟಿಗೆ ಜಿಗಿದಿದ್ದು ಯಾವಾಗ.. ಈ ಯೋಚನೆ ಬರುವಾಗ ತುಟಿ ಮೇಲೊಂದು ಸಣ್ಣ ನಗೆ.

ಜೊತೆಜೊತೆಗೆ ಹಳತಾದ ವಸ್ತುಗಳ ಪಟ್ಟಿ.. ಆಗಾಗ ನೀರು ಸೋರುವ ಫ್ರಿಜ್ಜು ಈ ಸಲವಾದರೂ ಬದಲಿಸಲೇಬೇಕು, ಟಾಪ್ ಲೋಡಿಂಗ್ ಇದ್ದ ಮಷೀನು ಫ್ರಂಟ್‌ಲೋಡಿಗೆ ಬದಲಿಸಬೇಕು. ಈ ನಡುವೆ ಬಟ್ಟೆಯಿಂದ ವಾಷಿಂಗ್ ಪೌಡರ್‌ನ ಮಧುರ ಸುವಾಸನೆ ಬರುತ್ತದೆಯಷ್ಟೆ.. ಕೊಳೆ ಹೋಗುವುದೇ ಇಲ್ಲ ಎಂಬ ದೂರಿಗೂ ಕಿವಿಯಾಗುತ್ತೇವೆ. ಅದೆಷ್ಟು ವರ್ಷಗಳಿಂದ ಫ್ಯಾನು ಒಂದರಿಂದ ನಾಲ್ಕರವರೆಗೆ ತಿರುಗಿಸಿಯೇ ಸೆಕೆ ನಿರ್ವಹಿಸುತ್ತೇವೆ. ಈಗೀಗಲಂತೂ ಒಂದೇ ದಿನದಲ್ಲಿ ಸರ್ವ ಋತುಗಳೂ ಕಾಣುತ್ತಿವೆ.. ಕಾಡುತ್ತಿವೆ.. ಈ ಸಲವಾದರೂ ಕಂತಿನಲ್ಲಾದರೂ ಸರಿ, ಒಂದು ಎಸಿ ತೆಗೆದುಕೊಳ್ಳಲೇಬೇಕು. ಹೀಗೆನ್ನುವಾಗಲೇ ಮನೆಯ ಕನಸು ಮತ್ತೆ ಹೆಡೆಯೆತ್ತುತ್ತದೆ. ಸ್ವಂತದ್ದೊಂದು ಮನೆಯಿದ್ದರೆ...

ಈ 'ರೆ' ಎಂಬ ಮಾತು ಬಂದಾಕ್ಷಣ ಕನಸುಗಳು ಗರಿಗೆದರುತ್ತವೆ. ಸ್ವಂತದ್ದೊಂದು ಮನೆ ಇರಲಿ, ಗಾಳಿ ಬೆಳಕು ದಂಡಿಯಾಗಿ ಬರಲಿ, ಈಗೆಲ್ಲ ಸೌರಶಕ್ತಿಯ ಮನೆಗಳಿವೆ. ಒಮ್ಮೆ ಖರ್ಚು ಮಾಡಿದರೆ ಜೀವನಪೂರ್ತಿ ಆತ್ಮನಿರ್ಭರ ಆಗ್ತೀವೇನೊ. ಹಂಗೆನೆ ಮಳೆ ನೀರು ಸಂಗ್ರಹ ಮಾಡಿಕೊಳ್ಳಬೇಕು. ನೀರು, ವಿದ್ಯುತ್ ಎರಡೂ ಸಿಕ್ಕರೆ... ತಿಂಗಳ ಖರ್ಚಿನಲ್ಲಿ ಅದೆಷ್ಟು ಉಳಿತಾಯವಾಗಬಹುದು... ಅರೆರೆ... ಇನ್ನೆಷ್ಟು ವರ್ಷ ಸರ್ವಿಸ್ ಉಳಿದಿದೆ? ಸಾಲ ಎಷ್ಟಾಗಬಹುದು? ಕಂತು ತುಂಬುವುದು ಹೇಗೆ? ಬಾಡಿಗೆಯನ್ನೇ ಕಂತಾಗಿ ಬದಲಾಗಬಹುದು.. ಮತ್ತೆ ಈ ಗಾಳಿಪಟದ ಸೂತ್ರವೂ ಕಿತ್ತು ಹೋಗುತ್ತದೆ.

ಕಣ್ಮುಂದೆ ಮಕ್ಕಳ ಶಿಕ್ಷಣದ ಗಾಳಿಪಟ.. ಓಹ್.. ಈ ವರ್ಷ ಇಷ್ಟು ಖರ್ಚು ಬರಬಹುದು.. ಎಂಬತ್ತು ಸಾವಿರ ಶುಲ್ಕವಾದರೆ ಒಟ್ಟು ಒಂದು ಕಾಲು ಲಕ್ಷದಷ್ಟು ಖರ್ಚು ಬರಬಹುದು. ಈ ಸಲವಾದರೂ ಶೈಕ್ಷಣಿಕ ಪ್ರವಾಸಕ್ಕೆ ಮಕ್ಕಳಿಗೆ ಕಳುಹಿಸಬೇಕು, ಖರ್ಚಿಗೆ ಅದೆಷ್ಟು ಕೊಡಬೇಕು? ಯಾವ ಚೀಟಿ ಎಲ್ಲಿ ಮುಗಿಯಬಹುದು? ಯಾವಾಗ ಮುಗಿಯಬಹುದು? ಕ್ಯಾಲೆಂಡರ್‌ನ ಹಿಂಬದಿಯಲ್ಲಿ, ಸೈಡಿನಲ್ಲಿ ಬರೆದ ಲೆಕ್ಕಾಚಾರಕ್ಕೆ ಕೊನೆ ಇದೆಯೇ?

ಕ್ಯಾಲೆಂಡರ್ ಬದಲಾಗುತ್ತದೆ. ಕನಸುಗಳು ಬದಲಾಗುವುದಿಲ್ಲ. ನಿರೀಕ್ಷೆಗಳೂ ಬದಲಾಗುವುದಿಲ್ಲ. ಕೆಲವು ಬಯಕೆಗಳು ಸಾಕಾರವಾಗುವಾಗ, ಹಾಸಿಗೆ ಇದ್ದಷ್ಟು ಕಾಲು ಚಾಚುವುದಲ್ಲ, ಕೆಲವೊಮ್ಮೆ ಮುದುರಿ, ಭ್ರೂಣಾಕಾರದಲ್ಲಿ ಮಲಗುತ್ತೇವೆ. ಕನಸೊಂದು ಮಗುವಿನಂತೆ ಮುಲುಗುತ್ತಿರುತ್ತದೆ... ಅಲ್ಲಲ್ಲಿಯೇ..

ಇಷ್ಟೆಲ್ಲ ಲೆಕ್ಕ ಹಾಕಿದಾಗಲೂ ಚಂದದ ಸೀರೆ ಕಂಡಾಗ, ಆತ್ಮೀಯರಿಗೆ ಉಡುಗೊರೆ ಕೊಳ್ಳುವಾಗ ಎರಡೇ ಎರಡು ಸಾಲುಗಳು ನೆನಪಾಗುತ್ತವೆ. ನಾವು ಉಂಡಷ್ಟೇ ನಮ್ಮದು. ನಾವು ಉಟ್ಟಿದ್ದಷ್ಟೇ ನಮಗೆ ದಕ್ಕಿದ್ದು. ಉಳಿದದ್ದು ಯಾವುದೂ ನಮಗಾಗಿ ಅಲ್ಲ. ನಾವು ನಮಗಾಗಿ ಬದುಕುವುದೇ ಇಲ್ಲ.. ಇಂಥದ್ದೊಂದು ಜ್ಞಾನೋದಯವಾದಾಗ ವಾರ್ಷಿಕ ರೆಸ್ಯುಲುಷನ್‌ಗಳತ್ತ ಗಮನ ಹೊರಳುತ್ತದೆ..

ಈ ಸಲ ವಾಕ್ ಮಾಡಲೇಬೇಕು. ತೂಕ ಇಳಿಸಿಕೊಳ್ಳಲೇ ಬೇಕು. ಸರ್ ಸಲಾಮತ್ ತೊ ಪಗಡಿ ಹಜಾರ್ ಜೀವ ಗಟ್ಟಿ ಇರಬೇಕು. ಅದಕ್ಕಾಗಿಯೇ ಆರೋಗ್ಯಕ್ಕೆ ಹೆಚ್ಚು ಗಮನ ಕೊಡಬೇಕು. ಆರೋಗ್ಯಕರವಾಗಿರುವುದನ್ನೇ ಸೇವಿಸಬೇಕು. ಗಾಣದೆಣ್ಣೆಯನ್ನೇ ತರಬೇಕು. ಕರಿದಿದ್ದು ತಿನ್ನಲೇ ಬಾರದು. ಎಲ್ಲವೂ ವರ್ಜ್ಯ. ಇನ್ಮೇಲೆ ಏನಿದ್ದರೂ ಮೊಳಕೆ ಕಾಳು, ವಾಕು.

ವಾಕಿಗೆ ಒಳ್ಳೆಯ ಶೂ ತೊಗೊಬೇಕು. ಜೊತೆಗೊಂದು ನಾಯಿ ಇದ್ದರೆ ಚಂದ. ಅದೊಂದು ಅಭ್ಯಾಸವಾಗಿ ಬದಲಾಗುವುದು. ನಾಯಿಗೊಂದು ಗೂಡು ಇರಬೇಕು. ಮನೆ ಮಾಲೀಕರು ಒಪ್ಪುವರೊ? ಅಪಾರ್ಟ್‌ಮೆಂಟ್‌ನಲ್ಲಿ ಸಾಕಬಹುದೆ? ಛೆ... ಚಂದದ ಮನೆಯೊಂದಿರಬೇಕು... ಮತ್ತೆ ಲೆಕ್ಕಾಚಾರ ಶುರುವಾಗುತ್ತದೆ...

ಹೊಸತೊಂದು ಕ್ಯಾಲೆಂಡರ್ ತರುವಾಗ ತಿಥಿ, ಜ್ಯೋತಿಷ್ಯ ಇರುವುದರ ಜೊತೆಗೆ ಸೈಡಿಗೆ ಚೂರು ಜಾಗ ಇರಬೇಕು, ಲೆಕ್ಕ ಬರೆಯಲು, ಚಿತ್ರಗಳಿರಬಾರದು, ದಿನಾಂಕದ ಬದಿ ಬಿಳಿ ಸ್ಥಳ ಹೆಚ್ಚಿರಬೇಕು. ಹಾಲು ಬರದಿದ್ದರೆ, ಪೇಪರ್ ಬರದಿದ್ದರೆ ಮಾರ್ಕ್ ಮಾಡಲು ಅನುಕೂಲವಾಗುವಂತಿರಬೇಕು..

ಹೀಗೆ ಪುಟ್ಟದೊಂದು ಸಂಚಿಯಲ್ಲಿ, ಖರ್ಚಿಗೊಂದು ದೊಡ್ಡ ಪಾಕೀಟು ಇರಿಸಿ, ಕನಸುಗಳಿಗೆ ಸಣ್ಣಸಣ್ಣ ಜಾಗಗಳಿರಿಸಿ, ಹೇಗಿದ್ದರೂ ಮುಂದಿನವರ್ಷದಿಂದ ಆರೋಗ್ಯಕರ ಊಟ ಮಾಡುವುದರಿಂದ ಕೊನೆಯ ದಿನಕ್ಕೆ ಚೀಸ್ ಕೇಕ್, ಬಾಳೆಕಾಯಿ ಉಪ್ಪೇರಿ, ಚಿಪ್ಸುಗಳ ಪಟ್ಟಿ ಸಿದ್ಧಪಡಿಸಲು ತಯಾರಾಗುತ್ತೇವೆ. ಡಿ.31ರ ಅರ್ಧ ರಾತ್ರಿಯಲ್ಲಿ ಕಳುಹಿಸಲು ಚಂದದ ಸಂದೇಶವನ್ನೊ, ಕವಿತೆಯನ್ನೊ ಹುಡುಕಬೇಕು ಹೀಗೆಲ್ಲ ಹಲವು ತಯಾರಿಯೊಡನೆ ಹಳೆಯ ವರ್ಷವನ್ನು ಬೀಳ್ಕೊಡುತ್ತೇವೆ. ಹೊಸ ವರ್ಷದ ಬೆಳಗು, ಹಲವಾರು ಹೊಸ ನಿರ್ಧಾರ, ಕನಸುಗಳೊಂದಿಗೆ ಹೂನಗೆ ನಗುತ್ತದೆ.

ಹಣ್ಣು, ತರಕಾರಿಗಳ 'ದೇಸಿ ರುಚಿ'

ನಳಪಾಕ

ತರಕಾರಿ, ಹಣ್ಣುಗಳನ್ನು ಬಳಸಿ ಮಾಡುವ ದೇಸಿ ರುಚಿ ಖಾದ್ಯಗಳು ವಿಶಿಷ್ಟವಾಗಿರುತ್ತವೆ. ಸರಳವಾಗಿ, ತ್ವರಿತವಾಗಿ ತಯಾರಿಸುವ ಅಂಥ ದೇಸಿ ಖಾದ್ಯಗಳ ರೆಸಿಪಿಯನ್ನು ಪರಿಚಯಿಸುತ್ತಿದ್ದಾರೆ ಮಾಲತಿ ಹೆಗಡೆ

ಗೋಧಿ–ಕಡ್ಲೆ ಲಡ್ಡು

ಬೇಕಾಗುವ ಸಾಮಗ್ರಿಗಳು

ನೂರು ಗ್ರಾಂ ಗೋಧಿ ಹಿಟ್ಟು, ನೂರು ಗ್ರಾಂ ಕಡಲೆಹಿಟ್ಟು, ಎರಡುನೂರು ಗ್ರಾಂ ಸಕ್ಕರೆ, ನೂರೈವತ್ತು ಗ್ರಾಂ ತುಪ್ಪ, ಒಂದು ಬಟ್ಟಲು ಪೇಪರ್ ಅವಲಕ್ಕಿ, ಎರಡು ಬಟ್ಟಲು ಎಣ್ಣೆ, ಮೂರು ಬಟ್ಟಲು ಸಕ್ಕರೆ, ಅರ್ಧ ಚಮಚ ಏಲಕ್ಕಿಪುಡಿ. ಅರ್ಧ ಗ್ರಾಂ ಕೇಸರಿ.

ತಯಾರಿಸುವ ವಿಧಾನ: ಹಿಟ್ಟುಗಳನ್ನು ತುಪ್ಪದಲ್ಲಿ ಪ್ರತ್ಯೇಕವಾಗಿ ಸಣ್ಣ ಉರಿಯಲ್ಲಿ ಹುರಿಯಬೇಕು. ಎಣ್ಣೆಯಲ್ಲಿ ಅವಲಕ್ಕಿಯನ್ನು ಕರಿದಿಡಬೇಕು. ಸಕ್ಕರೆಗೆ ಅರ್ಧ ಕಪ್ ನೀರು ಸೇರಿಸಿ ಉಂಡೆ ಪಾಕವಾಗುವವರೆಗೆ ಕುದಿಸಿ. ಹಿಟ್ಟುಗಳನ್ನು ಹಾಕಿ ಚೆನ್ನಾಗಿ ಮಿಶ್ರಣ ತಯಾರಿಸಿ ನಂತರ ಕರಿದ ಅವಲಕ್ಕಿಯನ್ನು ಏಲಕ್ಕಿಪುಡಿಯನ್ನು, ಕೇಸರಿ ಎಸಳುಗಳನ್ನೂ ಹಾಕಿ ಕೊಂಚ ಬಿಸಿ ಇರುವಾಗಲೇ ಉಂಡೆ ಕಟ್ಟಬೇಕು. ಗೋಧಿ–ಕಡ್ಲೆಹಿಟ್ಟಿನ ಲಡ್ಡು ಸಿದ್ಧ.

ದೀವಿ ಹಲಸು ಪೋಡಿ



ಬೇಕಾಗುವ ಸಾಮಗ್ರಿಗಳು

ದೀವಿ ಹಲಸು (ದೀಗುಜ್ಜೆ, ಬಲಿತ ಬೇರು ಹಲಸು), ನೂರು ಗ್ರಾಂ ಚಿರೋಟಿ ರವೆ, ಎರಡು ಚಮಚ ಮೆಣಸಿನಪುಡಿ, ನೂರು ಗ್ರಾಂ ಶೇಂಗಾ ಎಣ್ಣೆ, ಒಂದು ಚಮಚ ಪುಡಿ ಉಪ್ಪು.

ತಯಾರಿಸುವ ವಿಧಾನ:

ದೀವಿ ಹಲಸಿನ ಕಾಯಿಯ ಸಿಪ್ಪೆ ತೆಗೆದು ಕಾಯಿಯ ಒಳಗಿನ ಮೂಗು ಕತ್ತರಿಸಿ, ಉದ್ದವಾಗಿ ತೆಳುವಾಗಿ ಕತ್ತರಿಸಿಕೊಳ್ಳಬೇಕು. ರವೆಗೆ ಉಪ್ಪು ಮೆಣಸಿನ ಪುಡಿಯನ್ನು ಹಾಕಿ ಚೆನ್ನಾಗಿ ಮಿಶ್ರಣ ತಯಾರಿಸಿ ಅದರಲ್ಲಿ ದೀವಿ ಹಲಸಿನ ಚೂರುಗಳನ್ನು ಹೊರಳಾಡಿಸಿ ತವಾದ ಮೇಲೆ ಸ್ವಲ್ಪ ಸ್ವಲ್ಪ ಎಣ್ಣೆ ಹಾಕಿ ಎರಡೂ ಪಕ್ಕ ಚೆನ್ನಾಗಿ ಬೇಯಿಸಬೇಕು. ಇದನ್ನೇ ಪೋಡಿ ಎನ್ನುವುದು. ಈ ಪೋಡಿಯನ್ನು ಬಿಸಿ ಇರುವಾಗಲೇ ತಿನ್ನಬೇಕು.

ಹಣ್ಣಿನ ಸಿಹಿಗಡುಬು

ಬೇಕಾಗುವ ಸಾಮಗ್ರಿ: ಕಳಿತ ಆರು ಬಾಳೆಹಣ್ಣು (ಯಾವುದಾದರೂ ಆದೀತು), ಒಂದು ಕಪ್ ಬೆಲ್ಲ, ಕಾಲು ಚಮಚ ಉಪ್ಪು, ಚಿಟಿಕೆ ಅಡುಗೆ ಸೋಡ, ಒಂದು ಕಪ್ ಇಡ್ಲಿ ತರಿ, ಅರ್ಧ ಕಪ್ ತೆಂಗಿನತುರಿ, ನಾಲ್ಕು ಏಲಕ್ಕಿ.

ತಯಾರಿಸುವ ವಿಧಾನ: ಬಾಳೆಹಣ್ಣು, ಬೆಲ್ಲ, ಉಪ್ಪು, ಏಲಕ್ಕಿಪುಡಿ, ಎಲ್ಲವನ್ನು ಮಿಕ್ಸಿಗೆ ಹಾಕಿ ನುಣ್ಣಗೆ ರುಬ್ಬಿ. ತೆಂಗಿನ ತುರಿ ಸೇರಿಸಿ. ಇಡ್ಲಿರವೆಯನ್ನು ತೊಳೆದು ಸೇರಿಸಿ. ಇಡ್ಲಿ ತಟ್ಟೆಗೆ ತುಪ್ಪ ಸವರಿ ಅರ್ಧ ಗಂಟೆ ಬೇಯಿಸಬೇಕು.

ಹಲಸಿನ ಹಣ್ಣಿನ ಕಾಲದಲ್ಲಿ, ಬಾಳೆ ಹಣ್ಣಿನ ಬದಲಿಗೆ ಇಪ್ಪತ್ತೈದು ಹಲಸಿನ ತೊಳೆಗಳನ್ನು ಬಳಸಿ ಈ ಸಿಹಿ ಕಡುಬನ್ನು ತಯಾರಿಸಬಹುದು. ಬಾಳೆಹಣ್ಣು, ಹಲಸಿನ ಹಣ್ಣು ಇಲ್ಲದಿದ್ದಾಗ, ತಿರುಳು ತೆಗೆದ ಸೌತೆಕಾಯಿಯನ್ನು ಬಳಸಬಹುದು.

ಬೀಟ್ರೂಟ್ ಹೋಳಿಗೆ

ಬೇಕಾಗುವ ಸಾಮಗ್ರಿಗಳು

ಅರ್ಧ ಕೆ.ಜಿ ಬೀಟ್ರೂಟ್, ಕಾಲು ಕೆ.ಜಿ. ಸಕ್ಕರೆ, ಅರ್ಧ ಚಮಚ ಏಲಕ್ಕಿ ಪುಡಿ, ಅರ್ಧ ಕೆ.ಜಿ ಮೈದಾ ಹಿಟ್ಟು, ಕಾಲು ಚಮಚ ಅರಿಸಿನ, ನೂರು ಗ್ರಾಂ. ಶೇಂಗಾ ಎಣ್ಣೆ.

ತಯಾರಿಸುವ ವಿಧಾನ

ಬೀಟ್ರೂಟ್ ಅನ್ನು ಸಿಪ್ಪೆ ತೆಗೆದು ತುರಿದುಕೊಳ್ಳಬೇಕು. ಸಕ್ಕರೆ ಬೆರೆಸಿದ ಬೀಟ್ರೂಟ್ ತುರಿಯನ್ನು ದಪ್ಪ ತಳದ ಪಾತ್ರೆಗೆ ಹಾಕಿ ನೀರು ಇಂಗುವವರೆಗೆ ಗೊಟಕಾಯಿಸಿ ಹೂರಣ ತಯಾರಿಸಬೇಕು. ಮೈದಾ ಹಿಟ್ಟಿಗೆ ಅರಿಶಿನ ಪುಡಿ ಹಾಕಿ ನೀರು ಸೇರಿಸಿ ಮೆತ್ತಗೆ ಕಲಸಿ ಎಣ್ಣೆಹಾಕಿ ನಾದಿ ಕಣಕ ತಯಾರಿಸಿಟ್ಟು ಒಂದು ತಾಸು ಮುಚ್ಚಿಡಬೇಕು. ಕಣಕವನ್ನು ಅಂಗೈಯಲ್ಲಿ ತಟ್ಟಿ ಹೂರಣವನ್ನಿಟ್ಟು ಮುಚ್ಚಿ ಪ್ಲಾಸ್ಟಿಕ್ ಹಾಳೆಯ ಮೇಲಿಟ್ಟು ಲಟ್ಟಿಸಿ ಸಣ್ಣ ಉರಿಯಲ್ಲಿ ಎರಡೂ ಕಡೆ ಬೇಯಿಸಬೇಕು. ಬೀಟ್ರೂಟ್ ಹೋಳಿಗೆ ಸಿದ್ಧವಾಯಿತು. ಬಿಸಿ ಇರುವಾಗಲೆ ತುಪ್ಪ ಹಾಕಿಕೊಂಡು ಸವಿಯಿರಿ.

ತುಟಿಯ ರಂಗಿಗೆ ಲಿಪ್‌ಗ್ಲಾಸ್

ಶುಭ ಕೆ.ಬಿ.

ಸೌಂದರ್ಯ

ಅಂದದ ಅಧರವಿದ್ದರೆ ಸೌಂದರ್ಯ ಇಮ್ಮಡಿಗೊಳ್ಳುತ್ತದೆ. ವದನದ ಅಂದ ಹೆಚ್ಚಿಸುವಲ್ಲಿ ತುಟಿಯ ರಂಗು ಪ್ರಮುಖ ಪಾತ್ರ ವಹಿಸುವುದರಿಂದ ಮೇಕಪ್ ಮಾಡದೇ ತುಟಿಯ ರಂಗಿನಿಂದಲೇ ಚಂದ ಕಾಣುವ ಟ್ರೆಂಡ್ ಸದ್ಯಕ್ಕಿದೆ.

ಕಾಲೇಜು ಯುವತಿಯರಿಂದ ಹಿಡಿದು ಬಹುತೇಕ ಮಹಿಳೆಯರು ತುಟಿಯ ಕಾಳಜಿ ಮಾಡುವುದು ಸಹಜ. ಬಗೆ ಬಗೆಯ ತುಟಿಯರಂಗಿನಲ್ಲಿ ತಮಗೆ ಮೆಚ್ಚುವ ರಂಗನ್ನು ಆಯ್ಕೆ ಮಾಡಿಕೊಳ್ಳುವುದೂ ಒಂದು ಕೌಶಲ. ಅದರಲ್ಲೂ ಲಿಪ್‌ಗ್ಲಾಸ್ ಆಯ್ಕೆ ಮಾಡಿಕೊಳ್ಳುವಾಗ ಜಾಗ್ರತೆ ವಹಿಸಿದಷ್ಟು ಉತ್ತಮ. ಅದರ ಕೆಲ ಟಿಪ್ಸ್‌ಗಳನ್ನು ಇಲ್ಲಿ ನೀಡಲಾಗಿದೆ.

ಲಿಪ್‌ಗ್ಲಾಸ್ ವಿಧ

- **ಹೊಳೆಯುವ ಮತ್ತು ನೈಸರ್ಗಿಕ ಲಿಪ್‌ಗ್ಲಾಸ್** (Shine and Natural lipgloss) : ಇದು ತುಟಿಗೆ ನೈಸರ್ಗಿಕ ಲುಕ್‌ನೊಂದಿಗೆ ಹೊಳಪನ್ನು ನೀಡುತ್ತದೆ. ಇದನ್ನು ಯಾವುದೇ ವರ್ಣದ ಲಿಪ್‌ಸ್ಟಿಕ್ ಮೇಲೆ ಅಪ್ಲೈ ಮಾಡಬಹುದು.
- **ವರ್ಣಯುಕ್ತ (ಕಲರಿಂಗ್) ಲಿಪ್‌ಗ್ಲಾಸ್:** ಬಣ್ಣ ಹಾಗೂ ಹೊಳಪು ಎರಡನ್ನೂ ನೀಡುತ್ತದೆ.

– ಗ್ಲಿಟ್ಟರ್ ಲಿಪ್‌ಗ್ಲಾಸ್: ಗ್ಲಿಟರಿ (ಮಿನುಗುವ) ಹೊಳಪನ್ನು ನೀಡುತ್ತದೆ. ಟೀನೇಜ್ ಯುವತಿಯರು ಹೆಚ್ಚು ಬಳಸುತ್ತಾರೆ.

- **ಸುವಾಸನೆಯುಕ್ತ ಲಿಪ್‌ಗ್ಲಾಸ್:** ಸ್ಟ್ರಾಬೆರಿ, ವೆನಿಲಾ, ರೋಸ್, ಆರೆಂಜ್ ಹೀಗೆ ಹಲವು ಸುವಾಸನೆಯಲ್ಲಿಯೂ ಲಿಪ್‌ಗ್ಲಾಸ್ ಲಭ್ಯವಿದೆ.

ಲಿಪ್‌ಗ್ಲಾಸ್ ಬಳಕೆಗೆ ಸಲಹೆಗಳು

- ಲಿಪ್‌ಗ್ಲಾಸ್ ಬಳಸುವುದಕ್ಕೂ ಮುನ್ನ ತುಟಿ ಒಣಗಿದ್ದರೆ, ಸಿಪ್ಪೆ ಎದ್ದಿದ್ದರೆ ಹತ್ತಿಬಟ್ಟೆ ಅಥವಾ ಮೃದುವಾದ ಬ್ರಷ್ ಅನ್ನು ಒದ್ದೆ ಮಾಡಿಕೊಂಡು ಮೃದುವಾಗಿ ತುಟಿಯನ್ನು ಉಜ್ಜಿ ಡೆಡ್ ಸ್ಕಿನ್ ತೆಗೆದುಕೊಳ್ಳಿ.
- ನಂತರ ಲಿಪ್ ಬಾಮ್ ಹಚ್ಚಿಕೊಳ್ಳಿ.
- ಲಿಪ್‌ಗ್ಲಾಸ್ ಹಚ್ಚಿದ ನಂತರ ಎರಡು ತುಟಿಗಳನ್ನು ರಬ್ ಮಾಡಬೇಡಿ. ಇದರಿಂದ ಲಿಪ್‌ಗ್ಲಾಸ್ ತುಟಿಯಿಂದ ಹೊರಹೋಗುವ ಸಾಧ್ಯತೆ ಇರುತ್ತದೆ.
- ಲಿಪ್‌ಸ್ಟಿಕ್ ಮೇಲೆ ಲಿಪ್‌ಗ್ಲಾಸ್ ಬಳಸುವುದಾದರೆ, ಮ್ಯಾಟ್ ಲಿಪ್‌ಸ್ಟಿಕ್ ಅನ್ನೇ ಬಳಸಿ.
- ಸಾಧ್ಯವಾದಷ್ಟು ಯಾವಾಗಲೂ ನಿಮಗೆ ಹೊಂದುವ ಬ್ರಾಂಡೆಡ್ ಲಿಪ್‌ಗ್ಲಾಸ್ ಅನ್ನೇ ಆಯ್ದುಕೊಳ್ಳಿ ಬ್ರಾಂಡೆಡ್ ಕೊಳ್ಳುವುದರಿಂದ ದೀರ್ಘಾವಧಿವರೆಗೆ ಅಧರವನ್ನು ಅಲಂಕರಿಸುತ್ತದೆ.
- ದೇಹದ ವರ್ಣಕ್ಕೆ ಹೊಂದುವ ಬಣ್ಣದ ಲಿಪ್‌ಗ್ಲಾಸ್ ಅನ್ನೇ ಆಯ್ಕೆ ಮಾಡಿ.
- ಸಂದರ್ಭ ಹಾಗೂ ಉಡುಗೆಗೆ ಯಾವ ವರ್ಣ ಬಳಸಬೇಕು ಎಂಬ ಸೂಕ್ಷ್ಮತೆ ಇರಲಿ.

ಲಿಪ್‌ಗ್ಲಾಸ್ ದೀರ್ಘಾವಧಿ ಇರುವಂತೆ ಮಾಡುವುದು ಹೇಗೆ?

ಸಾಮಾನ್ಯವಾಗಿ ಲಿಪ್‌ಗ್ಲಾಸ್ ಬೇಗನೆ ಅಳಿಸಿಹೋಗುವುದರ ಜತೆಗೆ ತುಟಿಯ ಸುತ್ತೆಲ್ಲ ಹರಡುವುದು ಸಾಮಾನ್ಯ. ಇದನ್ನು ತಪ್ಪಿಸಲು ಇಲ್ಲಿ ಕೆಲ ಸಲಹೆ ಇದೆ.

ಲಿಪ್‌ಗ್ಲಾಸ್ ಬಳಸುವುದಕ್ಕೂ ಮುನ್ನ ಲಿಪ್‌ಲೈನರ್ ಅಪ್ಲೈ ಮಾಡಿ. ನಂತರ ಅದರ ಮೇಲೆ ಪೌಡರ್ ಹಚ್ಚಬೇಕು. ನಂತರ ಲಿಪ್‌ಗ್ಲಾಸ್ ಬಳಸಿದರೆ ದೀರ್ಘಾವಧಿವರೆಗೆ ಇರುವ ಜತೆಗೆ ತುಟಿಯ ಸುತ್ತ ಹರಡುವುದನ್ನು ತಪ್ಪಿಸಬಹುದು.



❦ ಸುಭಾಷಿತ ❦

ತಾಳ್ಮೆ ಕೆಲವೊಮ್ಮೆ ಕಹಿ ಅನಿಸಬಹುದು. ಆದರೆ, ಅದರ ಫಲ ಯಾವತ್ತಿಗೂ ಸಿಹಿಯಾಗಿರುತ್ತದೆ.
—ಅರಿಸ್ಟಾಟಲ್

ಆಶಾಭಾವ ಮೂಡಿಸುವ, ದ್ವೇಷ ಮರೆಸುವ ಹೊಸ ಭಾರತಕ್ಕಾಗಿ ಆಶಿಸೋಣವೇ?

ವರ್ಷದ ಕೊನೆಯಲ್ಲಿ ನಿಂತು ಸಂದುಹೋದ ಇಡೀ ವರ್ಷವನ್ನು ಒಮ್ಮೆ ಅವಲೋಕಿಸಿದಾಗ, ಭಾರತದ ಮನಸ್ಥಿತಿಯಲ್ಲಿ ಆಗಿರುವ ಬದಲಾವಣೆಗಳ ವಿಚಾರವಾಗಿ ನಮಗೆ ಕಾಣುವುದು ಏನು? ಮುಂದಿನ ವರ್ಷದಲ್ಲಿ ನಾವು ನಿರೀಕ್ಷಿಸಬೇಕಿರುವುದು ಏನನ್ನು? ಜಗತ್ತು ಯಾವತ್ತೂ ಹೀಗೇ ಇರುತ್ತದೆ ಮತ್ತು ಅದು ಬದಲಾಗುವುದಿಲ್ಲ ಎಂಬ ವಿವೇಕವನ್ನು ತಲೆಮಾರುಗಳಿಂದ ದಾಟಿಸಲಾಗುತ್ತಿದೆ. ತಾತ್ವಿಕ ನೆಲೆಯಲ್ಲಿ ಈ ಮಾತು ಸರಿ ಆಗಿರಬಹುದು. ಅಥವಾ, ಮನುಷ್ಯನ ದೃಷ್ಟಿಯಿಂದ ದೀರ್ಘಕಾಲದಲ್ಲಿ ಜಗತ್ತು ಹೀಗೇ ಕಾಣಿಸಬಹುದು. ಆದರೆ, ಒಂದು ವರ್ಷದ ಕಿರು ಅವಧಿಯಲ್ಲಿಯೇ ದೇಶದ ಜನರ ಜೀವನದಲ್ಲಿ ಹಾಗೂ ಪರಿಸ್ಥಿತಿಗಳಲ್ಲಿ ಬದಲಾವಣೆಗಳು ಆಗುವುದನ್ನು ಕಾಣಬಹುದು. ರಾಜಕೀಯ ಪಕ್ಷವೊಂದು ತಾನು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಳಿಕ, ಕಳೆದ ಎಂಟು ವರ್ಷಗಳಿಂದ ಎಲ್ಲವೂ ಒಳಿತಾಗಲು ಶುರುವಾಯಿತು ಎಂದು ಬಿಂಬಿಸತೊಡಗಿದೆ. ದೇಶವು ಈಗ ಹೊಸ ಚಿತ್ತಾಕಾರವನ್ನು ಹೊಂದಿ ಹೊಸದೊಂದು ಯುಗದಲ್ಲಿದೆ. ಕಲ್ಪಿತ ಪ್ರಾಚೀನ ಕಾಲವು ಎಷ್ಟು ಸುಂದರವಾಗಿತ್ತೋ ದೇಶದ ಭವಿಷ್ಯವೂ ಅಷ್ಟೇ ಸುಂದರವಾಗಿರಲಿದೆ ಎಂದು ಅದು ಪ್ರತಿಪಾದಿಸುತ್ತಿದೆ.

ಭಾರತವನ್ನು ಹಾಗೂ ಇಡೀ ವಿಶ್ವವನ್ನು ಸರಿಸುಮಾರು ಎರಡು ವರ್ಷಗಳ ಕಾಲ ಬೆದರಿಸಿದ ಒಂದು ವೈರಾಣುವಿನ ಪ್ರಭಾವ ಕಡಿಮೆಯಾಗುವುದರೊಂದಿಗೆ 2022 ಶುರುವಾಯಿತು. ಈಗ ವರ್ಷದ ಕೊನೆಯಲ್ಲಿ ಈ ವೈರಾಣು ಮತ್ತೆ ಸದ್ದು ಮಾಡತೊಡಗಿದೆ. ಕಾಲದ ಈ ಎರಡು ಬಿಂದುಗಳ ನಡುವೆ ಜನಜೀವನವು ಮನೆಗಳಲ್ಲಿ, ಕಚೇರಿಗಳಲ್ಲಿ, ಶಾಲೆಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ, ರಸ್ತೆಗಳಲ್ಲಿ, ಆಟದ ಮೈದಾನಗಳಲ್ಲಿ, ರಾಜಕೀಯದಲ್ಲಿ, ಕ್ರೀಡೆಗಳಲ್ಲಿ, ಸಮಾಜದಲ್ಲಿ ಬಹುತೇಕ ಸಹಜ ಸ್ಥಿತಿಗೆ ಮರಳಿತು. ಆದರೆ ಅದು 'ಹೊಸ ಸಹಜ ಸ್ಥಿತಿ'. ವರ್ಷದುದ್ದಕ್ಕೂ ಒಳ್ಳೆಯದು ಮತ್ತು ಕೆಟ್ಟದ್ದು, ತಪ್ಪು ಮತ್ತು ಸರಿ, ಸ್ವೀಕಾರಾರ್ಹವಾದದ್ದು ಹಾಗೂ ಸ್ವೀಕಾರಾರ್ಹವಲ್ಲದ್ದು ಇದ್ದವು. ದೇಶದ ಒಟ್ಟು ಚಟುವಟಿಕೆಗಳಲ್ಲಿ ರಾಜಕೀಯವು ಹೆಚ್ಚಿನ ಪ್ರಭಾವ ಬೀರಿತು. ಈಚಿನ ವರ್ಷಗಳಲ್ಲಿ ರಾಜಕೀಯವು ಜನಜೀವನದ ಹೆಚ್ಚೆಚ್ಚು ಕ್ಷೇತ್ರಗಳ ಮೇಲೆ ತನ್ನ ಹಿಡಿತವನ್ನು ಸಾಧಿಸುತ್ತಿದೆ. ರಾಜಕೀಯವು ಚುನಾವಣೆಗಳ ರೂಪದಲ್ಲಿ ಕಾಣಿಸುತ್ತದೆ. ಹಲವು ರಾಜ್ಯಗಳಲ್ಲಿ ನಡೆದ ಪ್ರಮುಖ ಚುನಾವಣೆಗಳಲ್ಲಿ ದೇಶದ ಪ್ರಧಾನ ರಾಜಕೀಯ ಪಕ್ಷ ಬಿಜೆಪಿ ತನ್ನ ಪ್ರಾಬಲ್ಯವನ್ನು ಮತ್ತೆ ತೋರಿಸಿತು. ಈ ಪಕ್ಷವು ಮಹಾರಾಷ್ಟ್ರ ರಾಜ್ಯದಲ್ಲಿ ಅಲ್ಲಿನ ಸರ್ಕಾರವನ್ನು ತೀರಾ ಪ್ರಶ್ನಾರ್ಹವಾದ ವಿಧಾನದ ಮೂಲಕ ಉರುಳಿಸಿ, ತಾನು ಅಧಿಕಾರ ಹಿಡಿಯಿತು. ಈ ಪಕ್ಷವು ಈ ಮಾದರಿಯಲ್ಲಿ ಬೇರೆ ರಾಜ್ಯಗಳಲ್ಲಿಯೂ ಹಿಂದೆ ಅಧಿಕಾರ ಹಿಡಿದ ನಿದರ್ಶನಗಳು ಇವೆ. ಬಿಹಾರ ರಾಜ್ಯದಲ್ಲಿ ಅಧಿಕಾರ ಹಂಚಿಕೊಂಡಿದ್ದ ಈ ಪಕ್ಷವು, ಅಧಿಕಾರ ಕಳೆದುಕೊಂಡಿತು. ಗತ ಇತಿಹಾಸದ ಪಕ್ಷ ಎಂದು ಕರೆಸಿಕೊಂಡಿದ್ದ ಕಾಂಗ್ರೆಸ್ ರಾಜ್ಯವೊಂದರಲ್ಲಿ ಮತ್ತೆ ಅಧಿಕಾರ ಹಿಡಿದು ತಾನು ಇನ್ನೂ ಇದ್ದೇನೆ ಎಂಬುದನ್ನು ತೋರಿಸಿಕೊಟ್ಟಿತು. ದೇಶದ ರಾಜಕೀಯ ಭೂಪಟದಲ್ಲಿ ಆಮ್ ಆದ್ಮಿ ಪಕ್ಷವು (ಎಎಪಿ) ಪ್ರವರ್ಧಮಾನಕ್ಕೆ ಬಂತು. ರಾಷ್ಟ್ರ ರಾಜಧಾನಿಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡು, ನೆರೆಯ ಪಂಜಾಬ್ ರಾಜ್ಯದಲ್ಲಿ ಗೆಲುವು ಸಾಧಿಸಿತು. ಗುಜರಾತ್ ರಾಜ್ಯದಲ್ಲಿ ತನ್ನ ಇರುವಿಕೆಯನ್ನು ತೋರಿಸಿತು. ಪ್ರಜಾತಂತ್ರ ವ್ಯವಸ್ಥೆಗಳಲ್ಲಿ ಪಕ್ಷಗಳು ಚುನಾವಣೆಯನ್ನು ಗೆಲ್ಲುತ್ತವೆ, ಸೋಲುತ್ತವೆ. ಉತ್ತುಂಗವನ್ನು ತಲುಪುತ್ತವೆ, ಕೆಳಕ್ಕೆ ಇಳಿಯುತ್ತವೆ. ಹುಟ್ಟಿಕೊಳ್ಳುತ್ತವೆ ಹಾಗೂ ಮಾಯವಾಗುತ್ತವೆ. ಆದರೆ ರಾಜಕೀಯ ಪಕ್ಷಗಳು ಪ್ರಜಾತಂತ್ರ ವ್ಯವಸ್ಥೆಯ ಚೈತನ್ಯವನ್ನು, ಪ್ರಜಾತಾಂತ್ರಿಕ ಆಚರಣೆಗಳನ್ನು ಇನ್ನಷ್ಟು ವ್ಯಾಪಕವಾಗಿಸುತ್ತವೆ, ಮತ್ತಷ್ಟು ಆಳವಾಗಿಸುತ್ತವೆ. ಆದರೆ, ಈಚಿನ ವರ್ಷಗಳಲ್ಲಿ ದೇಶದಲ್ಲಿ ಹೆಚ್ಚೆಚ್ಚು ಬಲ ಪಡೆಯುತ್ತಿರುವ ರಾಜಕೀಯವು, ಪ್ರಜಾತಂತ್ರದ ವಿಸ್ತರಣೆಯನ್ನು ಕಾಣುತ್ತಿಲ್ಲ. ಬದಲಿಗೆ, ಇದರಿಂದಾಗಿ ಪ್ರಜಾತಂತ್ರ ಕುಗ್ಗುತ್ತಿದೆ. ಈ ಮಾತಿಗೆ 2022ನೆಯ ಇಸವಿ ಕೂಡ ಹೊರತಾಗಿ ಇರಲಿಲ್ಲ.

ಮನುಷ್ಯನ ಸ್ವಭಾವವು ಉತ್ತಮ ಜಗತ್ತಿಗಾಗಿ ಹಾತೊರೆಯುತ್ತದೆ. ಹೊಸ ವರ್ಷ ಬಂದಾಗ, ಅದು ಉತ್ತಮ ವರ್ಷವೂ ಆಗಿರುತ್ತದೆ ಎಂಬ ಆಶಾಭಾವ ಇರಬೇಕು

ಪ್ರಜೆಗಳಿಗೆ ನೀಡಲಾಗಿರುವ ಹಕ್ಕುಗಳು ಹಾಗೂ ಆ ಹಕ್ಕುಗಳನ್ನು ರಕ್ಷಿಸಲು ಪ್ರಭುತ್ವಕ್ಕೆ ಇರುವ ಶಕ್ತಿ ಮತ್ತು ರಕ್ಷಿಸುವ ಮನಃಸ್ಥಿತಿಯ ಆಧಾರದಲ್ಲಿ ಯಾವುದೇ ಪ್ರಜಾತಂತ್ರ ಎಷ್ಟು ಚೆನ್ನಾಗಿದೆ ಎಂದು ಅಳೆಯಲಾಗುತ್ತದೆ. ವಿಶ್ವದ ಅತ್ಯುತ್ತಮ ಪ್ರಜಾತಂತ್ರ ವ್ಯವಸ್ಥೆಗಳಲ್ಲಿ ಇರುವಂತೆಯೇ, ಭಾರತದ ಸಂವಿಧಾನವು ತನ್ನ ಪ್ರಜೆಗಳಿಗೆ ಜೀವಿಸುವ ಹಕ್ಕು, ಮುಕ್ತ ಅಭಿವ್ಯಕ್ತಿಯ ಹಕ್ಕು, ತಾನು ಬಯಸುವ ಆಹಾರ ಸೇವಿಸುವ ಹಾಗೂ ತಾನು ಬಯಸಿದ ರೀತಿಯಲ್ಲಿ ಉಡುಗೆ ತೊಡುವ ಹಕ್ಕುಗಳನ್ನು ನೀಡಿದೆ. ಮನುಷ್ಯನ ಜೀವನವನ್ನು ಅರ್ಥಪೂರ್ಣವಾಗಿಸಲು ಹಾಗೂ ಪರಿಪೂರ್ಣವಾಗಿಸಲು ಬೇಕಿರುವ ಇತರ ಹಕ್ಕುಗಳನ್ನೂ ಸಂವಿಧಾನ ನೀಡಿದೆ. ಈ ಹಕ್ಕುಗಳು ಅಪಾಯಕ್ಕೆ ಸಿಲುಕುವುದು ಹೆಚ್ಚುತ್ತಿದೆ. 2022ನೆಯ ಇಸವಿಯು ಈ ಹಕ್ಕುಗಳ ಮೇಲೆ ಇನ್ನಷ್ಟು ಒತ್ತಡಗಳು ಸೃಷ್ಟಿಯಾಗಿದ್ದಕ್ಕೆ ಹಾಗೂ ಹಕ್ಕುಗಳಿಗೆ ಇನ್ನಷ್ಟು ಅಪಾಯಗಳು ಎದುರಾಗಿದ್ದಕ್ಕೆ ಸಾಕ್ಷಿಯಾಯಿತು. ಕೃತಕ ಸಂದರ್ಭವನ್ನು ಸೃಷ್ಟಿಸಿ, ಮೇಲ್ನೋಟಕ್ಕೆ ಸರಿಯೆಂಬಂತೆ ಕಂಡರೂ ವಾಸ್ತವದಲ್ಲಿ ತಪ್ಪಾಗಿರುವ ನೆಲೆಗಳನ್ನು ಬಳಸಿ ಮೂಲಭೂತ ಹಕ್ಕುಗಳನ್ನು ಹೇಗೆ ಹತ್ತಿಕ್ಕಬಹುದು ಎಂಬುದನ್ನು 2022ರ ಫೆಬ್ರುವರಿಯಲ್ಲಿ ರಾಜ್ಯದಲ್ಲಿ ಭುಗಿಲೆದ್ದ ಹಿಜಾಬ್ ವಿವಾದವು ತೋರಿಸಿಕೊಟ್ಟಿತು. ವಾಸ್ತವದಲ್ಲಿ ಇಲ್ಲಿ ದಾಳಿಗೆ ಗುರಿಯಾಗಿದ್ದು 'ಹಕ್ಕು' ಅಲ್ಲ. ಬದಲಿಗೆ, ಆ ಹಕ್ಕನ್ನು ಪ್ರತಿಪಾದಿಸಲು ಮುಂದಾದ ವ್ಯಕ್ತಿಗಳು ದಾಳಿಗೆ ಗುರಿಯಾದರು. ಈ ವಿವಾದದ ಕುರಿತು ಅಂತಿಮ ತೀರ್ಮಾನವನ್ನು ನ್ಯಾಯಾಂಗ ಪ್ರಕಟಿಸಬೇಕಿದೆ, ಅದು ಎಲ್ಲ ಪ್ರಜೆಗಳ ಹಕ್ಕುಗಳನ್ನು ಹಾಗೂ ಸಂವಿಧಾನವನ್ನು ರಕ್ಷಿಸಬೇಕಿದೆ. ಆಹಾರದ ಹಕ್ಕಿಗೆ, ಪೂಜಿಸುವ ವಿಧಾನದ ಮೇಲೆ ಹಾಗೂ ಪೂಜಾ ಸ್ಥಳಗಳಿಗೆ ಬೆದರಿಕೆ ಎದುರಾಗಿದೆ.

ನ್ಯಾಯಾಂಗದ ಸಾಧನೆ ಕೂಡ ಪರಿಶೀಲನೆಗೆ ಒಳಗಾಗಿದೆ. ದೇಶದ ಅತ್ಯುನ್ನತ ನ್ಯಾಯಾಲಯವಾದ ಸುಪ್ರೀಂ ಕೋರ್ಟ್ ಈ ವರ್ಷದಲ್ಲಿ ಒಟ್ಟು ಮೂವರು ಮುಖ್ಯ ನ್ಯಾಯಮೂರ್ತಿಗಳನ್ನು (ಸಿಜೆಐ) ಕಂಡಿದೆ. ವೈಯಕ್ತಿಕ ಸ್ವಾತಂತ್ರ್ಯದ ಮಹತ್ವವನ್ನು ಸಾರುವ ತೀರ್ಪುಗಳು ಕೋರ್ಟ್‌ನಿಂದ ಬಂದಿವೆ. ತನ್ನಲ್ಲಿ ಹಲವು ವರ್ಷಗಳಿಂದ ವಿಚಾರಣೆಯ ಹಂತದಲ್ಲಿಯೇ ಇದ್ದ ಕೆಲವು ಪ್ರಮುಖ ಪ್ರಕರಣಗಳನ್ನು ವರ್ಷದ ಆರಂಭದಲ್ಲಿ ಸುಪ್ರೀಂ ಕೋರ್ಟ್ ವಿಚಾರಣೆಗೆ ಕೈಗೆತ್ತಿಕೊಂಡಿತು. ಇದು ಸ್ವಾಗತಾರ್ಹವಾಗಿತ್ತು. ಹಲವು ಪ್ರಕರಣಗಳಲ್ಲಿ ತೀರ್ಪು ಇನ್ನೂ ಬಂದಿಲ್ಲ. ಕೋರ್ಟ್ ತನ್ನ ತೀರ್ಪು ನೀಡಿದ ಒಂದು ಮಹತ್ವದ ಪ್ರಕರಣದಲ್ಲಿ, ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್) ಶೇಕಡ 10ರಷ್ಟು ಮೀಸಲಾತಿ ಕಲ್ಪಿಸುವ ಸರ್ಕಾರದ ಕ್ರಮವನ್ನು ಎತ್ತಿಹಿಡಿಯಿತು. ಈ ತೀರ್ಪು, ಈಗಾಗಲೇ ಜಾರಿಯಲ್ಲಿ ಇರುವ ಮೀಸಲಾತಿ ವ್ಯವಸ್ಥೆಯ ಮೇಲೆ ಹೊಸ ಮೀಸಲಾತಿ ವ್ಯವಸ್ಥೆ ಬೀರಬಹುದಾದ ವ್ಯತಿರಿಕ್ತ ಪರಿಣಾಮಗಳ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕಿತು. ಈಗ ನ್ಯಾಯಮೂರ್ತಿಗಳ ನೇಮಕಕ್ಕೆ ಜಾರಿಯಲ್ಲಿ ಇರುವ ಕೊಲಿಜಿಯಂ ವ್ಯವಸ್ಥೆಯ ವಿಚಾರವಾಗಿ ಕೇಂದ್ರ ಸರ್ಕಾರದಿಂದ ಸ್ವತಃ ಸುಪ್ರೀಂ ಕೋರ್ಟ್ ಒತ್ತಡ ಎದುರಿಸುತ್ತಿದೆ. ನ್ಯಾಯಾಂಗ ಹಾಗೂ ಕಾರ್ಯಾಂಗದ ನಡುವೆ ಸಂಘರ್ಷ ಸೃಷ್ಟಿಯಾಗುವ ಸಾಧ್ಯತೆಯೂ ಇದೆ.

2022, ಕೇಂದ್ರದ ತನಿಖಾ ಸಂಸ್ಥೆಗಳ– ಜಾರಿ ನಿರ್ದೇಶನಾಲಯ (ಇ.ಡಿ), ಕೇಂದ್ರೀಯ ತನಿಖಾ ದಳ (ಸಿಬಿಐ) ಇತ್ಯಾದಿ – ವರ್ಷವೂ ಹೌದು. ಈ ತನಿಖಾ ಸಂಸ್ಥೆಗಳು ವಿರೋಧ ಪಕ್ಷಗಳ ನಾಯಕರ ಬಗ್ಗೆ, ಸರ್ಕಾರದ ವಿರೋಧಿಗಳು ಹಾಗೂ ಟೀಕಾಕಾರರ ಬಗ್ಗೆ ಹೆಚ್ಚಿನ ಗಮನ ಹರಿಸಿದವು. ಹಲವರನ್ನು ಬಂಧಿಸಲಾಯಿತು. ಸಾಮಾನ್ಯ ಸಂದರ್ಭಗಳಲ್ಲಿ ಜಾಮೀನು ಕೊಡಬೇಕು, ಜಾಮೀನು ನಿರಾಕರಣೆಯು ಅಸಾಮಾನ್ಯ ಸಂದರ್ಭಗಳಲ್ಲಿ ಮಾತ್ರ ಇರಬೇಕು ಎಂಬ ಮಾತು ಇದೆಯಾದರೂ, ಬಂಧಿತರಾದವರಲ್ಲಿ ಬಹುತೇಕರು ಜಾಮೀನು ಪಡೆದು ಹೊರಬರಲು ಕಷ್ಟಪಟ್ಟರು. ಆಡಳಿತದ ಹೊಣೆ ಹೊತ್ತಿರುವ ಸಂಸ್ಥೆಗಳು ಹಾಗೂ ಚುನಾವಣಾ ಆಯೋಗದಂತಹ ಸಾಂವಿಧಾನಿಕ ಸಂಸ್ಥೆಗಳು ಕೂಡ ಒತ್ತಡ ಎದುರಿಸುತ್ತಿವೆ, ಅದೇ ರೀತಿಯಲ್ಲಿ ಸಂಸದೀಯ ಪ್ರಜಾತಂತ್ರ ವ್ಯವಸ್ಥೆಗೂ ಒತ್ತಡ ಎದುರಾಗಿದೆ. ಕಾರ್ಯಾಂಗವು ಒಬ್ಬ ನಾಯಕನ ಸಂಪೂರ್ಣ ನಿಯಂತ್ರಣಕ್ಕೆ ಸಿಲುಕಿದೆ. 2022ರಲ್ಲಿ ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿತು. ಆದರೆ, ತುರ್ತು ಪರಿಸ್ಥಿತಿಯ ಸಂದರ್ಭವನ್ನು ಹೊರತುಪಡಿಸಿದರೆ ಬೇರೆ ಯಾವ ಸಂದರ್ಭದಲ್ಲಿಯೂ ದೇಶದಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಯು ಈಗಿನಷ್ಟು ಒತ್ತಡಕ್ಕೆ, ಸಂಕಟಕ್ಕೆ ಸಿಲುಕಿರಲಿಲ್ಲ. ಬಹುಸಂಖ್ಯಾತವಾದಿ ಭಾವನೆಗಳು ಹೆಚ್ಚುತ್ತಿವೆ, ಅವು ವಿಸ್ತರಣೆ ಕಾಣುತ್ತಿವೆ. ಅವುಗಳಿಗೆ ಸರ್ಕಾರಗಳಿಂದ ಬೆಂಬಲ ಕೂಡ ಸಿಗುತ್ತಿದೆ. ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ವೈಯಕ್ತಿಕ ನೆಲೆಯಲ್ಲಿಯೂ, ಸಾಮುದಾಯಿಕ ನೆಲೆಯಲ್ಲಿಯೂ ದಾಳಿಗಳು ನಡೆಯುತ್ತಿವೆ. ಅವರನ್ನು ಮುಖ್ಯವಾಹಿನಿಯಿಂದ ಹೊರಗಿಡಲಾಗುತ್ತಿದೆ. ದ್ವೇಷ ಭಾಷಣಗಳು ಎಗ್ಗಿಲ್ಲದೆ ನಡೆಯುತ್ತಿವೆ. ಜನಾಂಗೀಯ ಹತ್ಯಾಕಾಂಡಕ್ಕೆ ಕರೆ ನೀಡುವ ಮಾತುಗಳನ್ನೂ ಕೆಲವರು ಆಡಿದ್ದಾರೆ. ತಾರತಮ್ಯದ ಕೃತ್ಯಗಳಿಗೆ ಹೊಸ ಹೆಸರುಗಳು, ನಾಜೂಕಿನ ನುಡಿಗಟ್ಟುಗಳು ಸಿಗುತ್ತಿವೆ. ತಾರತಮ್ಯವನ್ನು ಸಮರ್ಥಿಸಿಕೊಳ್ಳಲು ನ್ಯಾಯಸಮ್ಮತವಲ್ಲದ ನೆಲೆಗಳ ಮೊರೆ ಹೋಗಲಾಗಿದೆ. ಪೂರ್ವಗ್ರಹಗಳು ವ್ಯಾಪಕವಾಗಿವೆ, ಮುಸ್ಲಿಂ ವ್ಯಕ್ತಿಯನ್ನು ಭಯೋತ್ಪಾದಕ ಎಂದು ಕರೆಯಲಾಗಿದೆ, ದ್ವೇಷ ಭಾಷಣವು ಚಾಕುವಿನಂತಾಗಿದೆ, ಹಗೆಯು ಬುಲ್ಡೋಜರ್‌ನ ರೂಪ ತಾಳಿ ಮನೆಗಳನ್ನು ಧ್ವಂಸಗೊಳಿಸುತ್ತಿದೆ.

ಈ ವರ್ಷದಲ್ಲಿ ದೇಶದ ಅರ್ಥವ್ಯವಸ್ಥೆಯು ಇತರ ಪ್ರಮುಖ ಅರ್ಥವ್ಯವಸ್ಥೆಗಳಿಗಿಂತ ಹೆಚ್ಚು ಉತ್ತಮವಾಗಿತ್ತು. ಆದರೆ, ನಿರುದ್ಯೋಗದ ಪ್ರಮಾಣ ಜಾಸ್ತಿಯಾಗಿದ್ದುದು ಹಾಗೂ ಹಣದುಬ್ಬರವು ಮಿತಿ ಮೀರಿದ್ದು ಎಲ್ಲರಿಗೂ ತೊಂದರೆ ಉಂಟುಮಾಡಿತು. ಅದರಲ್ಲೂ ಮುಖ್ಯವಾಗಿ, ದುರ್ಬಲ ವರ್ಗಗಳಿಗೆ ಸೇರಿದವರು ಹಾಗೂ ಕೂಲಿ ಕಾರ್ಮಿಕರು ಹೆಚ್ಚು ಕಷ್ಟ ಅನುಭವಿಸಿದರು. ಆರ್ಥಿಕತೆಯ ಮುನ್ನೋಟದಲ್ಲಿ ಅನಿಶ್ಚಿತತೆ ಕಾಣುತ್ತಿದೆ. ಏಕೆಂದರೆ, ವೈರಾಣು ಮತ್ತೆ ದಾಳಿ ನಡೆಸುವ ಹವಣಿಕೆಯಲ್ಲಿದೆ. ಯುರೋಪಿನಲ್ಲಿ ನಡೆದಿರುವ ಯುದ್ಧವು ಪರಿಣಾಮ ಉಂಟುಮಾಡಲಿದೆ. ಇವೆಲ್ಲ ಏನೇ ಇದ್ದರೂ, ಮನುಷ್ಯನ ಸ್ವಭಾವವು ಉತ್ತಮ ಜಗತ್ತಿಗಾಗಿ ಹಾತೊರೆಯುತ್ತದೆ. ಹೊಸ ವರ್ಷ ಬಂದಾಗ, ಅದು ಉತ್ತಮ ವರ್ಷವೂ ಆಗಿರುತ್ತದೆ ಎಂಬ ಆಶಾಭಾವ ಇರಬೇಕು. ಬಹುಶಃ ಮನೆಯ ಬಾಗಿಲಿನಲ್ಲಿ ನಿಂತಿರಬಹುದಾದ ವೈರಾಣುವಿನ ವಿರುದ್ಧದ ಹೋರಾಟಕ್ಕೆ ನಾವು ಸಿದ್ಧರಾಗಬೇಕು, ಎರಡು ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ನಾವು ಈ ವೈರಾಣುವಿನ ವಿರುದ್ಧ ನಡೆಸಿದ ಹೋರಾಟದಲ್ಲಿ ಗಳಿಸಿದ ಅನುಭವವು ನೆರವಿಗೆ ಬರಬೇಕು. ಆದರೆ ನಾವು ಮನಸ್ಸುಗಳಲ್ಲಿ ವಿಕಾಸ ಹೊಂದುತ್ತಿರುವ ಇನ್ನೂ ಹೆಚ್ಚು ಅಪಾಯಕಾರಿಯಾದ ವೈರಾಣುವಿನ ವಿರುದ್ಧವೂ ಹೋರಾಡಬೇಕು. ಈ ವೈರಾಣು ಇನ್ನಷ್ಟು ಹೊಸ ರೂಪಾಂತರಗಳನ್ನು ಕಾಣುತ್ತಿದೆ, ದೇಶದ ರಾಜಕಾರಣ ಹಾಗೂ ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಹಾಳಾದ ಅರ್ಥ ವ್ಯವಸ್ಥೆಗಳನ್ನು ರಿಪೇರಿ ಮಾಡಬಹುದು, ಅವುಗಳನ್ನು ಸುಧಾರಿಸಬಹುದು. ಆದರೆ, ದ್ವೇಷದ ಹಾಗೂ ಸಂಘರ್ಷದ ವೈರಾಣುವಿನಿಂದ ಹಾನಿಗೆ ಒಳಗಾಗಿರುವ ಸಮಾಜಗಳನ್ನು ಸರಿಪಡಿಸಲು ಬಹುದೀರ್ಘ ಸಮಯ ಬೇಕು, ಹೆಚ್ಚಿನ ಪ್ರಯತ್ನವೂ ಬೇಕು. ನಾವು ಈ ವೈರಾಣುವಿನಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು.

25 ವರ್ಷಗಳ ಹಿಂದೆ ಬುಧವಾರ, 31-12-1997

ಹೊರರಾಜ್ಯ ಲಾಟರಿ ನಿಷೇಧ

ಬೆಂಗಳೂರು, ಡಿ. 30– ನೂರಾರು ಕೋಟಿ ರೂಪಾಯಿಗಳ ವಹಿವಾಟಿನ ಹೊರ ರಾಜ್ಯಗಳ ಲಾಟರಿ ಟಿಕೆಟ್ಟುಗಳ ಮಾರಾಟವನ್ನು ರಾಜ್ಯದಲ್ಲಿ ಮುಂದಿನ ವರ್ಷ ಜ. 1ರಿಂದ ನಿಷೇಧಿಸಲು ರಾಜ್ಯ ಸಚಿವ ಸಂಪುಟ ಇಂದು ತೀರ್ಮಾನಿಸಿತು.

50 ವರ್ಷಗಳ ಹಿಂದೆ ಭಾನುವಾರ, 31-12-1972

ಇಂದಿರಾಗೆ ಪತ್ರ

ಬೆಂಗಳೂರು, ಡಿ. 30– ಅಭಾವಪೀಡಿತ ಪ್ರದೇಶಗಳ ಸಂಕಷ್ಟವನ್ನು ಸ್ವತಃ ಪರಿಶೀಲಿಸಿ, ಸೂಕ್ತ ಕ್ರಮಗಳಿಗಾಗಿ ರಾಜ್ಯ ಸರ್ಕಾರವನ್ನು ಪ್ರೇರೇಪಿಸಲು ಒಂದು ದಿನದ ಮಟ್ಟಿಗಾದರೂ ಉತ್ತರದ ಜಿಲ್ಲೆಗಳ ಪ್ರವಾಸ ಕೈಗೊಳ್ಳಬೇಕು ಎಂದು ಸಂಸ್ಥಾ ಕಾಂಗ್ರೆಸ್ ಪ್ರದೇಶ ಅಧ್ಯಕ್ಷ ಶ್ರೀ ವೀರೇಂದ್ರ ಪಾಟೀಲರು, ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

ಆತಂಕಗಳನ್ನು ದೂರ ಸರಿಸಿ, ಒಳಿತಿನ ವಿಶ್ವಾಸದೊಂದಿಗೆ ಭವಿಷ್ಯದೆಡೆಗೆ ಹೆಜ್ಜೆ ಹಾಕೋಣ

ವರ್ಷದ ಮೆಲುಕು, ಭರವಸೆಯೇ ಬದುಕು



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಮತ್ತೊಂದು ನೂತನ ವರ್ಷಕ್ಕೆ ಪದಾರ್ಪಣೆ ಮಾಡುತ್ತಿದ್ದೇವೆ. ಹೊಸ ವರ್ಷವನ್ನು ಬರಮಾಡಿಕೊಳ್ಳುವುದು ಎಂದರೆ, ಸವೆದ ವರ್ಷದತ್ತ ತಿರುಗಿ ನೋಡುವುದು, ಸೋಲು, ದುಃಖ, ಆತಂಕದ ಮೂಟೆ ಒಗೆದು, ಒಳಿತಿನ ಭರವಸೆಯೊಂದಿಗೆ ಭವಿಷ್ಯದೆಡೆಗೆ ಹೆಜ್ಜೆ ಹಾಕುವುದು. ಈ ಹಿನ್ನೆಲೆಯಲ್ಲಿ ಕಳೆದ ಹನ್ನೆರಡು ತಿಂಗಳ ಅವಧಿಯಲ್ಲಿ ಜಗತ್ತು ಕಂಡ ಪ್ರಮುಖ ಘಟನಾವಳಿಗಳಿಗೆ ಸಾಕ್ಷಿಯಾಯಿತು. ಈ ಪೈಕಿ ಕೆಲವು ವಿದ್ಯಮಾನಗಳು ಭಾರತವನ್ನು ಪರೋಕ್ಷವಾಗಿ ಬಾಧಿಸಿದವು. ವಿದೇಶಾಂಗ ನೀತಿಯ ದೃಷ್ಟಿಯಿಂದ ಭಾರತ ಆತ್ಮವಿಶ್ವಾಸದ ಹೆಜ್ಜೆಗಳನ್ನು ಇರಿಸಿತು. ನಮ್ಮ ನೆರೆಯ ರಾಷ್ಟ್ರಗಳಲ್ಲಾದ ಬೆಳವಣಿಗೆಗಳು ಎಚ್ಚರಿಕೆಯ ಸಂದೇಶವನ್ನು ರವಾನಿಸಿದವು.

2022, ಒಂದು ಬಗೆಯ ಸಂಭ್ರಮ ಮತ್ತು ನಿರಾಳ ಭಾವದೊಂದಿಗೆ ಆರಂಭವಾಯಿತು. ಜಗತ್ತಿನಾದ್ಯಂತ ಆರೋಗ್ಯ ಮತ್ತು ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಿದ್ದ ಕೊರೊನಾ ವೈರಾಣುವಿನ ಹರಡುವಿಕೆಯು ವೇಗ ಕಳೆದುಕೊಂಡಿತ್ತು. ನಾಲ್ಕಾರು ಲಸಿಕೆಗಳು ಆಸರೆಗೆ ಒದಗಿದ್ದವು. ಹೊಸ ಉತ್ಸಾಹದೊಂದಿಗೆ ಬದುಕು ಕಟ್ಟಿಕೊಳ್ಳಲು ಜನ ಮುಂದಡಿಯಿಟ್ಟರು. ಆದರೆ ಫೆಬ್ರುವರಿ 24ರಂದು ಆರಂಭವಾದ ಉಕ್ರೇನ್ ಮತ್ತು ರಷ್ಯಾ ನಡುವಿನ ಕದನ ಮತ್ತೊಮ್ಮೆ ಜಗತ್ತನ್ನು ಆತಂಕಕ್ಕೆ ದೂಡಿತು.

ಉಕ್ರೇನ್ ಜನ ಊರು ತೊರೆದು ಯುರೋಪಿನ ಇತರ ರಾಷ್ಟ್ರಗಳತ್ತ ವಲಸೆ ಹೊರಟರು. ನಿರಾಶ್ರಿತ ತಾಣಗಳಲ್ಲಿ ಏದುಸಿರುಬಿಟ್ಟರು. ಯುದ್ಧಪೀಡಿತ ಪ್ರದೇಶಗಳಿಂದ ತಮ್ಮ ದೇಶದ ನಾಗರಿಕರನ್ನು ಸುರಕ್ಷಿತವಾಗಿ ವಾಪಸು ಕರೆಸಿಕೊಳ್ಳುವುದು ಇತರ ದೇಶಗಳಿಗೆ ಸವಾಲೆನಿಸಿತು. ಉಕ್ರೇನ್ ಯುದ್ಧದಿಂದಾಗಿ ಜಾಗತಿಕ ಪೂರೈಕೆ ಜಾಲದಲ್ಲಿ ವ್ಯತ್ಯಯ ಉಂಟಾಯಿತು. ಇಂಧನದ ಬೆಲೆ ಹೆಚ್ಚಿತು. ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಜಿಗಿಯಿತು. ಎರಡು ದೇಶಗಳ ನಡುವಿನ ಒಂದು ಯುದ್ಧ ಇತರ ದೇಶಗಳ ಆರ್ಥಿಕತೆಗೆ ಪರೋಕ್ಷ ಹೊಡೆತ ನೀಡಿತು.

ಉಕ್ರೇನ್ ಯುದ್ಧದ ವಿಷಯದಲ್ಲಿ ಭಾರತದ ನಿಲುವು ಸ್ಪಷ್ಟವಿತ್ತು. ಇದು, ಎರಡು ದೇಶಗಳ ನಡುವಿನ ಯುದ್ಧ, ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು ಎಂಬುದು ಭಾರತದ ನಿಲುವಾಯಿತು. ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ಮತ್ತು ಭದ್ರತಾ ಮಂಡಳಿ ಸಭೆಯಲ್ಲಿ ಉಕ್ರೇನ್ ಯುದ್ಧದ ವಿಷಯ ಪ್ರಸ್ತಾಪವಾದಾಗ ಯಾವ ಒತ್ತಡಕ್ಕೂ ಮಣಿಯದೇ ಕೇವಲ ತನ್ನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಭಾರತ ಪ್ರತಿಕ್ರಿಯಿಸಿತು. ಆದರೆ ರಷ್ಯಾದ ಅಧ್ಯಕ್ಷ ಪುಟಿನ್ ಅವರನ್ನು ಭೇಟಿಯಾದಾಗ, ಪ್ರಧಾನಿ ಮೋದಿ 'ಇದು ಯುದ್ಧಕ್ಕೆ ಕಾಲವಲ್ಲ' ಎಂದು ನೇರವಾಗಿಯೇ ಹೇಳಿದರು. ಆ ಮಾತನ್ನು ಜಗತ್ತು ಪ್ರಶಂಸಿಸಿತು. ಅದಿರಲಿ, ಇನ್ನು ಎಂಟು ವಾರ ಕಳೆದರೆ ಯುದ್ಧ ಆರಂಭವಾಗಿ ವರ್ಷವಾಗುತ್ತದೆ! ಆದರೆ ಯುದ್ಧ ಹೇಗೆ ಕೊನೆಗೊಂಡೀತು ಎಂಬ ಪ್ರಶ್ನೆಗೆ ಇನ್ನೂ ಉತ್ತರ ಸ್ಪಷ್ಟವಿಲ್ಲ. ವಿವಿಧ ದೇಶಗಳಲ್ಲಿ ಚದುರಿ ಹೋಗಿರುವ ಉಕ್ರೇನ್ ವಲಸಿಗರ ಬವಣೆಯು 2023ರಲ್ಲಾದರೂ ಕೊನೆಗೊಂಡೀತೇ?

ಶ್ರೀಲಂಕಾದ ವಿಷಯ ನೋಡುವುದಾದರೆ, ಆ ದೇಶದ ಇಂದಿನ ಪರಿಸ್ಥಿತಿ ಜಗತ್ತಿಗೆ ಪಾಠ. ಆಳುವವರ ತಪ್ಪು ನಿರ್ಧಾರಗಳು, ಭ್ರಷ್ಟಾಚಾರ, ಮುನ್ನೋಟವಿಲ್ಲದ ವಿತ್ತ ನೀತಿ ಹೇಗೆ ಒಂದು ದೇಶವನ್ನು ದಿವಾಳಿಯತ್ತ ಕೊಂಡೊಯ್ಯಬಹುದು ಎಂಬುದಕ್ಕೆ ಶ್ರೀಲಂಕಾ ತಾಜಾ ಉದಾಹರಣೆ. ಅಲ್ಲಿ ಆದದ್ದಾದರೂ ಇಷ್ಟೇ, ಕೊರೊನಾದಿಂದಾಗಿ ಪ್ರವಾಸೋದ್ಯಮಕ್ಕೆ ಹೊಡೆತ ಬಿತ್ತು, ಕಲ್ಯಾಣ ಯೋಜನೆಗಳಿಂದಾಗಿ ಬೊಕ್ಕಸ ಬರಿದಾಯಿತು, ಜನಪ್ರಿಯತೆ ಉಳಿಸಿಕೊಳ್ಳಲು ಅಪ್ರಾಯೋಗಿಕ ತೆರಿಗೆ ನೀತಿಯನ್ನು ಜಾರಿಗೆ ತರಲಾಯಿತು, ಹಿಂದಿರುಗಿಸುವ ಸಾಮರ್ಥ್ಯವನ್ನು ಅಂದಾಜಿಸದೇ, ಚೀನಾದಿಂದ ಸಾಲ ತಂದು ವಿಮಾನ ನಿಲ್ದಾಣಗಳನ್ನು, ಬಂದರುಗಳನ್ನು ನಿರ್ಮಿಸಲಾಯಿತು. ಸಾಲ ಮರುಪಾವತಿಸಲು ವಿದೇಶಿ ವಿನಿಮಯದ ಇರುಗಂಟು ಬಳಸಬೇಕಾಯಿತು. ಅಂತಿಮವಾಗಿ ಜನ ಸಂಕಷ್ಟಕ್ಕೆ ಸಿಲುಕಿದರು. ಕೊನೆಗೆ ಅಧ್ಯಕ್ಷ ಗೊಟಬಯ ರಾಜಪಕ್ಸೆ ದೇಶಬಿಟ್ಟು ಪರಾರಿಯಾಗಬೇಕಾದ ದುಃಸ್ಥಿತಿ ಉದ್ಭವಿಸಿತು. 2023ರಲ್ಲಾದರೂ ಶ್ರೀಲಂಕಾ ಆರ್ಥಿಕ ಶಿಸ್ತು ರೂಢಿಸಿಕೊಂಡೀತೇ, ಪ್ರವಾಸೋದ್ಯಮದ ಆಚೆಗೆ ಬದಲಿ ವರಮಾನದ ಮೂಲ ಹುಡುಕೀತೇ? ಕಾದು ನೋಡಬೇಕು.

ಇನ್ನು, ಪಾಕಿಸ್ತಾನದ ವಿಷಯ ಭಿನ್ನವಾಗಿಯೇನೂ ಇಲ್ಲ. ಅದು ಕೂಡ ರಾಜಕೀಯ ಮತ್ತು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. 'ನವ ಪಾಕಿಸ್ತಾನ' (ನಯಾ ಪಾಕಿಸ್ತಾನ್) ನಿರ್ಮಿಸುವ ಆಶ್ವಾಸನೆಯೊಂದಿಗೆ ಅಧಿಕಾರ ಹಿಡಿದಿದ್ದ ಇಮ್ರಾನ್ ಖಾನ್ ಇದೀಗ ಅವಿಶ್ವಾಸಕ್ಕೆ ಗುರಿಯಾಗಿ ಅಧಿಕಾರ ತ್ಯಜಿಸಿದ್ದಾರೆ. ಶ್ರೀಲಂಕಾದಂತೆಯೇ ಪಾಕಿಸ್ತಾನವೂ ಚೀನಾದ ಸಾಲದ ಸುಳಿಗೆ ಸಿಲುಕಿದೆ. ವಿದೇಶಿ ವಿನಿಮಯ ಸೊರಗುತ್ತಿದೆ. ಐಎಂಎಫ್ ನೀಡಿರುವ ಪಾರುಕಾಣಿಕೆ (Bailout) ಸದ್ಯದ ಮಟ್ಟಿಗೆ ಪಾಕಿಸ್ತಾನವನ್ನು ಹಿಡಿದು ನಿಲ್ಲಿಸಿದೆ.

2023ರಲ್ಲಿ ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಇಮ್ರಾನ್ ಮುಖ್ಯ ಹುದ್ದೆಗೆ ಬರುತ್ತಾರೋ, ಷರೀಫ್‌ದ್ವಯರು ಅಧಿಕಾರ ಹಿಡಿಯುತ್ತಾರೋ ನೋಡಬೇಕು. ಒಂದೊಮ್ಮೆ ಹಣದುಬ್ಬರ ಮತ್ತು ಆಳುವವರ ಭ್ರಷ್ಟಾಚಾರದಿಂದ ಪಾಕಿಸ್ತಾನದ ಜನ ಬಂಡೆದ್ದರೆ, ಅಂತರ್ಯುದ್ಧ ಆರಂಭವಾಗುವ ಸಾಧ್ಯತೆ ಇಲ್ಲದಿಲ್ಲ. ಒಂದೊಮ್ಮೆ ಅಲ್ಲಿನ ಸೇನೆ ಆಡಳಿತದ ಚುಕ್ಕಾಣಿ ಹಿಡಿದರೆ, ಕದನದ ಕಾರ್ಮೋಡಗಳು ಭಾರತದ ಗಡಿಯುದ್ದಕ್ಕೂ ಆವರಿಸೀತು.

ಉಳಿದಂತೆ ಚೀನಾ. ಇತ್ತೀಚೆಗಷ್ಟೇ ಚೀನಾದ ಸೈನಿಕರು ಮತ್ತು ಭಾರತ ಸೈನಿಕರ ನಡುವೆ ತವಾಂಗ್ ಪ್ರದೇಶದಲ್ಲಿ ಘರ್ಷಣೆ ನಡೆದಿದೆ. ಆದರೆ ಸದ್ಯೋಭವಿಷ್ಯದಲ್ಲಿ ಗಡಿ ವಿಷಯವಾಗಿ ಭಾರತದ ಮೇಲೆ ಚೀನಾ ನೇರವಾಗಿ ಎರಗುವ ದುಸ್ಸಾಹಸಕ್ಕೆ ಕೈ ಹಾಕಲಾರದು. ಅದರ ಗಮನ ಇದೀಗ ತೈವಾನ್ ಮೇಲೆ ಕೇಂದ್ರೀಕೃತಗೊಂಡಂತೆ ಕಾಣುತ್ತಿದೆ. ಆಗಸ್ಟ್ ಮೊದಲ ವಾರ ಅಮೆರಿಕದ ಸಂಸತ್ತಿನ ಸ್ಪೀಕರ್ ನ್ಯಾನ್ಸಿ ಪೆಲೋಸಿ ತೈವಾನಿಗೆ ಭೇಟಿಕೊಟ್ಟರು. ಈ ಭೇಟಿಯಿಂದ ಚೀನಾ ಕೆರಳಿತು. ತೈವಾನ್ ದ್ವೀಪದ ಸುತ್ತಲೂ ಚೀನಾ ಸಮರಾಭ್ಯಾಸ ನಡೆಸಿ ತನ್ನ ಆಕ್ರೋಶವನ್ನು ಹೊರಹಾಕಿತು. ಆ ಮೂಲಕ ತೈವಾನ್ ವಶಪಡಿಸಿಕೊಳ್ಳಲು ತಾನು ಬದ್ಧ ಎಂಬ ಸಂದೇಶ ರವಾನಿಸಿತು. ಅತ್ತ ಅಮೆರಿಕ ಕೂಡ ಸುಮ್ಮನಾಗಲಿಲ್ಲ. ತೈವಾನ್ ವಿಷಯದಲ್ಲಿ ಯಥಾಸ್ಥಿತಿಗೆ ಧಕ್ಕೆಯಾದರೆ ಮಧ್ಯಪ್ರವೇಶಿಸುವುದು ಅನಿವಾರ್ಯವಾದೀತು ಎಂಬ ಹೇಳಿಕೆ ಶ್ವೇತಭವನದಿಂದ ಹೊರಬಿತ್ತು.

ಹಾಗಾಗಿ, ಇದೀಗ ಅಮೆರಿಕ ಮತ್ತು ಚೀನಾ ನಡುವಿನ ಬಿರುಕು ಹಿರಿದಾಗಿದೆ. ಅತ್ತ ಚೀನಾದ ಆಂತರಿಕ ರಾಜಕೀಯ ವ್ಯವಸ್ಥೆಯಲ್ಲಿ ಮಾವೊ ಅವರ ನಂತರ ಪ್ರಭಾವಿಯಾಗಿ ಷಿ ಜಿನ್‌ಪಿಂಗ್ ಹೊರಹೊಮ್ಮಿದ್ದಾರೆ. ಮೂರನೇ ಅವಧಿಗೆ ಅಧಿಕಾರವನ್ನು ವಿಸ್ತರಿಸಿಕೊಂಡಿದ್ದಾರೆ. ಸೇನೆಗೆ ಯುದ್ಧ ಸನ್ನದ್ಧಗೊಳ್ಳುವ ಸೂಚನೆ ನೀಡಿರುವುದೂ ವರದಿಯಾಗಿದೆ. 2023 ಮತ್ತೊಂದು ಕದನಕ್ಕೆ ಸಾಕ್ಷಿಯಾಗುತ್ತದೆಯೇ ಬಲ್ಲವರಾರು?

ಈ ಎಲ್ಲದರ ನಡುವೆ ದೊಡ್ಡ ಹೊಣೆಗಾರಿಕೆಯೊಂದು ಭಾರತದ ಹೆಗಲೇರಿದೆ. ಈ ವರ್ಷ ಜಿ-20 ಒಕ್ಕೂಟದ ಅಧ್ಯಕ್ಷ ಸ್ಥಾನವನ್ನು ಭಾರತ ನಿರ್ವಹಿಸುತ್ತಿದೆ. ಇದರ ಭಾಗವಾಗಿ 200 ಸಭೆಗಳು ದೇಶದ ವಿವಿಧ 50 ನಗರಗಳಲ್ಲಿ ನಡೆಯಲಿವೆ. ಅಂತಿಮವಾಗಿ 2023ರ ಸೆಪ್ಟೆಂಬರ್ ತಿಂಗಳಿನಲ್ಲಿ ಜಿ-20 ರಾಷ್ಟ್ರಗಳ ವಾರ್ಷಿಕ ಶೃಂಗಸಭೆ ದೆಹಲಿಯಲ್ಲಿ ನಡೆಯುತ್ತದೆ. ಈ ಸಭೆಗಳಲ್ಲಿ ಆದ್ಯತೆಯ ಮೇಲೆ ಚರ್ಚೆಯಾಗಬೇಕಾದ ವಿಷಯಗಳನ್ನು ಭಾರತ ಸೂಚಿಸಬಹುದು. ಭಾರತದ ಹಿತಾಸಕ್ತಿಗೆ ಪೂರಕವಾಗಿ ಚರ್ಚೆಯ ದಿಕ್ಕನ್ನು ನಿರ್ದೇಶಿಸುವ ಅವಕಾಶ ಭಾರತಕ್ಕೆ ದೊರೆಯಲಿದೆ.

ಒಟ್ಟನಲ್ಲಿ, ಮುಂದುವರಿದಿರುವ ಉಕ್ರೇನ್ ಯುದ್ಧ, ಜಾಗತಿಕ ಹಣದುಬ್ಬರ, ಆರ್ಥಿಕ ಹಿಂಜರಿಕೆ ಎಂಬ 2022ರ ಬಳುವಳಿಯ ಜೊತೆಗೆ ಕೊರೊನಾ ಸೋಂಕು ಮತ್ತೊಮ್ಮೆ ಮನುಕುಲವನ್ನು ಸಂಕಷ್ಟಕ್ಕೀಡು ಮಾಡೀತೇ ಎಂಬ ಆತಂಕವನ್ನು ಹೆಗಲೇರಿಸಿಕೊಂಡೇ, ನಾವು ಹೊಸ ವರ್ಷವನ್ನು ಬರಮಾಡಿಕೊಳ್ಳಬೇಕಿದೆ. ಅದು ಅನಿವಾರ್ಯ.

ಆದರೆ ಒಂದಿಷ್ಟು ಹಾರೈಕೆಗಳೂ ಇರಲಿ. ಮನುಷ್ಯನ ಸ್ವಾರ್ಥಕ್ಕೆ ನಿಸರ್ಗ ನಲುಗದಿರಲಿ, ಪ್ರಾಣಿಸಂಕುಲ ಉಳಿಯಲಿ, ಪಕ್ಷಿಗಳು ಉಲಿಯಲಿ, ಮರಗಿಡಗಳು ಸೊಂಪಾಗಿರಲಿ, ಆರೋಗ್ಯ ಬಿಕ್ಕಟ್ಟು ಮನುಕುಲವನ್ನು ಬಾಧಿಸದಿರಲಿ, ದುಡಿಯುವ ಕೈಗಳಿಗೆ ಕೆಲಸ ಸಿಗಲಿ, ಹಿರಿಯ ಜೀವಗಳಿಗೆ ಆಸರೆ ಇರಲಿ, ಕಂದಮ್ಮಗಳು ಅರೆಹೊಟ್ಟೆ ಮಲಗದಿರಲಿ, ಯುದ್ಧದ ಅಂಗಳದಲ್ಲಿ ಶಾಂತಿಯ ಹೂವು ಅರಳಲಿ, ಸೈನಿಕನ ಕುಟುಂಬ ನಿರಾತಂಕವಾಗಿ ನಿದ್ರಿಸಲಿ ಎಂಬ ಶುಭಕಾಮನೆಗಳೊಂದಿಗೆ ಹೊಸ ವರ್ಷವನ್ನು ಸ್ವಾಗತಿಸೋಣ.

ಚುರುಮುರಿ

ಶುನಕಕ್ಕೆ ಶುಕ್ರದೆಸೆ

• ನಾರಾಯಣ ರಾಯಚೂರ್

'ಗೇಟಿಗೊಂದು ನಾಯಿ ಚಿತ್ರ ಹಾಕಿ, 'ನಾಯಿ ಇದೆ ಎಚ್ಚರಿಕೆ' ಅಂತಾ ಬೋರ್ಡ್ ತಗಲಹಾಕೋದು ಈಗ ಕಡಿಮೆಯಾಗಿಬಿಟ್ಟದೆ- ಕ್ಯಾಮರಾ ಬಂದಿವೆಯಲ್ಲ! ನಾಯಿ ಬೆಲೆ ಕಡಿಮೆಯಾಗಿಬಿಟ್ಟದೆ, ನಾಯಿಗಳದು ನಾಯಿ ಪಾಡು!'

'ಏನಿಲ್ಲ; ಇಲ್ಲಿ ನೋಡಿ ನ್ಯೂಸು, ಉತ್ತರ ಪ್ರದೇಶ- ನೊಯಿಡಾದಲ್ಲಿ ನಾಯಿ ಮಾಲೀಕನನ್ನ ಕಿಡ್ನಾಪ್ ಮಾಡಿ...'

'ಎಷ್ಟು ಲಕ್ಷ, ಕೋಟಿ, ಕಾರು,ಕೇಳೀದಾರಂತೆ?'

'ಲಕ್ಷಾನೂ ಇಲ್ಲ, ಕೋಟೀನೂ ಇಲ್ಲ, ಮಾಲೀಕನನ್ನ ಬಿಡಬೇಕೂ ಅಂತಂದ್ರೆ, ನಿಮ್ಮ ಮನೇಲಿರೋ ವಿದೇಶಿ ನಾಯಿ ತಂದ್ಕೊಡಿ ಅಂತಾ ಬೇಡಿಕೆ ಇಟ್ಟದಾರಂತೆ!'

'ಹೋ! ರಿವರ್ಸ್ ಸ್ವೀಪ್! ಉಲ್ಟಾ-ಪಲ್ಟಾ! ಮಾಲೀಕನಿಗಿಂತಾ ನಾಯಿಗೇ ಡಿಮ್ಯಾಂಡೋ?!'

'ಇನ್ನೂ ಕೇಳಿ, ಅಲ್ಲಿ ಈಗ ವಿದೇಶಿ- ತಳಿ- ನಾಯಿಗಳನ್ನ ಸಾಕೋ ಖಯಾಲಿ ಜಾಸ್ತಿ ಆಗಿದೆಯಂತೆ. ಈ ಮಾಲೀಕನೂ ರಾಟ್‌ವೀಲರ್, ಮತ್ತೆ ಅರ್ಜೆಂಟಿನೊ ಅಂತ ಎರಡು ಫಾರಿನ್ ಡಾಗ್ ಸಾಕಿದ್ದನಂತೆ, ಅದರಲ್ಲಿ ಅರ್ಜೆಂಟಿನೊ ಬಲೇ ಮುದ್ದಾಗಿ, ಕ್ಯೂಟಾಗಿ ಇತ್ತಂತೆ, ಅದಕ್ಕೇ ಅದರ ಮೇಲೇ ಕಣ್ಣು; ಎಗರಿಸ್ಕೊಂಡು ಹೋಗಿಬಿಟ್ಟದ್ದಾರಂತೆ'.

'ಅಂತೂ ಈಗ, ಅರ್ಜೆಂಟೀನಾಗೂ- ಅರ್ಜೆಂಟಿನೊಗೂ ಶುಕ್ರದೆಸೆ!'

'ಓ! ನೀವು ಫುಟ್ಬಾಲನ್ನೂ ಎಳೆದು ತಂದ್ಬಿಟ್ರಾ?!- ಮೊದಲು ಈ ಶುನಕದ ಶುಕ್ರದೆಸೆ ಬಗ್ಗೆ ಮಾತಾಡಿ...'

'777 ಚಾರ್ಲಿ ಸಿನಿಮಾ ಬಂದ ಮೇಲೆ ಶ್ವಾನಗಳಿಗೆ ಡಿಮ್ಯಾಂಡಪ್ಪೋ, ಡಿಮ್ಯಾಂಡು'.

'ಬರಿ ಸಿನಿಮಾ ಅಲ್ಲಾರೀ.. ಸದನಕ್ಕೂ ತಲುಪಿದೆ; ರಾಜ್ಯಸಭೆಯಲ್ಲಿ ಕೋಲಾಹಲ; ಕಲಾಪದಲ್ಲಿ 'ನಾಯಿ ಗಲಾಟೆ' ಅಂತಾ ನೋಡ್ಲಿಲ್ಲವೇ?!... ಬ್ರೇಕಿಂಗ್ ನ್ಯೂಸ್ ಅಂತಾ... ಟಿ.ವಿ. ಬ್ರೇಕ್ ಆಗೋಹಾಗೆ ಕಿರ್ಚಾತಾಯಿದ್ದದ್ದು ಕೇಳಿಸಿಕೊಂಡಿಲ್ವೇ?'

'ಇಲ್ಲಿ ನಮ್ಮ ಸುವರ್ಣಸೌಧದಲ್ಲಿ ಫೋಟೊ-ಫೈಟ್! ಅವರ ಚಿತ್ರ ಇರಲಿ, ಇವರ ಚಿತ್ರ ಇರಲಿ ಅಂತಾ ಏನು ವಿಚಿತ್ರಾರೀ ಇದು?! ರೈತರು, ರಸ್ತೆಗಳು, ಬೆಳೆಗಳು, ಬೆಲೆಗಳು, ಗ್ಯಾಸ್ ಸಿಲೆಂಡರು ಅಂತಾ ಚರ್ಚೆ ಮಾಡೋದು ಬಿಟ್ಟು'.

'ಮನುಷ್ಯರಿಗೆ ಇಲ್ಲದೇ ಇರೋ ಬೆಲೆ ಪ್ರಾಣಿ (ನಾಯಿ)ಗಳಿಗಿದೆ ಅಂತಾ ಆ ಕಿಡ್ನಾಪರ್‌ಗಳಿಗೆ ಇರುವಷ್ಟು ಬುದ್ಧಿ ನಮಗಿಲ್ಲದೇ ಇರೋ ಅಷ್ಟು 'ಕಿಡ್'ಗಳು- ನಾವು?!'

ಸಂಗತ

ಹೊಸ ವರ್ಷ, ನಾವು ಹೊಸಬರಾದಾಗ

ಚಲನೆಯಾಗಬೇಕಾದದ್ದು ಕ್ಯಾಲೆಂಡರಿನಲ್ಲಿ ಅಲ್ಲ, ನಮ್ಮ ಮನಃಸ್ಥಿತಿಯಲ್ಲಿ

• ಬಿ.ಎಸ್.ಭಗವಾನ್

'ನಿಮ್ಮ ಮುಂದಿನ ಜೀವನದಲ್ಲಿ ಸುವರ್ಣವೃಷ್ಟಿಯಾಗಲಿ'- ಹೊಸವರ್ಷ ಹುಟ್ಟಲು ಇನ್ನೂ ಮೂರು ದಿನಗಳಿರುವಾಗಲೇ ನನಗೆ ಬಂದ ಒಂದು ಓಲೆಯಲ್ಲಿ ಈ ಒಕ್ಕಣೆಯಿತ್ತು. ನನಗೆ ಸದ್ಯಕ್ಕೆ ಸಮೃದ್ಧಿ ಬೇಡ, ಏನಿದ್ದರೂ ಭವಿತವ್ಯದಲ್ಲಿ ಎನ್ನುವುದು ನನ್ನ ಈ ಮಿತ್ರರ ಆಶಯವೇ? ಪ್ರತಿವರ್ಷ ಡಿಸೆಂಬರ್ ಅಂತ್ಯ ಸಮೀಪಿಸುತ್ತಲೇ ನೂತನ ವರ್ಷಕ್ಕೆ ಸುನಾಮಿಯೋ ಪಾದಿಯ ಹಾರೈಕೆಗಳು.

ಡಿಸೆಂಬರ್ ನಮ್ಮ ಕುತೂಹಲ, ಆಶಯಗಳನ್ನು ನಿರ್ವಹಿಸುವ ತಿಂಗಳೆನ್ನೋಣ. ಅದೇ ಆಕಾಶದಲ್ಲಿ ಅದೇ ಸೂರ್ಯ, ಅದೇ ಚಂದ್ರ, ಅವೇ ನಕ್ಷತ್ರಗಳು, ಹೊಸದೇನು ಎಂಬ ತರ್ಕ ಇದ್ದಿದ್ದೆ. ಆದರೆ ಇಸವಿ ಬದಲಾಗುವ ನೆಪದಲ್ಲಿ ಒಂದಷ್ಟು ಸುವ್ಯವಸ್ಥೆಗೆ ಹಂಬಲಿಸಿ ಅದಕ್ಕಾಗಿ ಯೋಜಿಸಲು ಅಡ್ಡಿಯಿಲ್ಲ. ಹಾಗಾಗಿ ಪ್ರತೀ ಹೊಸವರ್ಷದ ಮೊದಲ ದಿನ ಪ್ರತಿಯೊಬ್ಬರ ಜನ್ಮದಿನ. ನಿರೀಕ್ಷೆ ಬದುಕುವ ಕೌಶಲ. ಬೆಲ್ಲವೇ ಇರಲಿ, ಬೇವು ಬೇಡ ಎಂದೋ, ಸಾಸಿವೆಯಷ್ಟೂ ನೆಮ್ಮದಿಗೆ ಭಂಗವಾಗದಿರಲಿ ಎಂದೋ ಹರಸುವಾಗ ಅತಿಶಯ ಶುಭಾಶಯದೊಳಗೊ, ಶುಭಾಶಯ ಅತಿಶಯದೊಳಗೊ ಎನ್ನುವ ಗುಮಾನಿ ಕಾಡುತ್ತದೆ. ಹೊಸ ವರ್ಷದಲ್ಲಿ ಸೌಖ್ಯ ಮಾತ್ರವೇ ತಾಂಡವವಾಡುವುದು ಅಸಂಭವ. ಏಕೆಂದರೆ ಅದರ ಕಿಮ್ಮತ್ತು ಕಾಣುವುದು ಅಸೌಖ್ಯವೆಂಬ ಕನ್ನಡಿಯಲ್ಲೇ.

'ಸಮರಸವೇ ಜೀವನ. ಹೊಸ ವರ್ಷ ನಿಮಗೆ ಹರುಷ ತರಲಿ' ಎಂಬ ಆಪ್ತರ ಸಂದೇಶಕ್ಕೆ 'ನಿಮಗೂ' ಎಂಬ ಪ್ರತಿಕ್ರಿಯೆಯಲ್ಲಿ ದುರ್ಬೀನು ಬಳಸಿದರೂ ಪ್ರೀತಿ, ವಿಶ್ವಾಸ ಕಾಣದು! ಅದು ಹಗಲಿನ ಚಂದ್ರನಂತೆ ನಿಸ್ತೇಜ. ಶುಭಾಶಯಗಳು ಸಿದ್ಧಮಾದರಿಯ ದಾರಿ ಹಿಡಿದರೆ ಅವು ಕೃತ್ರಿಮವಾದಾವು. ಹೊಸ ವರ್ಷಕ್ಕೆ ನಾವು ಹೊಸಬರಾಗದ ವಿನಾ ಹೊಸ ವರ್ಷ ನಮಗೆ ಹೊಸದೇನನ್ನೂ ತರದು, ಕೊಡದು. ಅಷ್ಟಕ್ಕೂ 'ಉದಾರ ಚರಿತಾನಾಮ್ ತು ವಸುಧೈವ ಕುಟುಂಬಕಮ್' ಪರಿಕಲ್ಪನೆಯ ಸಾಮಾಜಿಕ ಬದುಕಿನಲ್ಲಿ ತಾನು, ತನ್ನದೆಂಬ ನವವರ್ಷ ಬಾಲಿಶ. ನೋವು, ನಲಿವನ್ನು ಹಂಚಿಕೊಂಡಾಗಲೇ ದಿನಮಾನಗಳಲ್ಲಿ ಜೀವಸಿರಿ. ನಮ್ಮ ಕಷ್ಟ ಕಾರ್ಪಣ್ಯಗಳು ಕೊಂಚಮಟ್ಟಿಗಾದರೂ ನೀಗಿ ನಾವು ಮುಗುಳ್ನಗಲು ಆಸ್ಪದವಾಗುವ ಸಂಗತಿಗಳನ್ನು ಪರಿಶೀಲಿಸುವುದು ಜಾಣ್ಮೆ.

ನವವರ್ಷದ ಆಗಮನ ಪರಸ್ಪರ ಶುಭಕಾಮನೆಗಳ ವಿನಿಮಯಕ್ಕೆ ಸೀಮಿತವಾಗಿಬಿಟ್ಟರೆ ಒಂದು ಕ್ರಮ ಸಂಖ್ಯೆಯಿಂದ ಮುಂದಿನದಕ್ಕೆ ಹೋದಷ್ಟೆ ಲಾಭ ಮಾತ್ರ. ದೇಶ, ಕಾಲ ನಿರಪೇಕ್ಷವಲ್ಲ, ಅವರವರ ನೆಲೆಗೆ ತಕ್ಕಂತೆ ಎನ್ನುತ್ತದೆ ಮಹಾವಿಜ್ಞಾನಿ ಐನ್‌ಸ್ಟೀನ್‌ರ ಸಾಪೇಕ್ಷತಾ ಸಿದ್ಧಾಂತ. ಅಡುಗೆಮನೆಯಲ್ಲಿ ಲಡ್ಡು ಚಪ್ಪರಿಸುವವನಿಗೆ ಗಡಿಯಾರದ ಹಂಗಿರದು. ಅದರಂತೆ ನಗುನಗುತ್ತ ಎದುರಿಸುವ ಬದುಕು ಸಹನೀಯ, ಹಗುರ. ಘನ ನಿರ್ಧಾರಗಳ ಅನುಷ್ಠಾನದ ಆರಂಭಕ್ಕೆ ಜನವರಿ 1 ದಿನಾಂಕವೇ ಆಗಬೇಕೆಂದೇನಿಲ್ಲ. ಅದು ಇಚ್ಛಾನುಸಾರದ, ಪ್ರೇರಿಸಬಲ್ಲ ದಿನಾಂಕವಷ್ಟೆ. ಸಂಪನ್ನತೆ ಇರುವುದು ಸರಿಯೆ. ಆದರೆ ಅದರ ಸಮರ್ಥನೆಗಿಳಿದರೆ ಕಾಲಹರಣವಾಗುವುದು.

ಕಾರ್ಯರೂಪಕ್ಕೆ ದಕ್ಕದ ಸಂಕಲ್ಪಗಳಿಂದ ಏನು ಪ್ರಯೋಜನ? ನಿರ್ಧಾರಗಳು ವಾಸ್ತವವಾಗಿರದಿದ್ದರೆ ನಗೆಪಾಟಲು. ತಿಂಗಳಿಗೆ ನೂರು ಮಂದಿ ಅಶಕ್ತರಿಗೆ ಮಧ್ಯಾಹ್ನ ಭೋಜನದ ಏರ್ಪಾಡೆಂಬ ಗುರಿಯಿರಲಿ. ಸಂಖ್ಯೆ ಕನಿಷ್ಠ ಹತ್ತಾದರೂ ಆದೀತು. ಹೊಸ ಸಂಕಲ್ಪಗಳಿಗೆ ಮುನ್ನ ಹಿಂದಿನ ವರ್ಷದ ಸಂಕಲ್ಪಗಳ ಸಕಾರಾತ್ಮಕ ಅಂಶಗಳನ್ನು ಪರಿಷ್ಕರಿಸುವುದು ಅಗತ್ಯ. ಪರ್ವತಾರೋಹಿಗೆ ಪರ್ವತದ ಶಿಖರಕ್ಕೂ ಮಿಗಿಲಾಗಿ ಏರು ಹಾದಿಯಲ್ಲಿನ ಮೈಲಿಗಲ್ಲುಗಳೊಂದಿಗಿನ ಅನುಸಂಧಾನ ಪ್ರಧಾನವಾಗಬೇಕು. ಹಳೆಯವನ್ನು ಕೈಬಿಡದೆ ಹೊಸ ನಿರ್ಧಾರಗಳು ಉಸಿರಾಡಬೇಕಿದೆ.



ಗೋಡೆಗೆ ಸುಣ್ಣ ಬಳಿಯಬೇಕು ಎನ್ನುವವನಿಗಿಂತ ವಸ್ತುಶಃ ಬಳಿದವ ವಿಶಿಷ್ಟನಾಗುತ್ತಾನೆ. ಚಲನೆಯಾಗಬೇಕಾದ್ದು ಕ್ಯಾಲೆಂಡರಿನಲ್ಲಿ ಅಲ್ಲ, ನಮ್ಮ ಮನಃಸ್ಥಿತಿಯಲ್ಲಿ. ತಲುಪಬೇಕಾದ ಗುರಿಗಿಂತಲೂ ಸಾಗುವ ಮಾರ್ಗ ಮುಖ್ಯವಾಗುವುದು. ಹಸನಾದ ಬದುಕು ಒಮ್ಮಿಂದೊಮ್ಮೆಗೇ ಮೈದಳೆಯದು. ಅದಕ್ಕಾಗಿ ಚಿಂತನೆ, ಸಿದ್ಧತೆ ಮತ್ತು ಯೋಜನೆ ಅತ್ಯಗತ್ಯ. ಸಣ್ಣಪುಟ್ಟ ಯಶಸ್ಸುಗಳೇ ಭರ್ಜರಿ ಹಿಗ್ಗಿಗೆ ಒಯ್ಯುತ್ತವೆ. ಅವನ್ನೆಲ್ಲ ಸಂಕಲಿಸಿದಾಗ ಬೃಹತ್ ಯಶೋಗಾಥೆ ಕೈಗೂಡಿರುತ್ತದೆ. ಅತಿ ನಿರೀಕ್ಷೆಗಳು ಹುರುಪಿಗಿಂತಲೂ ಒತ್ತಡವನ್ನೇ ಸೃಷ್ಟಿಸಿರುತ್ತವೆ. ಹೊಸ ವರ್ಷ ಬದುಕಿನ ಒಂದು ಭಾಗ ಮಾತ್ರ ಎನ್ನುವುದು ಗಮನದಲ್ಲಿರಲಿ.

'ಯದ್ ಭಾವಂ ತದ್ ಭವತಿ'– ಭಾವಿಸಿದಂತೆ ಮನಸ್ಸು. ಬದುಕು ಉತ್ಸಾಹಿಗಳಿಗೆ ಉತ್ಸಾಹದಂತೆ, ಮಂಕಾದವರಿಗೆ ಮಂಕಾದಂತೆ, ಸೂಕ್ಷ್ಮವಾದವರಿಗೆ ಸೂಕ್ಷ್ಮದಂತೆ ತೋರುವುದು. ನಮ್ಮ ಮನಃಸ್ಥಿತಿಯನ್ನು ತರಬೇತುಗೊಳಿಸುವವರು ನಾವೇ. ಪ್ರಸಿದ್ಧ ಹೋಟೆಲ್ ಉದ್ಯಮಿಯೊಬ್ಬನನ್ನು ವರದಿಗಾರ 'ನೀವು ಹೇಗೆ ಯಶಸ್ಸು ಗಳಿಸಿದಿರಿ' ಎಂದು ಪ್ರಶ್ನಿಸಿದ. ಅದಕ್ಕೆ ಉದ್ಯಮಿ 'ನಾನು ಪಾರ್ಕಿನ ಕಲ್ಲುಬೆಂಚಿನ ಮೇಲೆ ಮಲಗಿದ್ದಾಗ ಈ ಉದ್ಯಮದ ಬಗ್ಗೆ ಯೋಜಿಸಿದೆ. ಯೋಜಿಸಿದ್ದನ್ನು ಮಾಡಿದೆ, ಮುಂದೆ ಕೂಡ ಅದನ್ನೇ ಮುಂದುವರಿಸುವೆ' ಎಂದನಂತೆ. ನಮ್ಮಿಂದಾದ ಪ್ರಮಾದಗಳು ನಮಗೆ ಏನೆಲ್ಲ ಕಲಿಸುತ್ತವೆ.

ಹೊಸ ವರ್ಷಕ್ಕೆ ಲೆಕ್ಕವಿಲ್ಲದಷ್ಟು ಶುಭಕಾಮನೆಗಳು ವಿನಿಮಯಗೊಂಡಿರುತ್ತವೆ. ಇನ್ನೊಂದು ಬದುಕಿದ್ದರೆ ಎಷ್ಟೆಲ್ಲಾ, ಹೇಗೆಲ್ಲಾ ತಿದ್ದಿಕೊಂಡು ಬಾಳಬಹುದಿತ್ತು ಅನ್ನಿಸುತ್ತದೆ. ಅದು ಸಾಧ್ಯವಿಲ್ಲ, ಬದುಕೆನ್ನುವುದು ಒಂದೇ ಅವಕಾಶ. ತೊಟ್ಟ ಸಂಕಲ್ಪಗಳ ಸಾಕಾರಕ್ಕೆ ಮುಂದಾಗುವುದೇ ಪುನರ್ ಬದುಕೆಂದು ಭಾವಿಸುವುದರಲ್ಲಿ ಲಾಭವಿದೆ. ಆದರೆ ಆರಂಭದಲ್ಲೇ ಆಲಸ್ಯ ಅತಿಕ್ರಮಿಸಿದರೆ ಬದುಕಿನ ಒಂದೊಂದೇ ಅಮೂಲ್ಯ ಗಳಿಗೆಯು ವ್ಯರ್ಥವಾಗತೊಡಗುತ್ತದೆ. ಸಮಯವನ್ನು ವ್ಯಯಿಸಬಹುದೇ ವಿನಾ ಮತ್ತೆ ಪಡೆಯಲಾಗದು.

ವಾಚಕರ ವಾಣಿ

ಹೇಳಿಕೆ ಹಿಂಪಡೆದು ಕ್ಷಮೆ ಕೇಳಿ

ಹಾವೇರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಒಂದು ಸಮುದಾಯದ ಲೇಖಕರು, ಕವಿಗಳನ್ನು ನಿರ್ಲಕ್ಷಿಸಿರುವುದನ್ನು ಪ್ರತಿಭಟಿಸಿ ಬೆಂಗಳೂರಿನಲ್ಲಿ ಜನಸಾಹಿತ್ಯ ಸಮ್ಮೇಳನವನ್ನು ಸಂಘಟಿಸಲಾಗುತ್ತಿದೆ. ಇದು ಸಾಹಿತ್ಯ ಸಮ್ಮೇಳನಕ್ಕೆ ಪರ್ಯಾಯವೂ ಅಲ್ಲ, ಬಂಡಾಯವೂ ಅಲ್ಲ, ಒಂದು ಸಮುದಾಯದ ಕಡೆಗಣನೆಗೆ ಪ್ರತಿರೋಧವಷ್ಟೆ ಎಂದು ಸಂಘಟಕರು ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಅವರು '...ಮನೋರೋಗದಿಂದ ನರಳುತ್ತಿರುವ ಪ್ರಗತಿಪರ ಚಿಂತಕರು ಅದರಿಂದ ಹೊರಬರಬೇಕು' ಎಂದಿದ್ದಾರೆ. ರಾಜ್ಯದ ಸಾಹಿತ್ಯ ಕ್ಷೇತ್ರದ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ಇಂತಹ ಹೇಳಿಕೆಯನ್ನು ನಾವು ನಿರೀಕ್ಷಿಸಿರಲಿಲ್ಲ ಮತ್ತು ಇದು ಅತ್ಯಂತ ಖಂಡನೀಯ.

ಇದರ ಜೊತೆಗೆ ಪ್ರೊ. ಪುರುಷೋತ್ತಮ ಬಿಳಿಮಲೆಯವರು ತಾವು ಹೇಳಿದ ಮುಸ್ಲಿಂ ವ್ಯಕ್ತಿಗೆ ಶಾಮಿಯಾನ ಕಾಂಟ್ರಾಕ್ಟ್ ನೀಡಲಿಲ್ಲವೆಂಬ ಕಾರಣಕ್ಕೆ ಈ ರೀತಿ ಟೀಕೆ ಮಾಡುತ್ತಿದ್ದಾರೆ ಎಂದಿರುವ ಮಹೇಶ್ ಜೋಶಿ ಅವರ ಹೇಳಿಕೆಯ ಬಗ್ಗೆ ಸರ್ಕಾರ ಕೂಡಲೇ ತನಿಖೆ ನಡೆಸಿ, ನಿಜ ಯಾವುದೆಂಬುದನ್ನು ರಾಜ್ಯದ ಜನತೆಯ ಮುಂದಿಡಬೇಕು ಎಂದು ನಾವು ಒತ್ತಾಯಿಸುತ್ತೇವೆ.

ಪ್ರೊ. ಅಲ್ಲಮಪ್ರಭು ಬೆಟ್ಟದೂರು, ಡಾ. ವೆಂಕಟಯ್ಯ ಅಪ್ಪಗೆರೆ, ಡಾ. ಟಿ.ಗೋವಿಂದರಾಜು, ಈ.ಬಸವರಾಜು, ಎಲ್.ಎನ್.ಮುಕುಂದರಾಜು, ಡಾ. ಆರ್.ಎನ್.ರಾಜಾನಾಯ್ಕ, ಆರ್.ಜಿ.ಹಳ್ಳಿ ನಾಗರಾಜು, ಕೆ. ಶರೀಫ, ಕೆ.ಬಿ. ಮಹದೇವಪ್ಪ, ಬಿ.ಎಂ. ಹನೀಫ್, ಪ್ರಭಾ ಎನ್. ಬೆಳವಂಗಲ, ಜೊಹರಾ ನಿಸಾರ್, ಡಿ.ಎಂ. ಮಂಜುನಾಥಸ್ವಾಮಿ, ಡಾ. ಎಚ್.ಕೆ.ಎಸ್.ಸ್ವಾಮಿ, ಜಗದೀಶ್

ಟಿ.ವಿ. ಅಳವಡಿಕೆ ಉದ್ದೇಶ ಫಲಿಸಲಿ

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ರೈಲುಗಳ ಬರುವಿಕೆಯ ವೇಳೆ, ಪ್ಲಾಟ್‌ಫಾರಂ ಸಂಖ್ಯೆ ಮತ್ತು ಹೊರಡುವ ವೇಳೆಯನ್ನು ತೋರಿಸುವ ಟಿ.ವಿಗಳು ಅನೇಕ ಕಡೆ ಇವೆ. ಈ ಟಿ.ವಿಗಳಲ್ಲಿ ಸರ್ಕಾರದ ಜಾಹೀರಾತುಗಳ ಹಾವಳಿ ಹೆಚ್ಚಾಗಿದೆ. ರೈಲು ಹಿಡಿಯುವ ತರಾತುರಿಯಲ್ಲಿರುವ ಪ್ರಯಾಣಿಕರಿಗೆ ಒಂದೊಂದು ನಿಮಿಷವೂ ಮುಖ್ಯವಾಗಿರುತ್ತದೆ. ಈ ಜಾಹೀರಾತುಗಳು ಮುಗಿಯುವತನಕ ಕಾದಿದ್ದು, ಯಾವಾಗ ಯಾವ ರೈಲು ಎಲ್ಲಿ ಬರುತ್ತದೆ ಎನ್ನುವ ವಿಚಾರ ತಿಳಿದುಕೊಳ್ಳುವಷ್ಟರಲ್ಲಿ ರೈಲು ತಪ್ಪುವ ಸಂಭವ ಇರುತ್ತದೆ. ತಡವಾಗಿ ಬಿತ್ತರವಾದ ಮಾಹಿತಿ ತಿಳಿದುಕೊಂಡು ಮೆಟ್ಟಿಲು ಇಳಿದು ಹತ್ತಿ ಓಡುವ ಧಾವಂತದಲ್ಲಿ ಬಿದ್ದು ಪೆಟ್ಟಾಗುವ ಸಾಧ್ಯತೆಯೂ ಇರುತ್ತದೆ.

ಧ್ವನಿವರ್ಧಕಗಳಲ್ಲಿ ಕೂಗಿ ಹೇಳುವ ವೇಳಾಪಟ್ಟಿಯೂ ಹೆಚ್ಚಿನ ಸಹಾಯಕ್ಕೆ ಬರುವುದಿಲ್ಲ. ಹಿಂದಿ, ಇಂಗ್ಲಿಷ್‌ನಲ್ಲಿ ಹೇಳಿದ ನಂತರ ಬರುವ ಕನ್ನಡದ ಸರದಿಗಾಗಿ ಕಾಯಬೇಕಾಗುತ್ತದೆ. ಉಚ್ಚಾರಣೆಯೂ ಅಸ್ಪಷ್ಟವಾಗಿರುತ್ತದೆ. ಹೀಗಿರುವಾಗ, ರೈಲು ನಿಲ್ದಾಣದ ಟಿ.ವಿಗಳ ಮೂಲ ಉದ್ದೇಶವನ್ನು ಈಡೇರಗೊಡದ ಜಾಹೀರಾತುಗಳನ್ನು ಕೈಬಿಡಬೇಕು. ಎಲ್ಲಾ ಪ್ಲಾಟ್‌ಫಾರಂಗಳು, ಕಾಲ್ನಡಿಗೆಯ ಮೇಲ್ಸೇತುವೆ ಮತ್ತು ರೈಲು ನಿಲ್ದಾಣದ ಆಯಕಟ್ಟಿನ ಜಾಗಗಳಲ್ಲಿ ರೈಲಿನ ಬರುವಿಕೆ, ಹೊರಡುವ ವಿವರಗಳನ್ನು ಜಾಹೀರಾತುಗಳಿಲ್ಲದ, ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ನಿರಂತರವಾಗಿ ತೋರಿಸುವ ಟಿ.ವಿ. ಪರದೆಗಳನ್ನು ಒದಗಿಸುವ ಮನಸ್ಸು ರೈಲ್ವೆ ಅಧಿಕಾರಿಗಳಿಗೆ ಬರಲಿ.

ಶ್ರೀಕಂಠ, ಬೆಂಗಳೂರು

ಕವಿಗಳ ಹಾಡಿಗೆ ನಿರ್ಬಂಧ ಸಲ್ಲ

ಹಾವೇರಿಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಕವಿತೆಗಳನ್ನು ವಾಚಿಸಬೇಕೇ ವಿನಾ ಹಾಡುವಂತಿಲ್ಲ ಎಂಬ ಕನ್ನಡ ಸಾಹಿತ್ಯ ಪರಿಷತ್ತಿನ ನಿಯಮವನ್ನು ಓದಿ (ಪ್ರ.ವಾ., ಡಿ. 29) ಆಶ್ಚರ್ಯವಾಯಿತು. ಇದು, ಕನ್ನಡದ ಕವಿಗಳಿಗೆ ಮತ್ತು ಸುಗಮ ಸಂಗೀತಕ್ಕೆ ಮಾಡುತ್ತಿರುವ ಅವಮಾನ. ಹಿಂದಿ ಭಾಷೆಯಲ್ಲಿನ ಬಹುತೇಕ ಕವಿಗಳು ಹಾಡುತ್ತಾರೆ. ನಮ್ಮಲ್ಲೂ ಕೆಲವರು ಹಾಡಿನ ಮೂಲಕವೇ ಕಾವ್ಯವನ್ನು ಪ್ರೇಕ್ಷಕರಿಗೆ ಒಪ್ಪಿಸುವ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಇದನ್ನು ತಪ್ಪು ಎನ್ನಲಾದೀತೆ? ಕವಿಗಳ ಧ್ವನಿಗೆ ನಿರ್ಬಂಧ ಹಾಕುವುದು ಸರಿಯಲ್ಲ. ಈ ಬಗ್ಗೆ ಪರಿಷತ್ತು ಮತ್ತೊಮ್ಮೆ ಯೋಚಿಸಲಿ. ಕೋಗಿಲೆಗಳ ಕೂಗನ್ನು ಕೇಳಬಾರದೆಂದು ರಾಜ ತಮಟೆ ಬಡಿಸಿದಂತೆ ಈ ಸುದ್ದಿ ನಗೆಪಾಟಲು ಆಗಬಾರದು.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಕನ್ನಡತನಕ್ಕೆ ಸಿಗಲಿ ಮನ್ನಣೆ

ಇತ್ತೀಚಿನ ಕನ್ನಡ ಸಿನಿಮಾಗಳ ಜಾಹೀರಾತುಗಳಲ್ಲಿ ಇಂಗ್ಲಿಷ್ ಭಾಷೆಯದೇ ಸಿಂಹಪಾಲು. ಅಷ್ಟೇ ಅಲ್ಲ, ಕನ್ನಡ ಸಿನಿಮಾ ಶೀರ್ಷಿಕೆಯನ್ನೂ ಇಂಗ್ಲಿಷ್ ಕಬಳಿಸುತ್ತಿದೆ. ಹಳೇ ಕನ್ನಡ ಸಿನಿಮಾಗಳಲ್ಲಿ ಹುಡುಕಿದರೂ ಒಂದು ಇಂಗ್ಲಿಷ್ ಪದ ಕಾಣಿಸುತ್ತಿರಲಿಲ್ಲ. ಅಂದಿನ ಸಿನಿಮಾ ಶೀರ್ಷಿಕೆಗಳೇ ಆಕರ್ಷಕ. ಸಿನಿಮಾ ಕಥೆಗೆ ತಕ್ಕ ಶೀರ್ಷಿಕೆ ಅಥವಾ ಶೀರ್ಷಿಕೆಗೆ ತಕ್ಕ ಕಥೆ ಇರುತ್ತಿತ್ತು. ಇತ್ತೀಚಿನ ಕನ್ನಡ ಸಿನಿಮಾಗಳಲ್ಲಿ ಈ ಯಾವ ಅಂಶಗಳನ್ನೂ ಕಾಣಲಾಗುವುದಿಲ್ಲ. ಒಂದು ಕಾಲದಲ್ಲಿ ಕಥೆ, ಕಾದಂಬರಿ ಆಧಾರಿತ ಸಿನಿಮಾ ತೆಗೆದು, ಪ್ರಶಸ್ತಿಗಳನ್ನು ಬಾಚಿಕೊಳ್ಳುತ್ತಿದ್ದ ಕನ್ನಡ ಸಿನಿಮಾ ಕ್ಷೇತ್ರ, ಈಗ ಕನ್ನಡ ಕಥೆ, ಕಾದಂಬರಿಗಳನ್ನು ಹತ್ತಿರಕ್ಕೂ ಸೇರಿಸುತ್ತಿಲ್ಲ. ಈಗಲೂ ಕಾಲ ಮಿಂಚಿಲ್ಲ. ಕನ್ನಡ ಸಿನಿಮಾ ನಿರ್ದೇಶಕರು ಕನ್ನಡದ ಶ್ರೇಷ್ಠ ಕಥೆ, ಕಾದಂಬರಿಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕಿದೆ. ಕನ್ನಡಕ್ಕೆ, ಕನ್ನಡತನಕ್ಕೆ ಪ್ರಾಮುಖ್ಯ ನೀಡಬೇಕಾಗಿದೆ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಅನುಕರಣೀಯ ನಡೆ

ಭಾರತ್ ಸ್ಕೌಟ್ಸ್ –ಗೈಡ್ಸ್ ವತಿಯಿಂದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದಲ್ಲಿ ಇತ್ತೀಚೆಗೆ ಮೂಡುಬಿದಿರೆಯಲ್ಲಿ ಸಂಪನ್ನಗೊಂಡ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯ ಕೊನೆಯ ದಿನ 40 ಸಾವಿರಕ್ಕೂ ಅಧಿಕ ವಿದ್ಯಾರ್ಥಿವೃಂದ ಏಕಕಾಲಕ್ಕೆ ಯೋಗ ಮತ್ತು ಸರ್ವಧರ್ಮ ಪ್ರಾರ್ಥನೆ ಸಲ್ಲಿಸಿದ ದೃಶ್ಯ ನೋಡಿ ಕಣ್ಮನ ತುಂಬಿ ಬಂದಿತು. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಅವರಲ್ಲಿ 'ಓಂ ಸಹ ನಾವವತು' ಎಂಬ ನಮ್ಮ ಋಷಿಮುನಿಗಳ ದಿವ್ಯಮಂತ್ರ ಸಾಕಾರ ಪಡೆದರೆ ಸರ್ವ ಜನಾಂಗದ ಶಾಂತಿಯ ತೋಟವೆನಿಸಿದ ಭವ್ಯ ಭಾರತದ ಹಿರಿಮೆ ಗರಿಮೆಗೆ ಯಾವತ್ತೂ ಚ್ಯುತಿಯಿಲ್ಲ. ಕೇವಲ ರಾಜಕೀಯ ರಾಡಿಯಲ್ಲಿ ಮಿಂದೇಳುತ್ತಿರುವ ಇಂದಿನ ಕಾಲಮಾನದಲ್ಲಿ ಮೂಡುಬಿದಿರೆಯ ಸಾಂಸ್ಕೃತಿಕ ಜಾಂಬೂರಿಯ ನಡೆ ದೇಶದ ಇತರ ವಿದ್ಯಾಸಂಸ್ಥೆಗಳಿಗೂ ಅನುಕರಣೀಯ.

ಪ್ರೊ.ಶಿವರಾಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಮೂಲಸ್ವರೂಪ ಸಿದ್ಧಾಂತದಿಂದ ಸಂವಿಧಾನಕ್ಕೆ ಸ್ಥಿರತೆ’

ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ಕುಲಪತಿ ಸುಧೀರ್ ಕೃಷ್ಣಸ್ವಾಮಿ ಅವರಿಗೆ ಇನ್ಫೊಸಿಸ್ ಸೈನ್ಸ್ ಫೌಂಡೇಷನ್ ತನ್ನ ವಾರ್ಷಿಕ ಪ್ರಶಸ್ತಿಯನ್ನು ಘೋಷಿಸಿದೆ. ಪ್ರಶಸ್ತಿಯು ಜನವರಿಯಲ್ಲಿ ಪ್ರದಾನ ಆಗುವ ನಿರೀಕ್ಷೆ ಇದೆ. ಮಾನವಿಕ ವಿಭಾಗದಲ್ಲಿ ಸುಧೀರ್ ಕೃಷ್ಣಸ್ವಾಮಿ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಅವರು ಸಂವಿಧಾನದ ಮೂಲ ಸ್ವರೂಪದ ಕುರಿತು ಮಾಡಿದ ಸಂಶೋಧನೆಗಳನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆ ಆಗಿರುವುದು ವಿಶೇಷ. ಸಂವಿಧಾನದ ಮೂಲ ಸ್ವರೂಪ ಹಾಗೂ ಅದರ ಮಿತಿಗಳ ಕುರಿತು ಮತ್ತೆ ಚರ್ಚೆಗಳು ನಡೆಯುತ್ತಿವೆ. ನ್ಯಾಯಮೂರ್ತಿಗಳ ನೇಮಕಕ್ಕೆ ಕೊಲಿಜಿಯಂ ವ್ಯವಸ್ಥೆಯು ಸರಿಯಲ್ಲ, ಎನ್‌ಜೆಎಸಿ ವ್ಯವಸ್ಥೆಯನ್ನು ಅಸಿಂಧುಗೊಳಿಸಿದ್ದು ತಪ್ಪು ಎಂಬ ಅಭಿಪ್ರಾಯಗಳನ್ನು ಶಾಸಕಾಂಗ ಹಾಗೂ ಕಾರ್ಯಾಂಗದ ಪ್ರಮುಖರು ಈಚೆಗೆ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿಯೂ ಸಂವಿಧಾನದ ಮೂಲ ಸ್ವರೂಪದ ತಾತ್ವಿಕತೆ ಕುರಿತ ಚರ್ಚೆ ಮಹತ್ವ ಪಡೆದಿದೆ. ಸುಧೀರ್ ಕೃಷ್ಣಸ್ವಾಮಿ ಅವರು ‘**ಪ್ರಜಾವಾಣಿ**’ಗೆ ಇ–ಮೇಲ್ ಮೂಲಕ ನೀಡಿರುವ ಸಂದರ್ಶನದ ಆಯ್ದ ಭಾಗ ಇಲ್ಲಿದೆ



ಪ್ರಜಾವಾಣಿ ಸಂದರ್ಶನ

ಸುಧೀರ್ ಕೃಷ್ಣಸ್ವಾಮಿ

● ವಿಜಯ್ ಜೋಷಿ

● **ಸಂವಿಧಾನದಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿರದೇ ಇದ್ದರೂ ಸುಪ್ರೀಂ ಕೋರ್ಟ್ ಕೇಶವಾನಂದ ಭಾರತಿ ಪ್ರಕರಣದಲ್ಲಿ ನೀಡಿದ ಐತಿಹಾಸಿಕ ತೀರ್ಪಿನ ಮೂಲಕ, ‘ಸಂವಿಧಾನದ ಮೂಲ ಸ್ವರೂಪ’ ಎಂಬ ತತ್ವಕ್ಕೆ ಜೀವ ಕೊಟ್ಟಿತು. ಶಾಸಕಾಂಗವು ತನ್ನ ವ್ಯಾಪ್ತಿಯನ್ನು ಮೀರಿ ಕೈಗೊಳ್ಳುವ ತೀರ್ಮಾನಗಳಿಂದ ಇದು ಹೇಗೆ ಸಂವಿಧಾನವನ್ನು ರಕ್ಷಿಸಿದೆ?**

ಸಂವಿಧಾನದ ಮೂಲ ಸ್ವರೂಪಕ್ಕೆ ಸಂಬಂಧಿಸಿದ ಸಿದ್ಧಾಂತವು ಸಂವಿಧಾನವನ್ನು ಅಕ್ಷರಶಃ ಅರ್ಥೈಸುವುದನ್ನು ಆಧರಿಸಿಲ್ಲ. ಎಲ್ಲ ಅಂಗಗಳಿಗೂ ಇರುವ ಅಧಿಕಾರಕ್ಕೆ ಮಿತಿಗಳು ಇವೆ ಎನ್ನುವ ಸಾಂವಿಧಾನಿಕ ಪ್ರಜಾತಂತ್ರವನ್ನು ಸೃಷ್ಟಿಸಿದ ಸಂವಿಧಾನದ ಪಠ್ಯವನ್ನು ರಾಚನಿಕವಾಗಿ ಅರ್ಥೈಸುವ ಮೂಲಕ ಈ ತತ್ವ ಹುಟ್ಟಿಕೊಂಡಿದೆ.

ಸಂಸತ್ತಿನಲ್ಲಿ ಒಂದು ಪಕ್ಷಕ್ಕೆ ಬಹಳ ದೊಡ್ಡ ಬಹುಮತ ಇದ್ದಾಗಲೂ ಈ ತತ್ವವು ಸಾಂವಿಧಾನಿಕ ಸ್ಥಿರತೆಯನ್ನು ತಂದುಕೊಟ್ಟಿದೆ. ಇದು ರಾಜಕೀಯದ ಅತಿರೇಕಗಳಿಂದ ರಕ್ಷಣೆಯನ್ನು ನೀಡಿದೆ.

● **ಆದರೆ ಈ ತತ್ವವು ಶಾಸಕಾಂಗಕ್ಕೆ ವಾಸ್ತವದಲ್ಲಿ ಇರುವ ಅಧಿಕಾರವನ್ನು ಮೊಟಕುಗೊಳಿಸಿಲ್ಲವೇ? ಏಕೆಂದರೆ, ಸಂವಿಧಾನದ ಮೂಲ ಸ್ವರೂಪ ಎಂಬ ತತ್ವವನ್ನು ಹುಟ್ಟುಹಾಕಿದ್ದು ನ್ಯಾಯಾಂಗ. ಮೂಲ ಸ್ವರೂಪವೆಂದರೆ ಏನು ಎಂಬುದನ್ನು ಈಗಲೂ ತೀರ್ಮಾನಿಸುತ್ತಿರುವುದು ನ್ಯಾಯಾಂಗ. ಮೂಲ ಸ್ವರೂಪದ ವ್ಯಾಖ್ಯಾನದಲ್ಲಿ ಶಾಸಕಾಂಗ ಅಥವಾ ಕಾರ್ಯಾಂಗಕ್ಕೆ ಯಾವುದೇ ಪಾತ್ರವಿರುವಂತೆ ಕಾಣುತ್ತಿಲ್ಲ.**

ಸಂವಿಧಾನಕ್ಕೆ ಇರುವ ಮೂಲ ಲಕ್ಷಣಗಳನ್ನು ದೇಶದ ಸಾಮಾನ್ಯ ಜನ (ಅವರು ಪತ್ರಿಕೆಗಳಲ್ಲಿ ಲೇಖನ ಬರೆಯುವ ಮೂಲಕ ಜನಪ್ರಿಯ ನಿಯತಕಾಲಿಕಗಳಲ್ಲಿ ಪ್ರಬಂಧಗಳನ್ನು ಬರೆಯುವ ಮೂಲಕ), ಅಕಾಡೆಮಿಕ್ ವಲಯದ ವಿದ್ವಾಂಸರು, ಕಕ್ಷಿದಾರರು ಹಾಗೂ ಅವರ ಪರವಾಗಿ ಪ್ರಕರಣಗಳಲ್ಲಿ ವಾದ ಮಂಡಿಸುವ ವಕೀಲರು ಗುರುತಿಸುತ್ತ ಬಂದಿದ್ದಾರೆ. ಸಂವಿಧಾನದ ಮೂಲ ಲಕ್ಷಣಗಳು ಯಾವುವು ಎಂಬುದನ್ನು ಅಂತಿಮವಾಗಿ ತೀರ್ಮಾನಿಸುವುದು ನ್ಯಾಯಾಲಯವೇ ಆದರೂ, ಈ ತತ್ವವನ್ನು ವ್ಯಾಖ್ಯಾನಿಸುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಎಲ್ಲರೂ ಇದು ರೂಪುಗೊಳ್ಳಲು ಕಾರಣ ಎನ್ನಬೇಕಾಗುತ್ತದೆ.

ಶಾಸಕಾಂಗ ಹಾಗೂ ಕಾರ್ಯಾಂಗದ ಅಧಿಕಾರವನ್ನು ಅಸಿಂಧುಗೊಳಿಸಲು ಈ ತತ್ವವನ್ನು ಬಹಳ ಕಡಿಮೆ ಸಂದರ್ಭಗಳಲ್ಲಿ ಬಳಕೆ ಮಾಡಲಾಗಿದೆ. ಕಳೆದ ಐವತ್ತು ವರ್ಷಗಳ ಅವಧಿಯಲ್ಲಿ ಹತ್ತಕ್ಕೂ ಕಡಿಮೆ ಸಂದರ್ಭಗಳಲ್ಲಿ ಶಾಸನವೊಂದನ್ನು, ಕಾರ್ಯಾಂಗದ ತೀರ್ಮಾನವನ್ನು ಅಥವಾ ತಿದ್ದುಪಡಿಯನ್ನು ಅಸಿಂಧುಗೊಳಿಸಲು ಬಳಕೆ ಮಾಡಲಾಗಿದೆ.

● **ಶಾಸಕಾಂಗ ಹಾಗೂ ಕಾರ್ಯಾಂಗ ತಮ್ಮ ಮಿತಿಗಳನ್ನು ಮೀರಿದ್ದು ಕೂಡ ಕೊಲಿಜಿಯಂ ವ್ಯವಸ್ಥೆಯ ಉಗಮಕ್ಕೆ ಕಾರಣ ಎಂದು ನ್ಯಾಯಶಾಸ್ತ್ರ ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಈ ತಾತ್ವಿಕತೆಯು ಚುನಾಯಿತ ಸರ್ಕಾರಗಳು ತಮ್ಮ ಅಧಿಕಾರವನ್ನು ಮಿತಿ ಮೀರಿ ಬಳಸುವುದರಿಂದ ನ್ಯಾಯಾಂಗವನ್ನು ಹೇಗೆ ರಕ್ಷಿಸುತ್ತಿದೆ?**

ಸಂವಿಧಾನ ಮೂಲ ಸ್ವರೂಪಕ್ಕೆ ಸಂಬಂಧಿಸಿದ ತಾತ್ವಿಕತೆಯು ಜನ್ಮತಾಳಿದ ಸಂದರ್ಭದಲ್ಲಿ ಕಾನೂನು ವಿದ್ವಾಂಸರು ಅದರ ಬಗ್ಗೆ ವಿಮರ್ಶಾತ್ಮಕವಾಗಿ ಮಾತನಾಡಿದ್ದರು. ಆದರೆ, ಕಾಲ ಕಳೆದಂತೆಲ್ಲ, ಅವರಲ್ಲಿ ಕೆಲವರು ಈ ತಾತ್ವಿಕತೆಯು ಭಾರತದ ಸಾಂವಿಧಾನಿಕ ಪ್ರಜಾತಂತ್ರದ ಪಾಲಿಗೆ ಅದೆಷ್ಟು ಮೌಲ್ಯಯುತವಾದುದು ಎಂಬುದನ್ನು ಗುರುತಿಸಿದ್ದಾರೆ. ಮೂಲ ಸ್ವರೂಪದ ತಾತ್ವಿಕತೆಯನ್ನು ಒಂದು ರೂಪದಲ್ಲಿ ದಕ್ಷಿಣ ಆಫ್ರಿಕದಲ್ಲಿ ಹಾಗೂ ಇತರ ಕೆಲವೆಡೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ತಾತ್ವಿಕತೆಯ ಛಾಯೆಯು ಈಗ ಬ್ರಿಟನ್ನಿನ ಸುಪ್ರೀಂ ಕೋರ್ಟ್‌ನ ಈಚಿನ ಕೆಲವು ತೀರ್ಪುಗಳಲ್ಲಿ ಕಾಣಿಸುತ್ತಿದೆ. ಪ್ರಜಾತಂತ್ರ ವ್ಯವಸ್ಥೆಗಳನ್ನು ಸುಲಭವಾಗಿ ಹಾಳು ಮಾಡಿಬಿಡಬಹುದು, ಅವುಗಳಿಗೆ ಸಾಂಸ್ಥಿಕ ಬಲ ಬೇಕಾಗುತ್ತದೆ. ಸಾಂವಿಧಾನಿಕ ಪ್ರಜಾತಂತ್ರ ವ್ಯವಸ್ಥೆಗಳು ಮೂಲ ಸ್ವರೂಪ ಎಂಬ ತಾತ್ವಿಕತೆಯ ಪ್ರಯೋಜನ ಪಡೆದುಕೊಳ್ಳಬಹುದು.

● **ಎನ್‌ಜೆಎಸಿ ಕಾಯ್ದೆಯನ್ನು ರೂಪಿಸುವ ಮೂಲಕ ಕೇಂದ್ರ ಸರ್ಕಾರವು ಕೊಲಿಜಿಯಂ ವ್ಯವಸ್ಥೆಯನ್ನು ರೂಪಿಸಿದ ತೀರ್ಪುಗಳನ್ನು ಅಸಿಂಧುಗೊಳಿಸಲು ಯತ್ನಿಸಿತು. ಆದರೆ, ಎನ್‌ಜೆಎಸಿ ನ್ಯಾಯಾಂಗದ ಸ್ವಾತಂತ್ರ್ಯಕ್ಕೆ, ಹಾಗೂ ಆ ಮೂಲಕ ಸಂವಿಧಾನದ ಮೂಲ ಸ್ವರೂಪಕ್ಕೆ, ಧಕ್ಕೆ ತರುತ್ತದೆ ಎಂದು ಸುಪ್ರೀಂ ಕೋರ್ಟ್ ಈ ಕಾಯ್ದೆಯನ್ನು ಅಸಿಂಧುಗೊಳಿಸಿತು. ಮೂಲ ಸ್ವರೂಪವನ್ನು ರಕ್ಷಿಸುವ ನೆಪದಲ್ಲಿ ಜನರ ಇಚ್ಛೆಯನ್ನು ಒಪ್ಪಿಕೊಳ್ಳದೆ ನ್ಯಾಯಾಂಗವು ತನ್ನ ಮಿತಿಗಳನ್ನು ಮೀರಿತೇ?**

ಎನ್‌ಜೆಎಸಿ ತಿದ್ದುಪಡಿ ಹಾಗೂ ಆ ವಿಚಾರವಾಗಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು ಈಗ ವಿವಾದಕ್ಕೆ ಒಳಗಾಗಿದೆ. ಇಡೀ ವಿಚಾರವನ್ನು ನಾವು ಹೀಗೊಂದು ದೃಷ್ಟಿಕೋನದಿಂದ ಹೆಚ್ಚು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಅಧಿಕಾರವನ್ನು ಪ್ರತ್ಯೇಕಗೊಳಿಸಿರುವುದು ಸಂವಿಧಾನದ ಮೂಲ ಲಕ್ಷಣಗಳಲ್ಲಿ ಒಂದು ಎಂಬುದರಲ್ಲಿ ಎರಡನೆಯ ಮಾತೇ ಇಲ್ಲ. ಅಧಿಕಾರವನ್ನು ಪ್ರತ್ಯೇಕಗೊಳಿಸಿರುವ ಅಂಶದ ಅಡಿಯಲ್ಲೇ ನ್ಯಾಯಾಂಗದ ಸ್ವಾತಂತ್ರ್ಯ ಕೂಡ ಒಂದು.

ನ್ಯಾಯಾಂಗದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಇರುವ ಒಂದೇ ಮಾರ್ಗವೆಂದರೆ ಇಂದಿನ ಕೊಲಿಜಿಯಂ ವ್ಯವಸ್ಥೆಯೇ? ಎನ್‌ಜೆಎಸಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪು, ನ್ಯಾಯಾಂಗದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಕೊಲಿಜಿಯಂ ವ್ಯವಸ್ಥೆ ಅಗತ್ಯ ಎಂಬ ಮಾತನ್ನು ಅನುಮೋದಿಸುತ್ತದೆ. ಆದರೆ, ಕಾರ್ಯಾಂಗ (ಸರ್ಕಾರ) ಹೇಳುವುದು ನ್ಯಾಯಮೂರ್ತಿಗಳನ್ನು ನೇಮಕ ಮಾಡಲು ತನಗೂ ಆಗಬೇಕು ಎಂದು. ಆದರೆ, ಇದರಿಂದ ನ್ಯಾಯಾಂಗದ ಸ್ವಾತಂತ್ರ್ಯದ ರಕ್ಷಣೆ ಸಾಧ್ಯವಿಲ್ಲ. ಹೀಗಾಗಿ, ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯಲ್ಲಿ ಅಂತಿಮ ಅಧಿಕಾರವು ಕಾರ್ಯಾಂಗಕ್ಕೂ, ನ್ಯಾಯಾಂಗಕ್ಕೂ ಇಲ್ಲದ ಮೂರನೆಯ ವ್ಯವಸ್ಥೆಯೊಂದನ್ನು ನಾವು ಕಂಡುಕೊಳ್ಳಬೇಕು. ಸಂವಿಧಾನದ ಮೂಲ ಸ್ವರೂಪದ ತಾತ್ವಿಕತೆಗೆ ಅನುಗುಣವಾಗಿಯೇ ಈ ಮೂರನೆಯ ವ್ಯವಸ್ಥೆಯನ್ನು ರೂಪಿಸಬಹುದು.

● **ಇಡಬ್ಲ್ಯುಎಸ್ ವರ್ಗಕ್ಕೆ ಕಲ್ಪಿಸಿರುವ ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಬಹುಮತದ ತೀರ್ಪಿನ ಮೂಲಕ ಎತ್ತಿಹಿಡಿದಿದೆ. ಆದರೆ ಇಲ್ಲಿ ಮೂಲ ಸ್ವರೂಪದ ಉಲ್ಲಂಘನೆ ಆಗಿದೆಯೇ?**

ಇಡಬ್ಲ್ಯುಎಸ್ ವರ್ಗಕ್ಕೆ ಮೀಸಲಾತಿಯನ್ನು ಕಲ್ಪಿಸಿದ ತಿದ್ದುಪಡಿಯಲ್ಲಿ ಮೂಲ ಸ್ವರೂಪದ ಉಲ್ಲಂಘನೆ ಆಗಿದೆಯೇ ಎಂಬ ವಿಚಾರವಾಗಿ ಬಹಳ ದೊಡ್ಡ ಭಿನ್ನಮತ ಇದೆ. ಇಡಬ್ಲ್ಯುಎಸ್ ತಿದ್ದುಪಡಿಯು ಲಂಬ ಮೀಸಲಾತಿ (vertical reservation) ವರ್ಗವೊಂದನ್ನು ಸೃಷ್ಟಿಸುವ ಬದಲು, ಸಮತಲದ ಮೀಸಲಾತಿಯನ್ನು (horizontal reservation) ಜಾರಿಗೆ ತರಬೇಕಿತ್ತು. ಆಗ ಎಲ್ಲ ವರ್ಗಗಳಲ್ಲಿ ಇರುವ ಆರ್ಥಿಕವಾಗಿ ಹಿಂದುಳಿದವರಿಗೆ ಪ್ರಯೋಜನ ಆಗುತ್ತಿತ್ತು. ಈಗಿನ ಇಡಬ್ಲ್ಯುಎಸ್ ಮೀಸಲಾತಿಗೆ ಅವಕಾಶ ಕಲ್ಪಿಸುವ ಮೂಲಕ ನ್ಯಾಯಾಲಯವೇ ಶೇ 50ರ ಮಿತಿಯನ್ನು ಮೀರಿದೆ. ಇದು ಮೀಸಲಾತಿಯ ಸುತ್ತ ಸ್ಪರ್ಧಾತ್ಮಕ ರಾಜಕಾರಣಕ್ಕೆ ದಾರಿ ಮಾಡಿಕೊಟ್ಟಿದೆ. ಇದನ್ನು ನಿಯಂತ್ರಿಸುವುದು ಕಷ್ಟ.

ಕಾರುಗಳಲ್ಲಿ ಸೀಟ್‌ಬೆಲ್ಟ್ ಏಕೆ ಧರಿಸಬೇಕು?

ಪ್ರತಿಬಾರಿ ಗಣ್ಯರೊಬ್ಬರು ರಸ್ತೆ ಅಪಘಾತಕ್ಕೆ ತುತ್ತಾದಾಗ ಸಂಚಾರ ಮತ್ತು ಚಾಲನಾ ನಿಯಮಗಳ ಬಗ್ಗೆ ಚರ್ಚೆ ಆರಂಭವಾಗುತ್ತದೆ. ಅಂತಹ ಚರ್ಚೆಗಳಲ್ಲಿ ಸೀಟ್‌ಬೆಲ್ಟ್ ಸಹ ಒಂದು. ಕಾರಿನಲ್ಲಿ ಚಾಲನೆ ಮತ್ತು ಪ್ರಯಾಣದ ವೇಳೆ ಸೀಟ್‌ಬೆಲ್ಟ್ ಧರಿಸುವುದರ ಅಗತ್ಯದ ಬಗ್ಗೆ ಮತ್ತೆ ಮತ್ತೆ ಚರ್ಚೆಯಾಗುತ್ತಿದೆ

ಪ್ರಜಾವಾಣಿ ವಾರ್ತೆ

ಕಾರಿನಲ್ಲಿ ಪ್ರಯಾಣಿಸುವಾಗ ಸೀಟ್‌ಬೆಲ್ಟ್ ಧರಿಸುವುದು ಎಷ್ಟು ಅತ್ಯಗತ್ಯ ಎಂಬುದನ್ನು ಒತ್ತಿ ಒತ್ತಿ ಹೇಳುವ ಹಲವು ಅಪಘಾತಗಳು ಈಚೆಗೆ ನಡೆದಿವೆ. ಉದ್ಯಮಿ ಸೈರಸ್ ಮಿಸ್ತ್ರಿ ಕಾರು ಅಪಘಾತದಲ್ಲಿ, ಸೀಟ್‌ಬೆಲ್ಟ್ ಧರಿಸದೇ ಇದ್ದುದ್ದಕ್ಕೆ ಮೃತಪಟ್ಟಿದ್ದರು. ಕಾರಿನಲ್ಲಿ ಪ್ರಯಾಣಿಸುವ ಎಲ್ಲರೂ ಸೀಟ್‌ಬೆಲ್ಟ್ ಧರಿಸುವುದನ್ನು ಕೇಂದ್ರ ಸರ್ಕಾರ ಕಡ್ಡಾಯ ಮಾಡಿದೆ. ಆದರೆ, ಅದು ಜಾರಿಯಾಗಿಲ್ಲ. ಕ್ರಿಕೆಟಿಗ ರಿಷಭ್ ಪಂತ್ ಅವರ ಕಾರು ಅಪಘಾತದಲ್ಲಿ ಸೀಟ್‌ಬೆಲ್ಟ್ ವಿಚಾರ ಮತ್ತೆ ಚರ್ಚೆಗೆ ಬಂದಿದೆ.

ಪಂತ್ ಅವರು ಶುಕ್ರವಾರ ಕಾರು ಅಪಘಾತದಲ್ಲಿ ಗಾಯಗೊಂಡಿದ್ದಾರೆ. ‘ಭಾರಿ ವೇಗದ ಚಾಲನೆ ವೇಳೆ ರಿಷಭ್ ಕಾರಿನ ಮೇಲೆ ನಿಯಂತ್ರಣ ಕಳೆದುಕೊಂಡಿದ್ದಾರೆ. ಕಾರು ರಸ್ತೆ ವಿಭಜಕಕ್ಕೆ ಅಪ್ಪಳಿಸಿದೆ. ಸೀಟ್‌ಬೆಲ್ಟ್ ಧರಿಸದೇ ಇದ್ದ ಕಾರಣ ಅವರು, ಅಪಘಾತದ ಸಂದರ್ಭದಲ್ಲಿ ಕಾರಿನ ಮುಂಬದಿಯ ಗಾಜಿನಿಂದ ಹೊರಕ್ಕೆ ಎಸೆಯಲ್ಪಟ್ಟಿದ್ದಾರೆ. ರಸ್ತೆಯಲ್ಲಿ ಬಿದ್ದು, ಬಹಳ ದೂರದವರೆಗೆ ಉಜ್ಜಿಕೊಂಡು ಹೋಗಿರುವ ಕಾರಣ, ಅವರ ಬೆನ್ನಿನಲ್ಲಿ ತೀವ್ರ ಸ್ವರೂಪದ ತರಚು ಗಾಯಗಳಾಗಿವೆ’ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದ್ದವು. ಪೊಲೀಸರು ಇದನ್ನು ದೃಢಪಡಿಸಿಲ್ಲ. ಆದರೆ, ‘ರಸ್ತೆಯಲ್ಲಿ ಬಿದ್ದಿರುವ ಕಾರಣದಿಂದಲೇ ಬೆನ್ನಿನಲ್ಲಿ ತೀವ್ರ ಸ್ವರೂಪದ ತರಚು ಗಾಯಗಳಾಗಿವೆ’ ಎಂದು ಪಂತ್ ಅವರಿಗೆ ಚಿಕಿತ್ಸೆ ನೀಡಿದ ಡೆಹ್ರಾಡೂನ್ ಆಸ್ಪತ್ರೆಯ ವೈದ್ಯ ಸುಶೀಲ್ ನಗರ್ ಹೇಳಿದ್ದಾರೆ. ಸಿಟ್‌ಬೆಲ್ಟ್ ಧರಿಸದೇ ಇದ್ದು ಅಪಘಾತದ ಸಂದರ್ಭದಲ್ಲಿ ಕಾರಿನಿಂದ ಪಂತ್ ಅವರು ಎಸೆಯಲ್ಪಟ್ಟಿದ್ದು ನಿಜವೇ ಆಗಿದ್ದರೆ, ಸೀಟ್‌ಬೆಲ್ಟ್ ಏಕೆ ಧರಿಸಬೇಕು ಎಂಬುದನ್ನು ಈ ಅಪಘಾತವು ಒತ್ತಿ ಹೇಳುತ್ತದೆ.

‘ಪ್ರಾಥಮಿಕ ಸುರಕ್ಷತಾ ಸವಲತ್ತು’

ಸೀಟ್‌ಬೆಲ್ಟ್ ಯಾವುದೇ ಕಾರಿನ ಪ್ರಾಥಮಿಕ ಸುರಕ್ಷತಾ ಸವಲತ್ತಾಗಿರುತ್ತದೆ. ಅಪಘಾತದ ಸಂದರ್ಭದಲ್ಲಿ ಪ್ರಯಾಣಿಕರು ಆಸನದಲ್ಲಿಯೇ ಇರುವಂತೆ ಹಿಡಿದಿಡುವ ಕೆಲಸವನ್ನು ಸೀಟ್‌ಬೆಲ್ಟ್ ಮಾಡುತ್ತದೆ. ಸೀಟ್‌ಬೆಲ್ಟ್ ಧರಿಸದೇ ಇರುವ ಸಂದರ್ಭದಲ್ಲಿ ಅಪಘಾತ ಸಂಭವಿಸಿದರೆ, ಅಂತಹ ಪ್ರಯಾಣಿಕರು ಕಾರಿನಲ್ಲಿರುವ ಇತರ ಪ್ರಯಾಣಿಕರಿಗೆ ಅಪ್ಪಳಿಸುವ ಅಪಾಯವಿರುತ್ತದೆ. ಜತೆಗೆ ಕಾರಿನ ಮುಂಬದಿ/ಹಿಂಬದಿಯ ಗಾಜಿನಿಂದ ತೂರಿ ಹೊರಗೆ ಚಿಮ್ಮುವ ಅಪಾಯವೂ ಇರುತ್ತದೆ. ಇವೆಲ್ಲವನ್ನೂ ಸೀಟ್‌ಬೆಲ್ಟ್ ತಡೆಯುತ್ತದೆ. ಹೀಗಾಗಿ ಕಾರಿನಲ್ಲಿರುವ ಎಲ್ಲರೂ ಸೀಟ್‌ಬೆಲ್ಟ್ ಧರಿಸುವುದು ಅತ್ಯಗತ್ಯ.



ಚೈಲ್ಡ್ ಸೀಟ್ ಬಗ್ಗೆ ನಿರ್ಲಕ್ಷ್ಯ

14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರಿನಲ್ಲಿ ಕೂರಿಸುವಾಗ ಚೈಲ್ಡ್‌ಸೀಟ್ ಅಥವಾ ಬೂಸ್ಟರ್ ಸೀಟ್ ಬಳಸುವುದು ಕಡ್ಡಾಯ ಎಂದು ಕೇಂದ್ರೀಯ ಮೋಟಾರು ವಾಹನ ನಿಯಮದ 94(2)ನೇ ಸೆಕ್ಷನ್ ಮತ್ತು ಕೇಂದ್ರೀಯ ಮೋಟಾರು ವಾಹನ ಕಾಯ್ದೆಯ 194ಬಿ(2) ಸೆಕ್ಷನ್‌ನಲ್ಲಿ ಉಲ್ಲೇಖಿಸಲಾಗಿದೆ. ಮಕ್ಕಳನ್ನು ಚೈಲ್ಡ್‌ಸೀಟ್‌ನಲ್ಲಿ ಕೂರಿಸದೇ ಇದ್ದರೆ, ಚಾಲಕನಿಗೆ ₹1,000 ದಂಡ ವಿಧಿಸಲು ಮೋಟಾರು ವಾಹನ ಕಾಯ್ದೆಯ 194ಬಿ(2) ಸೆಕ್ಷನ್ ಅವಕಾಶ ಮಾಡಿಕೊಡುತ್ತದೆ. ಇದನ್ನು 2019ರ ತಿದ್ದುಪಡಿಯಲ್ಲಿ ಸೇರಿಸಲಾಗಿದೆ. ಆದರೆ, ಯಾವ ರಾಜ್ಯವೂ ಇದನ್ನು ಜಾರಿಗೆ ತಂದಿಲ್ಲ. ಕಾರಿನ ಸಾಮಾನ್ಯ ಸೀಟ್‌ಗಳಿಗೆ ಅಳವಡಿಸಿರುವ ಸೀಟ್‌ಬೆಲ್ಟ್‌ಗಳನ್ನು ಮಕ್ಕಳಿಗೆ ಬಳಸಲು ಸಾಧ್ಯವಿಲ್ಲ. ಸಾಮಾನ್ಯ ಸೀಟಿನಲ್ಲೇ ಮಕ್ಕಳನ್ನು ಕೂರಿಸಿದ್ದರೆ, ಅಪಘಾತ ಮತ್ತು ತುರ್ತು ಬ್ರೇಕಿಂಗ್ ಸಂದರ್ಭದಲ್ಲಿ ಸೀಟ್‌ಬೆಲ್ಟ್ ಅಡಿಯಿಂದ ಮಕ್ಕಳು ಜಾರಿ ಹೋಗುವ ಮತ್ತು ಸೀಟ್‌ಬೆಲ್ಟ್‌ಗಳು ಮಕ್ಕಳ ಕುತ್ತಿಗೆಗೆ ಗಾಯ ಮಾಡುವ ಅಪಾಯವಿರುತ್ತದೆ. ಹೀಗಾಗಿ ಮಕ್ಕಳನ್ನು ಸುರಕ್ಷಿತವಾಗಿ ಕೂರಿಸಲು ಚೈಲ್ಡ್‌ಸೀಟ್ ಬಳಸಲಾಗುತ್ತದೆ.

ಎಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಚೈಲ್ಡ್‌ಸೀಟ್ ಬಳಸಬೇಕು. 8ರಿಂದ 14 ವರ್ಷದ ಮಕ್ಕಳಿಗೆ ಬೂಸ್ಟರ್ ಸೀಟ್ ಬಳಸಬೇಕು ಎಂದು ಈ ನಿಯಮಗಳಲ್ಲಿ ವಿವರಿಸಲಾಗಿದೆ.

2005ರಲ್ಲೇ ಕಡ್ಡಾಯ, ಆದರೆ ಜಾರಿಯಾಗಿರಲಿಲ್ಲ

ಕಾರು, ಟ್ರಕ್, ಬಸ್ ಚಾಲಕರು ಸೀಟ್‌ಬೆಲ್ಟ್ ಕಡ್ಡಾಯವಾಗಿ ಧರಿಸಬೇಕು ಎಂಬ ನಿಯಮ 2005ರಿಂದಲೇ ಜಾರಿಯಲ್ಲಿದೆ. ಆದರೆ ಈಗ ಕಾರಿನಲ್ಲಿ ಪ್ರಯಾಣಿಸುವ ಪ್ರತಿಯೊಬ್ಬರೂ ಸೀಟ್‌ಬೆಲ್ಟ್ ಧರಿಸಬೇಕು ಎಂದು ಕೇಂದ್ರ ಸರ್ಕಾರ ಹೇಳಿದೆ. ಕಾರು ಮತ್ತು ಎಸ್‌ಯುವಿಗಳ ಫ್ರಂಟ್ ಫೇಸಿಂಗ್ ಸೀಟ್‌ಗಳಲ್ಲಿ (ಮುಂಬದಿಗೆ ಮುಖಮಾಡಿದ ಆಸನಗಳು) ಕುಳಿತಿರುವ ಪ್ರಯಾಣಿಕರು ಸೀಟ್‌ಬೆಲ್ಟ್ ಧರಿಸುವುದನ್ನು ರಾಜ್ಯ ಪೊಲೀಸ್ ಇಲಾಖೆಯೂ ಕಡ್ಡಾಯ ಮಾಡಿದೆ. ಫ್ರಂಟ್ ಫೇಸಿಂಗ್ ಸೀಟ್‌ಗಳಲ್ಲಿ ಕೂರುವ ಎಲ್ಲಾ ಪ್ರಯಾಣಿಕರು ಸೀಟ್ ಬೆಲ್ಟ್ ಧರಿಸುವುದನ್ನು ಕೇಂದ್ರ ಸರ್ಕಾರವು 2005ರಲ್ಲೇ ಕಡ್ಡಾಯಗೊಳಿಸಿತ್ತು. ಆದರೆ 17 ವರ್ಷಗಳ ನಂತರ ರಾಜ್ಯದಲ್ಲಿ ಇದನ್ನು ಕಡ್ಡಾಯಗೊಳಿಸಿ ಆದೇಶ ಮಾಡಲಾಗಿದೆ.

1993ರಲ್ಲಿ ಕೇಂದ್ರೀಯ ಮೋಟಾರು ವಾಹನ ನಿಯಮಗಳು–1989ಗೆ ತಿದ್ದುಪಡಿ ತರಲಾಗಿತ್ತು. ಅದರಲ್ಲಿ ಎಂ1 ವರ್ಗದ (ಚಾಲಕ ಸೇರಿ ಒಂಬತ್ತು ಮತ್ತು ಅದಕ್ಕಿಂತ ಕಡಿಮೆ ಆಸನಗಳಿರುವ ವಾಹನಗಳು) ವಾಹನಗಳ ಫ್ರಂಟ್ ಫೇಸಿಂಗ್ ಸೀಟ್‌ಗಳಿಗೆ ಸೀಟ್‌ಬೆಲ್ಟ್ ಅಳವಡಿಕೆಯನ್ನು ಕಡ್ಡಾಯ ಮಾಡಲಾಗಿತ್ತು. ಆದರೆ ಸೀಟ್‌ಬೆಲ್ಟ್ ಧರಿಸುವುದನ್ನು ಕಡ್ಡಾಯ ಮಾಡಿರಲಿಲ್ಲ. 2003ರಲ್ಲಿ ಈ ನಿಯಮಗಳಿಗೆ ಮತ್ತೆ ತಿದ್ದುಪಡಿ ತಂದು ಎಲ್ಲಾ ಪ್ರಯಾಣಿಕರು ಸೀಟ್‌ಬೆಲ್ಟ್ ಧರಿಸುವುದನ್ನು ಕಡ್ಡಾಯ ಮಾಡಲಾಯಿತು. ಅದನ್ನು 2005ರಿಂದ ಜಾರಿಗೆ ತರಬೇಕು ಎಂದು ಕೇಂದ್ರ ಸರ್ಕಾರವು ತನ್ನ ಅಧಿಸೂಚನೆಯಲ್ಲಿ ಸೂಚಿಸಿತ್ತು. ಆದರೆ, ಈವರೆಗೆ ಇದನ್ನು ಜಾರಿಗೆ ತಂದಿರಲಿಲ್ಲ.

ರಸ್ತೆ ಸಾರಿಗೆ ವಿಚಾರವು ಸಮವರ್ತಿ ಪಟ್ಟಿಯಲ್ಲಿ ಬರುತ್ತದೆ. ಕೇಂದ್ರ ಸರ್ಕಾರವು ರಸ್ತೆ ಸಂಚಾರಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ಮತ್ತು ಕಾಯ್ದೆಗಳನ್ನು ಜಾರಿಗೆ ತಂದರೂ ರಾಜ್ಯ ಸರ್ಕಾರಗಳು ಅದಕ್ಕೆ ಸಂಬಂಧಿಸಿದಂತೆ ಅಧಿಸೂಚನೆ ಹೊರಡಿಸಲೇಬೇಕು. ಆದರೆ, ಫ್ರಂಟ್ ಪೇಸಿಂಗ್ ಆಸನಗಳಲ್ಲಿ ಕೂರುವ ಎಲ್ಲ ಪ್ರಯಾಣಿಕರೂ ಸೀಟ್‌ಬೆಲ್ಟ್ ಧರಿಸುವುದನ್ನು ಕಡ್ಡಾಯ ಮಾಡುವ ಸಂಬಂಧ ರಾಜ್ಯಗಳು ಅಧಿಸೂಚನೆ ಹೊರಡಿಸಿರಲೇ ಇಲ್ಲ.

ಆಧಾರ: ಕೇಂದ್ರೀಯ ಮೋಟಾರು ವಾಹನ ನಿಯಮಗಳು–1989, ಕೇಂದ್ರೀಯ ಮೋಟಾರು ವಾಹನ ಕಾಯ್ದೆ–1988, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ಸುತ್ತೋಲೆ, ಪಿಟಿಐ, ಜಿಎನ್‌ಸಿಎಪಿ

ಜಾರಿಯಲ್ಲಿ ಹಲವು ಗೊಂದಲ

ಚಾಲಕ ಹಾಗೂ ಎಂಟು ಜನರಿಗಿಂತ ಕಡಿಮೆ ಆಸನ ಸಾಮರ್ಥ್ಯ ಇರುವ ಎಂ–1 ವರ್ಗದ ವಾಹನಗಳಲ್ಲಿ ಸೀಟ್ ಬೆಲ್ಟ್ ಧರಿಸದೇ ಪ್ರಯಾಣಿಸಿದರೆ ₹1,000 ದಂಢ ವಿಧಿಸಲಾಗುತ್ತದೆ ಎಂದು ರಾಜ್ಯ ಸರ್ಕಾರ ಈಚೆಗೆ ಆದೇಶ ಹೊರಡಿಸಿದೆ. ಆದರೆ ಸೀಟ್ ಬೆಲ್ಟ್ ಹಾಕುವುದನ್ನು ಕಡ್ಡಾಯಗೊಳಿಸಿದ್ದರ ಬಗ್ಗೆ ಬಹಳ ಗೊಂದಲಗಳಿವೆ. ಆದೇಶ ಹೊರಡಿಸಿ ಹಲವು ತಿಂಗಳು ಕಳೆದರೂ, ಅದು ಜಾರಿಯಾಗಿಲ್ಲ.

₹1,000 ದಂಡ ವಿಧಿಸುವ ಸ್ವರೂಪದ ಬಗ್ಗೆ ಗೊಂದಲವಿದೆ. ನಾಲ್ಕೈದು ಜನರು ಪ್ರಯಾಣಿಸುತ್ತಿರುವ ಕಾರಿನಲ್ಲಿ ಸೀಟ್ ಬೆಲ್ಟ್ ಧರಿಸದ ಪ್ರತಿ ಪ್ರಯಾಣಿಕರಿಗೂ ಪ್ರತ್ಯೇಕವಾಗಿ ಒಂದು ಸಾವಿರ ರೂಪಾಯಿ ದಂಡ ವಿಧಿಸಲಾಗುತ್ತದೆಯೇ ಅಥವಾ ಕಾರಿನಲ್ಲಿ ಸೀಟ್ ಬೆಲ್ಟ್ ಧರಿಸದ ಎಲ್ಲ ಪ್ರಯಾಣಿಕರಿಗೂ ಸೇರಿ ₹1,000 ದಂಡ ವಿಧಿಸಲಾಗುತ್ತದೆಯೇ ಎಂಬುದರ ಬಗ್ಗೆ ಸ್ಪಷ್ಟತೆಯಿಲ್ಲ. ಪ್ರಯಾಣಿಕರು ತಕ್ಷಣವೇ ದಂಡ ಪಾವತಿಸಬೇಕೇ ಅಥವಾ ನಂತರದ ದಿನಗಳಲ್ಲಿ ಪಾವತಿಸಲು ಅವಕಾಶವಿದೆಯೇ ಎಂಬ ಬಗ್ಗೆಯೂ ಮಾಹಿತಿಯಿಲ್ಲ.

ಸೀಟ್ ಬೆಲ್ಟ್ ಇರುವ ವಾಹನಗಳಲ್ಲಿ, ಅದನ್ನು ಧರಿಸದ ಪ್ರಯಾಣಿಕರಿಗೆ ದಂಡ ವಿಧಿಸುವುದು ಸಾಮಾನ್ಯ. ಆದರೆ, ಸೀಟ್ ಬೆಲ್ಟ್ ಇಲ್ಲದ ವಾಹನಗಳ ವಿಚಾರದಲ್ಲಿ ಈ ನಿಯಮ ಹೇಗೆ ಪಾಲನೆಯಾಗುತ್ತದೆ ಎಂದು ತಿಳಿದಿಲ್ಲ. ಸುಮಾರು 15–20 ವರ್ಷಗಳಷ್ಟು ಹಳೆಯದಾಗಿರುವ ಬಹುತೇಕ ಟ್ಯಾಕ್ಸಿಗಳಲ್ಲಿ ಸೀಟ್ ಬೆಲ್ಟ್ ಇರುವುದಿಲ್ಲ. ಕನಿಷ್ಠಪಕ್ಷ ಚಾಲಕನಿಗೂ ಸೀಟ್ ಬೆಲ್ಟ್ ಸೌಲಭ್ಯ ಇಲ್ಲದ ಹಲವು ಟ್ಯಾಕ್ಸಿಗಳು ರಸ್ತೆಯಲ್ಲಿ ಓಡಾಡುತ್ತಿವೆ. ಈ ವಾಹನಗಳಲ್ಲಿ ಪ್ರಯಾಣಿಕರು ಸೀಟ್ ಬೆಲ್ಟ್ ಧರಿಸಲು ಸಾಧ್ಯವಾಗುವುದಿಲ್ಲ. ಇಂತಹ ಸಮಯದಲ್ಲಿ ಸಂಚಾರ ಪೊಲೀಸರು ಸೀಟ್ ಬೆಲ್ಟ್ ಕಡ್ಡಾಯ ನಿಮಯವನ್ನು ಹೇಗೆ ಅನುಷ್ಠಾನ ಮಾಡುತ್ತಾರೆ ಎಂಬ ಬಗ್ಗೆ ಸ್ಪಷ್ಟತೆಯಿಲ್ಲ.

ಇಂತಿಷ್ಟು ವರ್ಷ ಕಳೆದ ಬಳಿಕ, ಹಳೆಯ ವಾಹನಗಳು ರಸ್ತೆಯಲ್ಲಿ ಓಡಾಡಲು ಯೋಗ್ಯವಾಗಿವೆಯೇ ಎಂದು ಪರಿಶೀಲಿಸಿ, ಪ್ರಮಾಣೀಕರಿಸುವ ವ್ಯವಸ್ಥೆ ಇದೆ. ಹಳೆಯ ವಾಹನಗಳ ಬಳಿ ಯೋಗ್ಯತಾ ಪ್ರಮಾಣಪತ್ರ (ಎಫ್‌ಸಿ) ಕಡ್ಡಾಯವಾಗಿ ಇರಬೇಕು. ವಾಹನಗಳು ರಸ್ತೆಯಲ್ಲಿ ಸಂಚರಿಸಲು ಸಮರ್ಥವಾಗಿಯೇ ಮತ್ತು ಅವುಗಳ ಎಲ್ಲಾ ಉಪಕರಣಗಳು ಕೆಲಸ ಮಾಡುತ್ತವೆಯೇ ಎಂಬುದನ್ನು ಪರಿಶೀಲಿಸಿ ಈ ಪ್ರಮಾಣಪತ್ರ ನೀಡಲಾಗುತ್ತದೆ. ಪರಿಶೀಲನೆ ಸಮಯದಲ್ಲಿ ಸೀಟ್ ಬೆಲ್ಟ್ ಇದೆಯೇ ಹಾಗೂ ಬಳಸಲು ಯೋಗ್ಯವಿದೆಯೇ ಎಂದು ಪರಿಶೀಲನೆ ನಡೆಸಬೇಕು. ಈ ಬಗ್ಗೆ ಸರಿಯಾದ ಪರಿಶೀಲನೆ ನಡೆಯುತ್ತದೆ ಎಂಬ ಬಗ್ಗೆ ಖಾತರಿಯಿಲ್ಲ.

ಓಲಾ, ಉಬರ್‌ನಂತಹ ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ನೀಡುವ ವಾಹನಗಳು ಹಾಗೂ ಖಾಸಗಿ ವಾಹನಗಳಲ್ಲಿ ಹಿಂಬದಿ ಪ್ರಯಾಣಿಕರಿಗೆ ಸೀಟ್ ಬೆಲ್ಟ್ ಅನ್ನು ಬಳಸಲು ಕೆಲವು ಬಾರಿ ಸಾಧ್ಯವಿರುವುದಿಲ್ಲ. ಟ್ಯಾಕ್ಸಿಗಳಲ್ಲಿ ಸೀಟ್ ಬೆಲ್ಟ್ ಹಾಗೂ ಬಕಲ್‌ಗಳನ್ನು ಸೀಟ್‌ನ ಒಳಗಡೆ ಹಾಕಿ ಹೊಸ ಸೀಟ್ ಕವರ್ ಹಾಕಿರಲಾಗಿರುತ್ತದೆ. ಹೀಗಾಗಿ, ಸೀಟ್ ಬೆಲ್ಟ್ ಧರಿಸಬೇಕೆಂದರೂ ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಟ್ಯಾಕ್ಸಿಗಳ ಮೇಲೆ ಪೊಲೀಸರು ಏನು ಕ್ರಮ ಜರುಗಿಸುತ್ತಾರೆ ಎಂಬುದು ಇನ್ನಷ್ಟೇ ಸ್ಪಷ್ಟವಾಗಬೇಕಿದೆ.

ಪದಬಂಧ 5185

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕುಸ್ತಿ ಮಾಡುವವನು (2)
3.ವಿಜ್ಞಾನಿಯ ಜತೆಗೆ ಬಲ್ಲವನಿದ್ದಾನೆ (2)
5.ಲಲಾಟಲಿಪಿಯಿದು (5)
6.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
7.ಜಳ ಜಳ ಹರಿವ ನೀರಿನಲ್ಲಿನ ಸ್ನಾನ (3)
8.ಮಧ್ಯಸ್ಥಿಕೆಯನ್ನು ಹೀಗೆನ್ನಿ (5)
9.ನಿಧಾನವಾಗಿ ರೂಢಿಸಿಕೊಂಡ ರೀತಿ! (3)
10.ದೇವರನ್ನೇ ನಂಬದವನು (3)
13.ಪಾಕಕ್ಕೆ ದೊರೆತ ಉಡುಗೊರೆ (5)
14.ನೆನಪಲ್ಲೇ ಇರುವ ಕಾರಣ (2)
15.ಮಚ್ಚೆಯುಳ್ಳವ ಹಿಡಿದಿರುವ ಕಡಿಗತ್ತಿ (2)

ಮೇಲಿಂದ ಕೆಳಕ್ಕೆ

1.ಮಗನಲ್ಲಿ ಅಪಸ್ಮಾರವೇ? (4)
2.ಮೂಗಿನಲ್ಲಿ ಸುರಿಯುವ ಶ್ಲೇಷ್ಮ (3)
4.ಸ್ವಲ್ಪವೂ ಪ್ರಯೋಜನಕ್ಕೆ ಬಾರದುದು (4)
5.ಅಶ್ವದ ಮೊಗವಿದು (5)
7.ಈ ಲೀಡರ್ ಪಕ್ಕಾ ಕನ್ನಡಿಗ ! (5)
9.ಜ್ಞಾಪಕದಿಂದ ಮಾಡಿರುವಮನವಿ (4)
11.ಅಕ್ಕಿ ತೊಳೆದ ನೀರು (4)
12.ಆನಂದ ಹೀಗೆ ಬಂದಿದೆ (3)

1		■	■	2	■	■	3	4
	■	5					■	
	■		■		■	■	■	
6			■	■	■	7		
■	■	8					■	■
9			■	■	■	10		11
	■	■	■	12	■		■	
	■	13					■	
14		■	■		■	■	15	

5184ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿತಾಪ 3.ಕೂಗಳತೆ
5.ಮಾರ್ಮಿಕ 6.ಅವಗುಣ
8.ಷರಬತ್ತು
10.ಅಂತರ್ಧಾನ
12.ತರಗತಿ 13.ವಠಾರ
16.ಪರಿಹಾಸ
17.ಮಧುಚಂದ್ರ

ಮೇಲಿಂದ ಕೆಳಕ್ಕೆ:
1.ಪತ್ತೆ 2.ಪರಿಮಾಣ
3.ಕೂಲಂಕಷ 4.ತೆಪ್ಪ
7.ವರಾತ 9.ಬಳಗ
11.ನವಮಾಸ
12.ತರತಮ 14.ದ್ವೀಪ
15.ಇಂದ್ರ

ಸುಡೊಕು 5571

2		6					5	9
		7	5		6	3		2
3	8						6	
	2							4
			2	4	7			6
	7					5		
7		9			8		4	
4				3			8	
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5570 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಡಿಸೆಂಬರ್ 31, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ನವಮಿ ಗಂ. 18-34 **ನಕ್ಷತ್ರ:** ರೇವತಿ ಗಂ. 11-47 **ಯೋಗ:** ಪರಿಘ ಗಂ. 08-19 **ಕರಣ:** ಕೌಲವ ಗಂ. 18-34, ಧನುರ್ ಮಾಸದ 15 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 –10-30
ಸೂರ್ಯೋದಯ : 06-57 **ಸೂರ್ಯಾಸ್ತ :** 06-10
ಮುಸ್ಲಿಂ ದಿನಾಂಕ : 07 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 1, 9

ಮೇಷ: ಶ್ರಮದ ದುಡಿಮೆ ಧ್ಯೇಯವಾಗಿರಲಿ. ಅದರಿಂದ ಶತ್ರುಗಳು ಮಿತ್ರರಾಗುವರು. ವೈಯಕ್ತಿಕ ಬೆಳವಣಿಗೆಗಳಿಗೂ ಗಮನ ಕೊಡಿ. ಸಂಸ್ಥೆಯ ಆರ್ಥಿಕಾದಾಯವನ್ನು ಹೆಚ್ಚಿಸಲು ರಚನಾತ್ಮಕ ಕಾರ್ಯಕ್ರಮ ಹಮ್ಮಿಕೊಳ್ಳುವಿರಿ.

ವೃಷಭ: ಉದ್ಯೋಗದಲ್ಲಿ ಅನಿಶ್ಚಿತತೆ ದೂರಾಗುವುದು. ಹಣಕಾಸಿನ ಸಮಸ್ಯೆಗಳು ಹಂತ ಹಂತವಾಗಿ ಪರಿಹಾರ ಕಾಣಲಿದೆ. ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಹೆಚ್ಚಿನ ಕೆಲಸವಿರಲಿದೆ. ಉತ್ಪಾದಿತ ವಸ್ತುಗಳಿಗೆ ಬೇಡಿಕೆ ದೊರೆಯಲಿದೆ.

ಮಿಥುನ: ಸಮಯವನ್ನು ಯಾಚಿಸುತ್ತಿರುವುದರಿಂದ ಸ್ವಂತ ಕೆಲಸಗಳುನಿಧಾನ ಗತಿಯಲ್ಲಿ ಸಾಗಲಿದೆ. ಗೃಹದಲ್ಲಿ ಶುಭ ಸಮಾರಂಭಗಳು ನಡೆಯುವುದು. ಕುಟುಂಬದಲ್ಲಿ ಉತ್ತಮ ವಾತಾವರಣವಿದ್ದು, ಸಂತಸ ತರಲಿದೆ.

ಕರ್ಕಾಟಕ: ಎಲ್ಲರೊಂದಿಗೆ ಸಹಕಾರ ಮನೋಭಾವನೆಯಲ್ಲಿ ಮುಂದು-ವರಿಯುವುದರಿಂದ ಯಶಸ್ಸು ಹೆಚ್ಚಿನ ರೀತಿಯಲ್ಲಿ ಕಂಡು ಬರುತ್ತದೆ. ಯಾರಿಂದಲೂ ಕೆಲಸ ಕಾರ್ಯಗಳಿಗೆ ಅಡ್ಡಿ ಆತಂಕವಿಲ್ಲ.

ಸಿಂಹ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದ-ನ್ನು ಸ್ನೇಹಿತರು ತಪ್ಪಿಸುವರು. ಮನೆಯಲ್ಲಿ ಯಾರ ನೆರವೂ ಇಲ್ಲದೆ ಎಲ್ಲಾ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವಿರಿ.

ಕನ್ಯಾ: ಹವಾ ಬದಲಾವಣೆಗಾಗಿ ಕಿರು ಪ್ರವಾಸದ ಸಾಧ್ಯತೆಗಳಿವೆ. ದೈವಕಾರ್ಯ ಮನೆಯಲ್ಲಿ ಜರುಗಲಿದೆ. ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹೆಚ್ಚಿನ ಅಧಿಕಾರ ಪಡೆದುಕೊಳ್ಳುವಿರಿ. ಶುಭಕ್ಕಾಗಿ ಗಣಪತಿಯನ್ನು ಆರಾಧಿಸಿ.

ತುಲಾ: ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ. ಬಟ್ಟೆ ಉದ್ಯಮದವರಿಗೆ ಈ ದಿನ ಅತಿಯಾದ ಲಾಭ ಬರುವುದು. ಗೃಹದಲ್ಲಿ ಶುಭ, ಮಂಗಳ ಕಾರ್ಯಗಳ ಚಟುವಟಿಕೆಗಳು ತೋರಿ ಬರುವವು.

ವೃಶ್ಚಿಕ: ನಿರಾಸಕ್ತಿಯಿಂದ ಯಾಂತ್ರಿಕವಾಗಿ ಕೆಲಸ ನಿರ್ವಹಿಸುವಂತಾಗಲಿದೆ. ಪ್ರಮುಖವಾದ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳಲು ಈ ದಿನ ಸೂಕ್ತವಲ್ಲ. ದುರ್ಗಾಪರಮೇಶ್ವರಿಯನ್ನು ಆರಾಧಿಸಿ ಸತ್ಫಲ ದೊರಕುತ್ತದೆ.

ಧನು: ತಿಳಿವಳಿಕೆಯನ್ನು ಹೊಂದಿದ ವ್ಯಕ್ತಿಯಾದ ನೀವು ಅಪರಾಧವನ್ನು ಮಾಡಬೇಕಾದ ಸ್ಥಿತಿ ಬರಬಹುದು, ಆದರೆ ಅದಕ್ಕೆ ಅವಕಾಶ ನೀಡಬೇಡಿ. ಸಂಗೀತ ಶಿಕ್ಷಕರಿಗೆ ತಮ್ಮ ಶಿಷ್ಯರ ಅಭ್ಯಾಸವು ಆನಂದ ನೀಡುತ್ತದೆ.

ಮಕರ: ಗೃಹಕ್ಕೆ ಅನಿರೀಕ್ಷಿತವಾಗಿ ಅಪರೂಪದ ವ್ಯಕ್ತಿಯ ಆಗಮನ ಆಗಬಹುದು. ಗುರಿಯನ್ನು ಸಾಧಿಸುವ ಬಗ್ಗೆ ಮಾತ್ರ ಗಮನವಿರಲಿ. ಒಳ್ಳೆಯ ಪಾಲುದಾರರೊಬ್ಬರು ದೊರೆಯಲಿದ್ದಾರೆ.

ಕುಂಭ: ಪ್ರತಿ ವರ್ಷದಲ್ಲಿ ಆಚರಿಸಿಕೊಂಡು ಬಂದ ಕುಟುಂಬದ ಧಾರ್ಮಿಕ ಕೆಲಸ ಮಾಡುವ ಬಗ್ಗೆ ತೀರ್ಮಾನಿಸಿ. ಸಂಗಾತಿಯೊಂದಿಗೆ ಬಾಂಧವ್ಯ ವೃದ್ಧಿ. ಕೌಟುಂಬಿಕ ಸುಖದೊಂದಿಗೆ ಸರ್ವತೋಮುಖ ಅಭಿವೃದ್ಧಿ ಪಡೆಯುವಿರಿ.

ಮೀನ: ಹಿರಿಯರ ಅಭಿಪ್ರಾಯದಂತೆ ಮನೆಯನ್ನು ಆಧುನಿಕಗೊಳಿಸುವ ಕೆಲಸದಲ್ಲಿ ಮುಂದುವರಿಯಬಹುದು. ಚುನಾವಣೆಯ ತಯಾರಿಯೂ ಭರದಿಂದ ಸಾಗುವುದು. ವಾಣಿಜ್ಯ ರಂಗದಲ್ಲಿ ಹೊಸ ತಿರುವು ಮೂಡಲಿದೆ.

ಸೂಕಿಗೆ ಮತ್ತೆ 7 ವರ್ಷ ಜೈಲು ಶಿಕ್ಷೆ

ಬ್ಯಾಂಕಾಕ್ (ಎಪಿ): ಮ್ಯಾನ್ಮಾರ್‌ನ ಉಚ್ಚಾಟಿತ ನಾಯಕಿ ಆಂಗ್ ಸಾನ್ ಸೂಕಿ ಅವರನ್ನು ಐದು ಭ್ರಷ್ಟಾಚಾರ ಪ್ರಕರಣಗಳಲ್ಲಿ ದೋಷಿ ಎಂದು ಇಲ್ಲಿನ ನ್ಯಾಯಾಲಯ ಘೋಷಿಸಿದ್ದು, ಏಳು ವರ್ಷ ಕಾರಾಗೃಹ ಶಿಕ್ಷೆ ವಿಧಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀ ಪಾಪಣ್ಣ (ನಂಜುಂಡರೆಡ್ಡಿ)
ಅಂಕಪ್ಪನವರ ಲೇಟ್ ಚಿನ್ನಪ್ಪರೆಡ್ಡಿಯವರ ಮಗ, ಬೆಳ್ಳಂದೂರು, ಬೆಂಗಳೂರು.
ಇವರು ದಿನಾಂಕ: 30.12.2022 ರಂದು ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 31.12.2022 ಬೆಳಿಗ್ಗೆ 11.30ಕ್ಕೆ ಬೆಳ್ಳಂದೂರು ರುದ್ರಭೂಮಿಯಲ್ಲಿ ನಡೆಸಲಾಗುವುದು.
ದುಃಖತಪ್ತರು: ಪತ್ನಿ–ಗೌರಮ್ಮ ಮತ್ತು ಕುಟುಂಬದವರು
ಫೋ:9845079668

ಅಪಘಾತ ತನಿಖೆ ಪ್ರಕ್ರಿಯೆ ತ್ವರಿತಗೊಳಿಸಲು ಮಾರ್ಗಸೂಚಿ ಪ್ರಕಟಿಸಿದ ಸುಪ್ರೀಂ ಕೋರ್ಟ್

ವಿಮೆ ಪರಿಹಾರ: ಠಾಣೆಗಳಲ್ಲಿ ಘಟಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ವಿಮೆ ಪರಿಹಾರ ಪ್ರಕ್ರಿಯೆಯನ್ನು ತ್ವರಿತವಾಗಿಸಲು ಹಲವು ಮಾರ್ಗಸೂಚಿಗಳನ್ನು ಸುಪ್ರೀಂ ಕೋರ್ಟ್ ಶುಕ್ರವಾರ ನೀಡಿದೆ.

'ವಾಹನ ಅಪಘಾತ ವಿಮೆ ಪರಿಹಾರ ಪ್ರಕರಣವನ್ನು ತನಿಖೆ ಮಾಡಲು ಹಾಗೂ ಪರಿಹಾರ ಪಡೆದುಕೊಳ್ಳಲು ನೆರವಾಗಲು ಎಲ್ಲಾ ಪೊಲೀಸ್ ಠಾಣೆಗಳಲ್ಲಿ ವಿಶೇಷ ಘಟಕವನ್ನು ರೂಪಿಸಬೇಕು. 3 ತಿಂಗಳ ಒಳಗಾಗಿ ರಸ್ತೆ ಅಪಘಾತದ ಮಾಹಿತಿಯನ್ನು ಪೊಲೀಸರು ವಿಮೆ ಪರಿಹಾರ ನ್ಯಾಯಮಂಡಳಿಗೆ ನೀಡಬೇಕು' ಎಂದು ಸುಪ್ರೀಂ ಕೋರ್ಟ್ ರಾಜ್ಯಗಳಿಗೆ ನಿರ್ದೇಶನ ನೀಡಿದೆ. ವಿಮೆ ಪ್ರಕರಣಗಳ ತನಿಖೆ ಮಾಡುವ ಸಂಬಂಧ ತರಬೇತಿ ಹೊಂದಿದ ಪೊಲೀಸ್ ಸಿಬ್ಬಂದಿ ನಿಯೋಜಿಸುವಂತೆಯೂ ಕೋರ್ಟ್ ಹೇಳಿದೆ.

'ಗೃಹ ಇಲಾಖೆಯ ಮುಖ್ಯಸ್ಥ ಹಾಗೂ ಪೊಲೀಸ್ ಮಹಾನಿರ್ದೇಶಕರು ಈ ವಿಶೇಷ ವಿಭಾಗದ ಕಾರ್ಯಚಟುವಟಿಕೆಯ ಬಗ್ಗೆ ನಿಗಾ ವಹಿಸಬೇಕು. ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಈ ವಿಶೇಷ ವಿಭಾಗವನ್ನು ಸ್ಥಾಪಿಸಬೇಕು' ಎಂದು ನ್ಯಾಯಮೂರ್ತಿಗಳಾದ ಎಸ್.ಎ. ನಜೀರ್ ಹಾಗೂ ಜೆ.ಕೆ. ಮಾಹೇಶ್ವರಿ ಅವರಿದ್ದ ಪೀಠವು ಹೇಳಿತು.

'ಅಪಘಾತದ ಎಫ್‌ಐಆರ್ ದಾಖಲಾದ 24 ಗಂಟೆಗಳ ಒಳಗೆ ಮೊದಲ ಅಪಘಾತ ವರದಿಯನ್ನು ವಿಮೆ ಪರಿಹಾರ ನ್ಯಾಯಮಂಡಳಿಗೆ ಸಲ್ಲಿಸಬೇಕು. ಅಪಘಾತ ಪ್ರಕರಣವನ್ನು ದಾಖಲಿಸಿಕೊಳ್ಳುವ ಅಧಿಕಾರಿಯು ಅಪಘಾತಕ್ಕೊಳಗಾದ ವಾಹನದ ನೋಂದಣಿ, ಚಾಲನಾ ಪರವಾನಗಿ, ವಾಹನದ ಯೋಗ್ಯತಾ ಪ್ರಮಾಣಪತ್ರ, ಪರ್ಮಿಟ್ ಮತ್ತು ಸಂಬಂಧಿಸಿದ ಇತರ ವಿಚಾರಗಳ ಕುರಿತು ನ್ಯಾಯಮಂಡಳಿಗೆ ವರದಿ ನೀಡಬೇಕು' ಎಂದು ನ್ಯಾಯಾಲಯ ಹೇಳಿದೆ.

24 ವರ್ಷದ ಯುವಕ ಅಪಘಾತವೊಂದರಲ್ಲಿ ಮೃತಪಟ್ಟಿದ್ದರು. ಈ ಸಂಬಂಧ ಯುವಕನ ಪರ ವಕೀಲರು ವಿಮೆ ಪರಿಹಾರ ನ್ಯಾಯಮಂಡಳಿಯಲ್ಲಿ ಪ್ರಕರಣ ದಾಖಲಿಸಿದ್ದರು. ಇದನ್ನು ಪುರಸ್ಕರಿಸಿದ್ದ ನ್ಯಾಯಮಂಡಳಿಯು ₹31.9 ಲಕ್ಷ ಪರಿಹಾರ ನೀಡಲು ಆದೇಶ ನೀಡಿತ್ತು. ಈ ಆದೇಶವನ್ನು ಪ್ರಶ್ನಿಸಿ ಅಲಹಾಬಾದ್ ಹೈಕೋರ್ಟ್ ಮೊರೆ ಹೋಗಲಾಗಿತ್ತು. ಇಲ್ಲಿ ಅರ್ಜಿಯಲ್ಲಿ ತಿಸ್ಕರಿಸಲಾಯಿತು. ಅಲಹಾಬಾದ್ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ 'ಸುಪ್ರೀಂ'ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು.

ಕೋರ್ಟ್ ಹೇಳಿದ್ದು:

- ಮೋಟಾರು ವಾಹನ ತಿದ್ದುಪಡಿ ಕಾಯ್ದೆ ಅನ್ವಯ, ಅಧಿಕಾರಿ ತಾನು ಕೈಗೊಂಡ ಕ್ರಮಗಳ ಬಗ್ಗೆ ಸಂತ್ರಸ್ತ ಅಥವಾ ಅವರ ಕಾನೂನು ಪ್ರತಿನಿಧಿ, ಚಾಲಕ, ಮಾಲೀಕ, ವಿಮೆ ಕಂಪನಿ ಮತ್ತು ಸಂಬಂಧಪಟ್ಟ ಇತರ ಎಲ್ಲರಿಗೂ ಮಾಹಿತಿ ನೀಡಬೇಕು
- ಮೋಟಾರು ವಾಹನ ತಿದ್ದುಪಡಿ ಕಾಯ್ದೆ ಮತ್ತು ನಿಯಮಗಳ ಅಡಿಯಲ್ಲಿ ಇರುವ ಅನುಕೂಲಗಳನ್ನು ತಿಳಿಸಲು ಜಂಟಿ ವೆಬ್ ಪೋರ್ಟಲ್ ಅಥವಾ ವೆಬ್ ವೇದಿಕೆಯನ್ನು ಸ್ಥಾಪಿಸಬೇಕು.

'ಅರ್ಜಿ ವರ್ಗಾವಣೆ ಬೇಕಿಲ್ಲ'

ಅಪಘಾತವೊಂದರ ಎಲ್ಲಾ ವಿಮೆ ಪರಿಹಾರ ಅರ್ಜಿಗಳನ್ನು ವಿಮೆ ಪರಿಹಾರ ನ್ಯಾಯಮಂಡಳಿಯೇ ವಿಚಾರಣೆ ನಡೆಸಬೇಕು.
ವಿಮೆ ಪರಿಹಾರಕ್ಕೆ ಒಂದಕ್ಕಿಂತ ಹೆಚ್ಚು ಅರ್ಜಿಗಳು ಬೇರೆ ಬೇರೆ ನ್ಯಾಯಾಲಯಗಳಲ್ಲಿ ಸಲ್ಲಿಕೆ ಆಗಿದ್ದರೆ, ಮೊದಲು ಯಾವ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಲ್ಲಿಕೆಯಾಗಿದೆಯೋ ಅದೇ ನ್ಯಾಯಮಂಡಳಿಗೆ ಇತರ ಎಲ್ಲ ಅರ್ಜಿಗಳನ್ನು ವರ್ಗಾಯಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.
'ಅರ್ಜಿ ವರ್ಗಾವಣೆಗಾಗಿ ಯಾವುದೇ ಅರ್ಜಿದಾರರು ನ್ಯಾಯಾಲಯಕ್ಕೆ ಮತ್ತೊಂದು ಅರ್ಜಿ ಸಲ್ಲಿಸಬೇಕಾಗಿಲ್ಲ' ಎಂದೂ ನ್ಯಾಯಾಲಯ ಸ್ಪಷ್ಟಪಡಿಸಿದೆ.

ಸುದ್ದಿ 2 ನಿಮಿಷ

ಬಿಜೆಪಿ ಪರ ಘೋಷಣೆ: ವೇದಿಕೆ ಏರದ ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಹೌರಾ–ಜಲ್‌ಪೈಗುರಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡುವ ಸಮಾರಂಭದಲ್ಲಿ ಶುಕ್ರವಾರ ಅಸಮಾಧಾನ ಗೊಂಡರು. ರೈಲು ನಿಲ್ದಾಣದಲ್ಲಿ ಸೇರಿದ್ದ ಜನರು ಬಿಜೆಪಿ ಪರ ಘೋಷಣೆ ಕೂಗಿದ್ದು ಮಮತಾ ಅವರ ಅತೃಪ್ತಿಗೆ ಕಾರಣವಾಯಿತು.

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು ಮಮತಾ ಅವರನ್ನು ಸಮಾಧಾನ ಪಡಿಸಲು ನಡೆಸಿದ ಪ್ರಯತ್ನ ಫಲ ಕೊಡಲಿಲ್ಲ. ವೇದಿಕೆ ಏರಲು ನಿರಾಕರಿಸಿದ ಮಮತಾ ಅವರು ಪ್ರೇಕ್ಷಕರ ಜತೆಯಲ್ಲಿಯೂ ಕುಳಿತರು.

ಪ್ರಧಾನಿ ನರೇಂದ್ರ ಮೋದಿ ಅವರು ವಂದೇ ಭಾರತ್ ರೈಲು ಮತ್ತು ಇತರ ಅಭಿವೃದ್ಧಿ ಯೋಜನೆಗಳಿಗೆ ವರ್ಚುವಲ್ ಆಗಿ ಚಾಲನೆ ನೀಡಿದರು.

ನಂತರ, ವೈಷ್ಣವ್ ಅವರು ಮೆಟ್ರೊ ರೈಲಿನಲ್ಲಿ ಸಂಚರಿಸಿದರು. ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದ ಅವರು, ಘೋಷಣೆ ಕೂಗಿದ ಘಟನೆ ಗಂಭೀರವಾದುದೇನಲ್ಲ ಎಂದರು. ಮಮತಾ ಅವರಿಗೆ ಆದರ ಮತ್ತು ಗೌರವದಿಂದ ಆಹ್ವಾನ ನೀಡಲಾಗಿದೆ.

ಆಕ್ರೋಶ ವ್ಯಕ್ತಪಡಿಸುವಂತಹ ಘಟನೆಯೇನೂ ನಡೆದಿಲ್ಲ. ಪಕ್ಷದ ಕಾರ್ಯಕರ್ತರು ಘೋಷಣೆ ಕೂಗುವುದು ಸಾಮಾನ್ಯ ಎಂದರು.

ಗುರುವಾಯೂರು ದೇಗುಲದ ಬ್ಯಾಂಕ್ ಠೇವಣಿ ₹1,737 ಕೋಟಿ

ತ್ರಿಶ್ಶೂರ್: ಕೇರಳದ ತಿರುವನಂತಪುರದ ಶ್ರೀ ಪದ್ಮನಾಭಸ್ವಾಮಿ ದೇವಾಲಯವು ಕೆಲ ವರ್ಷಗಳ ಹಿಂದೆ ತನ್ನ ಅಪಾರ ಸಂಪತ್ತಿನಿಂದ ದೇಶದ ಗಮನ ಸೆಳೆದಿದ್ದರೆ, ಇದೀಗ ರಾಜ್ಯದ ಇನ್ನೊಂದು ದೇವಾಲಯ ಕೂಡ ಭಾರಿ ಮೊತ್ತದ ಬ್ಯಾಂಕ್ ಠೇವಣಿ ಹೊಂದಿರುವುದು ಬೆಳಕಿಗೆ ಬಂದಿದೆ.

ಗುರುವಾಯೂರು ಶ್ರೀಕೃಷ್ಣ ದೇವಾಲಯವು ₹1,737.04 ಕೋಟಿ ಬ್ಯಾಂಕ್ ಠೇವಣಿಯನ್ನು ಹಾಗೂ 271.05 ಎಕರೆ ಜಮೀನನ್ನು ಹೊಂದಿರುವುದು ಮಾಹಿತಿ ಹಕ್ಕು ಕಾಯಿದೆ (ಆರ್‌ಟಿಐ) ಮೂಲಕ ಪಡೆದ ಮಾಹಿತಿಯಿಂದ ಗೊತ್ತಾಗಿದೆ. ಭಕ್ತರು ಅರ್ಪಿಸಿರುವ ಚಿನ್ನ, ಬೆಳ್ಳಿ ಹಾಗೂ ಅಮೂಲ್ಯ ರತ್ನಗಳ ಭಂಡಾರವೇ ದೇವಾಲಯದಲ್ಲಿದ್ದು, ಭದ್ರತಾ ಕಾರಣಗಳಿಂದಾಗಿ ಇವುಗಳ ಮಾಹಿತಿಯನ್ನು ಬಹಿರಂಗಪಡಿಸಲು ದೇವಾಲಯದ ಆಡಳಿತ ಮಂಡಳಿ ನಿರಾಕರಿಸಿದೆ.

ಮ್ಯಾರಿಯೊನ್ ಬಯೊಟೆಕ್ ಅಮಾನತು

ಹೈದರಾಬಾದ್ (ಪಿಟಿಐ): ಭಾರತೀಯ ಔಷಧ ರಫ್ತು ಉತ್ತೇಜನ ಮಂಡಳಿ (ಫಾರ್ಮ್‌ಎಕ್ಸಿಲ್) ಮ್ಯಾರಿಯೊನ್ ಬಯೊಟೆಕ್‌ನ ಸದಸ್ಯತ್ವವನ್ನು ಅಮಾನತಿನಲ್ಲಿರಿಸಿದೆ. ಮ್ಯಾರಿಯೊನ್ ಬಯೊಟೆಕ್‌ನ ಔಷಧ ನೀಡಲಾಗಿದ್ದ ಉಜ್ಬೇಕಿಸ್ತಾನದ 18 ಮಕ್ಕಳು ಮೃತಪಟ್ಟ ಬಗ್ಗೆ ವಿವರಣೆ ನೀಡದೇ ಇದ್ದುದಕ್ಕೆ ಮಂಡಳಿಯು ಈ ಕ್ರಮ ತೆಗೆದುಕೊಂಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ವಿವರಣೆ ಕೋರಿ ಕಂಪನಿಗೆ ನೋಟಿಸ್ ನೀಡಲಾಗಿತ್ತು. ಆದರೆ ನೋಟಿಸ್‌ಗೆ ಉತ್ತರಿಸದ ಕಾರಣ ಕಂಪನಿತ ಸದಸ್ಯತ್ವವನ್ನು ಅಮಾನತು ಮಾಡಲಾಗಿದೆ.

ಪ್ರಧಾನಿ ಮೋದಿಗೆ ಮಾತೃವಿಯೋಗ

ಒಂದನೇ ಪುಟದಿಂದ...

ಹೀರಾಬೆನ್ ಅವರು ಮೋದಿಯವರ ಕಿರಿಯ ತಮ್ಮ ಪಂಕಜ್‌ಭಾಯಿ ಅವರೊಟ್ಟಿಗೆ ಗಾಂಧಿನಗರದ ರಾಯ್‌ಸೇನ್ ಗ್ರಾಮದಲ್ಲಿ ನೆಲೆಸಿದ್ದರು.

ನಿಧನದ ಸುದ್ದಿ ತಿಳಿಯುತ್ತಿದ್ದಂತೆಯೇ ರಾಯ್‌ಸನ್ ಗ್ರಾಮಕ್ಕೆ ಆಗಮಿಸಿದ ಮೋದಿ ಅವರು, ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ಸಹೋದರರೊಂದಿಗೆ ಮೋದಿ ಅವರು ಅಂತಿಮ ಯಾತ್ರೆಯಲ್ಲಿ ಹೆಗಲುಕೊಟ್ಟರು. ಬೆಳಿಗ್ಗೆ 9.30ರ ಸುಮಾರಿಗೆ ಗಾಂಧಿ ನಗರದ ಚಿತಾಗಾರದಲ್ಲಿ ಕುಟುಂಬ ಸದಸ್ಯರ ಸಮ್ಮುಖದಲ್ಲಿ ಅಂತಿಮ ವಿಧಿವಿಧಾನಗಳು ನಡೆದವು. ಚಿತೆಗೆ ಮೋದಿ ಅಗ್ನಿಸ್ಪರ್ಶ ಮಾಡಿದರು.

ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಮಾಜಿ ಮುಖ್ಯಮಂತ್ರಿಗಳಾದ ವಿಜಯ್ ರೂಪಾಣಿ, ಶಂಕರಸಿಂಹ ವಘೇಲಾ, ಉದ್ಯಮಿ ಗೌತಮ್ ಅದಾನಿ, ಆಧ್ಯಾತ್ಮಿಕ ಗುರು ಸ್ವಾಮಿ ಸಚ್ಚಿದಾನಂದ ಹಾಗೂ ಹಲವು ಪ್ರಮುಖರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಮೋದಿಯವರ ಹುಟ್ಟೂರು ವಡ್ನಾಗರ್‌ನಲ್ಲಿಕೆಲವು ದಿನಗಳ ನಂತರ ಸಂತಾಪ ಸಭೆ ಆಯೋಜಿಸುವುದಾಗಿ ಕುಟುಂಬ ಸದಸ್ಯರು ವರದಿಗಾರರಿಗೆ ತಿಳಿಸಿದ್ದಾರೆ.

ಅಂತ್ಯಕ್ರಿಯೆ ಮುಗಿಸಿ ಕರ್ತವ್ಯಕ್ಕೆ ಮರಳಿದ ಪ್ರಧಾನಿ ಮೋದಿ, ಪಶ್ಚಿಮ ಬಂಗಾಳದಲ್ಲಿ ಆರಂಭಿಸಿರುವ ಮೊದಲ ವಂದೇ ಭಾರತ್ ರೈಲು ಉದ್ಘಾಟನಾ ಸಮಾರಂಭದಲ್ಲಿ ವರ್ಚುವಲ್ ಮೂಲಕ ಪಾಲ್ಗೊಂಡರು.

'ಅಮ್ಮನಲ್ಲಿ ತ್ರಿಮೂರ್ತಿ ಕಂಡಿದ್ದೆ': 'ಅದ್ಭುತ ಶತಾಯುಷಿ ದೇವರ ಪದತಳದಲ್ಲಿ ವಿಶ್ರಾಂತಿಯದ್ದಾರೆ. ಅವರ ಜೀವನವು ತಪಸ್ವಿಯ ಪಯಣವಾಗಿತ್ತು. ನಿಷ್ಕಾಮ ಕರ್ಮಯೋಗಿಯ ಜೀವನ ಮತ್ತು ಮೌಲ್ಯಗಳಿಗೆ ಬದ್ಧವಾದ ಬದುಕಿನ ಸಂಕೇತವಾಗಿದ್ದರು. ಅಮ್ಮನಲ್ಲಿ ನಾನು ತ್ರಿಮೂರ್ತಿಗಳನ್ನು ಕಂಡಿದ್ದೇನೆ' ಎಂದು ಮೋದಿ ಟ್ವೀಟ್‌ನಲ್ಲಿ ತಾಯಿಗೆ ಅಂತಿಮ ನಮನ ಸಲ್ಲಿಸಿದ್ದಾರೆ.

ಮತ್ತೊಂದು ಟ್ವೀಟ್‌ನಲ್ಲಿ 'ಇದೇ ವರ್ಷದ ಜೂನ್ 18ರಂದು ಅವರ (ಅಮ್ಮನ) 100ನೇ ವರ್ಷದ ಜನ್ಮದಿನ ಭೇಟಿಯಾಗಿದ್ದೆ. ಆಗ ಅವರು ಸದಾ ನನ್ನ ನೆನಪಿನಲ್ಲಿ ಉಳಿಯುವಂತಹ 'ನಿನ್ನ ಬುದ್ಧಿ (ಮಿದುಳು) ಬಳಸಿ ಕೆಲಸ ಮಾಡು. ಪರಿಶುದ್ಧ ಬದುಕು ನಡೆಸು' ಎನ್ನುವ ಮಾತು ಹೇಳಿದ್ದರು' ಎಂದು ಸ್ಮರಿಸಿದ್ದಾರೆ.

ಅಲ್ಲದೆ, ಮೋದಿ ತಮ್ಮ ತಾಯಿ ನೂರನೇ ಜನ್ಮದಿನಕ್ಕೆ ಕಾಲಿಟ್ಟ ಸಂದರ್ಭ, ತಾಯಿಯ ಬಾಲ್ಯ ಜೀವನ ಮತ್ತು ಸಂಸಾರದ ನೊಗವನ್ನು ಚಿಕ್ಕ ವಯಸಿನಲ್ಲೇ ಹೊತ್ತು, ಬಡತನದ ಬೇಗೆಯಲ್ಲಿ ದೊಡ್ಡ ಕುಟುಂಬವನ್ನು ಸಲಹಿದ ಪರಿಯನ್ನು ಎಳೆಎಳೆಯಾಗಿ ತೆರೆದಿಟ್ಟಿದ್ದರು. 'ನನ್ನ ತಾಯಿ ಎಲ್ಲ ತಾಯಂದಿರಂತೆಯೇ ತುಂಬಾ ಸರಳ ಮತ್ತು ಅಸಾಧಾರಣಳು' ಎಂದರು.

ಗುಜರಾತ್‌ನ ಗಾಂಧಿನಗರದಲ್ಲಿ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಅವರು ತಾಯಿ ಹೀರಾಬೆನ್ ಪಾರ್ಥಿವ ಶರೀರದ ಅಂತಿಮ ಯಾತ್ರೆಗೆ ಸಹೋದರರೊಂದಿಗೆ ಹೆಗಲುಕೊಟ್ಟರು – ಪಿಟಿಐ ಚಿತ್ರ

ವೈಕುಂಠ ಸಮಾರಾಧನೆ

ಶ್ರೀ ಕೆ. ಅಂತೂರಯ್ಯ
(ಲೇಟ್ ಕರಿಸಿದ್ದಯ್ಯನವರ ದ್ವಿತೀಯ ಪುತ್ರ)
ದಿನಾಂಕ: 22–12–2022 ರ ಗುರುವಾರದಂದು ದೈವಾಧೀನರಾದರು. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ: 01–01–2023 ರ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಕಲ್ಲಹಳ್ಳಿ, ಕೆಸರುಮಡು ಪೋಸ್ಟ್, ಉರ್ಡಿಗೆರೆ ಹೋಬಳಿ, ತುಮಕೂರು ಜಿಲ್ಲೆ ಇಲ್ಲಿರುವ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಬಂಧು–ಮಿತ್ರರು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರಾದ ಪತ್ನಿ ಶ್ರೀಮತಿ ಟಿ.ಎಲ್. ಶಾಂತಮ್ಮ, ಮಕ್ಕಳು, ಅಳಿಯ, ಸಹೋದರರು, ಸಹೋದರಿಯರು ಹಾಗೂ ಕುಟುಂಬವರ್ಗದವರು.

ಪಿಎಫ್‌ಐ ಪ್ರಕರಣ: ವಕೀಲ ಬಂಧನ

ನವದೆಹಲಿ (ಪಿಟಿಐ): ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಕಾನೂನು ಬಾಹಿರ ಮತ್ತು ಹಿಂಸಾತ್ಮಕ ಚಟುವಟಿಕೆಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಕೇರಳದ ವಕೀಲರೊಬ್ಬರನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಎರ್ನಾಕುಳಂ ಜಿಲ್ಲೆಯ ಇಡವನಕ್ಕಾಡ್ ನಿವಾಸಿ ಮೊಹಮ್ಮದ್ ಮುಬಾರಕ್ ಎ. ಐ. ಬಂಧಿತ ವಕೀಲ.

'ಕೇರಳ ಹೈಕೋರ್ಟ್‌ನಲ್ಲಿ ವಕೀಲಿ ವೃತ್ತಿ ನಡೆಸುವ ಮುಬಾರಕ್ ಪಿಎಫ್‌ಐನ ಸದಸ್ಯರಾಗಿದ್ದು, ಸಂಘಟನೆಯ ಹಿಟ್ ಸ್ಕ್ವಾಡ್ (ಪ್ರಹಾರ ಪಡೆ) ಸದಸ್ಯರಿಗೆ ಸಮರ ಕಲೆ ಮತ್ತು ಪ್ರಹಾರ ತರಬೇತಿ ನೀಡುತ್ತಿದ್ದರು' ಎಂದು ಅಧಿಕಾರಿಗಳು ಹೇಳಿದ್ದಾರೆ.

11 ಮಂದಿ ವಿರುದ್ಧ ಚಾರ್ಜ್‌ಶೀಟ್

ನಿಷೇಧಿತ ಪಿಎಫ್‌ಐ ಸಂಘಟನೆಗೆ ತೆಲಂಗಾಣದಲ್ಲಿ ಯುವಕರ ನೇಮಕಾತಿ ಮತ್ತು ಭಯೋತ್ಪಾದಕ ತರಬೇತಿ ಶಿಬಿರಗಳ ಆಯೋಜನೆಯಲ್ಲಿ ಭಾಗಿಯಾದ 11 ಆರೋಪಿಗಳ ವಿರುದ್ಧ ಎನ್‌ಐಎ ಚಾರ್ಜ್ ಶೀಟ್ ಸಲ್ಲಿಸಿದೆ. ತೆಲಂಗಾಣದ 10 ಮಂದಿ ಮತ್ತು ಆಂಧ್ರಪ್ರದೇಶದ ಒಬ್ಬ ಆರೋಪಿ ವಿರುದ್ಧ ಯುಎಪಿಎ ಕಾಯ್ದೆಯಡಿ ದೋಷಾರೋಪ ಪಟ್ಟಿಯನ್ನು ಗುರುವಾರ ಹೈದರಾಬಾದ್‌ನ ಎನ್‌ಐಎ ವಿಶೇಷ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದೆ ಎಂದು ಎನ್‌ಐಎ ವಕ್ತಾರರು ಹೇಳಿದ್ದಾರೆ. ಜುಲೈ 4ರಂದು ತೆಲಂಗಾಣದ ನಿಜಾಮಾಬಾದ್ ಜಿಲ್ಲೆಯ 6ನೇ ಟೌನ್ ಠಾಣೆಯಲ್ಲಿ ಮೊದಲು ಪ್ರಕರಣ ದಾಖಲಾಗಿತ್ತು. ಆ. 26ರಂದು ಪ್ರಕರಣ ಮರು ದಾಖಲಿಸಿ ಎನ್‌ಐಎ ತನಿಖೆ ಆರಂಭಿಸಿತ್ತು.

ಹಗಲಿನಲ್ಲಿ ಉರಿಯುವ ಬೀದಿ ದೀಪ

ಒಂದನೇ ಪುಟದಿಂದ...

ಸಾರ್ವಜನಿಕ ಬೀದಿ ದೀಪಗಳನ್ನು ಅಳವಡಿಸುವ ಕಾರ್ಯ ಎಸ್ಕಾಂಗಳದ್ದು, ಬೀದಿ ದೀಪಗಳಿಗೆ ಪೂರಕವಾಗಿ ವಿದ್ಯುತ್ ತಂತಿ ಅಳವಡಿಸಿದ ಮೇಲೆ ಬೀದಿ ದೀಪ ಆನ್ ಮಾಡುವ ಮತ್ತು ಆಫ್ ಮಾಡುವ ಜವಾಬ್ದಾರಿಯೂ ಎಸ್ಕಾಂಗಳದ್ದೇ. ತನ್ನ ಜವಾಬ್ದಾರಿಯನ್ನು ನಿರ್ವಹಿಸದೇ ಇದ್ದರೆ ಹೇಗೆ? ಮೊದಲು ಇದ್ದ ವಿದ್ಯುತ್ ತಂತಿಗಳನ್ನು ತೆಗೆದು ಹಾಕಿ ನಿರಂತರ ಜ್ಯೋತಿಯಡಿ ತಂತಿಗಳನ್ನು ಅಳವಡಿಸಲಾಗಿದೆ ಇದರ ನಿಯಂತ್ರಣಕ್ಕೆ ಸ್ವಿಚ್‌ಗಳು ಇರುವುದಿಲ್ಲ.

ಬಿಲ್ ಮಾತ್ರ ನಿರಂತರವಾಗಿ ಗ್ರಾಮ ಪಂಚಾಯಿತಿಗಳಿಗೆ ಬರುತ್ತವೆ. ತಾಂತ್ರಿಕ ಕೆಲಸಗಳನ್ನು ಗ್ರಾಮ ಪಂಚಾಯಿತಿಗಳು ನಿರ್ವಹಿಸಲು ಆಗುವುದಿಲ್ಲ ಎಂದು ಸಮಿತಿಯು ಇಂಧನ ಇಲಾಖೆಗೆ ಕಟ್ಟುನಿಟ್ಟಾಗಿ ಹೇಳಿದೆ.

ಬೀದಿ ದೀಪಗಳಿಗೆ ಪ್ರತ್ಯೇಕ ಫೀಡರ್ ಹಾಕಬೇಕಾಗುತ್ತದೆ. ಇದನ್ನು ಗ್ರಾಮ ಪಂಚಾಯಿತಿಯವರು ಮಾಡಬೇಕು. ಇಲ್ಲವಾದರೆ ಇದಕ್ಕೆ ಅನುದಾನ ಕೊಟ್ಟಾಗ ಇಲಾಖೆಯು ಮಾಡಬೇಕಾಗುತ್ತದೆ ಎಂದು ಇಂಧನ ಇಲಾಖೆಯು ಸಮಜಾಯಿಷಿ ನೀಡಿತ್ತು.

ಇದಕ್ಕೆ ಪ್ರತಿಕ್ರಿಯಿಸಿರುವ ಸಮಿತಿಯು, ಗ್ರಾಹಕರಿಗೆ ವಿತರಣೆ ಮಾಡಲು ಲೈನ್ ಹಾಕುವ ಸಂದರ್ಭದಲ್ಲಿ ಬೀದಿ ದೀಪದ ಲೈನ್ ಸೇರಿಸಿದರೆ ಸೂಕ್ತ. ಇದಕ್ಕಾಗಿ ಲೈನ್‌ಗೆ ತಗಲುವ ವೆಚ್ಚದ ಅಂದಾಜು ಮಾಡಿ ಕೊಡುವುದು ಇಲಾಖೆ ಕರ್ತವ್ಯ. ಸಮಗ್ರ ಯೋಜನಾ ವರದಿ ತಯಾರಿಸುವ ಸಂದರ್ಭದಲ್ಲಿ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಳ್ಳಬೇಕು ಎಂದು ಸಮಿತಿ ತಾಕೀತು ಮಾಡಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General
ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229
Part-Time Jobs
ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266
ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503
Wanted
PHARMACIST - Generic Aadhar Davangere B. Pharm/D. Pharma with KSPC Regd. 9036059698
ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988
ರಿಯಲ್ ಎಸ್ಟೇಟ್ ಬೈಯಿಂಗ್
Joint Development
Out-Station
JOINT DEVELOPMENT of Layout JD Land required in Tumakuru. Contact. 9845974129
ಪ್ರವಾಸ
Travel
23.01.2023 08.03.2023 10.04.2023 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 08.03.2023 05.04.2023 ನೇಪಾಳ 9 ದಿನಗಳು. 10.02.2023 15.03.2023 ದುಬೈ,ಅಬುಧಾಬಿ 5 ದಿನಗಳು. 15.03.2023 15.04.2023 ಭೂತಾನ್ 8 ದಿನಗಳು. 23.02.2023 16.03.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 09.02.2023 11.03.2023 ಗುಜರಾತ್ 8 ದಿನಗಳು. 05.02.2023 17.03.2023 ರಾಜಸ್ಥಾನ್ 9 ದಿನಗಳು. A/C ರೂಂ/ A/C ಬಸ್ಸು/ ವಿಮಾನದಲ್ಲಿ. ಸಂಪರ್ಕಿಸಿ: ಜೈನ್ ಟ್ರಾವಲ್ಸ್, ಬೆಂಗಳೂರು-03. 9448402248 7022547922
ಮಹಾಶಿವರಾತ್ರಿ ಪ್ರಯುಕ್ತ 09/02/2023ರಿಂದ ವಿಮಾನ ಮತ್ತು ಏ.ಸಿ ಬಸ್ಸಿನಲ್ಲಿ 16ದಿನಗಳ ಮುಕ್ತಿನಾಥ್,ಪಶುಪತಿನಾಥ್, ಪೋಕ್ರಾ,ಭಕ್ತಪುರ,ಕಾಶಿ, ನೈಮಿಷಾರಣ್ಯ ಹಾಗು 13ದಿನಗಳ ಪಂಚರಾಮಕ್ಷೇತ್ರ ಸಮೇತ ಅನ್ನಾವರಂ,ಸಿಂಹಾಚಲಂ,ವಿಶಾಖಪಟ್ಟಣ 28.1.2023ರಿಂದ 9ದಿನಗಳ ಕಾಶಿ,ಗಯಾ, ಬೈದ್ಯನಾಥೇಶ್ವರ,ಅಲಹಾಬಾದ್. ವಿಷ್ಣನ್ ಟ್ರಾವೆಲ್ ಲೈನ್ಸ್, #164/3,ಆರ್.ವಿ.ರಸ್ತೆ, ಬೆಂಗಳೂರು-4. ಫೋನ್: 8105657052, 9480182865.

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ವಕೀಲರು, ದಾಖಲೆ ಕೊರತೆ: 77 ಲಕ್ಷಕ್ಕೂ ಅಧಿಕ ವ್ಯಾಜ್ಯಗಳ ವಿಚಾರಣೆ ನನೆಗುದಿಗೆ'



ಸಿಜೆಐ ಚಂದ್ರಚೂಡ್

ಅಮರಾವತಿ (ಪಿಟಿಐ): ಕೋರ್ಟ್‌ಗಳಲ್ಲಿ ವಾದ ಮಂಡಿಸಲು ವಕೀಲರು ಲಭ್ಯವಿಲ್ಲದೆ ಇರುವುದರಿಂದ 63 ಲಕ್ಷಕ್ಕೂ ಅಧಿಕ ಮತ್ತು ಕೆಲವು ದಾಖಲೆಗಳ ಕೊರತೆಯಿಂದಾಗಿ 14 ಲಕ್ಷಕ್ಕೂ ಅಧಿಕ ವ್ಯಾಜ್ಯಗಳ ವಿಚಾರಣೆ ದೇಶದಲ್ಲಿ ನನೆಗುದಿಗೆ ಬಿದ್ದಿವೆ.

ರಾಷ್ಟ್ರೀಯ ನ್ಯಾಯಾಂಗ ಅಂಕಿ ಅಂಶ ಕೋಷ್ಠಕದ (ಎನ್‌ಜೆಡಿಜಿ) ಮಾಹಿತಿಗಳನ್ನು ಆಧರಿಸಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಶುಕ್ರವಾರ ಈ ಮಾತು ಹೇಳಿದರು.

ಆಂಧ್ರಪ್ರದೇಶ ನ್ಯಾಯಾಂಗ ಅಕಾಡೆಮಿ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಿಜೆಐ ಅವರು, ನ್ಯಾಯಾಂಗದಲ್ಲಿ ಜಿಲ್ಲಾ ಕೋರ್ಟ್‌ಗಳು 'ಕೆಳಹಂತದ ಕೋರ್ಟ್' ಎಂಬ ಮನಸ್ಥಿತಿಯಿಂದ ಜನತೆ ಮೊದಲು ಹೊರಬರಬೇಕು. ಜಿಲ್ಲಾ ಕೋರ್ಟ್‌ಗಳು ನ್ಯಾಯಾಂಗ ವ್ಯವಸ್ಥೆಯ ಬೆನ್ನೆಲುಬು. ಹಲವರಿಗೆ ಮೊದಲು ಮುಖಾಮುಖಿಯಾಗುವ ನ್ಯಾಯ ವ್ಯವಸ್ಥೆ ಎಂಬುದನ್ನು ಮನಗಾಣಬೇಕು ಎಂದರು. 'ಜಾಮೀನು ಹೊರತು ಬಂಧನವಲ್ಲ' ಎಂಬುದು ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯ ಮೂಲಭೂತ ನಿಯಮ. ಆದರೆ, ಈ ನಿಯಮಕ್ಕೆ ವಿರೋಧಾಭಾಸ ಎಂಬಂತೆ ಇಂದಿಗೂ ಅನೇಕ ಮಂದಿ ವಿಚಾರಣಾಧೀನ ಕೈದಿಗಳು ಜೈಲುಗಳಲ್ಲಿದ್ದಾರೆ' ಎಂದರು.

ಜಿಲ್ಲಾ ಕೋರ್ಟ್‌ಗಳಲ್ಲಿ ಸಿಆರ್‌ಪಿಸಿ ಸೆಕ್ಷನ್ 438 (ಜಾಮೀನು) ಅಥವಾ ಸೆಕ್ಷನ್ 439 (ಜಾಮೀನು ರದ್ದತಿ) ಎಂಬುದೇ ಅರ್ಥವಿಲ್ಲದ, ಯಾಂತ್ರಿಕವಾದ ಪ್ರಕ್ರಿಯೆ ಆಗಬಾರದು. ಕಡುಬಡವರ ಮೇಲೆ ನೇರವಾಗಿ ಪರಿಣಾಮ ಬೀರುವುದರಿಂದ ಜಿಲ್ಲಾ ಕೋರ್ಟ್‌ಗಳ ಹಂತದಲ್ಲಿಯೇ ಪರಿಹಾರೋಪಾಯಗಳನ್ನು ಒದಗಿಸಲು ಒತ್ತು ನೀಡಬೇಕು ಎಂದು ಅಭಿಪ್ರಾಯಪಟ್ಟರು.

ಹಳೇ ಮೈಸೂರಿನಲ್ಲಿ ಶಾ ರಣಕಹಳೆ

ಒಂದನೇ ಪುಟದಿಂದ...

ಮಧ್ಯ ಕರ್ನಾಟಕದಲ್ಲಿ ಪ್ರಬಲವಾಗಿರುವ ಕಾಂಗ್ರೆಸ್-ಜೆಡಿಎಸ್ ಅನ್ನು ಭಾಷಣದುದ್ದಕ್ಕೂ ಕಟುವಾಗಿ ಟೀಕಿಸಿ ಕಾರ್ಯಕರ್ತರನ್ನು ಅವರು ಉದ್ದೀಪಿಸಿದರು. 'ಎರಡು ಪಕ್ಷಗಳು ಭ್ರಷ್ಟಾಚಾರ, ಜಾತೀಯತೆ, ಕೋಮುವಾದ ಬೆಂಬಲಿಸಿವೆ. ಕ್ರಿಮಿನಲ್‌ಗಳಿಗೆ ಆಶ್ರಯ ನೀಡಿವೆ. ದಲಿತರು, ಬಡವರು, ಆದಿವಾಸಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿವೆ' ಎಂದು ಶಾ ದೂರಿದರು. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರದ ಯೋಜನೆಗಳ ಪಟ್ಟಿಯನ್ನು ನೀಡಿದರು.

'ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ಕರ್ನಾಟಕ ದೆಹಲಿಯ ಎಟಿಎಂ ಆಗಲಿದೆ. ಜೆಡಿಎಸ್ ಅಧಿಕಾರಕ್ಕೆ ಬಂದರೆ ಒಂದು ಕುಟುಂಬದ ಎಟಿಎಂ ಆಗಲಿದೆ. ರಾಜ್ಯವನ್ನು ಕುಟುಂಬ ರಾಜಕಾರಣ ಮತ್ತು ಭ್ರಷ್ಟಾಚಾರದಿಂದ ಮುಕ್ತಗೊಳಿಸಲು, ಮಂಡ್ಯದಿಂದಲೇ ಬಿಜೆಪಿ ವಿಜಯಯಾತ್ರೆ ಆರಂಭವಾಗಲು, ಪ್ರಧಾನಿಯವರ ಕೈಗಳನ್ನು ಬಲಪಡಿಸಿ' ಎಂದು ಕೋರಿದರು. 'ಹಳೇ ಮೈಸೂರು ಮತ್ತು ದೇಶದ ಅಭಿವೃದ್ಧಿ ಒಟ್ಟಿಗೇ ಸಾಗಲಿದೆ' ಎಂದು ಪ್ರತಿಪಾದಿಸಿದರು.

'ಪ್ರಧಾನಿ, ಲಸಿಕೆ ದೊರಕಿಸಿ ದೇಶ ವನ್ನು ಕೋವಿಡ್ ಭೀತಿಯಿಂದ ಮುಕ್ತಗೊಳಿಸಿದ್ದಾರೆ. ಮಂಡ್ಯ-ಮೈಸೂರು ಎಕ್ಸ್ ಪ್ರೆಸ್ ಹೆದ್ದಾರಿ, ರೈಲು ಹಳಿಗಳ ವಿಸ್ತರಣೆ, ವಿದ್ಯುದೀಕರಣದ ಜೊತೆಗೆ ಮೈಷುಗರ್ ಕಾರ್ಖಾನೆಗೂ ಬಿಜೆಪಿ ಸರ್ಕಾರ ಚಾಲನೆ ನೀಡಿದೆ' ಎಂದರು.

ಅವರಿಗೂ ಮುನ್ನ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ದಕ್ಷಿಣ ಕರ್ನಾಟಕದ ಜನ ಕಾಂಗ್ರೆಸ್, ಜೆಡಿಎಸ್‌ನಿಂದ ಬೇಸತ್ತಿದ್ದಾರೆ' ಎಂದೇ ಮಾತು ಶುರು ಮಾಡಿದರು. 'ಈ ಭಾಗದ ನೀರಾವರಿ ಸಮಸ್ಯೆಗಳನ್ನು ಎರಡೂ ಪಕ್ಷಗಳು ನಿರ್ಲಕ್ಷಿಸಿವೆ. ಮುಖ್ಯಮಂತ್ರಿ, ಮಂತ್ರಿಗಳಾಗಿದ್ದವರು ಜನತೆಗೆ ನ್ಯಾಯ ಒದಗಿಸಿಲ್ಲ. ನಾಲೆಗಳ ಆಧುನೀಕರಣ, ಕಡೆಭಾಗದ ರೈತರಿಗೆ ನೀರು ಪೂರೈಸಲು ನಿರ್ಲಕ್ಷ್ಯ ವಹಿಸಲಾಗಿದೆ. ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ನೀರಾವರಿ ಯೋಜನೆಗಳಿಗೆ ಚಾಲನೆ ನೀಡಲಾಗುವುದು. ಸುವರ್ಣ ಕರ್ನಾಟಕ ನಿರ್ಮಿಸುವ ಸಂಕಲ್ಪಕ್ಕೆ ಕೈಜೋಡಿಸಬೇಕು' ಎಂದರು.

'ಪ್ರಧಾನಿ ಮೋದಿ, ಅಮಿತ್ ಶಾ ನೇತೃತ್ವದಲ್ಲಿ ಗುಜರಾತಿನಲ್ಲಿ ದಾಖಲೆ ಗೆಲುವು ದೊರೆತಂತೆಯೇ ಕರ್ನಾಟಕದಲ್ಲಿಯೂ ಮುಂದಿನ ಚುನಾವಣೆಯಲ್ಲಿ ಪಕ್ಷ ಜಯಭೇರಿ ಬಾರಿಸಲಿದೆ' ಎಂದರು.

ಮಂಡ್ಯದಲ್ಲಿ ಬಿಜೆಪಿ ಜನಸಂಕಲ್ಪ ಯಾತ್ರೆ ಸಮಾವೇಶದಲ್ಲಿ ಸೇರಿದ್ದ ಜನಸ್ತೋಮ

'ಹನುಮಪ್ಪ- ಮುಲ್ಲಾ ಸಾಬಿ, ಟಿಪ್ಪು-ಒಡೆಯರ್ ನಡುವಿನ ಚುನಾವಣೆ'

ಮಂಡ್ಯ: 'ಈ ಬಾರಿ ಮೂಡಲಬಾಗಿಲ ಹನುಮಪ್ಪ ಹಾಗೂ ಮುಲ್ಲಾ ಸಾಬಿ ನಡುವೆ, ಟಿಪ್ಪು ಹಾಗೂ ಒಡೆಯರ್ ನಡುವೆ ಚುನಾವಣೆ ನಡೆಯಲಿದೆ' ಎನ್ನುವ ಮೂಲಕ, ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಸಿ.ಟಿ.ರವಿ ಚುನಾವಣೆಯನ್ನು ಕೋಮು ನೆಲೆಯಲ್ಲಿ ಕೊಂಡೊಯ್ಯುವ ಸುಳಿವು ನೀಡಿದರು.

'ನಿಮ್ಮ ಓಟು ಹನುಮಪ್ಪನಿಗೆ ನ್ಯಾಯ ಕೊಡಲಿಕ್ಕೆ ಅಂತ ನೆನಪಿಟ್ಟುಕೊಳ್ಳಿ. ರಾಜ್ಯಕ್ಕೆ, ಮಂಡ್ಯಕ್ಕೆ ನೀರು ಕೊಟ್ಟಿದ್ದು ಟಿಪ್ಪು, ಅವನಪ್ಪ ಅಲ್ಲ. ಕೃಷ್ಣರಾಜ ಒಡೆಯರ್ ಮತ್ತು ಸರ್.ಎಂ.ವಿಶ್ವೇಶ್ವರಯ್ಯ. ಮೈಸೂರು ಸಿಲ್ಕ್ಸ್, ಪೇಪರ್‌ಮಿಲ್, ಮೈಸೂರು ವಿ.ವಿಯನ್ನು ಟಿಪ್ಪು, ಅವನಪ್ಪ ಮಾಡಿದ್ದಲ್ಲ' ಎಂದರು. 'ನಮ್ಮ ಮೈಯಲ್ಲಿ ಉರಿಗೌಡ, ದೊಡ್ಡ-ನಂಜೇಗೌಡರ ರಕ್ತ ಹರಿಯುತ್ತಿದೆಯೇ ಹೊರತು, ಟಿಪ್ಪು, ಅವನಪ್ಪನ ರಕ್ತವಲ್ಲ. ಟಿಪ್ಪು ಕೊಂದ ಗೌಡರೇ ನಿಜವಾದ ಹುಲಿಗಳು. ಅವರ ಪ್ರತಿಮೆಗಳು ನಿರ್ಮಾಣವಾಗಬೇಕು' ಎಂದರು.

ಭಾರತದ ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರ ಸಲಹೆ

'ಆಧಾರ್ ಬಳಕೆ, ಎಚ್ಚರಿಕೆ ಇರಲಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸೌಲಭ್ಯಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳಲು ಆಧಾರ್ ಸಂಖ್ಯೆಯನ್ನು ವಿಶ್ವಾಸದಿಂದಲೇ ಬಳಸಿ ಎಂದು ಭಾರತದ ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರವು (ಯುಐಡಿಎಐ) ಸಲಹೆ ಕೊಟ್ಟಿದೆ. ಆದರೆ, ಬ್ಯಾಂಕ್ ಖಾತೆ, ಪ್ಯಾನ್ ಕಾರ್ಡ್ ಅಥವಾ ಪಾಸ್‌ಪೋರ್ಟ್‌ನಂತಹ ಇತರ ದಾಖಲೆಗಳನ್ನು ಬಳಸುವಾಗ ವಹಿಸುವ ಎಲ್ಲ ಎಚ್ಚರವೂ ಆಧಾರ್ ಬಳಸುವಾಗಲೂ ಇರಬೇಕು ಎಂದಿದೆ.

ಆಧಾರ್ ಸಂಖ್ಯೆಯನ್ನು ಹಂಚಿಕೊಳ್ಳಲು ಇಷ್ಟ ಇಲ್ಲ ಎಂದಾದರೆ ಗುರುತು ದೃಢೀಕರಣಕ್ಕೆ ವರ್ಚುವಲ್ ಗುರುತು ಸಂಖ್ಯೆಯನ್ನು (ವಿಐಡಿ) ಬಳಸುವ ಅವಕಾಶ ಜನರಿಗೆ ಇದೆ. ಯುಐಡಿಎಐ ವೆಬ್‌ಸೈಟ್ ಅಥವಾ ಮೈಆಧಾರ್ ಪೋರ್ಟಲ್‌ಗೆ ಭೇಟಿ ಕೊಟ್ಟು ಅತ್ಯಂತ ಸುಲಭವಾಗಿ ವಿಐಡಿ ಪಡೆದುಕೊಳ್ಳಬಹುದು. ಆಧಾರ್ ಬದಲಿಗೆ ಗುರುತು ದೃಢೀಕರಣಕ್ಕೆ ವಿಐಡಿಯನ್ನು ಬಳಸಿಕೊಳ್ಳಬಹುದು. ಅವಶ್ಯಕತೆ ಮುಗಿದ ಬಳಿಕ ವಿಐಡಿಯನ್ನು ಬದಲಾಯಿಸುವ ಅವಕಾಶವೂ ಇದೆ ಎಂದು ಯುಐಡಿಎಐ ಹೇಳಿದೆ.

ಆಧಾರ್ ಕಾರ್ಡ್, ಪಿವಿಸಿ ಕಾರ್ಡ್ ಅಥವಾ ಅವುಗಳ ಪ್ರತಿಗಳನ್ನು ಎಲ್ಲೆಂದರಲ್ಲಿ ಬಿಟ್ಟುಬಿಡಬಾರದು. ಸಾಮಾಜಿಕ ಜಾಲತಾಣಗಳಂತಹ ಸಾರ್ವಜನಿಕ ವೇದಿಕೆಗಳಲ್ಲಿ ಆಧಾರ್ ಸಂಖ್ಯೆಯನ್ನು ಬಹಿರಂಗಪಡಿಸಬಾರದು. ಗುರುತು ದೃಢೀಕರಣಕ್ಕಾಗಿ ಆಧಾರ್ ಒಟಿಪಿಯನ್ನು (ಒಂದು ಬಾರಿಯ ಪಾಸ್‌ವರ್ಡ್) ಯಾರೊಂದಿಗೂ ಹಂಚಿಕೊಳ್ಳುವ ಅಗತ್ಯ ಇಲ್ಲ. ಎಂ–ಆಧಾರ್ ಪಿನ್ ಸಂಖ್ಯೆಯನ್ನು ಇತರರೊಂದಿಗೆ ಹಂಚಿಕೊಳ್ಳಬೇಡಿ ಎಂಬ ಸಲಹೆಯನ್ನೂ ಕೊಟ್ಟಿದೆ.

ಆಧಾರ್ ಲಾಕ್ ಮತ್ತು ಬಯೊಮೆಟ್ರಿಕ್ ಲಾಕ್ ವ್ಯವಸ್ಥೆ ಲಭ್ಯ ಇವೆ. ನಿರ್ದಿಷ್ಟ ಅವಧಿಗೆ ಆಧಾರ್ ಬಳಸುವುದಿಲ್ಲ ಎಂದು ನಿರ್ಧರಿಸಿದರೆ ಆ ಅವಧಿಗೆ ಆಧಾರ್ ಅಥವಾ ಬಯೊಮೆಟ್ರಿಕ್ ಅನ್ನು ಲಾಕ್ ಮಾಡುವ ಸೌಲಭ್ಯ ಇದೆ. ಅಗತ್ಯ ಬಂದಾಗ ಲಾಕ್ ತೆರೆಯಬಹುದು. ಇದು ಅತ್ಯಂತ ಸುಲಭದ ಪ್ರಕ್ರಿಯೆ ಎಂದೂ ತಿಳಿಸಿದೆ.

ಗುರುತು ದೃಢೀಕರಣಕ್ಕಾಗಿ ಆಧಾರ್ ಸಂಖ್ಯೆಯನ್ನು ಪಡೆದುಕೊಳ್ಳುವ ಸಂಸ್ಥೆಯು ಆಧಾರ್ ಪಡೆದುಕೊಳ್ಳುವುದರ ಉದ್ದೇಶವನ್ನು ಸ್ಪಷ್ಟಪಡಿಸಬೇಕು. ಜನರು ಕೂಡ ಉದ್ದೇಶವನ್ನು ಕೇಳಿ ತಿಳಿದುಕೊಳ್ಳಬೇಕು ಎಂದು ಯುಐಡಿಎಐ ಹೇಳಿದೆ.

'ತುನಿಷಾ ಮತಾಂತರಕ್ಕೆ ಒತ್ತಡ ಇತ್ತು'



ತುನಿಷಾ ಶರ್ಮಾ

ಠಾಣೆ (ಪಿಟಿಐ): 'ನನ್ನ ಮಗಳು ಇಸ್ಲಾಂಗೆ ಮತಾಂತರವಾಗಬೇಕು ಎಂದು ಸಹ ನಟ ಶೀಜನ್ ಖಾನ್ ಹಾಗೂ ಆತನ ಕುಟುಂಬದ ಸದಸ್ಯರು ಒತ್ತಾಯಿಸುತ್ತಿದ್ದರು' ಎಂದು ಶೂಟಿಂಗ್ ಸೆಟ್‌ನಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿದ್ದ ನಟಿ ತುನಿಷಾ ಶರ್ಮಾ ಅವರ ತಾಯಿ ವನಿತಾ ಶರ್ಮಾ ಶುಕ್ರವಾರ ಆರೋಪ ಮಾಡಿದ್ದಾರೆ.

ಇಲ್ಲಿನ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ತುನಿಷಾ ಆತ್ಮಹತ್ಯೆ ಮಾಡಿಕೊಳ್ಳುವ ಹುಡುಗಿಯಲ್ಲ. ಇದೊಂದು ಕೊಲೆ. ಈ ಎಲ್ಲದಕ್ಕೂ ಶೀಜನ್ ಖಾನ್ ಅವರ ತಾಯಿ ಕಾರಣರಾಗಿದ್ದಾರೆ. ಆದ್ದರಿಂದ ಅವರ ಕುಟುಂಬದವರನ್ನೂ ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಬೇಕು' ಎಂದರು.

'ಆಕೆ ಸೂಕ್ಷ್ಮ ಸ್ವಭಾವದವಳು. ಕೆಲವು ತಿಂಗಳಿಂದ ಆಕೆಯ ಸ್ವಭಾವದಲ್ಲಿ ಬದಲಾವಣೆಗಳಾಗಿದ್ದವು. ಶೀಜನ್ ಕುಟುಂಬಕ್ಕೆ ಬಹಳ ಹತ್ತಿರವಾಗಿದ್ದ ತುನಿಷಾ, ಅವರ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದಳು. ಇದು, ಆಕೆ ನಿಧಾನವಾಗಿ ಮತಾಂತರವಾಗುತ್ತಿದ್ದಳು ಎನ್ನುವುದರ ಸಂಕೇತವಾಗಿತ್ತು' ಎಂದರು. ಶೀಜನ್ ಕುಟುಂಬವು ಮತಾಂತರಕ್ಕೆ ಒತ್ತಾಯಪಡಿಸಿತ್ತೆ ಎಂಬ ಪತ್ರಕರ್ತರ ಪ್ರಶ್ನೆಗೆ 'ಹೌದು' ಎಂದರು.

> ತುನಿಷಾಳನ್ನು ಸಂಚು ಮಾಡಿ ಬಲೆಗೆ ಕೆಡವಲಾಗಿತ್ತು. ಆಕೆಗೆ ಉರ್ದು ಹೇಳಿಕೊಡಲಾಗಿತ್ತು. ಆಕೆ ಉರ್ದು ಮಾತಾಡುವುದಕ್ಕೆ ಪ್ರಾರಂಭಿಸಿದ್ದಳು.
> **ವನಿತಾ ಶರ್ಮಾ,** ತುನಿಷಾ ಶರ್ಮಾ ತಾಯಿ

ಕ್ರೀಡಾಲೋಕದ ಧ್ರುವತಾರೆ ಪೆಲೆ

● ಗಿರೀಶ ದೊಡ್ಡಮನಿ

ತಮ್ಮ ಅಪ್ಪ ಬೀಸಾಕಿದ್ದ ಕಾಲುಚೀಲದಲ್ಲಿ ಕಾಗದ ತುಂಬಿ ಉಂಡೆಕಟ್ಟಿ ಕಿಕ್ ಮಾಡುತ್ತಿದ್ದ ಆ ಹುಡುಗನನ್ನು ನೋಡಿ ನಕ್ಕವರು ಹಲವರು. ಆದರೆ ಆ ಗುಂಗುರು ಕೂದಲಿನ 'ಕಪ್ಪು ಹುಡುಗ' ಫುಟ್‌ಬಾಲ್ ಲೋಕದ 'ಯುಗಪುರುಷ'ನಾಗಿ ಬೆಳೆದಿದ್ದು ಕ್ರೀಡಾಲೋಕದ ಸುವರ್ಣ ಅಧ್ಯಾಯ. ಆ ಬಾಲಕನೇ ಎಡ್ಸನ್ ಅರಾಂಟೆಸ್ ಡು ನಸಿಮೆಂಟೊ ಅಂದರೆ ಪೆಲೆ. ಸಾಂಬಾ ನಾಡು ಬ್ರೆಜಿಲ್ ಮೂರು ಬಾರಿ ಫಿಫಾ ವಿಶ್ವಕಪ್ ಜಯಿಸಲು ಕಾರಣರಾದರು. ಅವರ ಡ್ರಿಬ್ಲಿಂಗ್, ಬೈಸಿಕಲ್ ಕಿಕ್ ಮತ್ತು ಪಾಸಿಂಗ್ ಕೌಶಲಗಳ ಮಿಂಚಿನ ಸಂಚಲನಕ್ಕೆ ಎದುರಾಳಿಗಳು ಆಘಾತಕ್ಕೊಳಗಾಗುತ್ತಿದ್ದರು. ಅಭಿಮಾನಿಗಳು ಮನಸೋಲುತ್ತಿದ್ದರು. 1940ರಲ್ಲಿ ಬ್ರೆಜಿಲ್ ರಾಜಧಾನಿ ರಿಯೊ ಡಿ ಜನೈರೊ ನಗರದ ಉತ್ತರ ದಿಕ್ಕಿನಲ್ಲಿರುವ ಬಾವುರು ಶ್ರಮಜೀವಿಗಳು ಮತ್ತು ಬಡಕುಟುಂಬಗಳು ತುಂಬಿದ್ದ ಊರಿನಲ್ಲಿ ಜನಿಸಿದ್ದರು ಪೆಲೆ.

ಅಪ್ಪ ದಾಂಡಿನೊ (ಝೂವೊ ರಾಮೊಸ್ ಡು ನಸಿಮೆಂಟೊ) ಆರಡಿ ಎತ್ತರಕಾಯದ ಕಟ್ಟುಮಸ್ತಾದ ಸೆಂಟರ್ ಫಾರ್ವರ್ಡ್ ಆಟಗಾರ. ಅಮ್ಮ ಸೆಲೆಸ್ಟಿ ಶಿಸ್ತಿನ ಮಹಿಳೆ. ಮನೆಯಲ್ಲಿ ಬಡತನವಿತ್ತು. ಆದರೆ ಫುಟ್‌ಬಾಲ್ ಪ್ರೀತಿ ಮತ್ತು ಸಭ್ಯತೆ ಶ್ರೀಮಂತವಾಗಿತ್ತು. ಬ್ರೆಜಿಲ್‌ನ ಪ್ರಮುಖ ಕ್ಲಬ್‌ಗಳಲ್ಲಿ ದಾಂಡಿನೊ ಆಡಿದ್ದರು. ಆದರೆ ಆ ಕಾಲದಲ್ಲಿ ಕ್ಲಬ್‌ಗಳಲ್ಲಿ ದೊಡ್ಡ ಮಟ್ಟದ ವೇತನ, ಬೋನಸ್ ಮತ್ತಿತರ ಸೌಲಭ್ಯಗಳನ್ನು ನೀಡುತ್ತಿರಲಿಲ್ಲ. ಇಂತಹದ್ದರಲ್ಲಿ ಪಂದ್ಯವೊಂದರಲ್ಲಿ ದಾಂಡಿನೊ ಮೊಣಕಾಲಿಗೆ ಗಾಯವಾಗುತ್ತದೆ. ಆದರೆ ಸೂಕ್ತ ವೈದ್ಯಕೀಯ ಸೌಲಭ್ಯಗಳಿಲ್ಲದೇ ಕಾಲಕ್ರಮೇಣ ಗಾಯ ಉಲ್ಬಣಿಸಿ ದಾಂಡಿನೊ ಫುಟ್‌ಬಾಲ್ ಬಿಡುತ್ತಾರೆ. ಕೈಯಲ್ಲಿ ಉದ್ಯೋಗವೂ ಇಲ್ಲದ ಕಾರಣ ಕುಟುಂಬ ಅಕ್ಷರಶಃ ಒಪ್ಪೊತ್ತಿನ ಊಟಕ್ಕೂ ಪರದಾಡುವಂತಾಗುತ್ತದೆ. ಮನೆಯಲ್ಲಿ ಪೆಲೆ, ತಮ್ಮ ಝೋಕಾ, ತಂಗಿ ಮರಿಯಾ ಲೂಸಿಯಾ, ಅಜ್ಜಿ ಮತ್ತು ಚಿಕ್ಕಪ್ಪ ಜಾರ್ಜ್ ಸೇರಿದಂತೆ ಏಳು ಮಂದಿ ಇದ್ದರು.

'ಪುಡಿಗಾಸಿಗಾಗಿ ಅಪ್ಪ ಎಲ್ಲೆಲ್ಲೋ ದುಡಿಯುತ್ತಿದ್ದರು. ಅವರಿಗೆ ತಕ್ಕನಾದ ಕೆಲಸ ಸಿಗುತ್ತಿರಲಿಲ್ಲ. ಬಂದ ಅಲ್ಪಸ್ವಲ್ಪ ಹಣದಲ್ಲಿ ಒಪ್ಪೊತ್ತು ಊಟ ಸಿಗುತ್ತಿತ್ತು. ಅದೂ ಬ್ರೆಡ್ ಮತ್ತು ಬಾಳೆಹಣ್ಣಿನ ರೂಪದಲ್ಲಿ. ಎಷ್ಟೇ ಕಠಿಣ ಪರಿಸ್ಥಿತಿ ಇದ್ದರೂ ಅಮ್ಮ ನಮ್ಮನ್ನು ಉಪವಾಸ ಮಲಗಲು ಬಿಡಲಿಲ್ಲ' ಎಂದು ಪೆಲೆ ತಮ್ಮ ಆತ್ಮಚರಿತ್ರೆಯಲ್ಲಿ ಬರೆಯುತ್ತಾರೆ.

ಮನೆಯ ಹಿರಿಮಗನಾದ ಕಾರಣ ತಾವೂ ದುಡಿದು ಕುಟುಂಬಕ್ಕೆ ಆಸರೆಯಾಗಲು ಮುಂದಾಗುವ ಪೆಲೆ, ಚಿಕ್ಕಪ್ಪ ಜಾರ್ಜ್ ಸಹಾಯದಿಂದ ಬೂಟ್ ಪಾಲಿಷ್ ಕಿಟ್ ಖರೀದಿಸುವಲ್ಲಿ ಯಶಸ್ವಿಯಾಗುತ್ತಾರೆ. ಅಪ್ಪ ಆಡುತ್ತಿದ್ದ ಫುಟ್‌ಬಾಲ್ ಕ್ಲಬ್, ರೈಲ್ವೆ ನಿಲ್ದಾಣಗಳಲ್ಲಿ ಬೂಟು ಪಾಲಿಷ್ ಮಾಡಿ ಹಣ ಗಳಿಸಿದರು. ಒಂದೆರಡು ವರ್ಷಗಳ ನಂತರ ಹೆಲ್ತ್ ಕ್ಲಿನಿಕ್‌ನಲ್ಲಿ ಅಪ್ಪನಿಗೆ ಕೆಲಸ ಸಿಕ್ಕಿತು. ಕುಟುಂಬ ನಿಟ್ಟುಸಿರು ಬಿಟ್ಟಿತು. ಆ ಕೂಡಲೇ ಅಮ್ಮ ಸೆಲೆಸ್ತಾ ಪೆಲೆ ಕೈಯಿಂದ ಬೂಟ್ ಪಾಲಿಷ್ ಕಿಟ್ ಕಿತ್ತುಕೊಂಡು, ಶಾಲೆಗೆ ಸೇರಿಸಿದರು. ಮಗ ಚೆನ್ನಾಗಿ ಓದಬೇಕು ದೊಡ್ಡ ವ್ಯಕ್ತಿಯಾಗಬೇಕು ಎಂಬುದು ಅವರ ಆಸೆಯಾಗಿತ್ತು. ಕಿರಿಯ ಮಗ ಝೋಕೊ ವೈದ್ಯನಾದ. ಪೆಲೆ ಓದಿಗಿಂತ ಹೆಚ್ಚಾಗಿ ಫುಟ್‌ಬಾಲ್ ನಲ್ಲಿಯೇ ಕಾಲ ಕಳೆದು ದಿಗ್ಗಜರಾದರು.

ಈ ಹಾದಿಯಲ್ಲಿ ಅವರು ಅನುಭವಿಸಿದ ಸಂಕಷ್ಟಗಳು ಹಲವು. ಶ್ವೇತವರ್ಣೀಯರಿಂದ ಆಗುವ ಅವಮಾನಗಳನ್ನೂ ಮುಗುಳ್ನಗುತ್ತಲೇ ಎದುರಿಸಿದರು. ಅವರೊಳಗೆ ಹುದುಗಿದ್ದ ಕಿಚ್ಚು ಕಾಲುಗಳಲ್ಲಿ ವಿದ್ಯುತ್ ಶಕ್ತಿಯಾಗಿ ಪ್ರವಹಿಸುತ್ತಿತ್ತು. ಶಾಲೆ, ಸ್ಥಳೀಯ ಕ್ಲಬ್‌ಗಳಲ್ಲಿ ಆಟ ರಂಗೇರಿತು. 17ನೇ ವಯಸ್ಸಿಗೆ ರಾಷ್ಟ್ರೀಯ ತಂಡದ ಕದ ತೆರೆಯಿತು. 1958ರ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಆತಿಥೇಯ ಸ್ವೀಡನ್ ವಿರುದ್ಧ ಬ್ರೆಜಿಲ್ ಜಯಭೇರಿ ಬಾರಿಸಿತು. ಪಂದ್ಯಕ್ಕೂ ಮುನ್ನ ಮೊಣಕಾಲಿನ ಗಾಯ ಕಾಡಿತ್ತು. ಚಿಕಿತ್ಸೆ ಪಡೆದು ಕಣ ಕ್ಕಿಳಿದಿದ್ದ ಪೆಲೆ ಆಟ ರಂಗೇರಿತ್ತು. ಯುರೋಪ್ ನೆಲದಲ್ಲಿ ಐರೋಪ್ಯೇತರ ದೇಶವೊಂದು ಗೆದ್ದಿದ್ದು ಅದೇ ಮೊದಲು. ಇದರೊಂದಿಗೆ ಬ್ರೆಜಿಲ್ ದೇಶವೂ ಫುಟ್‌ಬಾಲ್ ಲೋಕದ ಬಲಿಷ್ಠ ಶಕ್ತಿಯಾಗಿ ಹೊರಹೊಮ್ಮಿತು.

1962ರಲ್ಲಿ ಚಿಲಿಯಲ್ಲಿ ನಡೆದ ಫಿಫಾ ವಿಶ್ವಕಪ್ ಟೂರ್ನಿಯಲ್ಲಿಯೂ ಬ್ರೆಜಿಲ್ ಗೆದ್ದು ಇತಿಹಾಸ ಬರೆಯಿತು. 1970ರಲ್ಲಿ ಮೆಕ್ಸಿಕೊದಲ್ಲಿಯೂ ಬ್ರೆಜಿಲ್ ಪಾರಮ್ಯ ಮೆರೆಯಿತು. ಇದಾಗಿ ಒಂದು ವರ್ಷದ ನಂತರ ಪೆಲೆ ತಮ್ಮ ಬೂಟುಗಳನ್ನು ಗೂಟಕ್ಕೆ ನೇತುಹಾಕಿದರು. ಆದರೆ ಅವರ ವ್ಯಕ್ತಿತ್ವದ ಪ್ರಭಾವಳಿ ಫುಟ್‌ಬಾಲ್‌ಗೆ ಮಾತ್ರ ಸೀಮಿತವಾಗಿರಲಿಲ್ಲ.

ಕಳೆದ 6 ದಶಕಗಳಲ್ಲಿ ಮರಡೊನಾ, ಪೆಪೆ, ಜಿನೆದಿನ್ ಜಿದಾನ್, ಬೆಕೆಮ್, ಪೆಪೆ, ಕಾಕಾ, ರೊನಾಲ್ಡಿನೊ, ಕ್ರಿಸ್ಟಿಯಾನೊ ರೊನಾಲ್ಡೊ, ಇತ್ತೀಚೆಗಷ್ಟೇ ಕತಾರ್‌ನಲ್ಲಿ ವಿಶ್ವಕಪ್ ಜಯಿಸಿದ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ, ಅದ್ಭುತ ಆಟದಿಂದ ಮನಗೆದ್ದ ಫ್ರಾನ್ಸ್‌ನ ಕಿಲಿಯನ್ ಎಂಬಾಪೆ, ಬ್ರೆಜಿಲ್‌ನ ನೇಮರ್, ಹೊಸ ಪೀಳಿಗೆಯ ವಿನ್ಸಿಯಸ್ ಜೂನಿಯರ್ ಅವರೆಲ್ಲರೂ ಪ್ರಖರವಾಗಿ ಬೆಳಗಿದ್ದಾರೆ. ಆದರೂ ಅವರೆಲ್ಲರಿಗಿಂತಲೂ ಪೆಲೆ ಪ್ರಭಾವಳಿ ಹೆಚ್ಚು.

ಫುಟ್‌ಬಾಲ್ ಆಟಗಾರರು ಇವತ್ತು ಬಹುಕೋಟಿ ಆದಾಯ ಗಳಿಸುವ ಕುಬೇರರಾಗಿದ್ದಾರೆ. ಪ್ರತಿಷ್ಠಿತ ಕ್ಲಬ್‌ಗಳು ಕೋಟ್ಯಂತರ ಹಣ ಹೂಡುತ್ತಿವೆ. ತಂತ್ರಜ್ಞಾನ ಮುಗಿಲುಮುಟ್ಟಿದೆ. ಸಾಮಾಜಿಕ ಜಾಲತಾಣಗಳು, ಮಾಧ್ಯಮಗಳಲ್ಲಿ ಈ ತಾರೆಗಳು ಸದಾ ಪ್ರಚಾರದಲ್ಲಿರುವಂತೆ ನೋಡಿಕೊಳ್ಳುವ ವೃತ್ತಿಪರ ಸಂಸ್ಥೆಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ. ಆದರೆ ಇವ್ಯಾವೂ ಇಲ್ಲದ ಕಾಲದಲ್ಲಿ ಜನಿಸಿ ಬೆಳಗಿದವರು ಪೆಲೆ. 82ನೇ ವಯಸ್ಸಿನಲ್ಲಿ ಸಾವೊ ಪೌಲೊ ಆಸ್ಪತ್ರೆಯ ಐಸಿಯು ಬೆಡ್‌ನಲ್ಲಿದ್ದಾಗಲೂ ಕತಾರ್ ವಿಶ್ವಕಪ್ ಪಂದ್ಯಗಳನ್ನು ವೀಕ್ಷಿಸಿ ಆಟಗಾರರನ್ನು ಹುರಿದುಂಬಿಸಿದರು. ಅವರಲ್ಲಿ ಫುಟ್‌ಬಾಲ್ ಪ್ರೀತಿ ರಕ್ತಗತವಾಗಿತ್ತು. ಅದಕ್ಕಾಗಿಯೇ ಅವರು ಕ್ರೀಡಾ ಕ್ಷಿತಿಜದ ಧ್ರುವತಾರೆಯಾದರು.

ಫುಟ್‌ಬಾಲ್ ಜಗತ್ತು ಕಂಬನಿ

ಸಾವೊ ಪೌಲೊ (ಎಎಫ್‌ಪಿ): ಕಾಲ್ಚೆಂಡಾಟದ ಸಾರ್ವಕಾಲಿಕ ಶ್ರೇಷ್ಠ ಆಟಗಾರ ಪೆಲೆ (82) ಅವರ ನಿಧನಕ್ಕೆ ಫುಟ್‌ಬಾಲ್ ಜಗತ್ತು ಕಂಬನಿ ಮಿಡಿದಿದೆ. ಬ್ರೆಜಿಲ್‌ನಲ್ಲಿ ಮೂರು ದಿನ ಶೋಕಾಚರಣೆ ಘೋಷಿಸಲಾಗಿದೆ.

ಇಲ್ಲಿನ ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪೆಲೆ ಗುರುವಾರ ರಾತ್ರಿ ನಿಧನರಾಗಿದ್ದರು. ಕರುಳಿನ ಕ್ಯಾನ್ಸರ್ ಉಲ್ಬಣಿಸಿದ್ದರಿಂದ ಅವರನ್ನು ನ.29 ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಬ್ರೆಜಿಲ್‌ನ ವಿವಿಧ ನಗರಗಳಲ್ಲಿ ಅಭಿಮಾನಿಗಳು ತಮ್ಮ ನೆಚ್ಚಿನ ಆಟಗಾರನಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಅಮೆರಿಕದ ಅಧ್ಯಕ್ಷ ಜೋ ಬೈಡನ್, ಮಾಜಿ ಅಧ್ಯಕ್ಷ ಬರಾಕ್ ಒಬಾಮ, ಐಒಸಿ ಮುಖ್ಯಸ್ಥ ಥಾಮಸ್ ಬಾಕ್, ಫುಟ್‌ಬಾಲ್ ಜಗತ್ತಿನ ಮಾಜಿ ಹಾಗೂ ಹಾಲಿ ಆಟಗಾರರು ಒಳಗೊಂಡಂತೆ ಹಲವು ಗಣ್ಯರು ಪೆಲೆ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಮಂಗಳವಾರ ಅಂತ್ಯಕ್ರಿಯೆ: ಪೆಲೆ ಅಂತ್ಯಕ್ರಿಯೆ ಮಂಗಳವಾರ ಸ್ಯಾಂಟೋಸ್ ನಗರದಲ್ಲಿ ನಡೆಯಲಿದೆ ಎಂದು ಅವರು ಈ ಹಿಂದೆ ಆಡಿದ್ದ ಸ್ಯಾಂಟೋಸ್ ಕ್ಲಬ್ ಹೇಳಿದೆ. ಈ ನಗರದಲ್ಲಿ ಏಳು ದಿನ ಶೋಕಾಚರಣೆ ಘೋಷಿಸಲಾಗಿದೆ.

ಮೃತದೇಹವನ್ನು ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಯಿಂದ ಸೋಮವಾರ ಬೆಳಿಗ್ಗೆ ಸ್ಯಾಂಟೋಸ್‌ನಲ್ಲಿರುವ ಕ್ರೀಡಾಂಗಣಕ್ಕೆ ತರಲಾಗುವುದು. ಅಂದು ಬೆಳಿಗ್ಗೆ 10 ರಿಂದ ಮಂಗಳವಾರ ಬೆಳಿಗ್ಗೆ 10ರ ವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ಕ್ಲಬ್‌ನ ಪ್ರಕಟಣೆ ತಿಳಿಸಿದೆ.

ಹೆಸರು	ಎಡ್ಸನ್ ಅರಾಂಟೆಸ್ ಡು ನಸಿಮೆಂಟೊ (ಪೆಲೆ)
ಜನನ	1940, ಅಕ್ಟೋಬರ್ 23
ರಾಷ್ಟ್ರೀಯ ತಂಡ	ಬ್ರೆಜಿಲ್
ಆಡಿದ ಅವಧಿ	1957-1971
ಅಂತರರಾಷ್ಟ್ರೀಯ ಪಂದ್ಯ	92
ಗೋಲುಗಳು	77
ಆಟದ ಶೈಲಿ	ಫಾರ್ವರ್ಡ್, ಅಟ್ಯಾಕಿಂಗ್ ಮಿಡ್‌ಫೀಲ್ಡರ್
ಜೆರ್ಸಿ ಸಂಖ್ಯೆ	10
ಬ್ರೆಜಿಲ್ ಕ್ರೀಡಾ ಸಚಿವ (ಅವಧಿ)	1995-1998
ಗಳಿಸಿದ ಒಟ್ಟು ಗೋಲುಗಳು (ಸ್ನೇಹಪರ, ಟೂರ್ ಗೇಮ್ಸ್ ಸೇರಿ)	1,281 (1,363 ಪಂದ್ಯ)

ಆಡಿದ 92 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ

ಗೆಲುವು 67

ಡ್ರಾ 14

ಸೋಲು 11

ಪ್ರಮುಖ ಗೌರವ ಮತ್ತು ಪುರಸ್ಕಾರಗಳು

- 1978 ಅಂತರರಾಷ್ಟ್ರೀಯ ಶಾಂತಿ ಪುರಸ್ಕಾರ
- 1977 ನೈಟ್ ಕಮಾಂಡರ್ ಆಫ್ ದ ಆರ್ಡರ್ ಆಫ್ ದ ಬ್ರಿಟಿಷ್ ಎಂಪೈರ್
- 2000 ಅರ್ಜೆಂಟೀನಾದ ಡಿಯೆಗೊ ಮರಡೋನಾ ಅವರೊಂದಿಗೆ 'ಶತಮಾನದ ಆಟಗಾರ' ಜಂಟಿ ಪುರಸ್ಕಾರ
- 2000 ಲಾರೆಸ್ ಜೀವಮಾನ ಸಾಧನೆ ಗೌರವ
- 2014 ಫಿಫಾದ ಮೊದಲ ಬ್ಯಾಲನ್ ಡಿ ಒರ್ 'ಪ್ರಿ ಡಿ ಆನರ್'
- 2016 ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯಿಂದ ಒಲಿಂಪಿಕ್ ಆರ್ಡರ್ ಗೌರವ

ವಿಶ್ವಕಪ್ ಸಾಧನೆ

ಆಡಿದ ಟೂರ್ನಿಗಳು (ಆತಿಥ್ಯ)	1958 (ಸ್ವೀಡನ್), 1962 (ಚಿಲಿ), 1966 (ಇಂಗ್ಲೆಂಡ್), 1970 (ಮೆಕ್ಸಿಕೊ)
ಜಯಿಸಿದ ಆವೃತ್ತಿಗಳು	1958, 1962, 1970
ಪಂದ್ಯ	14
ಗೋಲುಗಳು	12

ಆಡಿದ ಪ್ರಮುಖ ಕ್ಲಬ್‌ಗಳು

ಕ್ಲಬ್	ಅವಧಿ	ಪಂದ್ಯ	ಗೋಲು
ಸ್ಯಾಂಟೊಸ್	1956-74	618	636
ನ್ಯೂಯಾರ್ಕ್ ಕಾಸ್ಮೊಸ್	1975-77	64	37

ಪ್ರಮುಖ ಸಾಧನೆಗಳು

- ಮೂರು ವಿಶ್ವಕಪ್ ಜಯಿಸಿದ ಮೊದಲ ಆಟಗಾರ
- ಬ್ರೆಜಿಲ್ ಪರ ಜಂಟಿ ಅತಿ ಹೆಚ್ಚು ಗೋಲು (77) ದಾಖಲಿಸಿದ ಆಟಗಾರ. ನೇಮರ್ ಕೂಡ ಇಷ್ಟೇ ಸಂಖ್ಯೆಯ ಗೋಲು ಗಳಿಸಿದ್ದಾರೆ.
- ವಿಶ್ವಕಪ್ ಟೂರ್ನಿಯಲ್ಲಿ ಗೋಲು ಗಳಿಸಿದ ಅತಿ ಕಿರಿಯ ಆಟಗಾರ (17 ವರ್ಷ 239 ದಿನಗಳು) ಮತ್ತು ವಿಶ್ವಕಪ್ ಜಯಿಸಿದ (1958) ತಂಡದಲ್ಲಿದ್ದ ಅತಿ ಕಿರಿಯ (17 ವರ್ಷ 249 ದಿನ)
- ವಿಶ್ವಕಪ್ ಟೂರ್ನಿಯಲ್ಲಿ (1958) ಹ್ಯಾಟ್ರಿಕ್ ಗಳಿಸಿದ ಅತಿ ಕಿರಿಯ ಆಟಗಾರ. ಜೂನ್ 24ರಂದು ಫ್ರಾನ್ಸ್ ಎದುರಿನ ಸೆಮಿಫೈನಲ್ ಪಂದ್ಯದಲ್ಲಿ ಅವರು ಈ ಸಾಧನೆ ಮಾಡಿದ್ದರು. ಅದೇ ಟೂರ್ನಿಯ ಫೈನಲ್‌ನಲ್ಲಿ ಸ್ವೀಡನ್ ಎದುರು ಗೋಲು ಗಳಿಸಿ ಪ್ರಶಸ್ತಿ ಸುತ್ತಿನಲ್ಲಿ ಈ ಶ್ರೇಯ ಪಡೆದ ಅತಿ ಕಿರಿಯ ಆಟಗಾರ ಎನಿಸಿಕೊಂಡಿದ್ದರು.

ಮರಡೋನಾ ಮತ್ತು ಪೆಲೆ

ಪೆಲೆ ಹೆಸರು ಬಂದಿದ್ದು....

ಪೆಲೆಯ ಅಪ್ಪ, ಅಮ್ಮನಿಗೆ ವಿಜ್ಞಾನಿ ಥಾಮಸ್ ಆಲ್ವಾ ಎಡಿಸನ್ ಹೆಸರು ಬಹಳ ಅಚ್ಚುಮೆಚ್ಚು. ಅದಕ್ಕಾಗಿಯೇ ಮಗನಿಗೂ ಎಡಿಸನ್ ಎಂದೇ ನಾಮಕರಣ ಮಾಡಿದ್ದರು. ಆದರೆ ಶಾಲೆಯಲ್ಲಿ ದಾಖಲೆ ಬರೆಯುವವರು ಮಾಡಿದ ಲೋಪದಿಂದಾಗಿ ಇಂಗ್ಲಿಷ್ ಪದದಲ್ಲಿ ಐ ಅಕ್ಷರ ಬಿಟ್ಟುಹೋಯಿತು. ಎಡಿಸನ್ ಎಡ್ಸನ್ ಆಯಿತು. ಅವರನ್ನು ಎಲ್ಲರೂ ಪ್ರೀತಿಯಿಂದ 'ಡಿಕೊ' ಎಂದೇ ಕರೆಯುತ್ತಿದ್ದರು. ಅವರಿಗೆ ಪೆಲೆ ಹೆಸರು ಬಂದಿದ್ದು ಫುಟ್‌ಬಾಲ್ ಆಟದಲ್ಲಿ ಗಮನ ಸೆಳೆದ ಕಾರಣಕ್ಕಾಗಿಯೇ. ವಾಸ್ಕೋ ಡ ಗಾಮಾ ಕ್ಲಬ್ ಗೋಲ್‌ಕೀಪರ್ ಬಿಲೆ, ಎಡ್ಸನ್‌ಗೆ ಅಚ್ಚುಮೆಚ್ಚಿನ ಆಟಗಾರನಾಗಿದ್ದರು. ಎಡ್ಸನ್ ಅವರನ್ನು ಬಿಲೆ ಎಂದು ಕರೆಯುತ್ತ ಅದು ಕಾಲಕ್ರಮೇಣ ಪೆಲೆ ಅಥವಾ ಪಿಲೆ ಆಯಿತು.

ಪುಟಿನ್– ಜಿನ್‌ಪಿಂಗ್ ಮಾತುಕತೆ: ಉಕ್ರೇನ್ ಮೇಲೆ ಭಾರಿ ದಾಳಿಗೆ ಸಿದ್ಧತೆ

ಕೀವ್ (ಎಪಿ): ಉಕ್ರೇನ್ ಮೇಲೆ ಹತ್ತು ತಿಂಗಳಿನಿಂದ ನಡೆಯುತ್ತಿರುವ ಯುದ್ಧದಲ್ಲಿ ರಷ್ಯಾಕ್ಕೆ ಆಗಿರುವ ಹಿನ್ನಡೆ ಸರಿದೂಗಿಸುವ ನಿಟ್ಟಿನಲ್ಲಿ ರಷ್ಯಾ ಮತ್ತು ಚೀನಾ ದ್ವಿಪಕ್ಷೀಯ ಸಹಕಾರ ಹೆಚ್ಚಿಸಲು ವ್ಲಾಡಿಮಿರ್ ಪುಟಿನ್ ಮತ್ತು ಷಿ ಜಿನ್‌ಪಿಂಗ್ ಶುಕ್ರವಾರ ಪ್ರತಿಜ್ಞೆ ಮಾಡಿದರು.

ಇದರ ಬೆನ್ನಲ್ಲೇ ಉಕ್ರೇನ್ ಮೇಲೆ ಮತ್ತೊಂದು ಸುತ್ತಿನ ಭಾರಿ ಕ್ಷಿಪಣಿ, ಬಾಂಬ್ ಹಾಗೂ ಡ್ರೋನ್‌ಗಳ ದಾಳಿ ರಷ್ಯಾ ಪಡೆಗಳಿಂದ ನಡೆಯುವ ಸಾಧ್ಯತೆಗಳು ದಟ್ಟವಾಗಿವೆ.

ಪುಟಿನ್ ಮತ್ತು ಜಿನ್‌ಪಿಂಗ್ ಅವರು ವರ್ಚುವಲ್ ಮೂಲಕ ದ್ವಿಪಕ್ಷೀಯ ಮಾತುಕತೆ ನಡೆಸಿದ್ದು, ಮಾತುಕತೆಯಲ್ಲಿ ಉಕ್ರೇನ್ ಯುದ್ಧದ ಬಗ್ಗೆ ನೇರ ಉಲ್ಲೇಖ ಮಾಡಲಿಲ್ಲ. ಆದರೆ, ಉಭಯ ರಾಷ್ಟ್ರಗಳು ವ್ಯಾಖ್ಯಾನಿಸುತ್ತಿರುವ 'ಭೌಗೋಳಿಕ ರಾಜಕೀಯ ಉದ್ವಿಗ್ನತೆ' ಮತ್ತು 'ಅಂತರರಾಷ್ಟ್ರೀಯ ಕಠಿಣ ಪರಿಸ್ಥಿತಿ' ವೇಳೆ ದ್ವಿಪಕ್ಷೀಯ ಸಹಕಾರ ವೃದ್ಧಿಯ ಪ್ರತಿಜ್ಞೆ ಮತ್ತು ಸಂಬಂಧ ಬಲಪಡಿಸುವಿಕೆ ತೀರ್ಮಾನವನ್ನು ಉಭಯ ನಾಯಕರು ಪ್ರಶಂಸಿಸಿದರು.

'ಉಲ್ಬಣಿಸುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಯ ಹಿನ್ನೆಲೆಯಲ್ಲಿ ರಷ್ಯಾ– ಚೀನಾ ಕಾರ್ಯತಂತ್ರದ ಸಹಭಾಗಿತ್ವವು ಸ್ಥಿರವಾಗಿ ಬೆಳೆಯುತ್ತಿರುವುದು ಮಹತ್ವದ್ದಾಗಿದೆ' ಎಂದು ಪುಟಿನ್ ಬಣ್ಣಿಸಿದರು.

ಜಿನ್‌ಪಿಂಗ್ ಜತೆಗಿನ ವರ್ಚುವಲ್ ಮಾತುಕತೆಯಲ್ಲಿ ಪುಟಿನ್, ಸೇನೆಗಳ ಸಹಕಾರವು ನಮ್ಮ ನಡುವಿನ ಸಂಬಂಧದಲ್ಲಿ 'ವಿಶೇಷ ಸ್ಥಾನ' ಹೊಂದಿದೆ. ಉಭಯ ರಾಷ್ಟ್ರಗಳ ಸಶಸ್ತ್ರ ಪಡೆಗಳ ನಡುವಿನ ಸಹಕಾರ ಬಲಪಡಿಸುವ ಗುರಿಯನ್ನು ರಷ್ಯಾ ಹೊಂದಿದೆ. ನಮ್ಮ ಸ್ನೇಹದ ವಿಚಾರದಲ್ಲಿ ಚೀನಾಕ್ಕೆ ಯಾವುದೇ ಮಿತಿ ಇರುವುದಿಲ್ಲ' ಎಂದು ಹೇಳಿದರು.

'ಕಠಿಣ ಮತ್ತು ನೇರ ಅಂತರರಾಷ್ಟ್ರೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರಷ್ಯಾ ಜತೆಗಿನ ಕಾರ್ಯತಂತ್ರದ ಸಹಭಾಗಿತ್ವ ಹೆಚ್ಚಿಸಲು ಬೀಜಿಂಗ್ ಸಿದ್ಧವಾಗಿದೆ. ಉಭಯ ದೇಶಗಳ ಜನರ ಅನುಕೂಲಕ್ಕಾಗಿ, ಪರಸ್ಪರ ಅಭಿವೃದ್ಧಿ ಅವಕಾಶಗಳನ್ನು ಒದಗಿಸಲು, ವಿಶ್ವದಾದ್ಯಂತ ಸ್ಥಿರತೆ ಕಾಯುವ ಹಿತದೃಷ್ಟಿಯಿಂದ ಜಾಗತಿಕ ಪಾಲುದಾರಿಕೆ ವಹಿಸಲಿದ್ದೇವೆ' ಎಂದು ಷಿ ಜಿನ್‌ಪಿಂಗ್ ಹೇಳಿದರು.

ವಸಂತ ಋತುವಿನ ವೇಳೆಗೆ ಚೀನಾಕ್ಕೆ ಭೇಟಿ ನೀಡುವಂತೆ ಪುಟಿನ್ ಅವರಿಗೆ ಷಿ ಜಿನ್‌ಪಿಂಗ್ ಆಹ್ವಾನ ನೀಡಿದರು.

ತೈವಾನ್ ತನ್ನದೆಂದು ಹಕ್ಕು ಚಲಾಯಿಸುತ್ತಿರುವ ಚೀನಾಕ್ಕೆ ಅಮೆರಿಕ ಜತೆಗಿನ ಸಂಬಂಧ ಹದಗೆಟ್ಟಿದೆ. ತೈವಾನ್ ದ್ವೀಪದ ಸುತ್ತ ಉದ್ವಿಗ್ನತೆ ಹೆಚ್ಚುತ್ತಿರುವ ಮಧ್ಯೆ ಚೀನಾಕ್ಕೆ ರಷ್ಯಾ ಬಲವಾದ ಬೆಂಬಲ ನೀಡಿದೆ.

ಉಕ್ರೇನ್ ಮೇಲೆ ಆಕ್ರಮಣ ಆರಂಭವಾದಾಗಿನಿಂದ ಮಾಸ್ಕೊ ಮತ್ತು ಬೀಜಿಂಗ್ ನಡುವೆ ಸಂಬಂಧಗಳು ಬಲವಾಗಿ ಬೆಳೆದಿವೆ. ಕಳೆದ ವಾರವಷ್ಟೇ, ಉಭಯ ರಾಷ್ಟ್ರಗಳ ಸೇನಾ ಪಡೆಗಳು ಪೂರ್ವ ಚೀನಾ ಸಮುದ್ರದಲ್ಲಿ ಜಂಟಿ ನೌಕಾ ತಾಲೀಮು ನಡೆಸಿದವು.

ಸಂಕ್ಷಿಪ್ತ ಸುದ್ದಿ

ಕ್ಯಾಸಿನೊದಲ್ಲಿ ಅಗ್ನಿ ಅವಘಡ: ಸಾವಿನ ಸಂಖ್ಯೆ 25ಕ್ಕೆ ಏರಿಕೆ

ಪುನಾಮ್ ಪೆನ್ (ಎಪಿ): ಗ್ರ್ಯಾಂಡ್ ಡೈಮಂಡ್ ಸಿಟಿ ಕ್ಯಾಸಿನೊದಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಸಾವಿಗೀಡಾದವರ ಸಂಖ್ಯೆ 25ಕ್ಕೆ ಏರಿಕೆಯಾಗಿದೆ.

'ಶುಕ್ರವಾರ ಬೆಳಿಗ್ಗೆ ಹೊತ್ತಿಗೆ ಒಟ್ಟು 25 ಮೃತದೇಹಗಳು ದೊರಕಿದ್ದವು. ಕೆಲ ಮೃತದೇಹಗಳು ಕೋಣೆಯೊಳಗೆ, ಇನ್ನೂ ಕೆಲವು ಮೆಟ್ಟಿಲುಗಳ ಹತ್ತಿರ ದೊರಕಿದವು' ಎಂದು ಪ್ರಾಂತೀಯ ಮಾಹಿತಿ ವಿಭಾಗದ ನಿರ್ದೇಶಕ ಸೆಕ್ ಸೊಖೊಂ ಹೇಳಿದರು.

'ಪತ್ತೆ ಕಾರ್ಯಾಚರಣೆ ಮುಂದುವರಿದಿದೆ. ಮುಚ್ಚಿದ ಕೋಣೆಯೊಳಗೆ, ಕಟ್ಟಡದ ಅವಶೇಷಗಳ ಕೆಳಗೆ ಇನ್ನಷ್ಟು ಮೃತದೇಹಗಳು ಪತ್ತೆಯಾಗಬಹುದು. ಆದ್ದರಿಂದ ಸಾವಿನ ಸಂಖ್ಯೆ ಇನ್ನಷ್ಟು ಏರಿಕೆಯಾಗುವ ಸಂಭವವಿದೆ' ಎಂದರು.

'ವಾಲ್ ಆಫ್ ಶೇಮ್' ನೆಲಸಮಕ್ಕೆ ಆದೇಶ

ಲಿಮಾ, ಪೆರು (ಎಎಫ್‌ಪಿ): ಶ್ರೀಮಂತರು ಮತ್ತು ಬಡವರನ್ನು ಪ್ರತ್ಯೇಕಿಸುತ್ತಿದ್ದ ಗೋಡೆಯನ್ನು ನೆಲಸಮ ಮಾಡುವಂತೆ ಪೆರುವಿನ ಕೋರ್ಟ್ ಆದೇಶಿಸಿದೆ.

'ಇದು ತಾರತಮ್ಯದ ಗೋಡೆ.. ಸಾಮಾಜಿಕ ಸ್ತರದ ಆಧಾರದಲ್ಲಿ ಪೆರು ಜನರನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಅದು ಸ್ವೀಕಾರಾರ್ಹವೂ ಅಲ್ಲ' ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಗೋಡೆಯನ್ನು ನೆಲಸಮ ಮಾಡಲು 180 ದಿನಗಳ ಗಡುವು ನಿಗದಿ ಮಾಡಿದೆ. 'ವಾಲ್ ಆಫ್ ಶೇಮ್' ಎಂದು ಕರೆಯಲಾಗುವ ಗೋಡೆಯು 10 ಕಿ.ಮೀ ಉದ್ದ ಮತ್ತು ಕೆಲವು ಕಡೆಗಳಲ್ಲಿ 2 ಮೀಟರ್ ಎತ್ತರವಿದೆ. ಗೋಡೆಯ ಮೇಲೆ ಮುಳ್ಳಿನ ತಂತಿಗಳನ್ನು ಹಾಕಲಾಗಿದೆ.1980ರಲ್ಲಿ ಗೋಡೆಯನ್ನು ನಿರ್ಮಿಸಲಾಗಿತ್ತು. ಅನಂತರವೂ ಅಕ್ರಮ ಭೂ ಒತ್ತುವರಿ ತಡೆಗೆ ಗೋಡೆಯನ್ನು ವಿಸ್ತರಿಸಲಾಗಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,191
ಇಂದಿನ ಅಂತ್ಯ	18,105
▼	86
ದಿನದ ಕನಿಷ್ಠ	18,080

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹560
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1610)
ಸೋಯಾ (ರಿಫೈನ್ಡ್)	₹1300 (1290)
ಸೂರ್ಯಕಾಂತಿ (ರಿಫೈನ್ಡ್)	₹1325 (1325)
ಪಾಮೋಲಿನ್	₹960 (955)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹500-1000

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13650
ಎಸಿ	₹7000
ಆರ್‌ಪಿ	₹8000
ಆರ್‌ಸಿ	₹4615

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹133
ಆರ್‌ಎಸ್‌ಎಸ್-5	₹124.50
ಗುಡ್ ಲಾಟ್	₹118.50

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹16000-18000
2ನೇ ದರ್ಜೆ	₹12000-15000

ಅದಾನಿ ಸಮೂಹದ ಕೈಗೆ ಎನ್‌ಡಿಟಿವಿ ನಿಯಂತ್ರಣ

ನವದೆಹಲಿ (ಪಿಟಿಐ): ನ್ಯೂ ಡೆಲ್ಲಿ ಟೆಲಿವಿಷನ್ ಲಿಮಿಟೆಡ್‌ನ (ಎನ್‌ಡಿಟಿವಿ) ಸ್ಥಾಪಕರಾದ ಪ್ರಣಯ್ ರಾಯ್ ಮತ್ತು ಅವರ ಪತ್ನಿ ರಾಧಿಕಾ ರಾಯ್ ಹೊಂದಿರುವ ಒಟ್ಟು ಶೇಕಡ 32.26ರಷ್ಟು ಷೇರುಪಾಲಿನಲ್ಲಿ ಶೇ 27.26ರಷ್ಟನ್ನು ಸ್ವಾಧೀನಪಡಿಸಿಕೊಂಡಿರುವುದಾಗಿ ಅದಾನಿ ಸಮೂಹ ಶುಕ್ರವಾರ ತಿಳಿಸಿದೆ.

ಅದಾನಿ ಸಮೂಹಕ್ಕೆ ಶೇ 27.26ರಷ್ಟು ಷೇರುಗಳನ್ನು ಮಾರಾಟ ಮಾಡುತ್ತಿರುವುದಾಗಿ ಎನ್‌ಡಿಟಿವಿ ಪ್ರವರ್ತಕರು ಡಿಸೆಂಬರ್ 23ರಂದು ಘೋಷಿಸಿದ್ದರು.

ಅದಾನಿ ಸಮೂಹವು ಪ್ರತಿ ಷೇರಿಗೆ ₹342.65ರಂತೆ ಎನ್‌ಡಿಟಿವಿ ಪ್ರವರ್ತಕರ 1.75 ಕೋಟಿ ಷೇರುಗಳನ್ನು ಸ್ವಾಧೀನಪಡಿಸಿ ಕೊಂಡಿದೆ. ಇದರಿಂದಾಗಿ ಸ್ವಾಧೀನದ ಒಟ್ಟು ಮೊತ್ತವು ₹602.30 ಕೋಟಿ ಆಗಿದೆ.

ಈ ಸ್ವಾಧೀನದ ಬಳಿಕ ಅದಾನಿ ಸಮೂಹವು ಎನ್‌ಡಿಟಿವಿಯಲ್ಲಿ ಶೇ 69.71ರಷ್ಟು ಷೇರುಪಾಲನ್ನು ಹೊಂದಿದಂತಾಗಿದೆ.

ಷೇರು ಮಾರಾಟದ ನಂತರ ಪ್ರವರ್ತಕರ ಬಳಿ ಎನ್‌ಡಿಟಿವಿಯ ಶೇ 5ರಷ್ಟು ಷೇರುಪಾಲು ಮಾತ್ರವೇ ಉಳಿದಿದೆ.

ಮೂಲಸೌಕರ್ಯ: ಶೇ 5.4 ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಎಂಟು ಮೂಲಸೌಕರ್ಯ ವಲಯಗಳು ನವೆಂಬರ್‌ನಲ್ಲಿ ಶೇಕಡ 5.4ರಷ್ಟು ಬೆಳವಣಿಗೆ ಕಂಡಿವೆ. 2021ರ ಅಕ್ಟೋಬರ್‌ನಲ್ಲಿ ಶೇ 3.2ರಷ್ಟು ಬೆಳವಣಿಗೆ ಕಂಡಿದ್ದವು.

ಕಲ್ಲಿದ್ದಲು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳ ಉತ್ತಮ ಬೆಳವಣಿಗೆಯಿಂದಾಗಿ ಒಟ್ಟಾರೆ ಬೆಳವಣಿಗೆ ಪ್ರಮಾಣ ಹೆಚ್ಚಾಗಿದೆ.

ಕಚ್ಚಾ ತೈಲ, ನೈಸರ್ಗಿಕ ಅನಿಲ ಮತ್ತು ಸಂಸ್ಕರಣಾ ಉತ್ಪನ್ನಗಳು ನವೆಂಬರ್‌ನಲ್ಲಿ ನಕಾರಾತ್ಮಕ ಬೆಳವಣಿಗೆ ಕಂಡಿವೆ. ಎಂಟು ವಲಯಗಳ ಬೆಳವಣಿಗೆಯು ಅಕ್ಟೋಬರ್‌ನಲ್ಲಿ ಶೇ 0.9ಕ್ಕೆ ಕುಸಿತ ಕಂಡಿತ್ತು.

ನವೆಂಬರ್‌ನಲ್ಲಿ ಕಲ್ಲಿದ್ದಲು ಉತ್ಪಾದನೆ ಶೇ 12.3ರಷ್ಟು, ರಸಗೊಬ್ಬರ ಶೇ 6.4ರಷ್ಟು, ಉಕ್ಕು ಶೇ 10.8ರಷ್ಟು, ಸಿಮೆಂಟ್ ಶೇ 28.6ರಷ್ಟು ಮತ್ತು ವಿದ್ಯುತ್ ಉತ್ಪಾದನೆ ಶೇ 12.1ರಷ್ಟು ಹೆಚ್ಚಾಗಿದೆ.

ಏಪ್ರಿಲ್–ನವೆಂಬರ್ ಅವಧಿಯಲ್ಲಿ ಎಂಟು ವಲಯಗಳ ಬೆಳವಣಿಗೆ ಶೇ 8ರಷ್ಟು ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ 13.9ರಷ್ಟು ಬೆಳವಣಿಗೆ ಕಂಡುಬಂದಿತ್ತು.

ಈ ಮೂಲಸೌಕರ್ಯ ವಲಯಗಳು ದೇಶದ ಕೈಗಾರಿಕಾ ಉತ್ಪಾದನೆ ಸೂಚ್ಯಂಕಕ್ಕೆ (ಐಐಪಿ) ಶೇ 40.27ರಷ್ಟು ಕೊಡುಗೆ ನೀಡುತ್ತಿವೆ. ನವೆಂಬರ್ ತಿಂಗಳ ಐಐಪಿ ಅಂಕಿ–ಅಂಶವು ಜನವರಿ ತಿಂಗಳ ಎರಡನೇ ವಾರದಲ್ಲಿ ಬಿಡುಗಡೆ ಆಗುವ ನಿರೀಕ್ಷೆ ಇದೆ.

ಅಡುಗೆ ಎಣ್ಣೆ: ಆಮದು ಸುಂಕ ವಿನಾಯಿತಿ ವಿಸ್ತರಣೆ

ಮುಂಬೈ (ರಾಯಿಟರ್ಸ್): ತಾಳೆ, ಸೋಯಾ ಮತ್ತು ಸೂರ್ಯಕಾಂತಿ ಎಣ್ಣೆ ಆಮದು ಸುಂಕಕ್ಕೆ ನೀಡಿರುವ ವಿನಾಯಿತಿಯು 2024ರ ಮಾರ್ಚ್ 31ರವರೆಗೂ ಮುಂದುವರಿಯಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಗಳ ದರವು ದಾಖಲೆ ಮಟ್ಟಕ್ಕೆ ಏರಿಕೆ ಕಂಡಿದ್ದರಿಂದಾಗಿ ಭಾರತವು 2021ರ ಮಧ್ಯಭಾಗದಿಂದ ಆಮದು ಸುಂಕವನ್ನು ಕಡಿಮೆ ಮಾಡಿತು.

ಈ ಸುಂಕ ವಿನಾಯಿತಿಯು 2023ರ ಮಾರ್ಚ್ 31ಕ್ಕೆ ಕೊನೆಯಾಗಲಿದೆ. ಹೀಗಾಗಿ ಸರ್ಕಾರವು ಸುಂಕ ವಿನಾಯಿತಿ ಪ್ರಯೋಜನವನ್ನು ಇನ್ನೂ ಒಂದು ವರ್ಷದವರೆಗೆ ವಿಸ್ತರಣೆ ಮಾಡಿ ಗುರುವಾರ ತಡರಾತ್ರಿ ಅಧಿಸೂಚನೆ ಹೊರಡಿಸಿದೆ.

ಭಾರತವು ಸದ್ಯ ಕಚ್ಚಾ ತಾಳೆ ಎಣ್ಣೆ ಆಮದು ಮೇಲೆ ಶೇಕಡ 5.5ರಷ್ಟು ಸುಂಕ ವಿಧಿಸುತ್ತಿದೆ. 2021ರ ಆರಂಭದಲ್ಲಿ ಸುಂಕವು ಶೇ 35.75ರಷ್ಟು ಇತ್ತು.

ಭಾರತವು ತಾಳೆ ಎಣ್ಣೆಯನ್ನು ಇಂಡೊನೇಷ್ಯಾ ಮತ್ತು ಮಲೇಷ್ಯಾದಿಂದ ಆಮದು ಮಾಡಿಕೊಳ್ಳುತ್ತಿದೆ. ಸೋಯಾ ಬೀನ್ ಮತ್ತು ಸೂರ್ಯಕಾಂತಿ ಎಣ್ಣೆಗಳನ್ನು ಅರ್ಜೆಂಟೀನಾ, ಬ್ರೆಜಿಲ್, ಉಕ್ರೇನ್ ಮತ್ತು ರಷ್ಯಾದಿಂದ ತರಿಸಿಕೊಳ್ಳುತ್ತಿದೆ.

ರೂಪಾಯಿ: ಕಳಪೆ ಸಾಧನೆ

ಮುಂಬೈ (ರಾಯಿಟರ್ಸ್): 2022ರಲ್ಲಿ ಭಾರತ ರೂಪಾಯಿಯು ಏಷ್ಯಾದಲ್ಲಿ ಅತ್ಯಂತ ಕಳಪೆ ಸಾಧನೆ ತೋರಿದ ಕರೆನ್ಸಿಯಾಗಿದೆ.

ರೂಪಾಯಿ ಈ ವರ್ಷದಲ್ಲಿ ಒಟ್ಟು ಶೇಕಡ 11.3ರಷ್ಟು ಕುಸಿತ ಕಂಡಿದೆ. 2013ರ ನಂತರದ ಅತ್ಯಂತ ದೊಡ್ಡ ಕುಸಿತ ಇದು.

2021ರ ಕೊನೆಯಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ₹ 74.33 ಆಗಿತ್ತು. 2022ರ ಕೊನೆಯಲ್ಲಿ ರೂಪಾಯಿ ಮೌಲ್ಯವು ಡಾಲರ್ ಎದುರು ₹ 82.72ಕ್ಕೆ (ಡಿ. 29ರ ಮೌಲ್ಯ) ತಲುಪಿದೆ.

ರಷ್ಯಾ–ಉಕ್ರೇನ್ ಯುದ್ಧದ ಕಾರಣದಿಂದಾಗಿ ಕಚ್ಚಾ ತೈಲದ ಬೆಲೆಯಲ್ಲಿ ಆದ ಹೆಚ್ಚಳ ಕೂಡ ರೂಪಾಯಿ ಮೌಲ್ಯ ಕುಸಿತಕ್ಕೆ ಇಂಬು ಕೊಟ್ಟಿತು. ಹೊಸ ವರ್ಷದ ಮೊದಲ ತ್ರೈಮಾಸಿಕದಲ್ಲಿ ರೂಪಾಯಿ ಮೌಲ್ಯವು ₹ 81.50ರಿಂದ ₹ 83.50ರ ನಡುವೆ ಇರಲಿದೆ ಎಂದು ವರ್ತಕರು ಹಾಗೂ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

30–12-2022

ಜಾವಾ 70/80(ಹೊಸ)	11550-11600
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10900-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಸೋಯಾ ಕಚ್ಚಾ	--- (1230)
ಪಾಮ್ ವಾರದ ಡೆಲಿವರಿ	960 (960)
ಸೂರ್ಯಕಾಂತಿ ಎಣ್ಣೆ ಕಚ್ಚಾ	1230 (1230)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

54,650 (54,450)

ಬೆಳ್ಳಿ ಕೆ.ಜಿ 68,100 (67,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಹೊಸನಗರ	
ಕೆಂಪುಗೋಟು	30211-37009
ರಾಶಿ	44170-46419
ಕಾರ್ಕಳ	
ಹೊಸತು	30000-37500
ಹಳತು	40000-54500
ಕುಮಟ	
ಚಿಪ್ಪು	25509-31689
ಕೋಕ	16809-28589
ಹಳೆಚಾಲಿ	31869-34739
ಹೊಸಚಾಲಿ	31869-34739
ಕುಂದಾಪುರ	
ಹಳೆಚಾಲಿ	53000-55000
ಹೊಸಚಾಲಿ	40000-47500
ಶಿವಮೊಗ್ಗ	
ಬೆಟ್ಟೆ	46000-46000
ಗೊರಬಲು	17001-34501
ರಾಶಿ	43869-45989
ಸರಕು	53869-76993
ಸಿದ್ದಾಪುರ	
ಬಿಳಿಗೋಟು	29299-33809
ಚಾಲಿ	37899-42000
ಕೋಕ	26319-31919
ಕೆಂಪುಗೋಟು	29699-31599
ರಾಶಿ	42899-45099
ತಟ್ಟಿಬೆಟ್ಟೆ	39699-42699
ಶಿರಸಿ	
ಬೆಟ್ಟೆ	35019-42989
ಬಿಳಿಗೋಟು	20699-35260
ಚಾಲಿ	34099-42361
ಕೆಂಪುಗೋಟು	25199-34899
ರಾಶಿ	40600-45189
ಯಲ್ಲಾಪುರ	
ಬಿಳಿಗೋಟು	24299-34051
ಹಳೆಚಾಲಿ	36329-41299
ಹೊಸಚಾಲಿ	31099-34860
ಕೋಕ	16899-29299
ಕೆಂಪುಗೋಟು	24899-34136
ರಾಶಿ	42179-52389
ತಟ್ಟಿಬೆಟ್ಟೆ	35970-41500
ಆಪಿ	53779-53779

ಹಣದುಬ್ಬರ, ಜಾಗತಿಕ ರಾಜಕೀಯ ಬಿಕ್ಕಟ್ಟು: ತಜ್ಞರ ನಿರೀಕ್ಷೆ

2023ರಲ್ಲಿ ಚಿನ್ನದ ಬೆಲೆ ₹60 ಸಾವಿರಕ್ಕೆ?

ಮುಂಬೈ (ಪಿಟಿಐ): ಜಾಗತಿಕ ರಾಜಕೀಯ ಬಿಕ್ಕಟ್ಟಿನಿಂದಾಗಿ 2023ರಲ್ಲಿ ಹೂಡಿಕೆದಾರರು ಹಣವನ್ನು ಹೆಚ್ಚು ಸುರಕ್ಷಿತವಾದ ಕಡೆಗಳಲ್ಲಿ ತೊಡಗಿಸಲು ಮುಂದಾಗಲಿದ್ದಾರೆ. ಇದರಿಂದಾಗಿ ಚಿನ್ನದ ಧಾರಣೆ 2023ರಲ್ಲಿ 10 ಗ್ರಾಂಗೆ ₹ 60 ಸಾವಿರವನ್ನು ತಲುಪುವ ಸಾಧ್ಯತೆ ಇದೆ.

ಚಿನ್ನದ ಮಾರುಕಟ್ಟೆಯ ಪಾಲಿಗೆ 2022ನೇ ಇಸವಿಯು ನಿರೀಕ್ಷೆಗಿಂತಲೂ ಹೆಚ್ಚು ಅಸ್ಥಿರವಾಗಿತ್ತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರ್ಚ್‌ನಲ್ಲಿ ಒಂದು ಔನ್ಸ್‌ಗೆ (28.34 ಗ್ರಾಂ) 2,070 ಡಾಲರ್‌ಗೆ ತಲುಪಿದ್ದ ಚಿನ್ನದ ದರವು ನವೆಂಬರ್ ವೇಳೆಗೆ ಒಂದು ಔನ್ಸ್‌ಗೆ 1,616 ಡಾಲರ್‌ಗೆ ಇಳಿಕೆ ಕಂಡಿತು. ಆ ಬಳಿಕ ಚಿನ್ನದ ಬೆಲೆ ಚೇತರಿಕೆ ಹಾದಿಯಲ್ಲಿಯೇ ಸಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

2022ರ ಆರಂಭದಲ್ಲಿ ಚಿನ್ನದ ದರ ಒಂದು ಔನ್ಸ್‌ಗೆ 1,800 ಡಾಲರ್ ಇತ್ತು. ಸದ್ಯ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಔನ್ಸ್‌ಗೆ 1,803 ಡಾಲರ್‌ನಷ್ಟು ಇದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ₹ 83ರ ಮಟ್ಟದಲ್ಲಿ ಇದ್ದಂತಹ ಸಂದರ್ಭದಲ್ಲಿ ಕಮಾಡಿಟಿ ಸ್ಟಾಕ್ ಎಕ್ಸ್‌ಚೇಂಜ್ ಎಂಸಿಎಕ್ಸ್‌ನಲ್ಲಿ ಚಿನ್ನದ ದರ 10 ಗ್ರಾಂಗೆ ₹ 54,790 ಆಗಿತ್ತು.

ಕಾರಣಗಳು

- ಜಾಗತಿಕ ರಾಜಕೀಯ ಬಿಕ್ಕಟ್ಟು
- ಜಾಗತಿಕ ಆರ್ಥಿಕ ಹಿಂಜರಿತದ ಭೀತಿ
- ಹಣದುಬ್ಬರದ ಪ್ರಮಾಣದಲ್ಲಿ ಏರಿಕೆ
- ಕ್ರಿಪ್ಟೊಕರೆನ್ಸಿಗಳಿಗೆ ಹೆಚ್ಚಿನ ಬೇಡಿಕೆ ಇಲ್ಲದಿರುವುದು

2023ರಲ್ಲಿ ಚಿನ್ನದ ದರವು ಎಂಸಿಎಕ್ಸ್‌ನಲ್ಲಿ 10 ಗ್ರಾಂಗೆ ₹ 48,500 ರಿಂದ ₹ 60 ಸಾವಿರದ ಮಟ್ಟದಲ್ಲಿ ವಹಿವಾಟು ನಡೆಸಬಹುದು ಎಂದು ಕೋಟಕ್ ಸೆಕ್ಯುರಿಟೀಸ್‌ನ ಉಪಾಧ್ಯಕ್ಷ ರವೀಂದ್ರ ವಿ. ರಾವ್ ಹೇಳಿದ್ದಾರೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಬಡ್ಡಿದರ ಹೆಚ್ಚಿಸುವುದನ್ನು ಮುಂದುವರಿಸಲಿದೆ. ಹೀಗಾಗಿ 2023ರ ಮೊದಲ ತ್ರೈಮಾಸಿಕದಲ್ಲಿ ಚಿನ್ನದ ಬೆಲೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದೂ ಅವರು ತಿಳಿಸಿದ್ದಾರೆ.

ಹಣದುಬ್ಬರ, ಹಣಕಾಸು ಮಾರುಕಟ್ಟೆಯಲ್ಲಿ ಇರುವ ಅಪಾಯಗಳಿಂದಾಗಿ ಚಿನ್ನದ ಗಟ್ಟಿ ಮತ್ತು ನಾಣ್ಯಗಳಿಗೆ ಹೆಚ್ಚು ಬೇಡಿಕೆ ಇರಲಿದೆ. ಚಿನ್ನದ ವಿನಿಮಯ ವಹಿವಾಟು ನಿಧಿ (ಇಟಿಎಫ್) ಮತ್ತೆ ಚೇತರಿಕೆ ಕಂಡುಕೊಳ್ಳುವ ನಿರೀಕ್ಷೆ ಇದೆ ಎಂದು ಅವರು ಹೇಳಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆಯು ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ದರವನ್ನು 10 ಗ್ರಾಂಗೆ ದಾಖಲೆಯ ₹ 56,370ಕ್ಕಿಂತ ಹೆಚ್ಚಿನ ಮಟ್ಟ ತಲುಪುವಂತೆ ಮಾಡಬಹುದು ಎಂದು ಕಾಮ್‌ಟ್ರೆಂಡ್ಸ್ ರಿಸ್ಕ್ ಮ್ಯಾನೇಜ್‌ಮೆಂಟ್ ಸರ್ವೀಸಸ್‌ನ ಸಿಇಒ ಜ್ಞಾನಶೇಖರ ತಿಗರಾಜನ್ ಹೇಳಿದ್ದಾರೆ.

ಸಣ್ಣ ಉಳಿತಾಯ: ಬಡ್ಡಿ ಹೆಚ್ಚಳ

ಒಂದನೇ ಪುಟದಿಂದ

2022ರ ಮೇ ತಿಂಗಳ ನಂತರದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಒಟ್ಟು ಶೇಕಡ 2.25ರಷ್ಟು ಜಾಸ್ತಿ ಮಾಡಿದೆ. ಈಗ ರೆಪೊ ದರವು ಶೇ 6.25ಕ್ಕೆ ತಲುಪಿದೆ. ಇದರ ಪರಿಣಾಮವಾಗಿ ಬ್ಯಾಂಕ್‌ಗಳು ತಮ್ಮ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ದರವನ್ನೂ ಹೆಚ್ಚಿಸಿವೆ.



'ಬೇರೆಯದಕ್ಕೆ ಹೋಲಿಸಿದರೆ ಗೌಣ'

ಒಂದನೇ ಪುಟದಿಂದ

ಈಗಿನ ಏರಿಕೆಯು ಹಿರಿಯ ನಾಗರಿಕರಿಗೆ ಹೆಚ್ಚಿನ ಸಮಾಧಾನ ತಂದಿದೆ. ನಿಶ್ಚಿತ ಆದಾಯವನ್ನು ನೆಚ್ಚಿಕೊಂಡವರಿಗೆ ಕೂಡ ಇದು ಸಮಾಧಾನ ಮೂಡಿಸುವಂಥದ್ದು. ಈಗಿನ ಏರಿಕೆಯು ಹಣದುಬ್ಬರದ ಹೆಚ್ಚಳದಿಂದ ಆದ ಪರಿಣಾಮಗಳನ್ನು ತುಸು ಮಟ್ಟಿಗೆ ನಿಭಾಯಿಸಲು ನೆರವು ಕೊಡಬಹುದು ಎಂದು ಚಾರ್ಟರ್ಡ್ ಅಕೌಂಟೆಂಟ್ ಬಿ.ಇ. ಕುಮಾರ್ ಪ್ರಸಾದ್ ಹೇಳಿದರು.

ಆದರೆ, ಈ ಹೆಚ್ಚಳದ ನಂತರದಲ್ಲಿಯೂ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲೇ ಹೆಚ್ಚಿನ ಲಾಭ ಸಿಗುತ್ತದೆ ಎಂಬುದು ನಿಜ ಎಂದು ಅವರು ತಿಳಿಸಿದರು.

ಬಡ್ಡಿ ಹೆಚ್ಚಳವು ಹಣದುಬ್ಬರ ಏರಿಕೆಯಿಂದ ಬಸವಳಿದಿದ್ದವರಿಗೆ ಸಮಾಧಾನ ಮೂಡಿಸುವಂಥದ್ದು ಎಂದು ಮಾಜಿ ಬ್ಯಾಂಕರ್ ಹಾಗೂ ಹಣಕಾಸು ಸಲಹೆಗಾರ ವಸಂತ ಜಿ. ಹೆಗಡೆ ಹೇಳಿದರು.

ಹೂಡಿಕೆದಾರರ ಸಂಪತ್ತು ₹16.38 ಲಕ್ಷ ಕೋಟಿ ವೃದ್ಧಿ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯ ವಹಿವಾಟು 2022ರಲ್ಲಿ ಉತ್ತಮವಾಗಿ ನಡೆದಿದ್ದು, ಇದರಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ಒಟ್ಟು ₹ 16.38 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ. ಷೇರುಪೇಟೆಯ ಒಟ್ಟು ಬಂಡವಾಳ ಮೌಲ್ಯ ₹ 282.38 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಜಾಗತಿಕ ರಾಜಕೀಯ ಬಿಕ್ಕಟ್ಟು ಮತ್ತು ಹಣದುಬ್ಬರ ಪ್ರಮಾಣ ಏರಿಕೆ ಆಗುವ ಆತಂಕದ ನಡುವೆಯೂ ದೇಶಿ ಷೇರುಪೇಟೆಗಳು ಉತ್ತಮ ವಹಿವಾಟು ನಡೆಸಿದವು. ಇದರಿಂದಾಗಿ ಬಂಡವಾಳ ಮೌಲ್ಯ ಹೆಚ್ಚಾಯಿತು. ದೇಶದ ಮೌಲ್ಯಯುತ ಕಂಪನಿಗಳ ಸಾಲಿನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಮೊದಲ ಸ್ಥಾನದಲ್ಲಿದ್ದು ಬಂಡವಾಳ ಮೌಲ್ಯವು ₹ 17.23 ಲಕ್ಷ ಕೋಟಿ ಇದೆ. ಟಿಸಿಎಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

ಡಿಸೆಂಬರ್ 5ರಂದು ಮಾರುಕಟ್ಟೆ ಬಂಡವಾಳ ಮೌಲ್ಯವು ಸಾರ್ವಕಾಲಿಕ ಗರಿಷ್ಠ ಮಟ್ಟವಾದ ₹ 290.46 ಲಕ್ಷ ಕೋಟಿಗೆ ತಲುಪಿತ್ತು. 2021ರಲ್ಲಿ ಸೆನ್ಸೆಕ್ಸ್ 10,502 ಅಂಶ ಏರಿಕೆ ಕಂಡಿತ್ತು. ಹೂಡಿಕೆದಾರರ ಸಂಪತ್ತು ಮೌಲ್ಯವು ಸುಮಾರು ₹ 78 ಲಕ್ಷ ಕೋಟಿಯಷ್ಟು ಹೆಚ್ಚಾಗಿತ್ತು.

ಸೆನ್ಸೆಕ್ಸ್ ಇಳಿಕೆ: ಯುರೋಪ್ ಮಾರುಕಟ್ಟೆಗಳಲ್ಲಿ ನಡೆದ ಇಳಿಮುಖ ವಹಿವಾಟಿನಿಂದಾಗಿ ದೇಶದ ಷೇರುಪೇಟೆಗಳ ಸೂಚ್ಯಂಕಗಳು ಶುಕ್ರವಾರ ಇಳಿಕೆ ಕಾಣುವಂತಾಯಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 293 ಅಂಶ, ನಿಫ್ಟಿ 86 ಅಂಶ ಇಳಿಕೆ ಕಂಡಿತು.

ದೆಹಲಿ–ಡೆಹ್ರಾಡೂನ್ ಹೆದ್ದಾರಿಯಲ್ಲಿ ಅಪಘಾತ

ಅಮ್ಮನಿಗೆ ಅಚ್ಚರಿ ನೀಡಲು ಹೊರಟಿದ್ದ ರಿಷಭ್ ಪಂತ್

ನವದೆಹಲಿ/ ಡೆಹ್ರಾಡೂನ್ (ಪಿಟಿಐ): ಹೊಸ ವರ್ಷಾಚರಣೆ ಮನೆಗೆ ಬಂದು ಅಮ್ಮನಿಗೆ ಅಚ್ಚರಿ ಉಂಟುಮಾಡಲು ಬಯಸಿದ್ದ ರಿಷಭ್ ಪಂತ್ ಅವರ ಪ್ರಯಾಣ ಅಪಘಾತದಲ್ಲಿ ಕೊನೆಗೊಂಡಿದೆ.

ಭಾರತ ತಂಡದ ವಿಕೆಟ್ ಕೀಪರ್ ಬ್ಯಾಟರ್, ತಮ್ಮ ಮರ್ಸಿಡಿಸ್ ಬೆಂಜ್ ಕಾರಿನಲ್ಲಿ ರೂರ್ಕಿಯಲ್ಲಿರುವ ಮನೆಗೆ ಪ್ರಯಾಣಿಸುತ್ತಿದ್ದರು. ದೆಹಲಿ–ಡೆಹ್ರಾಡೂನ್ ಹೆದ್ದಾರಿಯಲ್ಲಿ ಶುಕ್ರವಾರ ಬೆಳಿಗ್ಗೆ ಸಂಭವಿಸಿದ ಅಪಘಾತ ಭೀಕರವಾಗಿದ್ದರೂ, ಅವರು ಗಂಭೀರ ಗಾಯದಿಂದ ಅದೃಷ್ಟವಶಾತ್ ಪಾರಾಗಿದ್ದಾರೆ.

‘ಆಸ್ಪತ್ರೆಗೆ ಕರೆದುಕೊಂಡು ಬಂದಾಗ ಅವರಿಗೆ ಪ್ರಜ್ಞೆಯಿತ್ತು. ನನ್ನಲ್ಲಿ ಚೆನ್ನಾಗಿಯೇ ಮಾತನಾಡಿದ್ದಾರೆ. ಅಮ್ಮನಿಗೆ ಅಚ್ಚರಿ ಉಂಟುಮಾಡಲು ಹೊರಟ್ಟಿದ್ದಾಗಿ ಹೇಳಿದ್ದಾರೆ‘ ಎಂದು ಅವರಿಗೆ ಮೊದಲು ಚಿಕಿತ್ಸೆ ನೀಡಿದ ಸಕ್ಷಮ್ ಆಸ್ಪತ್ರೆಯ ಡಾ. ಸುಶೀಲ್ ನಗರ್ ತಿಳಿಸಿದರು.

ಪಂತ್ ಅವರನ್ನು ಮೊದಲು ರೂರ್ಕಿ ಬಳಿಯ ಸಕ್ಷಮ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆ ಬಳಿಕ ಹೆಚ್ಚಿನ ಚಿಕಿತ್ಸೆಗೆ ಡೆಹ್ರಾಡೂನ್‌ನ ಮ್ಯಾಕ್ಸ್ ಆಸ್ಪತ್ರೆಗೆ ಕರೆದೊಯ್ಯಲಾಯಿತು.

‘ಕಾಲು ಅಥವಾ ಕೈಯ ಮೂಳೆಗೆ ಯಾವುದೇ ಏಟಾಗಿಲ್ಲ ಎಂಬುದು ಎಕ್ಸ್‌ರೇ ವರದಿಯಲ್ಲಿ ತಿಳಿದುಬಂದಿದೆ. ಬಲಗಾಲಿನ ಮಂಡಿಯ ಲಿಗಮೆಂಟ್ (ಅಸ್ಥಿರಜ್ಜು) ಹರಿದಿರುವುದು ಪರೀಕ್ಷೆಯಲ್ಲಿ ಗೊತ್ತಾಗಿದೆ. ಆದರೆ ಗಾಯದ ಗಂಭೀರತೆ ಎಷ್ಟು ಎಂಬುದು ಎಂಆರ್‌ಐ ಸ್ಕ್ಯಾನಿಂಗ್ ಬಳಿಕವೇ ತಿಳಿಯಲಿದೆ’ ಎಂದು ಹೇಳಿದ್ದಾರೆ.

ರಿಷಭ್ ಪಂತ್ ಅವರ ಕಾರು ಸುಟ್ಟು ಹೋಗಿರುವುದು –ಪಿಟಿಐ ಚಿತ್ರ

ಲಿಗಮೆಂಟ್ ಗಾಯದಿಂದ ಚೇತರಿಸಿಕೊಳ್ಳಲು ಕನಿಷ್ಠ ಎರಡರಿಂದ ಆರು ತಿಂಗಳುಗಳು ಬೇಕು. ಆದ್ದರಿಂದ ಪಂತ್ ಅವರು ಪೂರ್ಣ ಫಿಟ್‌ನೆಸ್ ಮರಳಿ ಪಡೆಯಲು ಕೆಲವು ತಿಂಗಳುಗಳು ಬೇಕಾಗಬಹುದು. ರಿಷಭ್ ಅವರ ಬೆನ್ನಿನ ಚರ್ಮ ಕಿತ್ತುಬಂದಿರುವ ಚಿತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಆ ಬಗ್ಗೆ ಪ್ರತಿಕ್ರಿಯಿಸಿದ ಡಾ.ನಗರ್, ‘ಅದು ಬೆಂಕಿಯಿಂದ ಆಗಿರುವ ಸುಟ್ಟ ಗಾಯ ಅಲ್ಲ. ಕಾರಿನ ಗಾಜು ಒಡೆದು ಹೊರಗೆ ಬರುವ ಭರದಲ್ಲಿ ಅವರ ಬೆನ್ನು ರಸ್ತೆಗೆ ಉಜ್ಜಿದ್ದರಿಂದ ಚರ್ಮ ಕಿತ್ತುಬಂದಿದೆ’ ಎಂದು ಹೇಳಿದರು.

ತೂಕಡಿಸಿದ್ದೇ ಕಾರಣ: ಪಂತ್ ತೂಕಡಿಸಿದ್ದೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಹೇಳಿದ್ದಾರೆ. ಅಲ್ಪ ನಿದ್ದೆಗೆ ಜಾರಿದಾಗ ಕಾರಿನ ಮೇಲಿನ ನಿಯಂತ್ರಣ ಕಳೆದುಕೊಂಡಿದ್ದಾರೆ. ಕಾರಿನಲ್ಲಿ ಅವರು ಒಬ್ಬರೇ ಇದ್ದರು.

ಎಲ್ಲ ನೆರವು: ರಿಷಭ್‌ಗೆ ಅಗತ್ಯವಿರುವ ಎಲ್ಲ ನೆರವು ನೀಡುವುದಾಗಿ ಬಿಸಿಸಿಐ ಹೇಳಿದೆ. ‘ರಿಷಭ್ ಅವರ ಕುಟುಂಬದ ಸದಸ್ಯರು ಮತ್ತು ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಜತೆ ಬಿಸಿಸಿಐ ಅಧಿಕಾರಿಗಳು ನಿರಂತರ ಸಂಪರ್ಕದಲ್ಲಿದೆ’ ಎಂದು ಮಂಡಳಿಯ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ರಣಜಿ ಕ್ರಿಕೆಟ್: ಕರ್ನಾಟಕಕ್ಕೆ ಜಯ ನಿರಾಕರಿಸಿದ ಗೋವಾ

ಪಣಜಿ: ಅಂತಿಮ ದಿನ ಛಲದ ಆಟವಾಡಿದ ಗೋವಾ ಬ್ಯಾಟರ್‌ಗಳು ಕರ್ನಾಟಕಕ್ಕೆ ಗೆಲುವು ನಿರಾಕರಿಸಿದರು. ಜಿಸಿಎ ಕ್ರೀಡಾಂಗಣದಲ್ಲಿ ನಡೆದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯ ಡ್ರಾದಲ್ಲಿ ಕೊನೆಗೊಂಡಿತು.

ಕರ್ನಾಟಕದ ಮೊದಲ ಇನಿಂಗ್ಸ್ ಮೊತ್ತ 603 ರನ್‌ಗಳಿಗೆ ಉತ್ತರವಾಗಿ ಗೋವಾ ಮೊದಲ ಇನಿಂಗ್ಸ್‌ನಲ್ಲಿ 373 ರನ್‌ಗಳಿಗೆ ಆಲೌಟಾಯಿತು. 8 ವಿಕೆಟ್‌ಗಳಿಗೆ 321 ರನ್‌ಗಳಿಂದ ಅಂತಿಮ ದಿನವಾದ ಶುಕ್ರವಾರ ಆಟ ಮುಂದುವರಿಸಿದ ಗೋವಾ ಮತ್ತೆ 52 ರನ್‌ಗಳನ್ನು ಸೇರಿಸಿತು. ದರ್ಶನ್ ಮಿಸಾಳ್ 95 ರನ್ ಕಲೆಹಾಕಿದರು.

ಪಂದ್ಯ ಗೆದ್ದು ಪೂರ್ಣ ಪಾಯಿಂಟ್ಸ್ ಗಳಿಸುವ ಉದ್ದೇಶದಿಂದ ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ ಅವರು ಗೋವಾಕ್ಕೆ ಫಾಲೋಆನ್ ನೀಡಿದರು. ಆದರೆ ಎರಡನೇ ಇನಿಂಗ್ಸ್‌ನಲ್ಲೂ ಆತಿಥೇಯ ಬ್ಯಾಟರ್‌ಗಳು ಶಿಸ್ತಿನ ಆಟವಾಡಿದರು. ಪಂದ್ಯ ಡ್ರಾದಲ್ಲಿ ಕೊನೆಗೊಂಡಾಗ ಗೋವಾ 45 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 150 ರನ್ ಗಳಿಸಿತ್ತು.

ಮೊದಲ ಇನಿಂಗ್ಸ್‌ನಲ್ಲಿ 87 ರನ್ ಗಳಿಸಿದ್ದ ಸುಯಶ್ ಪ್ರಭುದೇಸಾಯಿ ಎರಡನೇ ಇನಿಂಗ್ಸ್‌ನಲ್ಲೂ ಕರ್ನಾಟಕವನ್ನು ಕಾಡಿದರಲ್ಲದೆ, ಅಜೇಯ 61 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ: 7 ವಿಕೆಟ್‌ಗಳಿಗೆ 603 ಡಿಕ್ಲೇರ್ಡ್. ಗೋವಾ 121.5 ಓವರ್‌ಗಳಲ್ಲಿ 373. 2ನೇ ಇನಿಂಗ್ಸ್: ಗೋವಾ 45 ಓವರ್ ಗಳಲ್ಲಿ 3 ವಿಕೆಟ್‌ಗಳಿಗೆ 150 (ಅಮೋಘ್ ದೇಸಾಯಿ 25, ಸುಮೀರನ್ ಆಮೋಣಕರ್ 26, ಸುಯಶ್ ಔಟಾಗದೆ 61, ಸ್ನೇಹಲ್ ಕೌತಣಕರ 21, ದರ್ಶನ್ ಮಿಸಾಳ್ ಔಟಾಗದೆ 10, ವಿಜಯಕುಮಾರ್ ವೈಶಾಖ್ 12ಕ್ಕೆ 1, ಕೆ.ಗೌತಮ್ 35ಕ್ಕೆ 1) ಫಲಿತಾಂಶ: ಪಂದ್ಯ ಡ್ರಾ, ಕರ್ನಾಟಕಕ್ಕೆ 3, ಗೋವಾಕ್ಕೆ 1 ಪಾಯಿಂಟ್

ಎಐಎಫ್‌ಎಫ್: ಕಿರಣ ಕುಲಕರ್ಣಿ ನೇಮಕ

ಬೆಂಗಳೂರು: ಕರ್ನಾಟಕದ ಕಿರಣ ಕುಲಕರ್ಣಿ ಅವರು ಅಖಿಲ ಭಾರತ ಫುಟ್ ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ವೈದ್ಯಕೀಯ ಸಮಿತಿಯ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.



ಕಿರಣ ಕುಲಕರ್ಣಿ

ಎಐಎಫ್‌ಎಫ್ ವೈದ್ಯಕೀಯ ಸಮಿತಿ ಹೀಗಿದೆ: ಕಿರಣ ಕುಮಾರ್ ಕುಲಕರ್ಣಿ (ಅಧ್ಯಕ್ಷ), ಆರ್ಯ ರಾಯ್ (ಉಪಾಧ್ಯಕ್ಷ), ಅನಿರ್ಬನ್ ಮಲಿಕ್, ಸಂದೀಪನ್ ದಾಸ್ ಶರ್ಮಾ, ಸಚಿನ್ ಯಾದವ್, ಬಲವಿಂದರ್ ಸಿಂಗ್, ಇಂತಸರ್ ಉಲ್ ಹಕ್, ಅನುಪಮ್ ಲಾಲ್, ಸಿದ್ಧಾರ್ಥ್ ಉನ್ನಿತನ್, ಶಿಖಾ ದೌಂಡಿಯಾಲ್ (ಎಲ್ಲರೂ ಸದಸ್ಯರು).

ಫುಟ್‌ಬಾಲ್ ದಿಗ್ಗಜನ ಜತೆ ಔತಣಕೂಟ

ನೆನಪು ಬಿಚ್ಚಿಟ್ಟ ಬೆಂಗಳೂರಿನ ಫುಟ್‌ಬಾಲ್ ಆಟಗಾರ ಅರುಮೈನಾಯಗಂ

● ಮಹಮ್ಮದ್ ನೂಮಾನ್

ಬೆಂಗಳೂರು: ‘ಕೋಲ್ಕತ್ತದ ಗ್ರಾಂಡ್ ಹೋಟೆಲ್‌ನಲ್ಲಿ ಪೆಲೆ ಅವರನ್ನು ಭೇಟಿಯಾಗುವ ಅವಕಾಶ ಲಭಿಸಿತ್ತು. ಆ ಗಳಿಗೆಯನ್ನು ನೆನೆಯುವಾಗ ಈಗಲೂ ರೋಮಾಂಚನಗೊಳ್ಳುತ್ತೇನೆ. ಅದು ನನ್ನ ಜೀವನದ ಅಪೂರ್ವ ಕ್ಷಣ’ ಎಂದು ಅರುಮೈನಾಯಗಂ ನೆನಪುಗಳನ್ನು ಬಿಚ್ಚಿಟ್ಟರು.

1977 ರಲ್ಲಿ ಪೆಲೆ ಅವರು ಕೋಲ್ಕತ್ತಕ್ಕೆ ಬಂದಿದ್ದಾಗ ದಿಗ್ಗಜ ಆಟಗಾರನ ಭೇಟಿಯ ಅವಕಾಶ ಪಡೆದಿದ್ದ ಕೆಲವೇ ಮಂದಿಯಲ್ಲಿ ಬೆಂಗಳೂರಿನ ಫುಟ್‌ಬಾಲ್ ಆಟಗಾರ ಅರುಮೈನಾಯಗಂ ಅವರೂ ಒಬ್ಬರು.

ನಾಲ್ಕೂವರೆ ದಶಕಗಳ ಹಿಂದಿನ ನೆನಪುಗಳು 82 ವರ್ಷದ ಅವರ ಮನಸ್ಸಿನಲ್ಲಿ ಅಚ್ಚೊತ್ತಿದೆ. ‘1977ರ ಸೆಪ್ಟೆಂಬರ್ ತಿಂಗಳ ಒಂದು ದಿನ ಆ ಭೇಟಿ ನಡೆದಿತ್ತು. ಮೋಹನ್ ಬಾಗನ್ ತಂಡದ ಆಡಳಿತ ಮಂಡಳಿಯ ಸದಸ್ಯರೊಬ್ಬರು ನನಗೆ ಕರೆ ಮಾಡಿ ಪೆಲೆ ಜತೆಗೆ ಔತಣಕೂಟದಲ್ಲಿ ಭಾಗಿಯಾಗುವಂತೆ ಆಹ್ವಾನಿಸಿದ್ದರು. ನನಗೆ ಅಂತಹ ಅವಕಾಶ ದೊರೆತಿದೆ ಎಂಬುದನ್ನು ನಂಬಲೂ ಆಗಿರಲಿಲ್ಲ’ ಎಂದರು.

ಅರುಮೈನಾಯಗಂ 1961 ರಿಂದ 68ರ ವರೆಗೆ ಮೋಹನ್ ಬಾಗನ್ ಕ್ಲಬ್ ಪರ ಆಡಿದ್ದರು. 1977ರ ಅವಧಿಯಲ್ಲಿ ಅವರು ಚೆನ್ನೈನಲ್ಲಿ ಸದರ್ನ್ ರೈಲ್ವೇಸ್ ಪರ ಆಡಿದ್ದರು.

‘ಪೆಲೆ ಅವರ ಭೇಟಿಗೆ ಕೋಲ್ಕತ್ತಕ್ಕೆ ತೆರಳುತ್ತಿರುವ ವಿಷಯವನ್ನು ಅಂದಿನ ತಮಿಳು ನಟ ಆರ್.ಮುತ್ತುರಾಮನ್ ಅವರಿಗೆ ತಿಳಿಸಿದೆ. ಫುಟ್‌ಬಾಲ್ ಕ್ರೀಡೆ ಹಾಗೂ ಪೆಲೆ ಅಭಿಮಾನಿಯಾಗಿದ್ದ ಅವರೂ ನನ್ನ ಜತೆ ಕೋಲ್ಕತ್ತಕ್ಕೆ ಬರುವುದಾಗಿ ತಿಳಿಸಿದರು’ ಎಂದು ಆ ಸಂದರ್ಭವನ್ನು ಮೆಲುಕು ಹಾಕಿದರು.

‘ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆದಿದ್ದ ಪ್ರದರ್ಶನ ಪಂದ್ಯವನ್ನು ವೀಕ್ಷಿಸಿದ ಬಳಿಕ ನಾನು ಹಾಗೂ ಮುತ್ತುರಾಮನ್ ಔತಣ ಕೂಟ ಏರ್ಪಾಡಾಗಿದ್ದ ಗ್ರಾಂಡ್ ಹೋಟೆಲ್‌ಗೆ ತೆರಳಿದೆವು. ಪೆಲೆ ಅವರನ್ನು ಭೇಟಿಯಾಗಿ ಹಸ್ತಲಾಘವ ನೀಡಿದೆವು. ಅವರು ನಮ್ಮನ್ನು ನೋಡಿ ಮುಗುಳ್ನಕ್ಕರು’ ಎಂದು 1962ರ ಜಕಾರ್ತ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಜಯಿಸಿದ್ದ ಭಾರತ ತಂಡದ ಸದಸ್ಯರಾಗಿದ್ದ ಅವರು ನೆನಪಿಸಿಕೊಂಡರು.

ಅರುಮೈನಾಯಗಂ (ಎಡ) ಅವರು ಪೆಲೆ ಅವರನ್ನು ಭೇಟಿಯಾದ ಕ್ಷಣ

‘ನಾನು ಬೆಳ್ಳಿ ತಟ್ಟೆಯನ್ನು ಸ್ಮರಣಿಕೆಯಾಗಿ ಪೆಲೆಗೆ ನೀಡಿದೆ. ಮುತ್ತುರಾಮನ್ ಅವರು ಪೆಲೆ ಪತ್ನಿಗಾಗಿ ತಂದಿದ್ದ ಕಾಂಜೀವರಂ ಸೀರೆಗಳನ್ನು ಅವರಿಗೆ ನೀಡಿದರು. ನಮ್ಮ ಉಡುಗೊರೆಗಳನ್ನು ಸಂತಸದಿಂದ ಸ್ವೀಕರಿಸಿದರು. ಆ ಕ್ಷಣವನ್ನು ಎಂದೆಂದಿಗೂ ಮರೆಯಲು ಸಾಧ್ಯವಿಲ್ಲ’ ಎಂದು ಹೇಳಿದರು.

‘ಪೆಲೆಗೆ ಸಾಟಿ ಪೆಲೆ ಮಾತ್ರ. ಅವರ ಸ್ಥಾನಕ್ಕೇರಬಲ್ಲ ಇನ್ನೊಬ್ಬ ಆಟಗಾರ ಇದುವರೆಗೆ ಹುಟ್ಟಿ ಬಂದಿಲ್ಲ. ಅವರ ಆಟಕ್ಕೆ ಎಲ್ಲರೂ ಮಾರುಹೋಗಿದ್ದರು. ಭಾರತದಲ್ಲೂ ಅಪಾರ ಅಭಿಮಾನಿಗಳನ್ನು ಹೊಂದಿದ್ದರು’ ಎಂಬುದು ಅರುಮೈನಾಯಗಂ ಅವರ ಮಾತು.

ಕೋಲ್ಕತ್ತದಲ್ಲಿ ಕಾಲ್ಚಳಕ ಮೆರೆದಿದ್ದ ಪೆಲೆ

ಕೋಲ್ಕತ್ತ/ ನವದೆಹಲಿ (ಪಿಟಿಐ): ದಿಗ್ಗಜ ಆಟಗಾರ ಪೆಲೆ ಅವರು ಭಾರತದಲ್ಲೂ ತಮ್ಮ ಕಾಲ್ಚಳಕ ಮೆರೆದಿದ್ದರು. 1977ರ ಸೆಪ್ಟೆಂಬರ್ 24 ರಂದು ಕೋಲ್ಕತ್ತದಲ್ಲಿ ಆಡಿದ್ದರಲ್ಲದೆ, ಅಭಿಮಾನಿಗಳ ಮನಗೆದ್ದಿದ್ದರು.

ನ್ಯೂಯಾರ್ಕ್ ಕಾಸ್ಮೊಸ್ ತಂಡದ ಜತೆ ಬಂದಿದ್ದ ಅವರು ಮೋಹನ್ ಬಾಗನ್ ವಿರುದ್ಧದ ಪ್ರದರ್ಶನ ಪಂದ್ಯದಲ್ಲಿ ಆಡಿದ್ದರು. ಕಾಸ್ಮೊಸ್ ತಂಡದಲ್ಲಿ ಪೆಲೆ ಅಲ್ಲದೆ ಬ್ರೆಜಿಲ್‌ನ ಕಾರ್ಲೋಸ್ ಅಲ್ಬರ್ಟೊ ಮತ್ತು ಇಟಲಿಯ ಜಾರ್ಜೊ ಕಿನಾಗ್ಲಿಯಾ ಅವರೂ ಇದ್ದರು.

ಪೆಲೆ ಅವರ ಭೇಟಿ ಕೋಲ್ಕತ್ತದ ಫುಟ್‌ಬಾಲ್ ಪ್ರೇಮಿಗಳಲ್ಲಿ ರೋಮಾಂಚನ ಸೃಷ್ಟಿಸಿತ್ತು. ಅವರನ್ನು ಸ್ವಾಗತಿಸಲು ಕೋಲ್ಕತ್ತ ವಿಮಾನ ನಿಲ್ದಾಣದ ಹೊರಗೆ ಸಾವಿರಾರು ಅಭಿಮಾನಿಗಳು ನೆರೆದಿದ್ದರು.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯವನ್ನು 80 ಸಾವಿರಕ್ಕೂ ಅಧಿಕ ಪ್ರೇಕ್ಷಕರು ವೀಕ್ಷಿಸಿದ್ದರು. ಆ ಪಂದ್ಯದಲ್ಲಿ ಅರ್ಧ ಗಂಟೆಗೂ ಹೆಚ್ಚು ಹೊತ್ತು ಆಡಿದ್ದ ಪೆಲೆ ಅವರಿಗೆ ಗೋಲು ಗಳಿಸಲು ಆಗಿರಲಿಲ್ಲ. ಪಂದ್ಯ 2–2 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತ್ತು.

ಆಗ 37 ವರ್ಷ ವಯಸ್ಸಾಗಿದ್ದ ಅವರು ವೃತ್ತಿಜೀವನದ ಸಂಧ್ಯಾಕಾಲದಲ್ಲಿದ್ದರು. ಕೋಲ್ಕತ್ತದಲ್ಲಿ ಆಡಿದ ಪಂದ್ಯದ ಬಳಿಕ ಕೆಲವೇ ಪಂದ್ಯಗಳನ್ನು ಆಡಿ ವೃತ್ತಿಪರ ಫುಟ್‌ಬಾಲ್‌ಗೆ ನಿವೃತ್ತಿ ಪ್ರಕಟಿಸಿದ್ದರು.

2015, 2018 ರಲ್ಲೂ ಭೇಟಿ: ಪೆಲೆ ಅವರ ಭಾರತದ ಎರಡನೇ ಭೇಟಿ 2015ರ ಅಕ್ಟೋಬರ್‌ನಲ್ಲಿ ನಡೆದಿತ್ತು. ಒಂದು ವಾರ ಇಲ್ಲಿ ತಂಗಿದ್ದ ಅವರು ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು. ಕೋಲ್ಕತ್ತದಲ್ಲಿ ಅವರು ಮೂರು ದಿನ ಇದ್ದರು.

ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ನಡೆದಿದ್ದ ಅಟ್ಲೆಟಿಕೊ ಡಿ ಕೋಲ್ಕತ್ತ ಹಾಗೂ ಕೇರಳ ಬ್ಲಾಸ್ಟರ್ಸ್ ತಂಡಗಳ ನಡುವಿನ ಐಎಸ್ ಫುಟ್‌ಬಾಲ್ ಟೂರ್ನಿಯ ಪಂದ್ಯವನ್ನು ವೀಕ್ಷಿಸಿದ್ದರು.

ಪೆಲೆ ಅವರ 75ನೇ ಹುಟ್ಟುಹಬ್ಬವನ್ನು 10 ದಿನ ಮುಂಚಿತವಾಗಿಯೇ ಆಚರಿಸಲಾಗಿತ್ತು. ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಕ್ರಿಕೆಟಿಗ ಸೌರವ್ ಗಂಗೂಲಿ ಒಳಗೊಂಡಂತೆ ಗಣ್ಯರು ಭಾಗವಹಿಸಿದ್ದರು.

ಆ ಬಳಿಕ ನವದೆಹಲಿಗೆ ತೆರಳಿದ್ದರಲ್ಲದೆ, ಎರಡು ದಿನ ತಂಗಿದ್ದರು. ನವದೆಹಲಿಯ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದಿದ್ದ ಸುಬ್ರತೊ ಕಪ್ 17 ವರ್ಷದೊಳಗಿನವರ ಬಾಲಕರ ಫುಟ್‌ಬಾಲ್ ಟೂರ್ನಿಯ ಫೈನಲ್ ಪಂದ್ಯವನ್ನು ವೀಕ್ಷಿಸಿದ್ದರು. ಮಾಧ್ಯಮ ಸಂಸ್ಥೆಯೊಂದು ಏರ್ಪಡಿಸಿದ್ದ ‘ನಾಯಕತ್ವ ಶೃಂಗ’ದಲ್ಲಿ ಪಾಲ್ಗೊಳ್ಳಲು 2018 ರಲ್ಲಿ ಅವರು ಮತ್ತೊಮ್ಮೆ ನವದೆಹಲಿಗೆ ಭೇಟಿಕೊಟ್ಟಿದ್ದರು.

ಚೆಸ್: ಹಂಪಿಗೆ ಬೆಳ್ಳಿ

ಕೊನೇರು ಹಂಪಿ

ಅಲ್ಮಾತಿ, ಕಜಕಸ್ತಾನ (ಪಿಟಿಐ): ಭಾರತದ ಕೊನೇರು ಹಂಪಿ ಅವರು ಇಲ್ಲಿ ನಡೆದ ಫಿಡೆ ವಿಶ್ವ ಬ್ಲಿಟ್ಜ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದುಕೊಂಡರು.

ಹಂಪಿ ಅವರು 17 ಸುತ್ತುಗಳಲ್ಲಿ ಒಟ್ಟು 12.5 ಪಾಯಿಂಟ್ಸ್ ಕಲೆಹಾಕಿ ಎರಡನೇ ಸ್ಥಾನ ಪಡೆದರು. ಗುರುವಾರ ನಡೆದಿದ್ದ ಒಂಬತ್ತು ಸುತ್ತುಗಳ ಹಣಾಹಣಿಯಲ್ಲಿ ನೀರಸ ಪ್ರದರ್ಶನ ನೀಡಿದ್ದ ಅವರು ಕೇವಲ ನಾಲ್ಕು ಗೆಲುವು ಸಾಧಿಸಿದ್ದರು. ಆದರೆ ಶುಕ್ರವಾರ ನಡೆದ ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದರು. ಎಂಟು ಸುತ್ತುಗಳಲ್ಲಿ ಅವರು ಏಳು ಗೆಲುವು ಸಾಧಿಸಿದರು. 14ನೇ ಸುತ್ತಿನಲ್ಲಿ ಭಾರತದವರೇ ಆದ ದ್ರೋಣವಲ್ಲಿ ಹರಿಕಾ ಜತೆ ಡ್ರಾ ಮಾಡಿಕೊಂಡರು. 13 ಪಾಯಿಂಟ್ಸ್ ಸಂಗ್ರಹಿಸಿದ ಕಜಕಸ್ತಾನದ ಬಿಬಿಸರ ಬಲಬಯೆವಾ ಚಿನ್ನ ಗೆದ್ದುಕೊಂಡರು.

ಹಂಪಿ 17ನೇ ಹಾಗೂ ಕೊನೆಯ ಸುತ್ತಿನಲ್ಲಿ ಚೀನಾದ ಜೊಂಗ್‌ಯಿ ತಾನ್ ಅವರನ್ನು ಮಣಿಸಿದರು.

ಅಭಿರಾಮ್ ನೇಮಕ

ಬೆಂಗಳೂರು: ಕರ್ನಾಟಕ ಕ್ರಿಕೆಟ್ ತಂಡದ ಮಾಜಿ ಆಟಗಾರ ಮತ್ತು ಕೋಚ್ ಜೆ. ಅಭಿರಾಮ್ ಅವರು ಶ್ರೀಲಂಕಾ ವಿರುದ್ಧದ ಸರಣಿಗೆ ಭಾರತ ತಂಡದ ಮ್ಯಾನೇಜರ್ ಆಗಿ ನೇಮಕವಾಗಿದ್ದಾರೆ.

ಶ್ರೀಲಂಕಾ ಎದುರಿನ ತಲಾ ಮೂರು ಪಂದ್ಯಗಳ ಟಿ20 ಮತ್ತು ಏಕದಿನ ಸರಣಿಯು ಜನವರಿ 3ರಿಂದ ಮುಂಬೈನಲ್ಲಿ ಆರಂಭವಾಗಲಿದೆ.

2022 ಹಿನ್ನೋಟ

‘ಚಿನ್ನಸ್ವಾಮಿ’ಯಲ್ಲಿ ಪುಟಿದ ಪಿಂಕ್‌ಬಾಲ್

ಸರಣಿ ಜಯಿಸಿದ ಸಂತಸದಲ್ಲಿ ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ– ಪಿಟಿಐ ಚಿತ್ರ

ಬೆಂಗಳೂರಿನಲ್ಲಿ ಮೊದಲ ಬಾರಿ ನಡೆದ ಪಿಂಕ್ ಬಾಲ್ ಟೆಸ್ಟ್, ಖೇಲೊ ಇಂಡಿಯಾ ಕ್ರೀಡಾಕೂಟ, ಚೆಸ್‌ನಲ್ಲಿ ಚಾರ್ವಿ ಸಾಧನೆ, ಗುಜರಾತ್‌ನಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ರಾಜ್ಯದ ಅಥ್ಲೀಟ್‌ಗಳ ಉತ್ತಮ ಸಾಧನೆ ಈ ವರ್ಷ ಗಮನಸೆಳೆದವು.

- **ಪಿಂಕ್‌ಬಾಲ್ ಟೆಸ್ಟ್ ಗೆದ್ದ ಭಾರತ:** ಬೆಂಗಳೂರಿನಲ್ಲಿ ಮೊದಲ ಬಾರಿ ಪಿಂಕ್‌ಬಾಲ್ ಟೆಸ್ಟ್ ಮಾರ್ಚ್‌ನಲ್ಲಿ ಆಯೋಜನೆಗೊಂಡಿತ್ತು. ಚಿನ್ನಸ್ವಾಮಿ ಅಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಶ್ರೀಲಂಕಾ ಎದುರು 238 ರನ್‌ಗಳಿಂದ ಜಯಿಸಿತು. ತವರಿನಲ್ಲಿ ಸತತ 15ನೇ ಸರಣಿ ಜಯದ ಸಾಧನೆಯನ್ನೂ ಮಾಡಿತು.
- **ಖೇಲೊ ಇಂಡಿಯಾ ವಿವಿ ಕ್ರೀಡಾಕೂಟ:** ಏಪ್ರಿಲ್– ಮೇ ತಿಂಗಳಿನಲ್ಲಿ ಖೇಲೊ ಇಂಡಿಯಾ ವಿಶ್ವವಿದ್ಯಾಲಯಗಳ ಕ್ರೀಡಾಕೂಟವು ಬೆಂಗಳೂರಿನ ಜೈನ್ ವಿವಿ ಆವರಣದಲ್ಲಿ ನಡೆಯಿತು. ಆತಿಥೇಯ ಜೈನ್ ವಿವಿ ಸಮಗ್ರ ಚಾಂಪಿಯನ್ ಪಟ್ಟ ಗಳಿಸಿತು. ಕೂಟದಲ್ಲಿ 20 ಚಿನ್ನ, 7 ಬೆಳ್ಳಿ ಹಾಗೂ 5 ಕಂಚಿನ ಪದಕಗಳೊಂದಿಗೆ ಜೈನ್ ವಿವಿ ಒಟ್ಟು 32 ಪದಕ ಗಳಿಸಿತು. ಈ ಕ್ರೀಡಾಕೂಟದಲ್ಲಿ ಎರಡು ರಾಷ್ಟ್ರೀಯ ದಾಖಲೆ ಮತ್ತು 97 ಕೂಟದಾಖಲೆಗಳು ಮುರಿದು ಬಿದ್ದವು.
- **ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್:** ಕರ್ನಾಟಕದಲ್ಲಿ ಮೊದಲ ಬಾರಿ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್ ಆಗಸ್ಟ್ 12ರಿಂದ 21ರವರೆಗೆ ನಡೆಯಿತು. ಕೆಜಿಎಫ್ ವೂಲ್ವ್ಸ್ ಚಾಂಪಿಯನ್ ಆಗಿ ಹೊಹೊಮ್ಮಿತು.
- **ಚಾಂಪಿಯನ್ ಚಾರ್ವಿ:** ಕರ್ನಾಟಕದ ಚಾರ್ವಿ ಅನಿಲ್‌ಕುಮಾರ್ ಅವರು ಜಾರ್ಜಿಯದ ಬಟುಮಿಯಲ್ಲಿ ಸೆಪ್ಟೆಂಬರ್‌ನಲ್ಲಿ ನಡೆದ ವಿಶ್ವ ಕೆಡೆಟ್ಸ್ ಚೆಸ್ ಚಾಂಪಿಯನ್‌ಷಿಪ್‌ನ ಬಾಲಕಿಯರ 8 ವರ್ಷದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು. ಚಾರ್ವಿ 11 ಸುತ್ತುಗಳಲ್ಲಿ 9.5 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನ ಪಡೆದರು

ಚಾರ್ವಿ

- **ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಮಿನುಗಿದ ಈಜುಪಟುಗಳು:** ಗುಜರಾತ್‌ನಲ್ಲಿ ನಡೆದ 36ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ರಾಜ್ಯದ ಕ್ರೀಡಾಪಟುಗಳು ಉತ್ತಮ ಸಾಧನೆ ಮಾಡಿದರು. ಕರ್ನಾಟಕದ ಈಜುಪಟುಗಳು 19 ಚಿನ್ನ, 8 ಬೆಳ್ಳಿ ಮತ್ತು 12 ಕಂಚು ಸೇರಿ 39 ಪದಕಗಳನ್ನು ಗೆದ್ದು ಸಂಭ್ರಮಿಸಿದರು. ಮಹಿಳೆಯರ ವಿಭಾಗದ 400 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಹಷಿಕಾ ರಾಮಚಂದ್ರ 4 ನಿಮಿಷ 32.17 ಸೆ.ಗಳಲ್ಲಿ ಗುರಿ ತಲುಪಿ ಕೂಟ ದಾಖಲೆ ನಿರ್ಮಿಸಿದರು. ಹಲವು ದಾಖಲೆಗಳು ನಿರ್ಮಾಣವಾದವು. ಗಾಲ್ಫರ್ ಅವನಿ ಪ್ರಶಾಂತ್ ಕ್ರೀಡಾಕೂಟದಲ್ಲಿ ಎರಡು ಚಿನ್ನ ಜಯಿಸಿದರು. ಟೆನಿಸ್ ತಂಡಕ್ಕೆ ಒಟ್ಟು ಎಂಟು ಪದಕ ಒಲಿದವು. ಕರ್ನಾಟಕ ಪುರುಷರ ತಂಡದವರು ಹಾಕಿ ಟೂರ್ನಿಯಲ್ಲಿ ಚಿನ್ನದ ಪದಕಕ್ಕೆ ಮುತ್ತಿಟ್ಟರು.

ಬಿಎಫ್‌ಸಿಗೆ ನಿರಾಸೆ

ಕೋಲ್ಕತ್ತ: ಕ್ಲಿಟನ್ ಸಿಲ್ವಾ ಅವರು ಗಳಿಸಿದ 2 ಗೋಲುಗಳ ನೆರವಿನಿಂದ ಈಸ್ಟ್ ಬೆಂಗಾಲ್ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಬೆಂಗಳೂರು ಎಫ್‌ಸಿ ತಂಡಕ್ಕೆ 2–1ರಿಂದ ಸೋಲುಣಿಸಿತು.

ಇಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ವಿಜೇತ ತಂಡದ ಪರ ಸಿಲ್ವಾ 39ನೇ ನಿಮಿಷದಲ್ಲಿ ಮತ್ತು 90 + 3ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು. ಬಿಎಫ್‌ಸಿ ಪರ ಜೆವಿ ಹೆರ್ನಾಂಡೆಜ್ 55ನೇ ನಿಮಿಷದಲ್ಲಿ ಗೋಲು ಗಳಿಸಿದ್ದರು.

ಪಾಕ್–ನ್ಯೂಜಿಲೆಂಡ್ ಟೆಸ್ಟ್ ಪಂದ್ಯ ಡ್ರಾ

ಕರಾಚಿ (ರಾಯಿಟರ್ಸ್): ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳ ನಡುವೆ ಇಲ್ಲಿ ನಡೆದ ಮೊದಲ ಟೆಸ್ಟ್ ಕ್ರಿಕೆಟ್ ಪಂದ್ಯ ಡ್ರಾನಲ್ಲಿ ಅಂತ್ಯವಾಯಿತು. ಪಂದ್ಯದ ಕೊನೆಯ ದಿನವಾದ ಶುಕ್ರವಾರ ನ್ಯೂಜಿಲೆಂಡ್ ಜಯಕ್ಕೆ 15 ಓವರ್‌ಗಳಲ್ಲಿ 138 ರನ್ ಬೇಕಿತ್ತು. 2ನೇ ಇನಿಂಗ್ಸ್‌ನಲ್ಲಿ 1 ವಿಕೆಟ್ ಕಳೆದುಕೊಂಡು 61 ರನ್ ಗಳಿಸಿದಾಗ ಮಂದ ಬೆಳಕಿನ ಕಾರಣ ಪಂದ್ಯ ಸ್ಥಗಿತಗೊಳಿಸಲಾಯಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಾಕಿಸ್ತಾನ 438. ನ್ಯೂಜಿಲೆಂಡ್ 9 ವಿಕೆಟ್‌ಗೆ 612 ಡಿಕ್ಲೇರ್ಡ್. 2ನೇ ಇನಿಂಗ್ಸ್: ಪಾಕಿಸ್ತಾನ 104 ಓವರ್‌ಗಳಲ್ಲಿ 8ಕ್ಕೆ 311 ಡಿಕ್ಲೇರ್ಡ್ (ಇಮಾಮ್ ಉಲ್ ಹಕ್ 96, ಸರ್ಫರಾಜ್ ಅಹಮದ್ 53, ಸೌದ್ ಶಕೀಲ್ ಔಟಾಗದೆ 55; ಮೈಕೆಲ್ ಬ್ರೇಸ್‌ವೆಲ್ 82ಕ್ಕೆ 2, ಇಶ್ ಸೋಧಿ 86ಕ್ಕೆ 6). ನ್ಯೂಜಿಲೆಂಡ್ 7.3 ಓವರ್‌ಗಳಲ್ಲಿ 1ಕ್ಕೆ 61 (ಕಾನ್ವೆ ಔಟಾಗದೆ 18, ಲಥಾಮ್ ಔಟಾಗದೆ 35; ಅಬ್ರಾರ್ 23ಕ್ಕೆ 1).